ಕರುನಾಡು ಎಗ್ಸಾಂ

# ಪ್ರಚಲಿತ ವಿದ್ಯಮಾನಗಳು

ಜನವರಿ

2013

ಸಂಪರ್ಕಿಸಿ: KARUNADUEXAMS.COM

# ರಾಜ್ಯ

**ಹೈದರಾಬಾದ್ –ಕರ್ನಾಟಕ ಪ್ರದೇಶ ಅಭಿವೃದ್ಧಿ ಮಸೂದೆಗೆ ರಾಷ್ಟ್ರಪತಿ ಅಸ್ತು**

ಬಹುದಿನಗಳಿಂದ ಹೈದರಾಬಾದ್ - ಕರ್ನಾಟಕ ಪ್ರದೇಶಗಳ ಅಭಿವೃದ್ಧಿಗಾಗಿ ಮಾಡುತ್ತಿದ್ದ ಜನರ ಹೋರಾಟಕ್ಕೆ ಕೊನೆಗೂ ಜಯಸಿಕ್ಕಿದೆ. ಕರ್ನಾಟಕದ ಹಿಂದುಳಿದ ಆರು ಜಿಲ್ಲೆಗಳಾದ **ಬೀದರ್, ಯಾದಗಿರಿ, ಕೊಪ್ಪಳ, ಗುಲ್ಬರ್ಗ, ರಾಯಚೂರು** ಮತ್ತು **ಬಳ್ಳಾರಿ** ಜಿಲ್ಲೆಗಳಿಗೆ ವಿಶೇಷ ಸ್ಥಾನಮಾನ ನೀಡುವ "ಸಂವಿಧಾನ ತಿದ್ದುಪಡಿ ಮಸೂದೆಗೆ" ರಾಷ್ಟ್ರಪತಿ ಪ್ರಣಬ್ ಮುಖರ್ಜಿಯವರು ಸಹಿ ಹಾಕುವ ಮೂಲಕ ಈ ಭಾಗದ ಜನರ ಕನಸು ಈಗ ನನಸಾಗಿದೆ.

**ಮುಖ್ಯ ಮಾಹಿತಿ:-**

- ಕೇಂದ್ರ ಸರ್ಕಾರ ಅಧಿಕೃತವಾಗಿ ಪ್ರಕಟಿಸಿದ " ಸಂವಿಧಾನ (**118 ನೇ ತಿದ್ದುಪಡಿ**) ಮಸೂದೆ - 2012
- ಈ ತಿದ್ದುಪಡಿಯ ಮೂಲಕ ಸಂವಿಧಾನದಲ್ಲಿ ಹೊಸ ಪರಿಚ್ಛೇದ **371J** ಸೇರ್ಪಡೆಯಾಗಲಿದೆ.
- ಹೊಸ ಕಾಯ್ದೆ ಆರು ಜಿಲ್ಲೆಗಳ ಅಭಿವೃದ್ಧಿಗೆ "ಪ್ರತ್ಯೇಕ ಮಂಡಳಿ" ರಚನೆಗೆ ಅವಕಾಶ ನೀಡಿದೆ. ಈ ಮಂಡಳಿಯನ್ನು ರಾಜ್ಯ ಸರ್ಕಾರ ರಾಜ್ಯಪಾಲರ ನೇತೃತ್ವದಲ್ಲಿ ರಚಿಸಬೇಕು ಎಂದು ಸೂಚಿಸಲಾಗಿದೆ.
- ಈ ಜಿಲ್ಲೆಗಳ ಜನರಿಗೆ ಶಿಕ್ಷಣ, ವೃತ್ತಿಪರ ಶಿಕ್ಷಣದಲ್ಲಿ ಸ್ಥಳೀಯ ಶಾಲಾ - ಕಾಲೇಜು ಸಂಸ್ಥೆಗಳಲ್ಲಿ ಮೀಸಲಾತಿಗೆ ಅವಕಾಶ ಒದಗಿಸಲಾಗಿದೆ.
- ಈ ಭಾಗಗಳ ಅಭಿವೃದ್ಧಿ ಜವಾಬ್ದಾರಿ ಸಂಪೂರ್ಣವಾಗಿ ರಾಜ್ಯ ಸರ್ಕಾರದ ಹೆಗಲಿಗೆ ಬೀಳಲಿದೆ.

ಹೈದರಬಾದ್-ಕರ್ನಾಟಕ ಹೋರಾಟ ಸಮಿತಿಯ ಅಧ್ಯಕ್ಷರು: **ವೈಜ್ಯನಾಥ್ ಪಾಟೀಲ್**

**ಶ್ರೀರಂಗಪಟ್ಟಣದಲ್ಲಿ ಅಲ್ಪಸಂಖ್ಯಾತ ವಿಶ್ವವಿದ್ಯಾಲಯಕ್ಕೆ ಟಿಪ್ಪು ಹೆಸರು?**

ಶ್ರೀರಂಗಪಟ್ಟಣದಲ್ಲಿ ಸ್ಥಾಪಿಸಲು ಉದ್ದೇಶಿಸಿರುವ ಅಲ್ಪಸಂಖ್ಯಾತ ವಿಶ್ವವಿದ್ಯಾಲಯಕ್ಕೆ ಮೈಸೂರು ಹುಲಿ ಟಿಪ್ಪುಸುಲ್ತಾನ್ ಹೆಸರನ್ನು ಕೈಬಿಡುವ ಪ್ರಶ್ನೆಯೇ ಇಲ್ಲ ಎಂದು ಅಲ್ಪಸಂಖ್ಯಾತ ವ್ಯವಹಾರಗಳ ಸಚಿವ ಕೆ.ರೆಹಮಾನ್ ಖಚಿತಪಡಿಸಿದ್ದಾರೆ. ದೇಶಕ್ಕೆ ಟಿಪ್ಪು ಕೊಡುಗೆ ಅನನ್ಯ, ಮಕ್ಕಳನ್ನೇ ತ್ಯಾಗ ಮಾಡಿದ ಮಹಾನ್ ದೇಶಪ್ರೇಮಿ ಟಿಪ್ಪು ಹೆಸರನ್ನು ವಿವಿಗೆ ಇಡುವುದಕ್ಕೆ ವಿರೋಧ ಮಾಡುವವರನ್ನು ಅವರು ಖಂಡಿಸಿದ್ದಾರೆ.

**ಪ್ರೊ. ಸುಖದೇವ್ ಥೋರಟ್ ಸಮಿತಿ ರಚನೆ**: ದೇಶದ ವಿವಿಧೆಡೆ ಸ್ಥಾಪಿಸಲು ಉದ್ದೇಶಿಸಿರುವ ಐದು ಅಲ್ಪಸಂಖ್ಯಾತರ ವಿಶ್ವವಿದ್ಯಾಲಯಕ್ಕೆ ರೂಪುರೇಷೆ, ಕೋರ್ಸಗಳು ಮತ್ತು ಪಠ್ಯಕ್ರಮ ಸೇರಿದಂತೆ ಹಲವು ಪ್ರಮುಖ ವಿಷಯಗಳು ಕುರಿತು ಪರಿಶೀಲಿಸಲು ಕೇಂದ್ರ ಸರ್ಕಾರ "ಭಾರತೀಯ ಸಮಾಜ ವಿಜ್ಞಾನ ಸಂಶೋಧನ ಮಂಡಳಿ ಅಧ್ಯಕ್ಷ ಪ್ರೊ. ಸುಖದೇವ್ ಥೋರಟ್ ನೇತೃತ್ವದಲ್ಲಿ ಪರಿಣಿತರ ಸಮಿತಿ ರಚಿಸಿ ವರದಿ ಸಲ್ಲಿಸಲು ಫೆಬ್ರವರಿ 15 ರ ವರಗೆ ಕಾಲಾವಕಾಶ ನೀಡಲಾಗಿದೆ.

ಸಮಿತಿಯ ಇತರ ಸದಸ್ಯರು: ಅಲಿಗಢ ವಿವಿ ಯ ಕುಲಪತಿ ಪ್ರೊ. ಜಮೀರುದ್ದೀನ್ ಷಾ, ರಾಜ್ಯ ಸಭೆ ಸದಸ್ಯರಾ ಮುಂಬೈ ವಿವಿ ಯ ವಿಶ್ರಾಂತ ಕುಲಪತಿ ಡಾ.ಬಾಲಚಂದ್ರ ಮುಂಗೇಕರ್ ಹಾಗೂ ಕರ್ನಾಟಕ ವಿವಿ ಯ ವಿಶ್ರಾಂತ ಕುಲಪತಿ ಡಾ.ಎ.ಎಂ. ಪಠಾಣ್.

**ಐಹೊಳೆ ಗೆ ಹೊಸ ರೂಪುರೇಶೆ: ನಿವಾಸಿಗಳ ಸ್ಥಳಾಂತರಕ್ಕೆ ಸರ್ಕಾರ ಚಿಂತನೆ**

ದೇವಾಲಯಗಳ ತೊಟ್ಟಿಲು ಎಂದೇ ಪ್ರಸಿದ್ಧಿ ಹೊಂದಿರುವ ಪ್ರವಾಸಿ ತಾಣ ಐಹೊಳೆಯ ರಕ್ಷಣೆ ಮತ್ತು ಅಭಿವೃದ್ಧಿಗೆ ರಾಜ್ಯ ಸರ್ಕಾರ ಚಿಂತನೆ ನಡೆಸಿದ್ದು ಅಲ್ಲಿನ ನಿವಾಸಿಗಳನ್ನು ಗ್ರಾಮದ ಹೊರವಲಯಕ್ಕೆ ಸ್ಥಳಾಂತರಿಸಿ, ಪುನರ್ವಸತಿ ಕಲ್ಪಿಸಲು ನಿರ್ಧರಿಸಲಾಗಿದೆ.

**ಸ್ಥಳಾಂತರ ಏಕೆ?**

- ಬಾದಾಮಿ ಕಾಲದ ಚಾಲುಕ್ಯರ ಇತಿಹಾಸ ಹೊಂದಿರುವ ಐಹೊಳೆಯು ಕಿಕ್ಕಿರಿದ ಸಾಲು ಮನೆಗಳು, ಮನೆಗಳಿಗೆ ಹೊಂದಿಕೊಂಡಿರುವ ಪುರಾತನ ದೇವಾಲಯಗಳಿಂದ ತನ್ನ ಸೊಬಗು ಕಳೆದುಕೊಂಡಿದೆ.
- ಐಹೊಳೆಯಲ್ಲಿರುವ ಪಾರಂಪರಿಕ ಸ್ಮಾರಕಗಳಾದ ದುರ್ಗ ದೇವಾಲಯ, ಲಾಡಖಾನ್, ಹುಚ್ಚುಮಲ್ಲಿ ದೇವಾಲಯ, ಗಳಗನಾಥ ದೇವಾಲಯ, ಜೈನ, ವಿಷ್ಣು ಇತರೆ 122 ದೇವಾಲಯಗಳು ಸಾರ್ವಜನಿಕರ ಮನೆಗಳ ನಡುವೆ, ಸಂದಿಗೊಂದಿಯಲ್ಲಿ ಸಿಲುಕಿ ತನ್ನ ಮೆರಗು ಕಳೆದುಕೊಂಡಿವೆ.
- ಇಲ್ಲಿನ ಸ್ಥಳೀಯರು ಬಹುಕಾಲದಿಂದ ದೇವಾಲಯಗಳಲ್ಲೇ ಉಳಿದುಕೊಳ್ಳುವುದು, ತಮ್ಮ ಜಾನುವಾರುಗಳನ್ನು ದೇವಾಲಯದ ಆವರಣದಲ್ಲಿ ಕಟ್ಟುವುದು, ಅಲ್ಲದೇ ದೇವಾಲಯದ ಅಮೂಲ್ಯ ವಸ್ತುಗಳನ್ನು ತಮ್ಮ ಮನೆಗಳಿಗೆ ಅಳವಡಿಸಿಕೊಂಡಿರುವುದನ್ನು ಮನಗೊಂಡು ಭಾರತೀಯ ಪುರಾತತ್ವ ಇಲಾಖೆ ಈ ಕ್ರಮ ಕೈಗೊಂಡಿದೆ.

**ಸ್ಥಳಾಂತರ ಯಾವಾಗ?**

ರೂ.50.41 ಕೋಟಿ ಮೊತ್ತದಲ್ಲಿ ಪುನರ್ ವಸತಿ ಮತ್ತು ಪುನರ್ ನಿರ್ಮಾಣಕ್ಕೆ ಸರ್ಕಾರ ಮುಂದಾಗಿದ್ದು, ಒಂದೆರಡು ವರ್ಷಗಳಲ್ಲಿ ಸ್ಥಳಾಂತರ ಕಾರ್ಯ ಪೂರ್ಣಗೊಳ್ಳುವ ನಿರೀಕ್ಷೆ ಇದೆ.

**ಹೆಜ್ಜೆಗುರುತು ಅಂತರ್ಜಾಲ ತಾಣ ರಾಜ್ಯಕ್ಕೆ ಅರ್ಪಣೆ**

ಒಂದರಿಂದ ಹತ್ತನೇ ತರಗತಿಯವರೆಗೆ ವ್ಯಾಸಂಗ ಮಾಡುತ್ತಿರುವ ರಾಜ್ಯದಲ್ಲಿನ ಎಲ್ಲ ವಿದ್ಯಾರ್ಥಿಗಳಿಗೆ ವಿಶಿಷ್ಟ ಗುರುತಿನ ಸಂಖ್ಯೆ ನೀಡಲಾಗಿದ್ದು ಇದರ ವಿವರಗಳನ್ನು ಒಳಗೊಂಡ "ಹೆಜ್ಜೆ ಗುರುತು" ಅಂತರ್ಜಾಲ ತಾಣಕ್ಕೆ ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ ಸಚಿವ ವಿಶ್ವೇಶ್ವರ ಹೆಗ್ಗಡೆ ಚಾಲನೆ ನೀಡಿದರು.

ವಿಶಿಷ್ಟ ಗುರುತಿನ ಸಂಖ್ಯೆಯ ವಿಶೇಷವೇನು?

- ದೇಶದಲ್ಲಿಯೇ ಮೊದಲ ಭಾರಿಗೆ ವಿದ್ಯಾರ್ಥಿಗಳಿಗೆ ವಿಶಿಷ್ಟ ಗುರುತಿನ ಸಂಖ್ಯೆ ನೀಡುವ ಯೋಜನೆಯಾಗಿದ್ದು, ವಿದ್ಯಾರ್ಥಿಗಳಿಗೆ ಸಂಬಂಧಿಸಿದ 28 ವಿಷಯಗಳ ಮಾಹಿತಿ ಹೊಂದಿರುತ್ತದೆ.
- ರಾಜ್ಯ ಸರ್ಕಾರಿ ಶಾಲೆಯ ಪ್ರತಿ ವಿದ್ಯಾರ್ಥಿಗಳಿಗೂ ಒಟ್ಟು 17 ಸಂಖ್ಯೆಯುಳ್ಳ ವಿಶಿಷ್ಟ ಗುರುತಿನ ಸಂಖ್ಯೆ ಇದಾಗಿದೆ. ಹೆಸರು, ವಿಳಾಸ ಸೇರಿದಂತೆ 28 ವಿಷಯಗಳನ್ನು ಗಣೀಕರಣ ಮಾಡಲಾಗಿದೆ.

## ನ್ಯಾ.ಚಂದ್ರಶೇಖರಯ್ಯ ನೇಮಕ ಅಸಿಂಧು: ಸುಪ್ರೀಂ ಕೋರ್ಟ್ ಮಹತ್ವದ ತೀರ್ಪು

ರಾಜ್ಯದ ಎರಡನೇ ಉಪ ಲೋಕಯುಕ್ತರಾಗಿ ನೇಮಕ ಮಾಡಲಾಗಿದ್ದ ನ್ಯಾ.ಚಂದ್ರಶೇಖರಯ್ಯ ರವರ ನೇಮಕವನ್ನು ಅಸಿಂಧುಗೊಳಿಸಿದ್ದ ಕರ್ನಾಟಕ ಹೈಕೋರ್ಟ್ ತೀರ್ಪನ್ನು ಸುಪ್ರೀಂ ಕೋರ್ಟ್ ಎತ್ತಿ ಹಿಡಿಯುವ ಮೂಲಕ ಮಹತ್ವದ ತೀರ್ಪು ನೀಡಿದೆ, ಅಲ್ಲದೆ ಮತ್ತೆ ನ್ಯಾ.ಚಂದ್ರಶೇಖರಯ್ಯ ಹೆಸರನ್ನು ಪರಿಗಣಿಸಲು ಅಡ್ಡಿ ಇಲ್ಲ ಎಂದು ನ್ಯಾ.ಕೆ.ಎಸ್.ರಾಧಕೃಷ್ಣನ್ ಮತ್ತು ಮದನ್ ಬಿ ಲೋಕರ್ ಒಳಗೊಂಡ ಪೀಠ ತಿಳಿಸಿದೆ.

**ವಿವಾದ ಏಕೆ?**

ಕರ್ನಾಟಕ ಉಪಲೋಕಯುಕ್ತ ಸ್ಥಾನಕ್ಕೆ ನಿವೃತ್ತ ನ್ಯಾಯಮೂರ್ತಿ ಚಂದ್ರಶೇಖರಯ್ಯ ಅವರನ್ನು, ಡಿ.ವಿ.ಸದಾನಂದಗೌಡರು ಮುಖ್ಯಮಂತ್ರಿಗಳಾಗಿದ್ದಾಗ ಕರ್ನಾಟಕ ಹೈಕೋರ್ಟ್ ಮುಖ್ಯ ನ್ಯಾಯಮೂರ್ತಿಗಳ ಅಭಿಪ್ರಾಯ ಪಡೆಯದೆ ನೇಮಕ ಮಾಡಲಾಗಿದೆ ಎಂದು ಜನವರಿ 21, 2012 ರಂದು ಚಂದ್ರಶೇಖರಯ್ಯ ಅವರ ನೇಮಕ ರದ್ದು ಮಾಡಿ ಕರ್ನಾಟಕ ಹೈಕೋರ್ಟ್ ತೀರ್ಪು ನೀಡಿತ್ತು. ಈ ತೀರ್ಪನ್ನು ಪ್ರಶ್ನಿಸಿ ಚಂದ್ರಶೇಖರಯ್ಯ ಮತ್ತು ರಾಜ್ಯ ಸರ್ಕಾರ ಸಲ್ಲಿಸಿದ್ದ ವಿಶೇಷ ಮೇಲ್ಮನವಿ ಅರ್ಜಿಯ ವಿಚಾರಣೆ ನಡೆಸಿದ ಪೀಠ ಹೈಕೋರ್ಟ್ ತೀರ್ಪನ್ನು ಎತ್ತಿ ಹಿಡಿದಿದೆ.

**ಕರ್ನಾಟಕ ಲೋಕಾಯುಕ್ತ ಕಾಯ್ದೆಯಲ್ಲಿ ಏನಿದೆ?**

1984ರ ಕರ್ನಾಟಕ ಲೋಕಯುಕ್ತ ಕಾಯ್ದೆಯಲ್ಲಿ ಉಪಲೋಕಯುಕ್ತರ ಹುದ್ದೆಗೆ ಸೂಕ್ತ ಹೆಸರನ್ನು ರಾಜ್ಯಪಾಲರಿಗೆ ಕಳುಹಿಸುವ ಮುನ್ನ ಮುಖ್ಯನ್ಯಾಯಮೂರ್ತಿ, ವಿಧಾನಪರಿಷತ್ ಸಭಾಪತಿ, ಉಭಯ ಸದನಗಳ ವಿರೋಧ ಪಕ್ಷದ ನಾಯಕರ ಜತೆ ಮುಖ್ಯಮಂತ್ರಿಗಳಾದವರು ಸಮಾಲೋಚನೆ ಮಾಡಬೇಕು ಎಂದು ಉಲ್ಲೇಖಿಸಿದೆ.

ಉಪಲೋಕಯುಕ್ತರಾಗಿ ನೇಮಕವಾಗಲು ಬೇಕಾದ ಅರ್ಹತೆ: ಲೋಕಾಯುಕ್ತ ಕಾಯ್ದೆ ಸೆಕ್ಷನ್ 3 (2) (ಬಿ) ಯಲ್ಲಿ ಹೇಳಿರುವಂತೆ ಉಪಲೋಕಯುಕ್ತರ ಹುದ್ದೆಗೆ ನೇಮಕವಾಗುವ ವ್ಯಕ್ತಿಯು ಹೈಕೋರ್ಟ್ ನ ನ್ಯಾಯ ಮೂರ್ತಿಯಾಗಿ ಕರ್ತವ್ಯ ನಿರ್ವಹಿಸಿರಬೇಕು, ಮುಖ್ಯ ಮಂತ್ರಿಗಳ ಶಿಪಾರಸ್ಸು ಆಧರಿಸಿ ರಾಜ್ಯಪಾಲರು ನೇಮಕಾತಿ ಆದೇಶ ಹೊರಡಿಸಬೇಕಾಗಿದೆ.

**ಸುಪ್ರೀಂಕೋರ್ಟ್ ತೀರ್ಪಿನಲ್ಲಿ ಹೇಳಿದ್ದೇನು?**

- ಈ ಹುದ್ದೆಗೆ ಸೂಕ್ತ ಹೆಸರನ್ನು ಅತಿಂಗೊಳಿಸುವ ಅಧಿಕಾರ ಇರುವುದು ಮುಖ್ಯಮಂತ್ರಿಗೆ ಮಾತ್ರ. ಆದರೆ, ರಾಜ್ಯಪಾಲರಿಗೆ ಹೆಸರನ್ನು ಶಿಫಾರಸ್ಸು ಮಾಡುವ ಮೊದಲು ಹೈಕೋರ್ಟ್ ಮುಖ್ಯ ನ್ಯಾಯಮೂರ್ತಿಗಳನ್ನು ಸೇರಿದಂತೆ ಆಯ್ಕೆ ಸಮಿತಿಯ ಇತರ ಸದಸ್ಯರ ಜತೆ ಸಮಾಲೋಚನೆ ಮಾಡುವುದು ಖಡ್ಡಾಯ ಎಂದಿದೆ.

## ಆದಿಚುಂಚನಗಿರಿ ಶ್ರೀ ಗಳು ವಿಧಿವಶ

ಹಲವು ಸಮಯದಿಂದ ಆರೋಗ್ಯದ ಸಂಕೀರ್ಣ ಸಮಸ್ಯೆಯಿಂದ ಬಳಲುತ್ತಿದ್ದ ಆದಿಚುಂಚನಗಿರಿ ಪೀಠಾಧ್ಯಕ್ಷರಾದ ಶ್ರೀ ಭಾಲಗಂಗಾಧರ ಸ್ವಾಮಿಗಳು ಕೊನೆಯುಸಿರೆಳೆದರು. ಶ್ರೀಗಳು ಆದಿಚುಂಚನಗಿರಿ ಮಠದ 71ನೇ ಪೀಠಾಧಪತಿಗಳಾಗಿ 1974 ರಲ್ಲಿ ಪಟ್ಟವನ್ನೇರಿದರು. ಅವರ ದೂರದೃಷ್ಟಿ ಫಲದಿಂದ ಇಂದು ಆದಿಚುಂಚನಗಿರಿ ಬೃಹತ್ ಮರವಾಗಿ ಬೆಳೆದಿರುವುದು ಹೆಮ್ಮೆಯ

ವಿಷಯ. ಶ್ರೀಗಳ ಶ್ರಮದಿಂದ ಇಂದು ಸುಮಾರು 450 ಶಾಲೆಗಳು ಕಾರ್ಯನಿರ್ವಹಿಸುತ್ತಿವೆ. 47000ಕ್ಕೂ ಹೆಚ್ಚು ವಿದ್ಯಾರ್ಥಿಗಳು ಶಿಕ್ಷಣ ಪಡೆಯುತ್ತಿದ್ದಾರೆ.

ಆದಿಚುಂಚನಗಿರಿಯ 72ನೇ ಪೀಠಾಧಿಪತಿಗಳಾಗಿ ಶ್ರೀಗಳಾ ಪರಮ ಶಿಷ್ಯರಾದ ಶ್ರೀ ನಿರ್ಮಲನಂದ ಸ್ವಾಮಿಯವರು ಮುಂದುವರೆಯಲ್ಲಿದ್ದಾರೆ.

**ಕೂಡಲ ಸಂಗಮ ಅಥವಾ ಬಾದಮಿಯಲ್ಲಿ ಲಲಿತಕಲಾ ವಿಶ್ವ ವಿದ್ಯಾಲಯ:**

ಕರ್ನಾಟಕದ ಬಾಗಲಕೋಟೆ ಜಿಲ್ಲೆಯ ಕೂಡಲ ಸಂಗಮ ಅಥವಾ ಬಾದಮಿಯಲ್ಲಿ ಲಲಿತಕಲಾ ವಿವಿ ಯನ್ನು ಸ್ಥಾಪಿಸಲಾಗುವುದೆಂದು ಕನ್ನಡ ಮತ್ತು ಸಂಸ್ಕೃತಿ ಸಚಿವ ಗೋವಿಂದ ಕಾರಜೋಳ ತಿಳಿಸಿದ್ದಾರೆ. ಈ ಸಂಬಂಧ ಸರ್ಕಾರ 5 ಕೋಟಿ ಅನುದಾನವನ್ನು ನೀಡಲಿದೆ.

- ಇದೇ ಸಂಧರ್ಭದಲ್ಲಿ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಅಡಿ ನೀಡಲಾಗುವ 13 ವಿವಿಧ ಅಕಾಡೆಮಿಗಳ ಈಗಿರುವ ವಾರ್ಷಿಕ ಪ್ರಶಸ್ತಿಯ ಮೊತ್ತವನ್ನು 5 ಸಾವಿರದಿಂದ 25 ಸಾವಿರಕ್ಕೆ ಹೆಚ್ಚಳ ಮಾಡಲಾಗುವುದೆಂದು ಕಾರಜೋಳ ತಿಳಿಸಿದ್ದಾರೆ.

**ಗುಂಡ್ಯ ಜಲವಿದ್ಯುತ್ ಯೋಜನೆ ವಿವಾದ: ತನಿಖೆ ತಂಡದಿಂದ ಪರಿಶೀಲನೆ**

- ಹಾಸನ ಜಿಲ್ಲೆಯ ಸಕಲೇಶಪುರದ ಗುಂಡ್ಯ ಜಲ ವಿದ್ಯುತ್ ಯೋಜನೆ ಬಗ್ಗೆ ಅಧ್ಯಯನ ನಡೆಸಲು ನೇಮಕಗೊಂಡಿರುವ ಆಯೋಗವು ಇತ್ತೀಚೆಗೆ ಯೋಜನೆಯ ಪ್ರದೇಶವನ್ನು ಪರಿಶೀಲನೆ ನಡೆಸಿತು.

**ಯಾವ ಆಯೋಗ?**

- ಯೋಜನ ಆಯೋಗದ ಸದಸ್ಯರು ಮತ್ತು ಇಸ್ರೋದ ಮಾಜಿ ನಿರ್ದೇಶಕರು ಆದ ಡಾ. ಕಸ್ತೂರಿ ರಂಗನ್ ನೇತೃತ್ವ ವಹಿಸಿರುವ 9 ಜನ ಸದಸ್ಯರಿರುವ ಸಮಿತಿ ಇದಾಗಿದೆ. ಈ ಹಿಂದೆ ಕೇಂದ್ರ ಸರ್ಕಾರ ಮಾಧವ ಗಾಡ್ಗಿಲ್ ರವರ ಅಧ್ಯಕ್ಷತೆಯಲ್ಲಿ ಸಮಿತಿ ರಚಿಸಿತ್ತು. ಈ ಸಮಿತಿ ತನ್ನ ವರದಿಯಲ್ಲಿ ಯೋಜನೆ ಕೈಗೆತ್ತಿಕೊಳ್ಳುವುದು ಸೂಕ್ತವಲ್ಲ ಎಂದು ತಿಳಿಸಿತ್ತು.

**ವಿರೋಧ ಏಕೆ?**

- ಪಶ್ಚಿಮ ಘಟ್ಟದ ಗುಂಡ್ಯದಲ್ಲಿ ಆರಂಭಿಸಲು ಉದ್ದೇಶಿಸಿರುವ **200 ಮೆಗಾ ವ್ಯಾಟ್** ಜಲವಿದ್ಯುತ್ ಯೋಜನೆ ಭಾಗದಲ್ಲಿ ಅಪರೂಪದ ಪ್ರಾಣಿ ಸಂಕುಲ ಇರುವುದರಿಂದ ಈ ಯೋಜನೆಯನ್ನು ಕೈಬಿಡಬೇಕು ಎಂಬುದು ಪರಿಸರವಾದಿಗಳು ಮತ್ತು ಇಲ್ಲಿನ ಜನರ ವಾದವಾಗಿದೆ.

**ಹುಬ್ಬಳಿ ವಿಮಾನ ನಿಲ್ದಾಣ ವಿಸ್ತರಣೆಗೆ ಶೀಘ್ರವೇ ಒಪ್ಪಂದ: ಜೋಶಿ**

ಹುಬ್ಬಳ್ಳಿ ವಿಮಾನ ನಿಲ್ದಾಣ ವಿಸ್ತರಣೆಗೆ ಸಂಬಂಧಿಸಿದಂತೆ ನಾಗರಿಕ ವಿಮಾನಯಾನ ಸಚಿವಾಲಯ ಮತ್ತು ಭಾರತೀಯ ವಿಮಾನ ನಿಲ್ದಾಣ ಪ್ರಾಧಿಕಾರದ ಜೊತೆ ಜನವರಿ 23 ರಂದು ಕರ್ನಾಟಕ ರಾಜ್ಯ ಸರ್ಕಾರ ಒಡಂಬಡಿಕೆ ಒಪ್ಪಂದಕ್ಕೆ ಸಹಿ ಹಾಕಲಿದೆ ಎಂದು ಸಂಸದ ಪ್ರಹ್ಲಾದ ಜೋಶಿ ತಿಳಿಸಿದ್ದಾರೆ.

- ಈಗಾಗಲೇ ಇದಕ್ಕೆ ಸಂಬಂಧಿಸಿದಂತೆ ರಾಜ್ಯ ಸರ್ಕಾರ ಹೆಚ್ಚುವರಿಯಾಗಿ 600 ಎಕರೆ ಜಮೀನನ್ನು ಸ್ವಾಧೀನ ಮಾಡಿಕೊಂಡಿದೆ. ರನ್ ವೇ ಉದ್ದವನ್ನು 1,674 ಮೀಟರ್ ನಿಂದ 2,000ಮೀಟರ್ ಗೆ ಹೆಚ್ಚಿಸುವುದು ಮತ್ತು ಅಗಲವನ್ನು 30 ರಿಂದ 45 ಮೀಟರ್ ವರೆಗೆ ಹೆಚ್ಚಿಸುವುದು ಈ ಯೋಜನೆಯ ಮುಖ್ಯ ಉದ್ದೇಶವಾಗಿದೆ.

**"ಹಂಪಿ ಬೈ ನೈಟ್" ಯೋಜನೆ ಶೀಘ್ರದಲ್ಲಿ ಸಿದ್ಧ**

ಹಂಪಿಯ ಇತಿಹಾಸ ಮತ್ತು ಕ್ಷೇತ್ರ ಮಹಿಮೆಯನ್ನು ಕೇವಲ 40 ನಿಮಿಷಗಳಲ್ಲಿ ತಿಳಿಸುವ ಧ್ವನಿ ಬೆಳಕಿನ ವ್ಯವಸ್ಥೆಯಾದ "ಹಂಪಿ ಬೈ ನೈಟ್" ಶೀಘ್ರವೇ ಪ್ರವಾಸಿಗರಿಗೆ ರಸದೌತಣ ನೀಡಲಿದೆ. ಪ್ರವಾಸೋದ್ಯಮ ಇಲಾಖೆ 11.6 ಕೋಟಿ ವೆಚ್ಚದಲ್ಲಿ ಕೈಗೊಂಡಿರುವ ಈ ಯೋಜನೆಯಿಂದ ರಾತ್ರಿಯ ವೇಳೆಯಲ್ಲೂ ಹಂಪಿಯ ಸೌಂದರ್ಯವನ್ನು ಸವಿಯಬಹುದಾಗಿದೆ.

ಯೋಜನೆಯ ವಿಶೇಷತೆ ಏನು?

- ಹಂಪಿಯ ಬಸವಣ್ಣ ಹಾಗೂ ಕೋದಂಡರಾಮ ದೇವಸ್ಥಾನದ ಸ್ಥಳದಲ್ಲಿ ಧ್ವನಿ ಮತ್ತು ಬೆಳಕಿನ ವ್ಯವಸ್ಥೆ ಮಾಡಲಾಗಿದೆ. 40 ನಿಮಿಷದ ಈ ಅವಧಿಯಲ್ಲಿ ಹಂಪಿಯ ಇತಿಹಾಸ ಮತ್ತು ಕ್ಷೇತ್ರ ಮಹಿಮೆಯನ್ನು ಪ್ರವಾಸಿಗರಿಗೆ ತಿಳಿಸಲಾಗುವುದು.
- ಹಂಪಿಗೆ ವಿದೇಶಿ ಪ್ರವಾಸಿಗರು ಹೆಚ್ಚಾಗಿ ಬರುವುದರಿಂದ ಇಂಗ್ಲೀಷ್ ಮತ್ತು ಹಿಂದಿ ಭಾಷೆಯಲ್ಲು ಧ್ವನಿ ಮುದ್ರಿಸಲಾಗಿದೆ. ಇದರಿಂದ ಹೆಚ್ಚು ವಿದೇಶಿ ಪ್ರವಾಸಿಗರನ್ನು ಆಕರ್ಷಿಸಬಹುದಾಗಿದೆ.

**ಶಿಕ್ಷಣ ಹಕ್ಕು ಕಾಯ್ದೆ ಅನುಷ್ಠಾನಕ್ಕೆ ರಾಜ್ಯ ಮಟ್ಟದ ಸಲಹಾ ಸಮಿತಿ ಸ್ಥಾಪನೆ**

ರಾಜ್ಯದಲ್ಲಿ ಕಡ್ಡಾಯ ಶಿಕ್ಷಣ ಹಕ್ಕು ಕಾಯ್ದೆಯ ಸಮಗ್ರ ಅನುಷ್ಠಾನಕ್ಕೆ ನೆರವಾಗಲು ರಾಜ್ಯ ಮಟ್ಟದ ಸಲಹಾ ಸಮಿತಿಯನ್ನು ರಚಿಸುವಂತೆ ಖಾಸಗಿ ಶಿಕ್ಷಣ ಶಾಲೆಗಳ ಬೇಡಿಕೆಗೆ ಶಿಕ್ಷಣ ಇಲಾಖೆ ಒಪ್ಪಿದೆ. ಅದರಂತೆ ರಾಜ್ಯ ಮಟ್ಟದ ಸಲಹಾ ಸಮಿತಿಯನ್ನು ರಾಜ್ಯ ಸರ್ಕಾರ ರಚಿಸಿದೆ.

- 20 ಮಂದಿ ಸದ್ಯಸರನ್ನು ಒಳಗೊಂಡ ಸಮಿತಿಗೆ ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ ಸಚಿವರು ಅಧ್ಯಕ್ಷರಾಗಿರುತ್ತಾರೆ (ಈಗ ವಿಶ್ವೇಶ್ವರ ಕಾಗೇರಿಯರವರು).
- ಮೂರು ತಿಂಗಳಿಗೆ ಒಮ್ಮೆ ಸಭೆ ಸೇರಿ ಕಾಯ್ದೆಯ ಅನುಷ್ಠಾನಕ್ಕೆ ಸಲಹೆ ನೀಡುವುದು ಸಮಿತಿಯ ಜವಾಬ್ದಾರಿಯಾಗಿದೆ.
- ಅವಕಾಶ ವಂಚಿತ ಮಕ್ಕಳನ್ನು ಗುರುತಿಸುವಿಕೆ ಮತ್ತು ಶೇ.25% ಮೀಸಲಾತಿಯಡಿ ಅಂತಹ ಮಕ್ಕಳನ್ನು ಅನುದಾನ ಸಹಿತ ಖಾಸಗಿ ಶೈಕ್ಷಣಿಕ ಸಂಸ್ಥೆಗಳಿಗೆ ದಾಖಲಾತಿ ಮಾಡಲು ಅಗತ್ಯ ಕ್ರಮ ವಹಿಸುವುದು ಈ ಸಮಿತಿಯ ಪ್ರಮುಖ ಕರ್ತವ್ಯವಾಗಿದೆ.

**ಕಡ್ಡಾಯ ಶಿಕ್ಷಣ ಹಕ್ಕು ಕಾಯ್ದೆ**: ಈ ಕಾಯ್ದೆಯನ್ನು ದೇಶದಲ್ಲಿರುವ **6 ರಿಂದ 14** ವರ್ಷ ವಯಸ್ಸಿನ ಮಕ್ಕಳಿಗೆ ಉಚಿತ ಮತ್ತು ಕಡ್ಡಾಯ ಶಿಕ್ಷಣವನ್ನು ನೀಡುವ ಸಲುವಾಗಿ ರೂಪಿಸಲಾಗಿದೆ. ಈ ಕಾಯ್ದೆಯನ್ನು ಭಾರತ ಸಂವಿಧಾನದ 21A ಪರಿಚ್ಛೇದದಡಿ **ಏಪ್ರಿಲ್ 1, 2010** ರಿಂದ ಅನುಷ್ಠಾನಗೊಳಿಸಲಾಗಿದೆ. ಮಕ್ಕಳಿಗೆ ಶಿಕ್ಷಣ ನೀಡುವುದನ್ನು ಮೂಲಭೂತ ಹಕ್ಕನ್ನಾಗಿ ಜಾರಿಗೊಳಿಸುವ ಮೂಲಕ, ಶಿಕ್ಷಣವನ್ನು ಮೂಲಭೂತ ಹಕ್ಕನ್ನಾಗಿ ನೀಡಿದ 135 ದೇಶಗಳ ಪಟ್ಟಿಗೆ ಭಾರತವೂ ಸೇರಿದಂತಾಗಿದೆ.

**ಕಡ್ಡಾಯ ಶಿಕ್ಷಣ ಹಕ್ಕು ಕಾಯ್ದೆಯ ಪ್ರಮುಖ ಅಂಶಗಳು:**

- ಈ ಕಾಯ್ದೆಯು ಶಿಕ್ಷಣವನ್ನು ಮಕ್ಕಳ ಮೂಲಭೂತ ಹಕ್ಕು ಎಂದು ಪರಿಗಣಿಸಿ, 6 ರಿಂದ 14 ವರ್ಷದ ವಯಸ್ಸಿನ ಮಕ್ಕಳಿಗೆ ಉಚಿತ ಮತ್ತು ಕಡ್ಡಾಯ ಶಿಕ್ಷಣ ನೀಡುವುದು ಎಂದು ಹೇಳಿದೆ.
- ಈ ಕಾಯ್ದೆಯ ಪ್ರಕಾರ ಎಲ್ಲ ಖಾಸಗಿ ಶಾಲೆಗಳು ಬಡ ಮಕ್ಕಳಿಗೆಂದು ಶಾಲೆಯ ದಾಖಲಾತಿಯಲ್ಲಿ ಶೇ.25% ಮೀಸಲಿಡುವುದು ಕಡ್ಡಾಯವಾಗಿದೆ.
- ಸರ್ಕಾರದಿಂದ ಮಾನ್ಯತೆ ಪಡೆಯದ ಸಂಸ್ಥೆಗಳು ಯಾವುದೇ ರೀತಿಯ ಶೈಕ್ಷಣಿಕ ಚಟುವಟಿಕೆಗಳನ್ನು ನಡೆಸುವಂತಿಲ್ಲ, ಅಂದರೆ ಶಾಲಾ ದಾಖಲಾತಿ ಸಮಯದಲ್ಲಿ ಮಕ್ಕಳನ್ನಾಗಲಿ ಅಥವಾ ಪೋಷಕರನ್ನಾಗಲಿ ಸಂದರ್ಶನ ನಡೆಸುವಂತಿಲ್ಲ, ಅಲ್ಲದೆ ವಂತಿಗೆ, ಶುಲ್ಕಗಳನ್ನು ವಸೂಲಿ ಮಾಡುವಂತಿಲ್ಲ.

**ಕಾಯ್ದೆಯ ಅನುಷ್ಠಾನಕ್ಕೆ ಅನುದಾನ**

- ಕಾಯ್ದೆಯ ಅನುಷ್ಠಾನಕ್ಕೆ ತಗಲುವ ಒಟ್ಟು ವೆಚ್ಚದಲ್ಲಿ ಶೇ.65% ಕೇಂದ್ರ ಸರ್ಕಾರ ಭರಿಸಿದರೆ ಉಳಿದ ಶೇ.35% ನ್ನು ರಾಜ್ಯ ಸರ್ಕಾರ ಭರಿಸುತ್ತದೆ. ಈಶಾನ್ಯ ರಾಜ್ಯಗಳಿಗೆ ಕೇಂದ್ರ ಸರ್ಕಾರ ಶೇ.90% ಮತ್ತು ರಾಜ್ಯ ಸರ್ಕಾರ ಶೇ.10% ಅನುಪಾತದಲ್ಲಿರುತ್ತದೆ.

**ರಾಷ್ಟ್ರೀಯ ಸಲಹಾ ಮಂಡಳಿ:**

- ಕೇಂದ್ರ ಗೃಹ ಸಚಿವಾಲಯವು ಈ ಕಾಯ್ದೆಯ ಅನುಷ್ಠಾನಕ್ಕೆ 14 ಸದಸ್ಯರಿರುವ ರಾಷ್ಟ್ರೀಯ ಸಲಹಾ ಮಂಡಳಿಯನ್ನು ರಚಿಸಿದ್ದು, NASSCOM ನ ಮಾಜಿ ಅಧ್ಯಕ್ಷರಾದ ಕಿರಣ್ ಕಾರ್ತಿಕ್ ಇದರಲ್ಲಿ ಪ್ರಮುಖರೆನಿಸಿದ್ದಾರೆ.

**ಮದರಸಾಗಳಿಗೆ ಈ ಕಾಯ್ದೆ ಅನ್ವಯವಾಗಲಿದೆಯೇ?**

- ಇಲ್ಲ, ಮದರಸಾಗಳು ಅಲ್ಪ ಸಂಖ್ಯಾತರಿಗೆಂದೇ ಮೀಸಲಿಟ್ಟ ಶೈಕ್ಷಣಿಕ ಸಂಸ್ಥೆಗಳಾಗಿವೆ. ಇವುಗಳನ್ನು ಈ ಕಾಯ್ದೆಯಿಂದ ಹೊರಗಿಡಲಾಗಿದೆ.
- ನರ್ಸರಿಗಳು ಸಹ ಈ ಕಾಯ್ದೆಯಡಿ ಬರುವುದಿಲ್ಲ. ಏಕೆಂದರೆ ಈ ಕಾಯ್ದೆ ಅನ್ವಯವಾಗುವುದು 6 ರಿಂದ 14 ವರ್ಷದ ಮಕ್ಕಳಿಗೆ ಮಾತ್ರ.

**"ಅಟಲ್ ಬಿಹಾರಿ ವಸತಿ ಶಾಲೆ" ರಾಜ್ಯ ಸರ್ಕಾರದ ಸಚಿವ ಸಂಪುಟ ಒಪ್ಪಿಗೆ**

ಕರ್ನಾಟಕ ರಾಜ್ಯದ ನಾಲ್ಕು ಕಂದಾಯ ವಿಭಾಗಗಳಲ್ಲಿ "ಅಟಲ್ ಬಿಹಾರಿ ವಸತಿ ಶಾಲೆಯನ್ನು" 2013-14ನೇ ಸಾಲಿನಿಂದ ಆರಂಭಿಸಲು ಸಚಿವ ಸಂಪುಟ ಸಭೆ ಒಪ್ಪಿಗೆ ನೀಡಿದೆ. ಪ್ರತಿ ಕಂದಾಯ ವಿಭಾಗಗಳಲ್ಲಿ ತಲಾ ಎರಡರಂತೆ ಒಟ್ಟು 8 ಶಾಲೆಗಳನ್ನು ಸ್ಥಾಪಿಸುವುದಾಗಿ ಕಾನೂನು ಸಚಿವ ಸುರೇಶ್ ಕುಮಾರ್ ತಿಳಿಸಿದ್ದಾರೆ.

**ಪ್ರಮುಖ ಮಾಹಿತಿಗಳು**

- ಸಮಾಜ ಕಲ್ಯಾಣ ಇಲಾಖೆಯು ಉಸ್ತುವಾರಿಕೆಯನ್ನು ವಹಿಸಿಕೊಳ್ಳಲಿರುವ ಈ ಶಾಲೆಗಳು ಆರನೇ ತರಗತಿಯಿಂದ ದ್ವಿತೀಯ ಪಿಯುಸಿ ಯ ವರೆಗೆ ಇಂಗ್ಲೀಷ್ ಮಾಧ್ಯಮದಲ್ಲಿ ಶಿಕ್ಷಣ ನೀಡಲಿವೆ.
- ಈ ಶಾಲೆಗಳಲ್ಲಿ ಶೇ.50% ರಷ್ಟು ಪರಿಶಿಷ್ಟ ಜಾತಿಗೆ, ಶೇ.25% ರಷ್ಟು ಪರಿಶಿಷ್ಟ ಪಂಗಡಕ್ಕೆ ಮತ್ತು ಉಳಿದ ಶೇ.25% ರಷ್ಟು ಸೀಟುಗಳನ್ನು ಹಿಂದುಳಿದ ವರ್ಗಗಳಿಗೆ ಮೀಸಲಾಡಲಾಗುವುದು. ಒಟ್ಟು ಸೀಟುಗಳಲ್ಲಿ ಶೇ.50% ರಷ್ಟು ಬಾಲಕಿಯರಿಗೆ ಮೀಸಲಿಡಲಾಗುವುದು.
- ಶಾಲೆಗಳನ್ನು ಪಾವಗಡ ತಾಲ್ಲೂಕಿನ ದೊಡ್ಡಹಳ್ಳಿ, ಬಂಗಾರ ಪೇಟೆ, ಚಿಕ್ಕಮಗಳೂರು ನಗರ, ಮೈಸೂರಿನ ವರುಣಿ ಗ್ರಾಮ, ಗುಲ್ಬರ್ಗ ಗ್ರಾಮಾಂತರ, ಯಾದಗಿರಿ, ಶಿಗ್ಗಾವಿ ಮತ್ತು ಮುಧೋಳ್ ನಲ್ಲಿ ಆರಂಭವಾಗಲಿವೆ.

**ರಾಯಲ್ ಚಾಲೆಂಜರ್ಸ್ ಗೆ ಕುಂಬ್ಳೆ ಗುಡ್ ಬೈ**

ಭಾರತ ಕ್ರಿಕೆಟ್ ತಂಡದ ಮಾಜಿ ಲೆಗ್ ಸ್ಪಿನ್ನರ್ ಅನಿಲ್ ಕುಂಬ್ಳೆ ರಾಯಲ್ ಚಾಲೆಂಜರ್ಸ್ ತಂಡದ ಮಾರ್ಗದರ್ಶಿ ಸ್ಥಾನದಿಂದ ನಿರ್ಗಮಿಸಿದ್ದಾರೆ. ಮೊದಲ ಮೂರು ಆವೃತ್ತಿಗಳಲ್ಲಿ RCB ಯ ಮಾರ್ಗದರ್ಶಿಯಾಗಿ ಕಾರ್ಯನಿರ್ವಹಿಸಿದ್ದ ಕುಂಬ್ಳೆ ಈಗ ಮುಂಬೈ ಇಂಡಿಯನ್ಸ್ ತಂಡದ ಮಾರ್ಗದರ್ಶಿಯಾಗಿ ನೇಮಕವಾಗಿದ್ದರೆ. ಈ ಬಗ್ಗೆ ಪ್ರತಿಕ್ರಯಿಸಿರುವ ಕುಂಬ್ಳೆ ರಿಲಾಯನ್ಸ್ ಸಮೂಹ ಭಾರತ ಕ್ರೀಡಾ ಕ್ಷೇತ್ರದಲ್ಲಿ ಹೊಂದಿರುವ ದೂರದೃಷ್ಟಿಯನ್ನು ಗಮನಿಸಿ ಸೇರ್ಪಡೆಯಾಗಿರುವುದಾಗಿ ತಿಳಿಸಿದ್ದಾರೆ.

- 42 ವರ್ಷದ ಕುಂಬ್ಳೆ ಆರನೇ ಆವೃತ್ತಿಯ ಐಪಿಎಲ್ ನಲ್ಲಿ ಮುಂಬೈ ಇಂಡಿಯನ್ಸ್ ತಂಡದ ಮಾರ್ಗದರ್ಶಿಯಾಗಿ ಕಾರ್ಯನಿರ್ವಹಿಸಲ್ಲಿದ್ದಾರೆ.
- ಈ ಹಿಂದೆ ಮಾರ್ಗದರ್ಶಿಯಾಗಿ ಕಾರ್ಯನಿರ್ವಹಿಸುತ್ತಿದ್ದ, ರಾಬಿನ್ ಸಿಂಗ್ ರವರು ತಂಡದೊಂದಿಗೆ ಮುಂದುವರೆಯಲ್ಲಿದ್ದಾರೆ ಎಂದು ಮುಂಬೈ ಇಂಡಿಯನ್ಸ್ ನ ಅಧಿಕೃತ ಮೂಲಗಳು ತಿಳಿಸಿವೆ.

**ಲಂಡನ್ ನಲ್ಲಿ ಬಸವಣ್ಣನವರ ಪುತ್ಥಳಿ**

ವಿಶ್ವ ಗುರು, ಸಾಮಾಜಿಕ ಕ್ರಾಂತಿಕಾರಿ ಬಸವಣ್ಣನವರ ಪುತ್ಥಳಿಯನ್ನು ಥೇಮ್ಸ್ ನದಿಯಲ್ಲಿ ದಡದಲ್ಲಿ ಸ್ಥಾಪಿಸಲು ಬ್ರಿಟನ್ ಸರ್ಕಾರ ಹಸಿರು ನಿಶಾನೆ ತೋರಿದೆ. ಭಾರತ ಮೂಲದ ಲಾಂಬೆತ್ ನ ಮಾಜಿ ಮೇಯರ್ ನೀರಜ್ ಪಾಟೀಲ್ ರವರು ಈ ವಿಷಯವನ್ನು ಖಚಿತಪಡಿಸಿದ್ದರೆ.

- 1854 ರ ಸಾರ್ವಜನಿಕ ಪ್ರತಿಮೆ ಕಾಯ್ದೆಯ ಅಡಿಯಲ್ಲಿ ಪುತ್ಥಳಿ ಸ್ಥಾಪನೆಗೆ ಅನುಮತಿ ನೀಡಲಾಗಿದೆ. ಬ್ರಿಟನ್ ಪ್ರವಾಸೋದ್ಯಮ ಮತ್ತು ಸಂಸ್ಕೃತಿ ಸಚಿವರಾದ ಜಾನ್ ಪೆನ್ಸರ್ ಬಸವೇಶ್ವರ ಪ್ರತಿಮೆ ನಿರ್ಮಾಣಕ್ಕೆ ಸಹಮತ ವ್ಯಕ್ತಪಡಿಸಿದ್ದಾರೆಂದು ನೀರಜ್ ಪಾಟೀಲ್ ತಿಳಿಸಿದ್ದಾರೆ.

**ಕೆನರಾ ಬ್ಯಾಂಕ್ ನಿಂದ ಇ-ಲಾಂಜ್ ಸೌಲಭ್ಯಕ್ಕೆ ಚಾಲನೆ**

ಕೆನರಾ ಬ್ಯಾಂಕ್ ಅಧ್ಯಕ್ಷ ಮತ್ತು ವ್ಯವಸ್ಥಾಪಕ ನಿರ್ದೇಶಕರಾದ ಆರ್.ಕೆ.ದುಬೆ ಇತ್ತೀಚೆಗೆ ಬೆಂಗಳೂರು ನಗರದ ಕೋರಮಂಗಲದ ಶಾಖೆಯಲ್ಲಿ ಮೊತ್ತ ಮೊದಲ ಇ-ಲಾಂಜ್ ವ್ಯವಸ್ಥೆಗೆ ಚಾಲನೆ ನೀಡಿದರು. ಜನವರಿ 27 ರಂದು ಈ ಸೌಲಭ್ಯವನ್ನು ದೆಹಲಿಯಲ್ಲಿ ಸಹ ಪ್ರಾರಂಭಿಸಲಾಗುವುದು ಎಂದು ಬ್ಯಾಂಕ್ ತಿಳಿಸಿದೆ.

**ಏನಿದು ಇ-ಲಾಂಜ್?**

- ಕಿಯೋಸ್ಕ್ ಮೂಲಕವೇ ಕೆನರಾ ಬ್ಯಾಂಕ್ ನ ಗ್ರಾಹಕರು ತಮ್ಮ ವ್ಯವಹಾರಗಳನ್ನು ನಡೆಸಬಹುದು.
- ಎಟಿಎಂ ಮಾದರಿಯಲ್ಲೇ ಹಣ ಜಮಾ ಮಾಡುವುದು, ಚೆಕ್ ಹಾಕುವುದು, ಪಾಸ್ ಬುಕ್ ಎಂಟ್ರಿ, ಆನ್ ಲೈನ್ ವಹಿವಾಟು, ಇಂಟರ್ ನೆಟ್ ಬ್ಯಾಂಕಿಗ್ ಸೌಲಭ್ಯಗಳನ್ನು ಹೊಂದಿದೆ. ಆದ್ದರಿಂದ ಗ್ರಾಹಕರು ಈ ಎಲ್ಲಾ ವ್ಯವಹಾರಗಳಿಗೂ ಗಂಟೆ ಗಟ್ಟಲೆ ಸಾಲು ನಿಲ್ಲುವುದು ತಪ್ಪುತ್ತದೆ.

**ಮಹಿಳೆಯರ ರಕ್ಷಣೆಗೆ "ಅಭಯ" ಕಾರ್ಯಪಡೆಗೆ ಚಾಲನೆ ನೀಡಿದ ರಾಜ್ಯ ಸರ್ಕಾರ**

ಮಹಿಳೆಯರ ಮತ್ತು ಯುವತಿಯರ ರಕ್ಷಣೆಗಾಗಿ ಬೆಂಗಳೂರು ಪೋಲಿಸರು "ಅಭಯ" ಎಂಬ ಹೊಸ ಕಾರ್ಯಪಡೆ ಸಿದ್ದಪಡಿಸಿದ್ದು, ಇತ್ತೀಚೆಗೆ ನಗರದ ಕ್ವೀನ್ಸ್ ರಸ್ತೆಯಲ್ಲಿ ಇದಕ್ಕೆ ಚಾಲನೆ ನೀಡಲಾಯಿತು.

ಏನಿದು "ಅಭಯ"?

- ಅಭಯ ಎಂಬುದು ಪೋಲಿಸ್ ವಾಹನದ ಹೆಸರಾಗಿದ್ದು, ಮಹಿಳೆಯರ ಮತ್ತು ಯುವತಿಯ ರಕ್ಷಣೆಗೆಂದೆ ಬೆಂಗಳೂರು ಪೋಲಿಸರು ಈ ಕಾರ್ಯಪಡೆಯನ್ನು ರಚಿಸಿದ್ದಾರೆ..
- ಮಹಿಳೆಯರ ಸಮಸ್ಯೆಯಗಳಿಗೆ ತ್ವರಿತವಾಗಿ ಮತ್ತು ಪರಿಣಾಮಕಾರಿಯಾಗಿ ಸ್ಪಂದಿಸಲು ಸೃಷ್ಟಿಸಿರುವ "ಕ್ಷಿಪ್ರ ಕಾರ್ಯಪಡೆ ಯೋಜನೆ" ಇದಾಗಿದೆ.
- ಒಂದು ವಾಹನದಲ್ಲಿ ಒಬ್ಬ ಮಹಿಳಾ ಪೋಲಿಸ್ ಇನ್ಸ್ ಪೆಕ್ಟರ್ ಮತ್ತು ಇಬ್ಬರು ಮಹಿಳಾ ಪೇದೆಗಳು ಇದ್ದು, ಇಂತಹ ಒಟ್ಟು ಏಳು ಅಭಯ ವಾಹನಗಳು ದಿನದ 24 ಗಂಟೆಗಳೂ ಕಾರ್ಯನಿರ್ವಹಿಸಲಿವೆ.
- ಘಟನೆ ನಡೆದ ತಕ್ಷಣ ಸ್ಥಳಕ್ಕೆ ಧಾವಿಸಿ ಅಲ್ಲಿನ ಪರಿಸ್ಥಿತಿ ಗಮನಿಸಿ, ದೂರುದಾರರೊಂದಿಗೆ ವರ್ತಿಸುವುದು, ಅವರ ಸಮಸ್ಯೆಗೆ ಸ್ಪಂದಿಸುವುದು ಮತ್ತು ಸಾಕ್ಷಿ ನಾಶ ಪಡಿಸದಂತೆ ನೋಡಿಕೊಳ್ಳುವುದು ಮುಂತಾದ ಕೆಲಸವನ್ನು ಈ ಪಡೆ ಮಾಡಲಿದೆ.

**ಹಂಪಿ ಉತ್ಸವ: ಈ ಬಾರಿ ಮೂರು ವಿಶಿಷ್ಟ ಕಾರ್ಯಕ್ರಮಗಳು**

ಐತಿಹಾಸಿಕ ಹಂಪಿಯಲ್ಲಿ ಫೆಬ್ರವರಿ 22 ರಿಂದ ಮೂರು ದಿನಗಳ ಕಾಲ ನಡೆಸಲು ಉದ್ದೇಶಿಸಿರುವ "ಹಂಪಿ ಉತ್ಸವ" ದಲ್ಲಿ ಪ್ರವಾಸಿಗರನ್ನು ಆಕರ್ಷಿಸುವ ಸಲುವಾಗಿ ಈ ಬಾರಿ ಮೂರು ವಿಶಿಷ್ಟ ಕಾರ್ಯಕ್ರಮಗಳನ್ನು ಆಯೋಜಿಸುವುದಾಗಿ ಪ್ರವಾಸೋದ್ಯಮ ಸಚಿವರಾದ ಆನಂದ್ ಸಿಂಗ್ ಹೇಳಿದ್ದಾರೆ.

ಮೂರು ಕಾರ್ಯಕ್ರಮಗಳು ಯಾವುವು?

"ಹಂಪಿ ಬೈ ಸ್ಕೈ", "ಹಂಪಿ ಬೈ ಲೆನ್ಸ್" ಮತ್ತು "ಹಂಪಿ ಬೈ ಆರ್ಟ್ಸ್" ಇವೇ ಈ ಮೂರು ವಿಶಿಷ್ಟ ಕಾರ್ಯಕ್ರಮಗಳು.

**ಹಂಪಿ ಬೈ ಸ್ಕೈ:** ಹಂಪಿಯ ಪ್ರಮುಖ ಸ್ಥಳಗಳಾದ ತುಂಗಭದ್ರ ಜಲಾಶಯ, ಹಂಪಿ ದೇಗುಲಗಳು, ದರೋಜಿ ಕರಡಿಧಾಮ, ಸಂಡೂರು ಗಣಿ ಪ್ರದೇಶ ಮುಂತಾದ ಆಕರ್ಷಣೀಯ ಸ್ಥಳಗಳನ್ನು ಸಾರ್ವಜನಿಕರಿಗೆ ಹೆಲಿಕಾಪ್ಟರ್ ನಲ್ಲಿ 30 ನಿಮಿಷಗಳ ಕಾಲ ವೈಮಾನಿಕ ದರ್ಶನ ಮಾಡಿಸುವುದು. ಪ್ರತಿ ಟಿಕೆಟ್ ಗೆ ರೂ.1500 ನಿಗದಿಪಡಿಸಲಾಗಿದ್ದು, ಒಮ್ಮೆಗೆ ಆರು ಜನರು ಪ್ರಯಾಣಿಸಬಹುದಾಗಿದೆ.

**ಹಂಪಿ ಬೈ ಲೆನ್ಸ್:** ಹಂಪಿಯ ಪ್ರಸಿದ್ಧ ತಾಣಗಳನ್ನು, ಸ್ಮಾರಕಗಳನ್ನು ತಮ್ಮ ಕ್ಯಾಮೆರಗಳ ಮೂಲಕ ಸೆರೆ ಹಿಡಿದು, ಪ್ರದರ್ಶಿಸಲು ಛಾಯಾಗ್ರಾಹಕರಿಗೆ ಅವಕಾಶ ಕಲ್ಪಿಸಲು ಈ ಕಾರ್ಯಕ್ರಮದಲ್ಲಿ ಛಾಯಾಗ್ರಾಹಕರು, ಹವ್ಯಾಸಿ ಛಾಯಾಗ್ರಾಹಕರು ಹಾಗೂ ಪತ್ರಿಕಾ ಛಾಯಾಗ್ರಾಹಕರೂ ಪಾಲ್ಗೊಳ್ಳಬಹುದು. ನಿಗದಿಪಡಿಸಿರುವ ಪ್ರವೇಶ ಶುಲ್ಕ ಭರಿಸಿ, ತಾವು ಸೆರೆ ಹಿಡಿದಿರುವ ಛಾಯಾಚಿತ್ರಗಳನ್ನು 2 X 2 ಅಡಿ ಅಳತೆಯಲ್ಲಿ ಮುದ್ರಿಸಿ ಪ್ರದರ್ಶಿಸಬಹುದಾಗಿದೆ. ಅತ್ಯುತ್ತಮ ಛಾಯಾಚಿತ್ರಕ್ಕೆ ರೂ.50,000 ಬಹುಮಾನ ನೀಡಲಾಗುವುದು.

**ಹಂಪಿ ಬೈ ಆರ್ಟ್ಸ್:** ಹಂಪಿಯ ವೈಭವ ಸ್ಮಾರಕವನ್ನು ಸಾರುವ ಯಾವುದೇ ಮಾದರಿಯ ಕಲಾಕೃತಿಯನ್ನು ಪ್ರದರ್ಶಿಸಬಹುದಾದ ಈ ಕಾರ್ಯಕ್ರಮದಲ್ಲಿ ಕಲಾವಿದರಿಗೆ ಭಾಗವಹಿಸಲು ಅವಕಾಶವಿದೆ. ಪ್ರವೇಶ ಉಚಿತವಾಗಿದ್ದು, ಬಹುಮಾನವನ್ನು ನೀಡಲಾಗುವುದು.

**ಅಂಗನವಾಡಿ ಮಕ್ಕಳಿಗೆ ವಾರಕ್ಕೊಮ್ಮೆ ಹಣ್ಣು ಹಂಪಲು: ಕರ್ನಾಟಕ ಸರ್ಕಾರ**

ಅಪೌಷ್ಠಿಕತೆಯಿಂದ ಬಳಲುತ್ತಿರುವ ರಾಜ್ಯದ ಕೆಲವು ಜಿಲ್ಲೆಯ ಮಕ್ಕಳಿಗೆ ವಾರಕ್ಕೊಮ್ಮೆ ಕಾಲೋಚಿತ ಹಣ್ಣುಗಳನ್ನು(Seasonal Fruits) ನೀಡುವುದಾಗಿ ಕರ್ನಾಟಕ ಸರ್ಕಾರ ಹೈಕೋರ್ಟಗೆ ತನ್ನ ವರದಿಯಲ್ಲಿ ತಿಳಿಸಿದೆ. ಅಪೌಷ್ಠಕತೆ ಬಗ್ಗೆ ವರದಿ ನೀಡಲು ಹೈ ಕೋರ್ಟ್ ನೇಮಿಸಿದ್ದ ಎನ್.ಕೆ.ಪಾಟೀಲ್ ಸಮಿತಿಯ ಶಿಫಾರಸ್ಸಿನ ಮೇರೆಗೆ ಈ ಕ್ರಮವನ್ನು ಸರ್ಕಾರ ಕೈಗೊಳ್ಳಲಿದೆ.

ಎಲ್ಲೆಲ್ಲಿ?

ಬೀದರ್ ಜಿಲ್ಲೆಯ ಬಾಲ್ಕಿ ತಾಲ್ಲೂಕ್, ರಾಯಚೂರಿನ ದೇವದುರ್ಗ ತಾಲ್ಲೂಕ್, ಕೊಪ್ಪಳದ ಯಲ್ಬುರ್ಗ ಮತ್ತು ಮೈಸೂರಿನ ಪಿರಿಯಾ ಪಟ್ಟಣ ತಾಲ್ಲೂಕಿನಲ್ಲಿ ಈ ಕಾರ್ಯಕ್ರಮವನ್ನು 2013-14 ನೇ ಸಾಲಿನಿಂದ ಜಾರಿಗೊಳಿಸಲು ನಿರ್ಧರಿಸಲಾಗಿದೆ.

# ರಾಷ್ಟ್ರೀಯ

**ನೇರ ನಗದು ಯೋಜನೆ: ಇಂದಿನಿಂದ ಜಾರಿ**

ಫಲಾನುಭವಿಗಳ ಖಾತೆಗೆ ಸಬ್ಸಿಡಿ ಹಣವನ್ನು ನೇರವಾಗಿ ತಲುಪಿಸುವ ಯೋಜನೆಯನ್ನು (Direct Cash Transfer Scheme) ಕರ್ನಾಟಕ ಸೇರಿದಂತೆ ದೇಶದ ಇತರ ರಾಜ್ಯಗಳ ಒಟ್ಟು 20 ಜಿಲ್ಲೆಗಳಲ್ಲಿ ಜನವರಿ 1 ರಿಂದ ಜಾರಿಗೆ ಬಂದಿದೆ.

- ಮೊದಲ ಭಾರಿಗೆ ಸೇರ್ಪಡೆ ಮಾಡಿರುವ ಯೋಜನೆಗಳು: ವಿದ್ಯಾರ್ಥಿ ವೇತನ, ವೃದ್ಯಾಪ್ಯ ವೇತನ, ಪಿಂಚಣಿ ಮತ್ತು ಇತರೆ ಏಳು ಯೋಜನೆಗಳ ಸಬ್ಸಿಡಿ ಹಣವು ನೇರವಾಗಿ ಫಲಾನುಭವಿಗಳ ಬ್ಯಾಂಕ್ ಖಾತೆಗಳಿಗೆ ವರ್ಗಾವಣೆ ಆಗಲಿದೆ.
- 2013 ರ ವೇಳೆಗೆ ದೇಶದ 43 ಜಿಲ್ಲೆಗಳಲ್ಲಿ ಈ ಯೋಜನೆ ಜಾರಿಗೆ ಬರಲಿದೆ ಎಂದು ಸರ್ಕಾರ ತಿಳಿಸಿದೆ.
- ಆಹಾರ, ರಸಗೊಬ್ಬರ, ಅಡುಗೆ ಅನಿಲ, ಡೀಸೆಲ್ ಮತ್ತು ಸೀಮೆಎಣ್ಣೆ ಸಬ್ಸಿಡಿ ಮೊದಲ ಹಂತದ ಯೋಜನೆಯಡಿ ಸೇರಿಲ್ಲ. ಒಟ್ಟು 26 ಯೋಜನೆಗಳ ಸಬ್ಸಿಡಿ ಮುಂದಿನ ದಿನಗಳಲ್ಲಿ ಜಾರಿಗೆ ಬರಲು ಸಿದ್ಧಗೊಂಡಿದೆ.

**ನೇರ ನಗದು ಉದ್ದೇಶ**: ಈ ಯೋಜನೆಯಿಂದ ವಿವಿಧ ಯೋಜನೆಗಳ ಸಬ್ಸಿಡಿ ನೆರವು ನೇರವಾಗಿ ಫಲಾನುಭವಿಗಳಿಗೆ ತಲುಪುವುದರಿಂದ ವಿಳಂಬ ಮತ್ತು ಹಣದ ಸೋರಿಕೆ ತಪ್ಪಲಿದೆ ಎಂಬುದು ತಜ್ಞರ ಅಭಿಪ್ರಾಯವಾಗಿದೆ.

**ಕರ್ನಾಟಕದ ಯಾವ ಜಿಲ್ಲೆಗಳಲ್ಲಿ ಈ ಯೋಜನೆ ಜಾರಿಗೊಳ್ಳಲಿದೆ**: ಮೊದಲ ಹಂತದಲ್ಲಿ ರಾಜ್ಯದ ತುಮಕೂರು, ಮೈಸೂರು ಮತ್ತು ಧಾರವಾಡ ಜಿಲ್ಲೆಗಳಲ್ಲಿ ಈ ಯೋಜನೆ ಜಾರಿಗೆ ಬರಲಿದೆ.

**ಹಾಲು ಉತ್ಪಾದನೆ ಹೆಚ್ಚಳ: ನಂ.1 ಸ್ಥಾನದಲ್ಲಿ ಮುಂದುವರಿಯಲಿರುವ ಭಾರತ**

ಪ್ರಸ್ತಕ ಹಣಕಾಸು ವರ್ಷದಲ್ಲಿ ಭಾರತದ ಹಾಲು ಉತ್ಪಾದನೆಯಲ್ಲಿ ಶೇ.4 ರಷ್ಟು ಹೆಚ್ಚಾಗಲಿದ್ದು, ಹಾಲು ಉತ್ಪಾದನೆ 133.7 ಲಕ್ಷ ಟನ್ ಗಳಗೆ ಏರಿಕೆ ಆಗಲಿದೆ ಎಂದು ಕೇಂದ್ರ ಸರ್ಕಾರ ತಿಳಿಸಿದೆ

- 2011-12 ಸಾಲಿನಲ್ಲಿ ದೇಶದ ಹಾಲು ಉತ್ಪಾದನೆ 129.7 ಲಕ್ಷ ಟನ್ ಗಳಷ್ಟು ದಾಖಲಾಗಿದ್ದು, ಜಾಗತಿಕ ಹಾಲು ಉತ್ಪಾದನೆಯಲ್ಲಿ ಭಾರತ ಮುಂಚೂಣಿಯಲ್ಲಿದೆ.
- ಸದ್ಯ ವ್ಯಕ್ತಿಗೆ ಹಾಲಿನ ಲಭ್ಯತೆ (Per Capita availability) ಭಾರತದಲ್ಲಿ 290 ಗ್ರಾಂಗಳಷ್ಟಿದ್ದು, ಇತರೆ ದೇಶಗಳಿಗೆ ಹೋಲಿಸಿದರೆ ಕಡಿಮೆ ಮಟ್ಟದಲ್ಲಿದೆ.

**ಒಡಿಶಾ ಮತ್ತು ಉತ್ತರಖಂಡದಲ್ಲಿ ಗುಟ್ಕಾ ನಿಷೇಧ ಜಾರಿ**

- ಒಡಿಶಾ ಮತ್ತು ಉತ್ತರಖಂಡ ರಾಜ್ಯಗಳು ಗುಟ್ಕಾ ತಯಾರಿಕೆ, ಮಾರಾಟ ಮತ್ತು ವಿತರಣೆ ಮೇಲೆ ಸಂಪೂರ್ಣ ನಿಷೇಧವನ್ನು ಹೇರಿವೆ. ಈ ಸಂಬಂಧ ಇನ್ನೆರಡು ದಿನಗಳಲ್ಲಿ ಅಧಿಕೃತ ಆದೇಶ ಹೊರಬೀಳಲಿದ್ದು, ಈಗಾಗಲೇ ನಿಷೇಧ ವಿಧಿಸಿರುವ ಕೇರಳ, ಗುಜರಾತ್ ಮತ್ತಿತ್ತರ ರಾಜ್ಯಗಳ ಪಟ್ಟಿಯ ಸಾಲಿಗೆ ಈ ಎರಡು ರಾಜ್ಯಗಳು ಸೇರ್ಪಡೆಗೊಳ್ಳಲಿವೆ.

- ತಂಬಾಕು ಮತ್ತು ತಂಬಾಕು ಸಂಬಂಧಿತ ಪದಾರ್ಥಗಳನ್ನು ಸೇವಿಸುವುದರಿಂದ ಕ್ಯಾನ್ಸರ್ ನಂತ ಮಾರಣಾಂತಿಕ ಕಾಯಿಲೆಗಳಿಗೆ ಸಾರ್ವಜನಿಕರು ತುತ್ತಾಗುತ್ತಿರುವುದು ಸಾಮಾನ್ಯವಾಗಿದೆ. ಆದ್ದರಿಂದ ಸಾರ್ವಜನಿಕರ ಹಿತದೃಷ್ಟಿಯನ್ನು ಕಾಯುವ ಸಲುವಾಗಿ ಈ ನಿಷೇಧವನ್ನು ಜಾರಿಗೊಳಿಸಲಾಗಿದೆ.
- ತಜ್ಞರ ಪ್ರಕಾರ ಗುಟ್ಕಾದಲ್ಲಿ ಅತಿ ಹೆಚ್ಚಿನ ಪ್ರಮಾಣದಲ್ಲಿ **ಮೆಗ್ನಿನಿಷೀಯಂ ಮತ್ತು ಕ್ಯಾಲ್ಸಿಯಮ್ ಕಾರ್ಬೋನೆಟ್** ರಾಸಾಯನಿಕಗಳಿರಿವುದರಿಂದ ಗುಟ್ಕಾ ಜಿಗಿತವು ಆರೋಗ್ಯದ ಮೇಲೆ ತೀವ್ರ ತರನಾದ ದುಷ್ಪರಿಣಾಮ ಬೀರುತ್ತದೆ. ಬಾಯಿ ಕ್ಯಾನ್ಸರ್, ಹೃದಯ ಸಂಬಂಧಿ ಕಾಯಿಲೆಗಳು, ಹೆಚ್ಚಿನ ರಕ್ತದ ಒತ್ತಡ ಮುಂತಾದ ರೋಗಗಳಿಗೆ ಗುಟ್ಕಾ ದಾರಿ ಮಾಡಿಕೊಡುತ್ತದೆ.
- ಜನರಲ್ಲಿ ತಂಬಾಕು ಸೇವನೆಯಿಂದಾಗುವ ದುಷ್ಪರಿಣಾಮದ ಅರಿವು ಮೂಡಿಸುವ ಸಲುವಾಗಿ ಪ್ರತಿ ವರ್ಷ **ಮೇ 31** ರಂದು ವಿಶ್ವ ತಂಬಾಕು ವಿರೋಧಿ ದಿನವಾಗಿ ಆಚರಿಸಲಾಗುತ್ತದೆ.

**ಸಂಸತ್ ಗೆ 60 ವರ್ಷ: ಸ್ಮರಣಾರ್ಥ ನಾಣ್ಯ ಬಿಡುಗಡೆ**

ಸಂಸತ್ತಿಗೆ 60 ವರ್ಷ ತುಂಬಿರುವ ಕಾರಣ ಸ್ಮರಣಾರ್ಥವಾಗಿ ವಿಶೇಷವಾದ ರೂ.10 ಮುಖಬೆಲೆಯ ನಾಣ್ಯ ಹೊರತರಲು ಭಾರತೀಯ ರಿಸರ್ವ್ ಬ್ಯಾಂಕ್ ನಿರ್ಧರಿಸಿದೆ.

**ಶೇಲ್ ಅನಿಲ ನೀತಿ ಶೀಘ್ರ ಸಿದ್ಧ: ವೀರಪ್ಪ ಮೊಹ್ಲಿ**

ಪೆಟ್ರೋಲಿಯಂ ಸಚಿವಾಲಯವು ಶೇಲ್ ಅನಿಲ ಹೊರತೆಗೆಯುವ ಸಂಬಂಧ ನೀತಿಯೊಂದನ್ನು ರೂಪಿಸಿದ್ದು, ಶೀಘ್ರದಲ್ಲಿ ಅದನ್ನು ಸಚಿವ ಸಂಪುಟ ಮುಂದಿಡಲಾಗುವುದೆಂದು ಕೇಂದ್ರ ಇಂಧನ ಸಚಿವ ವೀರಪ್ಪ ಮೊಹ್ಲಿ ತಿಳಿಸಿದ್ದಾರೆ. ಭಾರತದಲ್ಲಿ ಇಂಧನ ಸ್ವಾವಲಂಭನೆ ಸಾಧಿಸಲು ಶೇಲ್ ಅನಿಲ ಉತ್ಪಾದನೆ ಮತ್ತು ಬಳಕೆ ಅಗತ್ಯವಿದ್ದು ಅನಿಲ ಹೊರತೆಗೆಯುವಿಕೆ ಬಗ್ಗೆ ಸರ್ಕಾರ ಚಿಂತನೆ ನಡೆಸುತ್ತಿರುವುದಾಗಿ ಮೊಹ್ಲಿ ಹೇಳಿದ್ದಾರೆ.

**ಏನಿದು ಶೇಲ್ ಅನಿಲ?**

- ಶೇಲ್ ಅನಿಲ ಒಂದು ಬಗೆಯ ನೈಸರ್ಗಿಕ ಅನಿಲವಾಗಿದ್ದು, ಭೂಮಿಯ ಜೋಡಿಪದರುಗಲ್ಲು (Quartz) ಒಳಗೆ ಬಂಧಿಸಲ್ಪಟ್ಟ ಇಂಧನ ಅನಿಲವಾಗಿದೆ. ಶೇಲ್ ಇತ್ತೀಚಿನ ದಿನಗಳಲ್ಲಿ ವಿದೇಶಗಳಲ್ಲಿ ಬಹು ಭೇಡಿಕೆಯ ಇಂಧನ ಅನಿಲವಾಗಿದೆ.
- ಪ್ರಪಂಚದಲ್ಲೇ ಅತಿ ಹೆಚ್ಚು ಶೇಲ್ ಇಂಧನ ಬಳಸುತ್ತಿರುವ ದೇಶ ಆಮೆರಿಕಾ. 2001 ರಲ್ಲಿ ಆಮೆರಿಕಾದ ಒಟ್ಟು ನೈಸರ್ಗಿಕ ಅನಿಲಗಳ ಬಳಕೆಯಲ್ಲಿ ಶೇಲ್ ಕೇವಲ ಶೇ.1 ರಷ್ಟು ಇದ್ದರೆ, 2010 ರ ವೇಳಗೆ ಶೇಲ್ ಬಳಕೆ ಗಣನೀಯವಾಗಿ ಏರಿಕೆಯಾಗಿದ್ದು, ಒಟ್ಟು ನೈಸರ್ಗಿಕ ಅನಿಲಗಳ ಬಳಕೆಯಲ್ಲಿ ಶೇ.20 ರಷ್ಟು ಶೇಲ್ ಅನಿಲ ಬಳಕೆಯಾಗಿದೆ.
- ಚೀನಾ ದೇಶ ಪ್ರಪಂಚದಲ್ಲೇ ಅತಿ ಹೆಚ್ಚು ಶೇಲ್ ಅನಿಲ ನಿಕ್ಷೇಪ ಹೊಂದಿದೆ ಎಂದು ಅಂದಾಜಿಸಲಾಗಿದೆ.

- ಶೇಲ್ ಅನಿಲ ಅಸಾಂಪ್ರಾದಾಯಿಕ (Unconventional energy) ಇಂಧನ ಮೂಲವಾಗಿದ್ದು, ಅಡ್ಡ ಕೊರೆಯುವ (Horizontal Drilling) ಮೂಲಕ ಭೂಮಿಯ ಸುಮಾರು 10,000 ಅಡಿಗಳಿಂದ ಹೊರತೆಗೆಯಲಾಗುತ್ತದೆ

**ಶೇಲ್ ಅನಿಲ ಪರಿಸರ ಸ್ನೇಹಿಯೇ?**

ಶೇಲ್ ಅನಿಲವು ಇತರೆ ಇಂಧನಗಳಿಗಿಂತ ಕಡಿಮೆ ಹಸಿರು ಮನೆ ಅನಿಲಗಳನ್ನು (Green House Gases) ಹೊರಸೂಸುತ್ತವೆ ಎಂಬ ನಂಬಿಕೆಯಿಂದ ಆಮೆರಿಕಾದಲ್ಲಿ ಶೇಲ್ ಅನಿಲ ಬಳಕೆಯನ್ನು ಪ್ರೇರೆಪಿಸಲಾಗಿತ್ತು. ಆದರೆ ಇತ್ತೀಚಿನ ಸಂಶೋಧನೆಗಳ ಪ್ರಕಾರ ಶೇಲ್ ಅನಿಲವು ಪಳೆಯುಳಿಕೆ ಇಂಧನಕ್ಕಿಂತಲೂ ಅತಿ ಹೆಚ್ಚು ಮೀಥೇನ್ ಅನಿಲವನ್ನು ಬಿಡುಗಡೆ ಮಾಡುತ್ತದೆ ಎಂದು ಕಂಡುಬಂದಿದೆ. ಮೀಥೇನ್ ಒಂದು ಹಾನಿಕಾರಕ ಹಸಿರು ಮನೆ ಅನಿಲ. ಇದಲ್ಲದೆ ಅಂತರ್ಜಲದ ಮಾಲಿನ್ಯ ಕೂಡ ಆಗಲಿದೆ ಎಂಬುದು ಸಂಶೋಧನೆಯಿಂದ ತಿಳಿದು ಬಂದಿದೆ.

ಭಾರತದಲ್ಲಿ ಶೇಲ್ ಅನಿಲ ನಿಕ್ಷೇಪ ಎಲ್ಲಿವೆ?

ಕೃಷ್ಣ - ಗೋದಾವರಿ, ಕಾವೇರಿ ಬೆಸಿನ್, ದಾಮೋದರ ಮತ್ತು ಕ್ಯಾಂಬೆ ಪ್ರದೇಶಗಳಲ್ಲಿ ಶೇಲ್ ಅನಿಲ ನಿಕ್ಷೇಪ ಪತ್ತೆ ಹಚ್ಚಲಾಗಿದ್ದು, ದಾಮೋದರ ನಿಕ್ಷೇಪಗಳಲ್ಲಿ ಈಗಾಗಲೇ ONGC ಕಂಪನಿಯು ಅನಿಲ ಹೊರ ತೆಗೆವ ಭಾವಿಗಳನ್ನು ಕೊರೆದಿದೆ.

- ಇತ್ತೀಚೆಗೆ ONGC ಕಂಪನಿಯು ಆಮೆರಿಕಾದ Conocophills ಕಂಪನಿ ಜೊತೆ ಭಾರತದಲ್ಲಿ ಶೇಲ್ ಅನಿಲ ತೆಗೆವ ಒಪ್ಪಂದಕ್ಕೆ ಸಹಿ ಹಾಕಿದೆ.

**100 ನೇ ಭಾರತ ವಿಜ್ಞಾನ ಕಾಂಗ್ರೆಸ್ (Indian Science Congress)**

- 100ನೇ ಭಾರತ ವಿಜ್ಞಾನ ಕಾಂಗ್ರೆಸ್ ಜನವರಿ 3 ರಿಂದ 7 ರವರೆಗೆ **ಕೋಲ್ಕತದಲ್ಲಿ** ನಡೆಯಿತು. ಕೋಲ್ಕತ್ತ ವಿಶ್ವವಿದ್ಯಾನಿಲಯ ಈ ವರ್ಷದ ವಿಜ್ಞಾನ ಕಾಂಗ್ರೆಸ್ ನ್ನು ಆಯೋಜಿಸಿತ್ತು.
- ಭಾರತದ ರಾಷ್ಟ್ರಪತಿಗಳಾದ ಪ್ರಣಬ್ ಮುಖರ್ಜಿರವರು ಕಾರ್ಯಕ್ರಮವನ್ನು ಉದ್ಘಾಟಿಸುವ ಮೂಲಕ 100ನೇ ರಾಷ್ಟ್ರೀಯ ಕಾಂಗ್ರೆಸ್ ಗೆ ಚಾಲನೆ ನೀಡಿದರು.
- ಈ ಬಾರಿಯ ಭಾರತ ವಿಜ್ಞಾನ ಕಾಂಗ್ರೆಸ್ ನ ಅಧ್ಯಕ್ಷತೆಯನ್ನು ಭಾರತದ ಪ್ರಧಾನ ಮಂತ್ರಿಗಳಾದ ಡಾ.ಮನಮೋಹನ್ ಸಿಂಗ್ ರವರು ವಹಿಸಿದ್ದರು.
- "ಸೈನ್ಸ್ ಫಾರ್ ಶೇಪಿಂಗ್ ದಿ ಫ್ಯೂಚರ್ ಆಫ್ ಇಂಡಿಯಾ" ಈ ಬಾರಿಯ ಫೋಕಲ್ ಥೀಮ್ (Science for Shaping the Future of India)
- ರಾಷ್ಟ್ರೀಯ ಕಿಶೋರ್ ವೈಜ್ಞಾನಿಕ ಸಮ್ಮೇಳನ (National Science Congress) ವಿಜ್ಞಾನ ಕಾಂಗ್ರೆಸ್ ನ ಅಂಗವಾಗಿದ್ದು, ಮಕ್ಕಳಲ್ಲಿ ವಿಜ್ಞಾನದ ಪ್ರತಿಭೆ ಮತ್ತು ಜ್ಞಾನವನ್ನು ಉತ್ತೇಜಿಸಲು ಆಯೋಜಿಸಲಾಗುತ್ತದೆ.
- ಈ ಬಾರಿಯ ಸಮ್ಮೇಳನದಲ್ಲಿ "ದೇಶದ ಅಭಿವೃದ್ಧಿಗೆ ಮಹಿಳೆಯರ ಸಬಲೀಕರಣ" ಎಂಬ ವಿಶೇಷ ಕಾರ್ಯಕ್ರಮವನ್ನು ಆಯೋಜಿಸಲಾಗಿತ್ತು. ವಿಜ್ಞಾನ ಮತ್ತು ತಂತ್ರಜ್ಞಾನಕ್ಕೆ ಮಹಿಳೆಯರ ಕೊಡುಗೆಯನ್ನು ಪ್ರದರ್ಶಿಸಲಾಯಿತು. ಈ ಅಧಿವೇಶನದಲ್ಲಿ ಹೆಸರಾಂತ ಮಹಿಳಾ ವಿಜ್ಞಾನಿಗಳು ಉಪನ್ಯಾಸಗಳನ್ನು ನೀಡಿದರು.

- ಕಳೆದ ವರ್ಷ **99ನೇ** ಭಾರತ ವಿಜ್ಞಾನ ಕಾಂಗ್ರೆಸ್ ಸಮ್ಮೇಳನವೂ **ಬುಬನೇಶ್ವರ್ ನಲ್ಲಿ ಗೀತಾ ಬಾಲಿಯವರ** ಅಧ್ಯಕ್ಷತೆಯಲ್ಲಿ ನಡೆದಿತ್ತು.

ಪ್ರಥಮ ಭಾರತ ವಿಜ್ಞಾನ ಕಾಂಗ್ರೆಸ್ ನ್ನು 1914 ರಲ್ಲಿ ಕೋಲ್ಕತ್ತದಲ್ಲಿ ಆಯೋಜಿಸಲಾಗಿತ್ತು. ಅಂದಿನ ಕೋಲ್ಕತ್ತದ ವಿವಿ ಯ ಅಶುತೋಷ್ ಮುಖರ್ಜಿ ಅವರು ಪ್ರಥಮ ರಾಷ್ಟ್ರೀಯ ಕಾಂಗ್ರೆಸ್ ನ ಅಧ್ಯಕ್ಷತೆಯನ್ನು ವಹಿಸಿದ್ದರು. ಬೆಂಗಳೂರಿನಲ್ಲಿ ಇದುವರೆಗೂ 8 ಬಾರಿ ಆಯೋಜಿಸಲಾಗಿದ್ದು, 2003 ರಲ್ಲಿ ನಡೆದ 90ನೇ ಭಾರತ ವಿಜ್ಞಾನ ಕಾಂಗ್ರೆಸ್ ಕೊನೆಯದು.

**ವಿಶ್ವ ಸಿರಿವಂತರ ಪಟ್ಟಿ: ಮುಖೇಶ್ 18ನೇ ಸಿರಿವಂತ**

- ಬ್ಲೂಮ್ ಬರ್ಗ್ ಬಿಲಿಯನೇರ್ ಸಿದ್ಧಪಡಿಸಿರುವ 2012 ನೇ ವರ್ಷದ ವಿಶ್ವದ 100 ಸಿರಿವಂತರ ಪಟ್ಟಿಯಲ್ಲಿ ಭಾರತದ ರಿಲಯನ್ಸ್ ಉದ್ಯಮಗಳ ಮುಖ್ಯಸ್ಥ ಮುಖೇಶ್ ಅಂಬಾನಿ 1.36 ಲಕ್ಷ ಕೋಟಿ ರೂಪಾಯಿ ವೈಯುಕ್ತಿಕ ಸಂಪತ್ತಿನೊಂದಿಗೆ 18ನೇ ಸ್ಥಾನ ಪಡೆದಿದ್ದಾರೆ.
- ಮುಖೇಶ್ ಅಂಬಾನಿಯವರು ಈ ಮೂಲಕ ಸತತ ಆರನೇ ಬಾರಿ ಭಾರತದ ಅತ್ಯಂತ ಸಿರಿವಂತ ಎಂಬ ಪಟ್ಟವನ್ನು ಉಳಿಸಿಕೊಂಡಿದ್ದಾರೆ.
- ಮೆಕ್ಸಿಕೊದ ದೂರ ಸಂಪರ್ಕ ಕ್ಷೇತ್ರದ ದಿಗ್ಗಜ ಕಾರ್ಲೋಸ್ ಸಿಮ್ ಈ ಬಾರಿಯು ಸಹ ವಿಶ್ವದ ಅತ್ಯಂತ ಸಿರಿವಂತ ಎಂಬ ಹೆಗ್ಗಳಿಕೆಯನ್ನು ಮುಂದುವರಿಸಿದ್ದಾರೆ. ಮೈಕ್ರೊಸಾಫ್ಟ್ ಸಂಸ್ಥಾಪಕ ಬಿಲ್ ಗೇಟ್ಸ್ ಮತ್ತು ಝರಾ ಚಿಲ್ಲರೆ ಉದ್ಯಮದ ಸಂಸ್ಥಾಪಕ ಅಮಾನ್ಸಿಯೋ ಒರ್ಟೆಗಾ ಕ್ರಮವಾಗಿ ಟಾಪ್ ಹತ್ತರಲ್ಲಿ ಮೊದಲ ಮೂರು ಸ್ಥಾನ ಪಡೆದಿದ್ದಾರೆ.

**ಮಣಿಪುರ ನಕಲಿ ಎನ್ ಕೌಂಟರ್ ಪ್ರಕರಣ: ನ್ಯಾ.ಸಂತೋಷ್ ಹೆಗ್ಡೆ ನೇತೃತ್ವದಲ್ಲಿ ತನಿಖಾ ಆಯೋಗ**

- ಮಣಿಪುರದ ನಕಲಿ ಎನ್ ಕೌಂಟರ್ ಹತ್ಯೆ ಪ್ರಕರಣಗಳ ಬಗ್ಗೆ ತನಿಖೆ ನಡೆಸಲು ಸುಪ್ರೀಂ ಕೋರ್ಟ್ ತನಿಖಾ ತಂಡವೊಂದನ್ನು ರಚಿಸುವುದಾಗಿ ಹೇಳಿದೆ. ಈ ನ್ಯಾಯಾಂಗ ಆಯೋಗಕ್ಕೆ ಕರ್ನಾಟಕದ ಮಾಜಿ ಲೋಕಾಯುಕ್ತರಾದ ನಿವೃತ್ತ ನ್ಯಾಯಮೂರ್ತಿ ಸಂತೋಷ್ ಹೆಗ್ಡೆ, ಮಾಜಿ ಚುನಾವಣಾ ಆಯುಕ್ತ ಜೆ.ಎಂ.ಲಿಂಗ್ಡೊ ಮತ್ತು ಹಿರಿಯ ಪೋಲಿಸ್ ಅಧಿಕಾರಿಗಳನ್ನು ನೇಮಿಸುವುದಾಗಿ ಕೋರ್ಟ್ ತಿಳಿಸಿದೆ.
- ಮಣಿಪುರದಲ್ಲಿ ಸೇನಾ ಪಡೆಗಳು ನಡೆಸಲಾದ ಆರು ಎನ್ ಕೌಂಟರ್ ಗಳ ಬಗ್ಗೆ ದಂಡಾಧಿಕಾರಿಗಳು ನಡೆಸಿದ ವಿಚಾರಣೆ ವೇಳೆ ಸಾಚತನದ ಬಗ್ಗೆ ಸಂಶಯ ವ್ಯಕ್ತ ಪಡಿಸಿದ್ದರಿಂದ ಈ ಬಗ್ಗೆ ಹೆಚ್ಚಿನ ತನಿಖೆ ನಡೆಸಲು ಸುಪ್ರೀಂ ಕೋರ್ಟ್ ಈ ಆಯೋಗವನ್ನು ನೇಮಿಸಲು ಆದೇಶಿಸಿದೆ.
- ಸೇನಾಪಡೆಯು ಕಾನೂನು ಬಾಹಿರವಾಗಿ "ಎನ್ ಕೌಂಟರ್" ಗಳನ್ನು ನಡೆಸಿದ್ದು, ಇದರಿಂದ ಬಾಲಕನೊಬ್ಬ ಸೇರಿದಂತೆ ನೂರಾರು ಅಮಾಯಕರು ಬಲಿಯಾಗಿದ್ದಾರೆ ಎಂದು ಆರೋಪಿಸಿ ಸಲ್ಲಿಸಲಾಗಿದ್ದ ಸಾರ್ವಜನಿಕ ಹಿತಾಸಕ್ತಿ ಅರ್ಜಿ ವಿಚಾರಣೆ ವೇಳೆ ಸುಪ್ರೀಂ ಕೋರ್ಟ್ ಈ ನಿರ್ಧಾರ ಕೈಗೊಂಡಿದೆ.

**ಪೋಲಿಸ್ ಠಾಣೆಗಳ ಆನ್ ಲೈನ್ ಸಂಪರ್ಕ ಯೋಜನೆಗೆ ಚಾಲನೆ**

ಅಪರಾಧ ಮತ್ತು ಅಪರಾಧಿಗಳ ಪತ್ತೆ ಜಾಲ ಮತ್ತು ವ್ಯವಸ್ಥೆಯ (Crime and Criminal Tracking Network and System) ಪ್ರಯೋಗಿಕ ವ್ಯವಸ್ಥೆಗೆ ಕೇಂದ್ರ ಗೃಹ ಸಚಿವ ಸುಶೀಲ್ ಕುಮಾರ್ ಶಿಂಧೆಯವರು ಚಾಲನೆ ನೀಡಿದರು.

**ಸಿಸಿಟಿಎನ್ಎಸ್ ನ ಉಪಯೋಗವೇನು?**

- ಇದೊಂದು ಸಮಗ್ರ ಯೋಜನೆಯಾಗಿದ್ದು, ಇದರಿಂದ ಕಾನೂನು ಜಾರಿ ಮಾಡುವ ಇಲಾಖೆಗಳು ಅಪರಾಧಿಗಳ ಜಾಡು ಹಿಡಿಯುವ ಕಾರ್ಯ ಸುಲಭವಾಗಲಿದೆ. ಅಲ್ಲದೇ ಪೋಲಿಸ್ ಕಾರ್ಯಕ್ಷಮತೆಯು ವೃದ್ಧಿಸುತ್ತದೆ ಎಂದು ಅಂದಾಜಿಸಲಾಗಿದೆ.
- ಅಪರಾಧ, ಮೊಕದ್ದಮೆಗಳು, ಅಪರಾಧಿಗಳು, ತನಿಖೆ ಮತ್ತು ನ್ಯಾಯಲಯಗಳಲ್ಲಿ ಪ್ರಕರಣದ ಸ್ಥಿತಿಗತಿ ಮಾಹಿತಿಯನ್ನು ತಿಳಿಯಲು ರಾಷ್ಟ್ರದ ಪೋಲಿಸ್ ಠಾಣೆಗಳು ಪರಸ್ಪರ ಮಾಹಿತಿಯನ್ನು ಅಂತರ್ಜಾಲದ ಮೂಲಕ ವಿನಿಮಯ ಮಾಡಿಕೊಳ್ಳಬಹುದಾಗಿರುವ ವಿನೂತನ ಯೋಜನೆ ಇದಾಗಿದೆ.

**ಇಂದಿರಾ ಆವಾಸ್ ಯೋಜನೆಯಡಿ ಸಹಾಯ ಧನ ಹೆಚ್ಚಳಕ್ಕೆ ಕೇಂದ್ರ ಒಪ್ಪಿಗೆ**

ಕೇಂದ್ರ ಸರ್ಕಾರದ ಮಹತ್ವದ ಯೋಜನೆಯಾದ ಇಂದಿರಾ ಆವಾಸ್ ಯೋಜನೆಯಡಿ ಮನೆ ನಿರ್ಮಾಣಕ್ಕೆ ನೀಡಲಾಗುವ ಸಹಾಯ ಧನ ಹೆಚ್ಚಳಕ್ಕೆ ಕೇಂದ್ರ ಸರ್ಕಾರ ಒಪ್ಪಿಗೆ ನೀಡಿದೆ. ಕೇಂದ್ರ ಗ್ರಾಮೀಣ ಅಭಿವೃದ್ಧಿ ಸಚಿವಾಲಯವೂ ಸಹಾಯ ಧನವನ್ನು ಹೆಚ್ಚಿಸುವಂತೆ ಕೇಂದ್ರ ಸರ್ಕಾರಕ್ಕೆ ಪ್ರಸ್ತಾವನೆಯನ್ನು ಸಲ್ಲಿಸಿತ್ತು.

- ಅಚ್ಚುಕಟ್ಟಾದ ಪ್ರದೇಶಗಳಲ್ಲಿ ಪ್ರತಿ ಮನೆ ನಿರ್ಮಾಣಕ್ಕೆ ಈ ಯೋಜನೆಯಡಿ ಹಿಂದೆ ರೂ.45,000 ವನ್ನು ಸಹಾಯ ಧನವಾಗಿ ನೀಡಲಾಗುತ್ತಿತ್ತು. ಈಗ ರೂ.70,000 ಕ್ಕೆ ಹೆಚ್ಚಿಸಲಾಗಿದೆ.
- ಗುಡ್ಡಗಾಡು ಮತ್ತು ಇಳಿಜಾರಿನಂತಹ ಪ್ರದೇಶಗಳಲ್ಲಿ ಮನೆ ನಿರ್ಮಿಸಲು ರೂ.48,500 ನೀಡಲಾಗುತ್ತಿದ್ದು, ಈಗ ಅದನ್ನು ರೂ.75,000 ಕ್ಕೆ ಹೆಚ್ಚಿಸಲಾಗಿದೆ.

ಇಂದಿರಾ ಆವಾಸ್ ಯೋಜನೆ

- ಇಂದಿರಾ ಆವಾಸ್ ಯೋಜನೆಯನ್ನು ಕೇಂದ್ರ ಸರ್ಕಾರ 1989 ಜಾರಿಗೊಳಿಸಿದ್ದು, ಗ್ರಾಮೀಣ ಪ್ರದೇಶಗಳಲ್ಲಿ ವಸತಿ ಸೌಕರ್ಯ ಕಲ್ಪಿಸುವುದು ಈ ಯೋಜನೆಯ ಮುಖ್ಯ ಗುರಿಯಾಗಿದೆ.
- ಬಿಪಿಲ್ ವರ್ಗದಡಿ ಬರುವ ಪರಿಶಿಷ್ಟ ಜಾತಿ ಮತ್ತು ಪಂಗಡ, ಜೀತ ವಿಮುಕ್ತಿಯಿಂದ ಬಿಡುಗಡೆಗೊಂಡವರು, ಅಲ್ಪ ಸಂಖ್ಯಾತರು ಮತ್ತು ಅಂಗವಿಕಲ ಫಲಾನುಭವಿಗಳಿಗೆ ಈ ಯೋಜನೆಯಡಿ ಮನೆ ನಿರ್ಮಾಣ ಮಾಡಲು ಮೊದಲ ಪ್ರಾಶಸ್ತ್ಯ ನೀಡಲಾಗುವುದು.
- ಈ ಯೋಜನೆಯ ವೆಚ್ಚವನ್ನು ಕೇಂದ್ರ ಮತ್ತು ರಾಜ್ಯ ಸರ್ಕಾರಗಳು 75:25 ಅನುಪಾತದಲ್ಲಿ ಭರಿಸುತ್ತವೆ. ಈಶಾನ್ಯ ರಾಜ್ಯಗಳಿಗೆ ಈ ಅನುಪಾತ 90:10 ಮಾತ್ರ.

**ಸತತ ಎರಡನೇ ವರ್ಷವೂ ಭಾರತದಲ್ಲಿ "0" ಪೋಲಿಯೊ ಪ್ರಕರಣ**

ಭಾರತ ಪೋಲಿಯೊ ಮುಕ್ತ ದೇಶಗಳ ಪಟ್ಟಿಗೆ ಸೇರುವ ಎಲ್ಲಾ ಶುಭ ಸೂಚನೆಗಳು ಕಾಣುತ್ತಿವೆ ಏಕೆಂದರೆ ಸತತ ಎರಡನೇ ವರ್ಷವೂ ದೇಶದಲ್ಲಿ ಯಾವುದೇ ಪೋಲಿಯೊ ಪ್ರಕರಣಗಳು ಕಂಡು ಬಂದಿಲ್ಲ. 2009 ರಲ್ಲಿ ಪ್ರಪಂಚದ ಶೇ.50% ರಷ್ಟು ಪ್ರಕರಣಗಳು ಭಾರತದಲ್ಲಿ ಕಂಡು ಬಂದಿದ್ದವು ಆದರೆ ಪೋಲಿಯೊ ವಿರುದ್ದ ಕೈಗೊಂಡ ಕೆಲವು ಕ್ರಮಗಳು ಯಶಸ್ವಿಯಾಗಿರುವ ಕಾರಣ ಭಾರತ ಈಗ ಪೋಲಿಯೊ ಮುಕ್ತ ದೇಶಗಳ ಪಟ್ಟಿಗೆ ಸೇರುವುದು ನಿಶ್ಚಯವಾಗಿದೆ. ಈ ವರ್ಷದಲ್ಲಿ ಪೋಲಿಯೊ ಪಕ್ರರಣಗಳು ಪತ್ತೆಯಾಗದಿದ್ದಲ್ಲಿ, ವಿಶ್ವ ಆರೋಗ್ಯ ಸಂಸ್ಥೆಯು 2014 ರಲ್ಲಿ ಭಾರತವನ್ನು ಪೋಲಿಯೊ ಮುಕ್ತ ದೇಶವೆಂದು ಅಧಿಕೃತವಾಗಿ ಘೋಷಿಸಲಿದೆ.

ಪಲ್ಸ್ ಪೋಲಿಯೊ

- ಭಾರತದಲ್ಲಿ ಪೋಲಿಯೊ ಹೋಗಲಾಡಿಸಲು ಕೈಗೊಂಡ ಕಾರ್ಯಕ್ರಮಗಳು ಇತ್ತೀಚಿನವಲ್ಲ, ಪೋಲಿಯೊ ವಿರುದ್ದ ಲಸಿಕೆ ಕಾರ್ಯಕ್ರಮವನ್ನು ಮೊದಲಿಗೆ 1978 ರಲ್ಲಿ ಆರಂಭಿಸಲಾಯಿತು. ಎಕ್ಸ್ ಪ್ಯಾಂಡೆಡ್ ಪ್ರೋಗ್ರಾಂ ಇನ್ ಇಮ್ಯುನೈಸೆಷನ್ (Expanded Programme in Immunisation) ಎಂಬ ಹೆಸರಿನಲ್ಲಿ ಆರಂಭಿಸಲಾದ ಈ ಕಾರ್ಯಕ್ರಮವು 1984 ರಲ್ಲಿ ಶೇ.40 ರಷ್ಟು ಮಕ್ಕಳನ್ನು ತಲುಪುವಲ್ಲಿ ಯಶಸ್ವಿಯಾಯಿತು.
- 1985 ರಲ್ಲಿ ಯೂನಿವರ್ಸಲ್ ಇಮ್ಯುನೈಸೆಷನ್ ಪ್ರೋಗ್ರಾಂ (ಸಾರ್ವತಿಕ ಲಸಿಕೆ ಕಾರ್ಯಕ್ರಮ) (Universal Immunisation Programme) ನ್ನು ದೇಶದ ಎಲ್ಲಾ ಜಿಲ್ಲೆಗಳಲ್ಲು ಅನುಷ್ಟಾನಗೊಳಿಸಲಾಯಿತು. ಈ ಕಾರ್ಯಕ್ರಮವು ಶೇ.95 ರಷ್ಟು ಮಕ್ಕಳನ್ನು ತಲುಪುವಲ್ಲಿ ಯಶಸ್ವಿಯಾಯಿತಲ್ಲದೆ, 1987 ರಲ್ಲಿ 28,757 ರಷ್ಟಿದ್ದ ಪೋಲಿಯೊ ಪ್ರಕರಣಗಳು 1995 ರಲ್ಲಿ 3,265 ಇಳಿಯುವ ಮೂಲಕ ಗಣನೀಯವಾಗಿ ಕಡಿಮೆಯಾಗಿ ಅದ್ಬುತ ಯಶಸ್ಸನ್ನುಗಳಿಸಿತು.
- ತದ ನಂತರ ಪೋಲಿಯೊ ರೋಗವನ್ನು ಸಂಪೂರ್ಣ ಮಟ್ಟ ಹಾಕುವ ಸಲುವಾಗಿ 1995-96 ರಲ್ಲಿ ಪಲ್ಸ್ ಪೋಲಿಯೊ ಲಸಿಕೆ ಕಾರ್ಯಕ್ರಮವನ್ನು ಆರಂಭಿಸಲಾಯಿತು. ಈ ಕಾರ್ಯಕ್ರಮದಡಿ 5 ವರ್ಷದ ಒಳಗಿನ ಎಲ್ಲಾ ಮಕ್ಕಳಿಗೆ ತಪ್ಪದೇ ಪೋಲಿಯೊ ಲಸಿಕೆಯನ್ನು ಹಾಕಲಾಗುತ್ತದೆ.

**11 ನೇ ಪ್ರವಾಸಿ ಭಾರತೀಯ ದಿವಸ್ ಗೆ ಅದ್ದೂರಿ ಚಾಲನೆ:**

ಮೂರು ದಿನದ ಪ್ರವಾಸಿ ಭಾರತೀಯ ದಿವಸ್ ಆಚರಣೆಯನ್ನು ಜನವರಿ 7 ರಂದು ಕೇರಳದ ಕೊಚ್ಚಿಯಲ್ಲಿ ಉದ್ಘಾಟಿಸಲಾಯಿತು.

ಪ್ರವಾಸ್ ಭಾರತೀಯ ದಿವಸ್:

- 2003 ರಿಂದ ಪ್ರತಿ ವರ್ಷ ಜನವರಿ 9 ರಂದು ಪ್ರವಾಸಿ ಭಾರತೀಯ ದಿವಸ್ ಆಚರಿಸಲಾಗುತ್ತದೆ. ಜನವರಿ 9, 1915 ರಂದು ಮಹಾತ್ಮ ಗಾಂಧಿಯವರು ದಕ್ಷಿಣ ಆಫ್ರಿಕಾದಿಂದ ಭಾರತಕ್ಕೆ ಹಿಂತಿರುಗಿದರ ಸ್ಮರಣಾರ್ಥ ಈ ದಿನವನ್ನು ಪ್ರವಾಸಿ ಭಾರತೀಯ ದಿವಸ್ ಆಚರಿಸಲಾಗುತ್ತಿದೆ.
- ಈ ವರ್ಷದ ಪ್ರವಾಸಿ ಭಾರತೀಯ ದಿವಸ್ ನ ಮುಖ್ಯ **ಅತಿಥಿಗಳಾಗಿ ಮಾರಿಷಸ್ ನ ಅಧ್ಯಕ್ಷರಾದ ರಾಜಕೇಶ್ವರ್ ಪುರಯಾಗ್** ರವರು ಭಾಗವಹಿಸಿದ್ದರು.

- 2003 ರಲ್ಲಿ ಮೊದಲ ಪ್ರವಾಸಿ ಭಾರತೀಯ ದಿವಸ್ ನ್ನು ನವದೆಹಲಿಯಲ್ಲಿ ಆಯೋಜಿಸಲಾಗಿತ್ತು. ಎಲ್.ಎಂ.ಸಿಂಘ್ವಿ ಸಮಿತಿಯ ಶಿಫಾರಸ್ಸಿನ ಮೇರೆಗೆ ಪ್ರವಾಸಿ ಭಾರತೀಯ್ ದಿವಸ್ ನ್ನು ಆಚರಿಸಿಕೊಂಡು ಬರಲಾಗುತ್ತಿದೆ.

**ಭಾರತ ಆಗಲಿದೆಯೇ ಮಲೇರಿಯ ದೇಶ?**

ಇತ್ತೀಚಿನ ಒಂದು ಸಮಿತಿಯ ಸಮೀಕ್ಷೆಯ ಪ್ರಕಾರ ಆಘಾತಕಾರಿ ಅಂಶವೊಂದು ಬೆಳಕಿಗೆ ಬಂದಿದೆ. ಭಾರತದಲ್ಲಿ ಮಲೇರಿಯಾ ರೋಗದಿಂದ ಸಾವನ್ನಪ್ಪುತ್ತಿರುವರ ಸಂಖ್ಯೆ ಆರೋಗ್ಯ ಸಚಿವಾಲಯ ಬಳಿ ಇರುವ ಮಾಹಿತಿಗಿಂತ 20 ಪಟ್ಟು ಅಧಿಕ ಎಂದು ಸಮಿತಿ ತನ್ನ ವರದಿಯಲ್ಲಿ ಬಹಿರಂಗಗೊಳಿಸಿದೆ.

**ಯಾವ ಸಮಿತಿ?**

ಭಾರತೀಯ ವೈದ್ಯಕೀಯ ಸಂಶೋಧನ ಮಂಡಳಿಯ (Indian Council of Medical Research) ಮಾಜಿ ನಿರ್ದೇಶಕರಾದ ಡಾ.ಪದಮ್ ಸಿಂಗ್ ಪ್ರಧಾನ್ ರವರು ಅಧ್ಯಕ್ಷತೆ ವಹಿಸಿರುವ ಹದಿನಾರು ಸದಸ್ಯರನ್ನು ಒಳಗೊಂಡ ಸಮಿತಿಯು ಕೈಗೊಂಡ ಸಮೀಕ್ಷೆಯಿಂದ ಈ ಅಂಶ ಬೆಳಕಿಗೆ ಬಂದಿದೆ.

ವರದಿಯಲ್ಲಿ ಏನಿದೆ?

- ಈ ಸಮಿತಿಯ ವರದಿ ಪ್ರಕಾರ ಭಾರತದಲ್ಲಿ ಪ್ರತಿ ವರ್ಷ 30,014 ರಿಂದ 48,660 ಜನರು ಮಲೇರಿಯಾದಿಂದ ಸಾವನ್ನಪ್ಪುತ್ತಿದ್ದಾರೆಂದು ತಿಳಿಸಲಾಗಿದ್ದು, ಅಲ್ಲದೆ 40,297 ಸಾವಿನ ಪ್ರಕರಣಗಳು ಸೊಳ್ಳೆ ಕಡಿತದಿಂದ ಉಂಟಾಗುವ ರೋಗಗಳಿಗೆ ಸಂಬಂದಿಸಿದ್ದು ಎಂದು ವರದಿಯಲ್ಲಿ ತಿಳಿಸಿದೆ. ಸರ್ಕಾರದ ಪ್ರಕಾರ 2010 ರಲ್ಲಿ ಕೇವಲ 1023 ಮಲೇರಿಯಾ ಸಾವಿನ ಪ್ರಕರಣಗಳು ಮಾತ್ರ ದಾಖಲಾಗಿದೆ.

ಲ್ಯಾನ್ಸೆಟ್ ಸಮೀಕ್ಷೆಯ ವರದಿ ಏನು ಹೇಳುತ್ತದೆ?

ಭಾರತದಲ್ಲಿ ಮಲೇರಿಯಾ ರೋಗದ ಸ್ಥಿತಿಗತಿಯ ಬಗ್ಗೆ ಲ್ಯಾನ್ಸೆಟ್ ಜರ್ನಲ್ 2010 ರಲ್ಲಿ ನಡೆಸಿದ ಸಮೀಕ್ಷೆ ಪ್ರಕಾರ ಭಾರತದಲ್ಲಿ 2010 ರಲ್ಲಿ ಮಲೇರಿಯಾದಿಂದ 46,800 ಸಾವುಗಳು ಸಂಭವಿಸಿವೆ ಎಂದು ತಿಳಿಸಿದೆ.

ವಿಶ್ವ ಮಲೇರಿಯಾ ವರದಿ - 2011 ರ ಪ್ರಕಾರ ಭಾರತದ ಜನಸಂಖ್ಯೆಯಲ್ಲಿ ಶೇ.70% ರಷ್ಟು ಜನರು ಮಲೇರಿಯಾದ ಸೋಂಕಿಗೆ ಒಳಪಡುವ ಸ್ಥಿತಿಯಲ್ಲಿದ್ದಾರೆ ಎಂದು ವರದಿ ಮಾಡಿದೆ.

ಮಲೇರಿಯಾ ಎಲ್ಲೆಲ್ಲಿ?

ಜಮ್ಮು ಕಾಶ್ಮೀರ ಮತ್ತು ಹಿಮಾಚಲಪ್ರದೇಶದಂತ ಎತ್ತರದ ಪ್ರದೇಶಗಳನ್ನು ಹೊರತುಪಡಿಸಿದರೆ, ಭಾರತದ ಈಶಾನ್ಯ ರಾಜ್ಯಗಳು, ಪಶ್ಚಿಮ ಬಂಗ, ತಮಿಳುನಾಡು, ಆಂಧ್ರ ಪ್ರದೇಶ, ಒಡಿಶ ಮತ್ತು ಕರ್ನಾಟಕ ರಾಜ್ಯಗಳು ಈ ಮಾರಣಾಂತಿಕ ಕಾಯಿಲೆಗೆ ತುತ್ತಾಗಿವೆ.

ಮಲೇರಿಯಾದ ಬಗ್ಗೆ ಒಂದಿಷ್ಟು ಮಾಹಿತಿ:

ಮಲೇರಿಯಾ ರೋಗವು "ಅನಾಫೆಲೆಸ್" ಎಂಬ ಹೆಣ್ಣು ಸೊಳ್ಳೆ ಕಡಿತದಿಂದ ಉಂಟಾಗುವ ಸಾಂಕ್ರಾಮಿಕ ರೋಗವಾಗಿದ್ದು, ಕೇವಲ ಅನಾಫೆಲೆಸ್ ಸೊಳ್ಳೆಗಳು ಮಾತ್ರ ರೋಗವನ್ನು ಹರಡಬಲ್ಲದಾಗಿದೆ. ಪ್ಲಾಸ್ಮೋಡಿಯಂ(

Plasmodium) ಎಂಬ ರೋಗವಾಹಕವು ಪರಾವಲಂಭಿಗಳ ಮೂಲಕ ಈ ರೋಗವನ್ನು ಉಂಟುಮಾಡುತ್ತವೆ. ಪ್ಲಾಸ್ಮೋಡಿಯಂ ಪರಾವಲಂಭಿಯ ಐದು ಜಾತಿಗಳು ಮನುಷ್ಯರಿಗೆ ಸೋಂಕು ತಗುಲಿಸಬಲ್ಲವುಗಳಾಗಿದ್ದು, ಅವುಗಳಲ್ಲಿ ರೋಗದ ಅತಿ ಗುರುತರವಾದ ಸ್ವರೂಪಕ್ಕೆ ಪ್ಲಾಸ್ಮೋಡಿಯಂ ಫಾಲ್ಸಿಪರಂ (P.*Falciparum*) ಪರಾವಲಂಭಿ ಕಾರಣವಾಗಿದ್ದು ಮಾರಣಾಂತಿಕ ಮಲೇರಿಯಾ ರೋಗವನ್ನು ತಂದೊಡ್ಡಬಲ್ಲದು. ಪ್ಲಾಸ್ಮೋಡಿಯಂ ಓವಲೆ (P.*Ovale*), ಪ್ಲಾಸ್ಮೋಡಿಯಂ ವೈವಾಕ್ಸ್ (P.*Vivax)*, ಪ್ಲಾಸ್ಮೋಡಿಯಂ ಮಲೇರಿಯೆ (P.*Maleriae*) ಪರಾವಲಂಭಿಗಳು ತೀಕ್ಷ್ಣತರವಾದ ರೋಗವನ್ನು ಉಂಟುಮಾಡುತ್ತದೆ ವಿನಾಃ ಅತಿ ವಿರಳವಾಗಿ ಸಾವು ಸಂಭವಿಸುತ್ತದೆ.

**ವಿಶ್ವ ಮಲೇರಿಯಾ ದಿನ**: ಪ್ರತಿ ವರ್ಷ **ಏಪ್ರಿಲ್ 25** ರಂದು ವಿಶ್ವ ಮಲೇರಿಯಾ ದಿನವನ್ನಾಗಿ ಆಚರಿಸಲಾಗುತ್ತದೆ.

ರಾಷ್ಟ್ರೀಯ ಕೀಟಜನ್ಯ ರೋಗ ನಿಯಂತ್ರಣ ಕಾರ್ಯಕ್ರಮ (National Vector Born Disease Control Programme): ಇದೊಂದು ರಾಷ್ಟ್ರ ಮಟ್ಟದ ಕಾರ್ಯಕ್ರಮವಾಗಿದ್ದು ಕೀಟಜನ್ಯಗಳಿಂದ ಹರಡುವ ಮಾರಣಾಂತಿಕ ಕಾಯಿಲೆಗಳನ್ನು ಹರಡದಂತೆ ನಿಯಂತ್ರಿಸುವುದು ಈ ಕಾರ್ಯಕ್ರಮದ ಮುಖ್ಯ ಗುರಿಯಾಗಿದೆ. ಸದ್ಯ ಈ ಕಾರ್ಯಕ್ರಮದಡಿ ಮಲೇರಿಯಾ, ಡೆಂಗ್ಯು, ಜಪಾನಿಸ್ ಎನ್ಸಿಪಾಲಿಟಿಸ್, ಚಿಕನ್ ಗುನ್ಯ, ಫಿಲೇರಿಯಾ ಮತ್ತು ಕಾಲ್ ಆಜಾರ ರೋಗಗಳನ್ನು ಸಂಪೂರ್ಣವಾಗಿ ನಿಯಂತ್ರಿಸಿ, ರೋಗದಿಂದ ಮುಕ್ತಗೊಳಿಸುವ ಗುರಿ ಹೊಂದಿದೆ.

**ಮೀರತ್ ನ ಕತ್ತರಿಗೆ ಭೌಗೋಳಿಕ ಸೂಚನೆ ಗುರುತು (Geographical Indication Tag)**

ಮೀರತ್ ನಲ್ಲಿ ತಯಾರಿಸುವ ಕತ್ತರಿಗಳಿಗೆ ಭೌಗೋಳಿಕ ಸೂಚನೆ (Geographical Indication Tag) ಗುರುತು ನೀಡಲು ನಿರ್ಧರಿಸಲಾಗಿದ್ದು, ದೇಶದಲ್ಲೇ ಪ್ರಥಮ ಭಾರಿಗೆ ಕೈಯಿಂದ ಮಾಡಿದ, ಸೂಕ್ಷ್ಮ ಮತ್ತು ಸಣ್ಣ ಮತ್ತು ಮಧ್ಯಮ ಉತ್ಪಾದನೆಗೆ ನೀಡುವ ಮೊದಲ ಭೌಗೋಳಿಕ ಸೂಚನೆ ಪಡೆದ ಹೆಗ್ಗಳಿಕೆಗೆ ಪಾತ್ರವಾಗಲಿದೆ. ಅಲ್ಲದೇ ಇದರಿಂದ ಕುಶಲಕರ್ಮಿಗಳಿಗೂ ಅನುಕೂಲವಾಗಲಿದೆ. ಭೌಗೋಳಿಕ ಸೂಚನೆಯಿಂದ ಗ್ರಾಹಕರಲ್ಲಿ ಕೊಳ್ಳುವ ವಿಶ್ವಾಸ ಮೂಡುವುದರಿಂದ ತನ್ನ ಅಸ್ತಿತ್ವಕ್ಕೆ ನೆಲೆ ಕಂಡುಕೊಳ್ಳಲು ಸಹಾಯವಾಗಲಿದೆ.

- ಭಾರತದಲ್ಲಿ ಮೊದಲು ಭೌಗೋಳಿಕ ಸೂಚನೆ ಗುರುತನ್ನು 2005 ರಲ್ಲಿ "ಡಾರ್ಜಲಿಂಗ್ ಟೀ" ಗೆ ನೀಡಲಾಗಿದೆ. ಕರ್ನಾಟಕದ ಚನ್ನಪಟ್ಟಣ ಬೊಂಬೆಗಳು, ಮೈಸೂರು ಸ್ಯಾಂಡಲ್ ಸೋಪ್, ಗಂಧದ ಎಣ್ಣೆ, ನಂಜನಗೂಡು ಬಾಳೆ ಮುಂತಾದವುಗಳಿಗೆ ನೀಡಲಾಗಿದೆ.

**LPG ಗೂ ಬಂತು ವಿತರಕರನ್ನು ಬದಲಾಹಿಸುವ ಅವಕಾಶ**

ಮೊಬೈಲ್ ಸೇವಾ ಸಂಸ್ಥೆಯನ್ನು ಬದಲಿಸುವಂತೆ ಇದೀಗ ಗ್ರಾಹಕರು ತಮ್ಮ ಅಡುಗೆ ಅನಿಲ ಪೂರೈಸುವ ವಿತರಕರನ್ನು ಬದಲಾಹಿಸುವ ಅವಕಾಶವನ್ನು ಸರ್ಕಾರ ಜಾರಿಗೆ ತಂದಿದೆ. ತಮಗಿಷ್ಟವಾದ ಸೇವೆ ಒದಗಿಸುವ ಮೊಬೈಲ್ ಕಂಪನಿಯನ್ನು ಗ್ರಾಹಕರು ಬದಲಿಸುವ ಮಾದರಿಯಲ್ಲೇ ಎಲ್.ಪಿ.ಜಿ ಯನ್ನು ಬದಲಾಯಿಸಿಕೊಳ್ಳಬಹುದಾಗಿದೆ. ಆದರೆ ಗ್ರಾಹಕರು ತಮ್ಮ ಅಡುಗೆ

ಅನಿಲ ಪೊರೈಸುವ ವಿತರಕರನ್ನು ಮಾತ್ರ ಬದಲಾಯಿಸಬಹುದೆ ವಿನಾಃ ಅಡುಗೆ ಅನಿಲ ಕಂಪನಿಯನ್ನು ಅಲ್ಲ ಎಂದು ಸರ್ಕಾರ ಸ್ಪಷ್ಟಪಡಿಸಿದೆ.

ದೇಶದಾದ್ಯಂತ ಜಾರಿಗೆ ಬರಲಿದೆಯೆ?

ಇಲ್ಲ, ಸದ್ಯಕ್ಕೆ ಈ ವ್ಯವ್ಯಸ್ಥೆಗೆ ಚಂಢಿಗಡದಲ್ಲಿ ಮಾತ್ರ ಚಾಲನೆ ನೀಡಿದ್ದು ಮುಂದಿನ ಹಣಕಾಸು ವರ್ಷದಲ್ಲಿ ಕನಿಷ್ಟ 25 ಜಿಲ್ಲೆಗಳಲ್ಲಿ ವಿಸ್ತರಿಸಲಾಗುವುದಲ್ಲದೆ, ಹಂತ ಹಂತವಾಗಿ ದೇಶದ ಎಲ್ಲಡೆ ಜಾರಿಗೆ ತರಲಾಗುವುದೆಂದು ಕೇಂದ್ರ ಇಂಧನ ಸಚಿವ ವೀರಪ್ಪ ಮೊಯಿಲಿ ತಿಳಿಸಿದ್ದಾರೆ.

**ಅಲಹಬಾದ್ ಕುಂಭಮೇಳ: 2013**

ಹಿಂದೂ ಭಕ್ತಾಧಿಗಳ ಮಹಾ ಸಂಗಮ ಕುಂಭ ಮೇಳಕ್ಕೆ ಅಲಹಾಬಾದ್ ಸಜ್ಜಾಗಿದೆ. ಸುಮಾರು 3 ಕೋಟಿಗಿಂತಲೂ ಅಧಿಕ ಭಕ್ತಾಧಿಗಳು ಸೇರಲ್ಲಿದ್ದಾರೆ ಎಂದೂ ಅಂದಾಜಿಸಲಾಗಿರುವ ಈ ಮೇಳಕ್ಕೆ ಸರ್ಕಾರ ಸಕಲ ಸಿದ್ದತೆಗಳಗೆ ಮುಂಜಾಗ್ರತೆ ದೃಷ್ಟಿಯಿಂದ ಕ್ರಮವಹಿಸಿದೆ. ಜನವರಿ 14 ರಿಂದ ಆರಂಭವಾಗುವ ಕುಂಭಮೇಳವು 45 ದಿನಗಳ ಕಾಲ ನಡೆಯಲಿದೆ.

ಕುಂಭಮೇಳದ ಬಗ್ಗೆ ಒಂದಿಷ್ಟು ಮಾಹಿತಿ: ಸಾವಿರಾರು ಲಕ್ಷ ಹಿಂದೂ ಭಕ್ತಾಧಿಗಳು ಭಾಗವಹಿಸುವ ಕುಂಭಮೇಳದಲ್ಲಿ ಹಿಂದೂ ಭಕ್ತಾಧಿಗಳು ತ್ರಿವೇಣಿ ಸಂಗಮದಲ್ಲಿ ಸ್ನಾನಮಾಡಿದರೆ ಪಾಪ ನಿರ್ಮೂಲನೆಗೊಳ್ಳುವ ಮೂಲಕ ಮುಕ್ತಿ ಪಡೆಯುತ್ತಾರೆ ಎಂಬ ನಂಬಿಕೆ ರೂಢಿಯಲ್ಲಿದೆ.

- ಅರ್ಧ ಕುಂಭಮೇಳವು ಪ್ರತಿ ಆರು ವರ್ಷಗಳಿಗೊಮ್ಮೆ ಹರಿದ್ವಾರ ಮತ್ತು ಅಲಹಾಬಾದ್ ನಲ್ಲಿ ನಡೆಯುತ್ತದೆ.
- ಪೂರ್ಣ ಕುಂಭಮೇಳವು ಪ್ರತಿ 12 ವರ್ಷಗಳಿಗೊಮ್ಮೆ **ಅಲಹಾಬಾದ್, ಹರಿದ್ವಾರ, ನಾಸಿಕ್ ಮತ್ತು ಉಜೈನಿಗಳಲ್ಲಿ** ನಡೆಯುತ್ತದೆ.
- ಮಹಾ ಕುಂಭಮೇಳವು ಪ್ರತಿ 12 ಪೂರ್ಣ ಕುಂಭಮೇಳಗಳ ನಂತರ ಅಂದರೆ 144 ವರ್ಷಗಳ ನಂತರ ಅಲಹಬಾದ್ ನಲ್ಲಿ ನಡೆಯುತ್ತದೆ. 2011 ರಲ್ಲಿ ಮಹಾ ಕುಂಭಮೇಳ ಅಲಹಬಾದ್ ನಲ್ಲಿ ನಡೆದಿತ್ತು, ಈ ಮೇಳಕ್ಕೆ ದೇಶ ವಿದೇಶಗಳಿಂದ ಸುಮಾರು 1 ಕೋಟಿ ಹಿಂದೂ ಭಕ್ತಾದಿಗಳು ಆಗಮಿಸಿದ್ದರು.
- ಕುಂಭ ಮೇಳ ನಡೆಯುವ 4 ಪ್ರಮುಖ ಸ್ಥಳಗಳು: **ಅಲಹಾಬಾದ್, ಹರಿದ್ವಾರ, ನಾಸಿಕ್ ಮತ್ತು ಉಜೈನಿ.**
- **ತ್ರಿವೇಣಿ ಸಂಗಮ**: ಗಂಗಾ, ಯಮುನಾ ಮತ್ತು ಸರಸ್ವತಿ ನದಿಗಳ ಸಂಗಮಕ್ಕೆ ತ್ರಿವೇಣಿ ಸಂಗಮ ಎಂದು ಕರೆಯಾಲಾಗುತ್ತದೆ.
- ಈ ಹಿಂದೆ ಪೂರ್ಣ ಕುಂಭ ಮೇಳ 2011 ರಲ್ಲಿ ಹರಿದ್ವಾರದಲ್ಲಿ ನಡೆದಿತ್ತು, 1954 ರಲ್ಲಿ ಅಲಹಬಾದ್ ನಲ್ಲಿ ನಡೆದ ಕುಂಭಮೇಳದಲ್ಲಿ ಕಾಲ್ತುಳಿತಕೊಳ್ಳಗಾಗಿ 500 ಜನರು ದುರ್ಮಣ ಹೊಂದಿದ್ದರು.
- ಮುಂದಿನ ಕುಂಭ ಮೇಳ 2015 ರಲ್ಲಿ ಗೋದಾವರಿ ತೀರದಲ್ಲಿರುವ ನಾಸಿಕ್ ನಗರದಲ್ಲಿ ನಡೆಯಲಿದೆ.

**ಮಹಾತ್ಮ ಗಾಂಧಿ ಪ್ರವಾಸಿ ಸುರಕ್ಷ ಯೋಜನೆ ಒಂದಿಷ್ಟು ಮಾಹಿತಿ**

ಮಹಾತ್ಮ ಗಾಂಧಿ ಪ್ರವಾಸಿ ಸುರಕ್ಷ ಯೋಜನೆಯು ಯಾವ ಸಚಿವಾಲಯದ ಯೋಜನೆ?

- ಮಹಾತ್ಮಗಾಂಧಿ ಪ್ರವಾಸಿ ಸುರಕ್ಷ ಯೋಜನೆಯು ಸಾಗರೋತ್ತರ ಭಾರತೀಯ ವ್ಯವಹಾರ ಸಚಿವಾಲಯದ ಒಂದು ಮಹತ್ತರದ ಯೋಜನೆಯಾಗಿದೆ.

ಯಾರಿಗಾಗಿ ಈ ಯೋಜನೆ ಮತ್ತು ಏಕೆ?

- ಗಲ್ಫ್ ದೇಶಗಳಲ್ಲಿ ಕೆಲಸ ಮಾಡುತ್ತಿರುವ 18 ರಿಂದ 60 ವರ್ಷ ವಯೋಮಿತಿ ಭಾರತೀಯ ಕಾರ್ಮಿಕರಿಗೆ ಸಾಮಾಜಿಕ ಭದ್ರತೆ ಒದಗಿಸುವುದು ಈ ಯೋಜನೆಯ ಮುಖ್ಯ ಉದ್ದೇಶವಾಗಿದೆ. ಅಂದಾಜಿನ ಪ್ರಕಾರ ಸುಮಾರು 5 ಮಿಲಿಯನ್ ಭಾರತೀಯರು ವಲಸೆ ಪರಿಶೀಲನೆ ಅಗತ್ಯವಿರುವ ಪಾಸಪೋರ್ಟ್ ಗಳನ್ನು (ECR Passports) ಹೊಂದಿ ಗಲ್ಫ್ ದೇಶಗಳಲ್ಲಿ ದುಡಿಯುತ್ತಿದ್ದಾರೆ. ಇವರು ಹಲವಾರು ಕಾರಣಗಳಿಂದ ತಮ್ಮ ದುಡಿಮೆಯ ಹಣವನ್ನು ಉಳಿತಾಯ ಮಾಡಲಾಗದೆ ಆರ್ಥಿಕ ಸಂಕಷ್ಟ ಪರಿಸ್ಥಿತಿ ಎದುರಿಸುತ್ತಿದ್ದಾರೆ. ಇತ್ತ ಉಳಿತಾಯವು ಇಲ್ಲದೆ ಅತ್ತ ದುಡಿಯುವ ಶಕ್ತಿಯು ಇಲ್ಲದೆ ದೇಶಕ್ಕೆ ಹಿಂತಿರುಗುತ್ತಿರುವುದು ಶೋಚನೀಯ ಅಲ್ಲದೆ ಸಾಮಾಜಿಕ ಭದ್ರತೆಗಳಿಂದಲೂ ಇವರು ವಂಚಿತರಾಗುತ್ತಿದ್ದಾರೆ. ಆದ್ದರಿಂದ ಇವರ ಜೀವಾನಾದರ ಮಟ್ಟ ಉತ್ತಮಗೊಳಸುವುದೇ ಈ ಯೋಜನೆಯ ಮುಖ್ಯ ಗುರಿಯಾಗಿದೆ.

ಯೋಜನೆಯ ಸ್ವರೂಪವೇನು?

- ಇದೊಂದು ಸ್ವಯಂಸೇವಾ ಯೋಜನೆಯಾಗಿದ್ದು, ಭಾರತೀಯ ಕೆಲಸಗಾರರಿಗೆ ಪ್ರಮುಖವಾದ ಮೂರು ಅವಶ್ಯಕತೆಗಳನ್ನು ಪ್ರೋತ್ಸಾಹಿಸಿ ಶಕ್ತಿಗೊಳಿಸುವ ಗುರಿ ಹೊಂದಿದೆ.

ಮೂರು ಅಂಶಗಳು ಯಾವುವು?

- ವಯಸ್ಸಾದವರಿಗೆ ಪಿಂಚಣಿ ವ್ಯವಸ್ಥೆ: ಈ ಯೋಜನೆಯಡಿ ಪ್ರತಿ ಕಾರ್ಮಿಕನು ತನ್ನ ಪಿಂಚಣಿ ಖಾತೆಗೆ ರೂ.1000 ದಿಂದ ರೂ.12000 ತನಕ ಜಮಾ ಮಾಡಬಹುದಾಗಿದ್ದು ಇದಕ್ಕೆ ಪೂರಕವಾಗಿ ಸಚಿವಾಲಯವೂ ಪುರಷರಿಗೆ ರೂ.1000 ಮತ್ತು ಮಹಿಳೆಯರಿಗೆ ರೂ.2000 ಹಣವನ್ನು ಖಾತೆಗೆ ಜಮಾ ಮಾಡುತ್ತದೆ.
- ಪುನರ್ವಸತಿ ವ್ಯವಸ್ಥೆ: ತುರ್ತು ಪರಿಸ್ಥಿತಿಯಲ್ಲಿ ಎದುರಾಗಬಹುದಾದ ಹಣಕಾಸು ಕೊರತೆಯನ್ನು ನೀಗಿಸುವ ಸಲುವಾಗಿ ಪ್ರತಿ ಕಾರ್ಮಿಕನು ಉಳಿತಾಯ ಖಾತೆಯಲ್ಲಿ ರೂ.4000 ವನ್ನು ಹೂಡಿದಲ್ಲಿ ಸಚಿವಾಲಯವೂ ಈ ಮೊತ್ತಕ್ಕೆ ಅನುಗುಣವಾಗಿ ರೂ.900 ಜಮಾ ಮಾಡುತ್ತದೆ.
- ವಿಮಾ ಯೋಜನೆ: ಈ ಯೋಜನೆಯಡಿ ಎಲ್ಲಾ ಕಾರ್ಮಿಕರಿನ್ನು ಉಚಿತ ಜೀಮಾ ವಿಮೆಯಡಿ ತರಲಾಗುವುದು.

## ಮಹಿಳೆಯರ ವಿರುದ್ಧ ಶೋಷಣೆಯನ್ನು ಆಲಿಸಲು ವಿಶೇಷ ಪೀಠ

- ಸುಪ್ರೀಂ ಕೋರ್ಟ್ನ ಮುಖ್ಯ ನ್ಯಾಯಮೂರ್ತಿಗಳಾದ ಅಲ್ತಮಾಸ್ ಕಬೀರ್ ರವರು ಮಹಿಳೆ ಮೇಲೆ ನಡೆಯುವ ಶೋಷಣೆಯ ಅಪರಾಧ ಪ್ರಕರಣಗಳನ್ನು ತ್ವರಿತಗೊಳಿಸಲು ವಿಶೇಷ ಪೀಠವನ್ನು ರಚಿಸಿದ್ದಾರೆ.
- ನ್ಯಾಯಮೂರ್ತಿಗಳಾದ ಎ.ಕೆ. ಪಟ್ನಾಯಕ್ ಮತ್ತು ಗ್ಯಾನ ಸುಧಾ ರವರನ್ನು ಒಳಗೊಂಡ ಪೀಠವು ಜನವರಿ 14 ರಿಂದ ಪ್ರಕರಣಗಳನ್ನು ವಿಚಾರಣೆ ಮಾಡಲಿದೆ.

- ವರದಕ್ಷಿಣೆ, ಆತ್ಯಾಚಾರ ಮತ್ತು ಲೈಂಗಿಕ ಕಿರುಕುಳಕ್ಕೆ ಸಂಬಂಧಿಸಿದ ಬಾಕಿ ಇರುವ ಒಟ್ಟು 526 ಪ್ರಕರಣಗಳನ್ನು ಪೀಠ ವಿಚಾರಣೆ ಮಾಡಲಿದೆ.

**ಭಾರತದ ಆರನೇ ರಾಷ್ಟ್ರೀಯ ಜಲಮಾರ್ಗ ಶೀಘ್ರ ಸಿದ್ಧ**

- ಬರಾಕ್ ನದಿಯ 121 ಕೀ.ಮೀ ವ್ಯಾಪ್ತಿಯ ಲಖಿಪುರ್ - ಬಾಂಗ (Lakhipur - Bhanga) ಜಲಮಾರ್ಗವೂ ಶೀಘ್ರದಲ್ಲಿ ಭಾರತದ ಆರನೇ ಜಲಮಾರ್ಗವಾಗಿ ಉದಯಿಸಲಿದೆ.
- ಭಾರತದ ಆಂತರಿಕ ಜಲಮಾರ್ಗಗಳ ಪ್ರಾಧಿಕಾರ ಈ ಯೋಜನೆಯನ್ನು ಎರಡು ಹಂತದಲ್ಲಿ ಪೂರ್ಣಗೊಳಿಸಲ್ಲಿದ್ದು, 2016-17 ಕ್ಕೆ ಮೊದಲ ಹಂತ ಪೂರ್ಣಗೊಳಿಸಲಾಗುವುದು ಹಾಗೂ ದ್ವಿತಿಯ ಹಂತ 2018-19 ಕ್ಕೆ ಮುಗಿಸುವ ಯೋಜನೆ ರೂಪಿಸಿದೆ.
- ಈಶಾನ್ಯ ರಾಜ್ಯಗಳಿಗೆ ಸಂಪರ್ಕ ಕಲ್ಪಿಸುವ ಮೊದಲ ಜಲಮಾರ್ಗ ಇದಾಗಲಿದ್ದು, ಅಸ್ಸಾಂ, ತ್ರಿಪುರ, ನಾಗಾಲ್ಯಾಂಡ್, ಮಿಜೋರಾಮ್, ಮಣಿಪುರ ಮತ್ತು ಅರುಣಾಚಲ ಪ್ರದೇಶಗಳ ಮೂಲಕ ಸರುಕು ಸಾಗಣೆ ಮಾಡಲು ಇದು ಸಹಕಾರಿಯಾಗಲಿದೆ.
- ಭಾರತದ ಇತರೆ ಜಲಮಾರ್ಗಗಳು:
    1. ಅಲಹಬಾದ್ - ಹಾಲ್ದಿಯಾ ಮಾರ್ಗ (ಗಂಗಾ-ಭಾಗಿರೀಥಿ-ಹೂಗ್ಲಿ), ಒಟ್ಟು ಉದ್ದ 1620 ಕೀ.ಮೀ **(ಅತಿ ಉದ್ದ)**
    2. ಸಾದಿಯಾ - ದುಬ್ರಿ (ಬ್ರಹ್ಮ ಪುತ್ರ), ಒಟ್ಟು ಉದ್ದ 981 ಕೀ.ಮೀ.
    3. ಕೊಟ್ಟಯಮ್ ಮತ್ತು ಕೊಲ್ಲಮ್, ಒಟ್ಟು ಉದ್ದ 205 ಕೀ.ಮೀ
    4. ಕಾಕಿನಾಡ - ಪುದುಚೇರಿ, ಭದ್ರಚಲಂ - ರಾಜಮಂಡ್ರಿ, ವಾಜಿರಬಾದ್ - ವಿಜಯವಾಡ (ಕೃಷ್ಣ, ಗೋದಾವರಿ), ಒಟ್ಟು ಉದ್ದ 1095 ಕೀ,ಮೀ
    5. ತಾಲ್ಚರ್ - ದಮ್ರ (ಬ್ರಹ್ಮಿಣಿ ನದಿ), ಒಟ್ಟು ಉದ್ದ 623 ಕೀ.ಮೀ

**ಆರ್ಥಿಕ ಸ್ವಾತಂತ್ರ್ಯ ಶ್ರೇಣಿ: ಭಾರತಕ್ಕೆ (Index of Economic Freedom) 119 ನೇ ಸ್ಥಾನ**

ಆರ್ಥಿಕ ಸ್ವಾತಂತ್ರ್ಯ ಸೂಚನೆ-2013 ವರದಿಯ ಪ್ರಕಾರ ಗರಿಷ್ಠ ಮಟ್ಟದ ಆರ್ಥಿಕ ಸ್ವಾತಂತ್ರ್ಯ ಹೊಂದಿರುವ 177 ದೇಶಗಳ ಪಟ್ಟಿಯಲ್ಲಿ ಭಾರತಕ್ಕೆ 119 ನೇ ಸ್ಥಾನ ಲಭಿಸಿದೆ.

- ಆರ್ಥಿಕ ಸ್ವಾತಂತ್ರ್ಯ ಸಮೀಕ್ಷೆಯಲ್ಲಿ ಭಾರತಕ್ಕೆ 52.2 ಅಂಕ ಲಭಿಸಿದೆ. ಜಾಗತಿಕ ಸಮುದಾಯದ ಸರಾಸರಿಯ 59.6 ಅಂಕಗಳಿಗೆ ಹೋಲಿಸಿದರೆ ಇದು ಕಡಿಮೆ.
- ಏಷ್ಯಾ ಫೆಸಿಪಿಕ್ ವಲಯದ 41 ದೇಶಗಳ ಪಟ್ಟಿಯಲ್ಲಿ ಭಾರತಕ್ಕೆ 23 ನೇ ಸ್ಥಾನ ಲಭಿಸಿದೆ
- ಈ ವರದಿಯ ಪ್ರಕಾರ ಬ್ರಿಕ್ (BRIC Brazil, Russia, India and China) ದೇಶಗಳ ಪಟ್ಟಿಯಲ್ಲಿ ರಷ್ಯ ಮತ್ತು ಚೀನಾ ಈ ಪಟ್ಟಿಯಲ್ಲಿ ಭಾರಕ್ಕಿಂತಲೂ ಕೆಳಗಿದ್ದರೆ ಬ್ರೆಜಿಲ್ ಒಂದು ಸ್ಥಾನ ಮುಂದಿದೆ.

- ಹಾಕಾಂಗ್ ಕಳೆದ ಭಾರಿಯಂತೆ ಈ ಭಾರಿಯು ಪಟ್ಟಿಯಲ್ಲಿ ಅಗ್ರ ಸ್ಥಾನ ಪಡೆದಿದೆ. ಉಳಿದಂತೆ ಸಿಂಗಪುರ, ಆಸ್ಟ್ರೇಲಿಯಾ, ನ್ಯೂಜಿಲ್ಯಾಂಡ್ ನಂತರದ ಸ್ಥಾನದಲ್ಲಿವೆ.

ಆರ್ಥಿಕ ಸ್ವಾತಂತ್ರ್ಯ ಸೂಚನೆ-2013: ದಿ ಹೆರಿಟೆಜ್ ಫೌಂಡೇಶನ್ ಮತ್ತು ದಿ ವಾಲ್ ಸ್ಟ್ರೀಟ್ ಜರ್ನಲ್ ಜೊತೆಗೂಡಿ ಹೊರತರುವ ಸಮೀಕ್ಷೆಯಾಗಿದ್ದು, 1985 ರಿಂದ ಪ್ರಕಟಿಸಲಾಗುತ್ತಿದೆ.

**ಯಾವ ಮಾನದಂಡವನ್ನು ಅನುಸರಿಸಲಾಗುತ್ತದೆ**: ಆರ್ಥಿಕ ಸ್ವಾತಂತ್ರ್ಯ ಶ್ರೇಣಿಯನ್ನು ವಿಶ್ವ ಸಂಸ್ಥೆ, ಅಂತರ್ ರಾಷ್ಟ್ರೀಯ ಹಣಕಾಸು ನಿಧಿ ಮತ್ತು ಎಕನಾಮಿಸ್ಟ್ ಇಂಟೆಸಲಿಜೆನ್ಸ್ ಯೂನಿಟ್ ಸಂಸ್ಥೆಗಳಿಂದ ಪಡೆದ ಅಂಕಿಅಂಶಗಳಿಂದ, 10 ಆರ್ಥಿಕ ಅಂಶಗಳನ್ನು ಆಧಾರವಾಗಿಟ್ಟುಕೊಂಡು ಪ್ರತಿ ದೇಶಕ್ಕೆ ಶ್ರೇಣಿ ನೀಡಲಾಗುತ್ತದೆ.

**3ನೇ ಭಾರತ – ಚೀನಾ ವಾರ್ಷಿಕ ದ್ವಿಪಕ್ಷೀಯ ಸಹಕಾರ ಒಪ್ಪಂದ ಮಾತುಕತೆ**

ಸೇನೆ ಮತ್ತು ರಕ್ಷಣೆಗೆ ಸೇರಿದಂತೆ ದ್ವಿಪಕ್ಷೀಯ ಸಹಕಾರ ಮುಂದುವರೆಸುವ ಸಲುವಾಗಿ ಭಾರತ ಮತ್ತು ಚೀನಾ ಮೂರನೇ ದ್ವಿಪಕ್ಷೀಯ ಮಾತುಕತೆ ಬೀಜಿಂಗ್ ನಲ್ಲಿ ನಡೆಯಿತು. ಭಾರತದ ಪರವಾಗಿ ಭಾರತೀಯ ರಕ್ಷಣಾ ಕಾರ್ಯದರ್ಶಿ ಶಶಿಕಾಂತ್ ಶರ್ಮಾ ನೇತೃತ್ವದ ಮೂರು ಜನರ ತಂಡ ಭಾಗವಹಿಸಿದ್ದರೆ, ಚೀನಾದ ಜನರಲ್ ಕ್ಸ್ಯೂ ಜಿಯಾನಗೊ ಚೀನಾವನ್ನು ಪ್ರತಿನಿದಿಸಿದ್ದರು.

ಚರ್ಚಿಸಲಾದ ವಿಷಯಗಳು:

- ಉಭಯ ದೇಶಗಳು ಭೂ ಸೇನೆ, ನೌಕದಳ ಮತ್ತು ವಾಯುಸೇನೆಯಲ್ಲಿ ದ್ವಿಪಕ್ಷೀಯ ವಿನಿಮಯ ವಿಸ್ತಾರಿಸಲು ಮತ್ತು ಹೆಚ್ಚಿಸಲು ಒಪ್ಪಿಕೊಂಡವು.
- ಎರಡು ದೇಶಗಳು ಪರಸ್ಪರ ಕಾರ್ಯತಂತ್ರದಿಂದ ಮುನ್ನಡೆಯಲು ಮತ್ತು ಪರಸ್ಪರ ಲಾಭದಾಯಕ ಪ್ರಯೋಗಗಳಲ್ಲಿ ಸಹಕಾರ ಹೆಚ್ಚಿಸಲು ಮನ್ನಣೆ ಸೂಚಿಸಿದವು.
- ಉಭಯ ದೇಶಗಳು ಏಷ್ಯಾ ಫೆಸಿಪಿಕ್ ಪ್ರದೇಶ ಸೇರಿದಂತೆ, ಭಾರತ - ಚೀನಾ ಗಡಿ ಪ್ರದೇಶಗಳಲ್ಲಿನ ಪರಿಸ್ಥಿತಿ ಮತ್ತು ಸಾಮಾನ್ಯ ಆಸಕ್ತಿಯುಳ್ಳ ಅಂತರ್ ರಾಷ್ಟ್ರೀಯ ವಿಷಯಗಳ ಬಗ್ಗೆ ಚರ್ಚಿಸಿ ಸೂಕ್ತ ನಿರ್ಣಯ ಕೈಗೊಂಡವು.

**ಭಾರತ ಮತ್ತು ಚೀನಾ ಜಂಟಿ ಮಿಲಿಟರಿ ಅಭ್ಯಾಸ**

- ಭಾರತ ಮತ್ತು ಚೀನಾ ನಡುವೆ ಮೊದಲ ಮಿಲಿಟರಿ ಅಭ್ಯಾಸವು 2007 ರಲ್ಲಿ ಚೀನಾದ ಕುಮ್ಮಿಂಗ್ ನಲ್ಲಿ ನಡೆದಿತ್ತು. ಎರಡನೇ ಮಿಲಿಟರಿ ಅಭ್ಯಾಸವು 2008 ರಲ್ಲಿ ಕರ್ನಾಟಕದ ಬೆಳಗಾವಿಯಲ್ಲಿ ಆಯೋಜಿಸಲಾಗಿತ್ತು. ಮೂರನೇ ಮಿಲಿಟರಿ ಅಭ್ಯಾಸವು 2010ರಲ್ಲಿ ಚೀನಾದಲ್ಲಿ ನಡೆಯಲು ನಿಗದಿಪಡಿಸಲಾಗಿತ್ತು ಆದರೆ ಚೀನಾ ನೀಡಿದ ಸ್ವಪಲ್ ವೀಸಾ ಮತ್ತು ಭಾರತದ ಲೆಫ್ಟಿನೆಂಟ್ ಜನರಲ್ ಬಿ.ಎಸ್.ಜವಾಲ್ ರವರಿಗೆ ಚೀನಾ ವೀಸಾ ನೀಡಲು ನಿರಾಕರಿಸಿದರಿಂದ ನಿಲ್ಲಿಸಲಾಗಿದ್ದು, ಮುಂದಿನ ದಿನಗಳಲ್ಲಿ ಮತ್ತೆ ಮುಂದುವರೆಸುವ ವಿಶ್ವಾಸವನ್ನು ಉಭಯ ದೇಶಗಳು ವ್ಯಕ್ತಪಡಿಸಿವೆ.

## ಶ್ರೀ ಆದಿತ್ಯ ವಿಕ್ರಮ ಬಿರ್ಲಾ ಸ್ಮರಣಾರ್ಥ ಅಂಚೆ ಚೀಟಿ ಬಿಡುಗಡೆ

ರಾಷ್ಟ್ರಪತಿ ಶ್ರೀ ಪ್ರಣಬ್ ಮುಖರ್ಜಿಯವರು ಶ್ರೀ ಆದಿತ್ಯ ವಿಕ್ರಮ ಬಿರ್ಲಾರವರ ಸ್ಮರಣಾರ್ಥ ಅಂಚೆ ಚೀಟಿಯನ್ನು ಬಿಡುಗಡೆಗೊಳಿಸಿದರು. ಈ ಅಂಚೆ ಚೀಟಿಯು "ಭಾರತದ ಮೊದಲ ಜಾಗತಿಕ ಉದ್ಯಮಿ" ಎಂಬ ಥೀಮ್ ಹೊಂದಿದ್ದು ಅವರು ಸ್ಥಾಪಿಸಿದ ಅಲ್ಯೂಮಿನಿಯಂ ಕಂಪನಿಯ ಚಿತ್ರವನ್ನು ಹೊಂದಿದೆ. ಶ್ರೀ ಆದಿತ್ಯ ಬಿರ್ಲಾರವರು ಭಾರತದ ಕೈಗಾರೀಕರಣಕ್ಕೆ ನೀಡಿದ ಗಣನೀಯ ಕೊಡುಗೆಯನ್ನು ಗುರುತಿಸಿ ಈ ಅಂಚೆ ಚೀಟಿಯನ್ನು ಬಿಡುಗಡೆಗೊಳಿಸಲಾಗಿದೆ. ಶ್ರೀಮಂತ ಕುಟುಂಬದಲ್ಲಿ ಜನಿಸಿದ ಬಿರ್ಲಾರವರು, ಭಾರತವನ್ನು ಜಾಗತಿಕ ಮಟ್ಟದಲ್ಲಿ ಗುರುತಿಸುವಂತೆ ಮಾಡಲು ಶ್ರಮಿಸಿದ್ದರು, ಗಾಂಧೀಜಿಯವರೊಂದಿಗೆ ಒಡನಾಟ ಹೊಂದಿದ್ದ ಬಿರ್ಲಾರವರು ಭಾರತ ಕಂಡ ಒಬ್ಬ ಶ್ರೇಷ್ಠ ಉದ್ಯಮಿ.

## ಭಾರತ ಮತ್ತು ದಕ್ಷಿಣ ಆಫ್ರಿಕಾ ನಡುವೆ SACU PTA ಪರಿಶೀಲನಾ ಮಾತುಕತೆ

ಭಾರತದ ವಾಣಿಜ್ಯ, ಕೈಗಾರಿಕ ಮತ್ತು ಜವಳಿ ಸಚಿವರಾದ ಆನಂದ್ ಶರ್ಮಾ ಮತ್ತು ದಕ್ಷಿಣಾ ಆಫ್ರಿಕಾದ ವಾಣಿಜ್ಯ ಮತ್ತು ಕೈಗಾರಿಕ ಸಚಿವರಾದ ರೊಬ್ ಡೇವಿಸ್ ರವರು, ಭಾರತ - ಸೌದರನ್ ಆಫ್ರಿಕನ್ ಕಸ್ಟಮ್ ಯೂನಿಯನ್ (Southern African Custom Union) ಜೊತೆಗೆ ಆದ್ಯತಾ ವ್ಯಾಪರ ಒಪ್ಪಂದ (Preferential Trade Agreement (PTA)ದ ಬಗ್ಗೆ ಪರಿಶೀಲನೆಯನ್ನು ಇತ್ತೀಚೆಗೆ ಜೋಹನ್ಸ್ ಬರ್ಗ್ ನಲ್ಲಿ ನಡೆಸಿದರು. ಉಭಯ ದೇಶಗಳ ಸಚಿವರು ಶೀಘ್ರವಾಗಿ ಒಪ್ಪಂದವನ್ನು ಅಂತಿಮಗೊಳಿಸಲು ಆಸಕ್ತಿ ವ್ಯಕ್ತಪಡಿಸಿದರು. ಭಾರತದ ಸಚಿವರು ದಕ್ಷಿಣಾ ಆಫ್ರಿಕಾದ ಪ್ರತಿನಿಧಿಯಾದ ರೊಬ್ ಡೇವಿಸ್ ರಲ್ಲಿ ಭಾರತ ಮತ್ತು ಆಫ್ರಿಕಾ ನಡುವಿನ SACU PTA ಪ್ರಸ್ತಾವನೆಯನ್ನು ಅವರ ಮಧ್ಯಸ್ತಿಕೆ ಬಳಸಿ ಚುರುಕುಗೊಳಿಸುವಂತೆ ಮನವಿ ಮಾಡಿಕೊಂಡರು. ಉಭಯ ದೇಶಗಳ ಸಚಿವರು, BRIC ಕೈಗಾರಿಕ ಸಚಿವರ ಸಮ್ಮೇಳನಕ್ಕೆ ಮುಂಚೆ ಮತ್ತೊಮ್ಮೆ ಸಭೆ ನಡೆಸುವ ತಿರ್ಮಾನ ಕೈಗೊಂಡರು.

**ಚರ್ಚಿಸಲಾದ ಇತರೆ ವಿಷಯಗಳು :-**

- ದಕ್ಷಿಣಾ ಆಫ್ರಿಕಾ ಇತ್ತೀಚೆಗೆ ಭಾರತದಿಂದ ಆಮದು ಮಾಡುಕೊಳ್ಳುತ್ತಿದ್ದ ಶೀತಕರಿಸಿದ ಎಮ್ಮೆಯ ಮಾಂಸದ ಮೇಲೆ ತಾತ್ಕಲಿಕ ನಿಷೇಧ ಹೇರಿದ್ದು, ಅದನ್ನು ತ್ವರಿತವಾಗಿ ಹಿಂತೆಗೆದುಕೊಳ್ಳುವಂತೆ ಆನಂದ್ ಶರ್ಮಾರವರು ದಕ್ಷಿಣಾ ಆಫ್ರಿಕಾದ ಪ್ರತಿನಿಧಿಗೆ ಮನವಿ ಸಲ್ಲಿಸಿದರು. ಭಾರತದ ಎಮ್ಮೆ ಮಾಂಸವು ಅಂತರ್ ರಾಷ್ಟ್ರೀಯ ಮಟ್ಟದ ಗುಣಮಟ್ಟ ಹೊಂದಿದ್ದು ನಿಷೇಧವನ್ನು ತೆಗೆಯುವಂತೆ ಸಚಿವರು ಅರಿವು ಮಾಡಿಕೊಟ್ಟರು.

**SACU ಏನಿದು?**

SACU (Southern African Custom Union) ಇದು ವಿಶ್ವದ ಅತ್ಯಂತ ಹಳೆಯ ಮತ್ತು ಈಗಲೂ ಚಾಲ್ತಿಯಲ್ಲಿರುವ ಕಸ್ಟಮ್ ಯೂನಿಯನ್. 1910 ರಲ್ಲಿ ಇದನ್ನು ಸ್ಥಾಪಿಸಲಾಗಿದೆ. ಸೌತ್ ಆಫ್ರಿಕಾ, ನಮೀಬಿಯಾ, ಬೊತ್ಸವಾನ, ಸ್ವಾಜಿಲ್ಯಾಂಡ್ ಮತ್ತು ಲೆಸೊತೊ ದೇಶಗಳು ಇದರ ಸದಸ್ಯ ರಾಷ್ಟ್ರಗಳು. **ಸ್ವಲೊಪೆಲೆ ಟಿ ಮೊರೆಮಿ** (Tswelopele T Meromi) ಸದ್ಯ SACU ನ ಕಾರ್ಯಕಾರಿ ಕಾರ್ಯದರ್ಶಿಗಳಾಗಿದ್ದಾರೆ. ಸದಸ್ಯ ರಾಷ್ಟ್ರಗಳ ನಡುವೆ ಸರಕುಗಳನ್ನು ಮುಕ್ತವಾಗಿ ವಿನಿಮಯ ಮಾಡಿಕೊಳ್ಳುವುದು SACU ನ ಮುಖ್ಯ ಧ್ಯೇಯವಾಗಿದೆ.

**ಹರಿಯಾಣದ ಮಾಜಿ ಮುಖ್ಯಮಂತ್ರಿ ಬಂಧನ**

ಹರಿಯಾಣದ ಮಾಜಿ ಮುಖ್ಯಮಂತ್ರಿ ಓಂ ಪ್ರಕಾಶ್ ಚೌತಲ ಮತ್ತು ಅವರ ಪುತ್ರ ಹಾಲಿ ಶಾಸಕ ಅಜಯ್ ಚೌತಲರವರನ್ನು ಇತ್ತೀಚೆಗೆ ಪೋಲಿಸರು ಬಂಧಿಸಿದ್ದಾರೆ. 2000 ನೇ ವರ್ಷದಲ್ಲಿ ಚೌತಲರವರು ಮುಖ್ಯಮಂತ್ರಿಯಾಗಿದ್ದ ವೇಳೆ ನಡೆಸಲಾದ 3000 ಶಿಕ್ಷಕರ ನೇಮಕಾತಿಯಲ್ಲಿ ಅಕ್ರಮ ನಡೆದಿದೆ ಎಂಬ ಆರೋಪವನ್ನು ಅವರು ಹೊತ್ತಿದ್ದರು. ಈ ಪ್ರಕರಣದ ವಿಚಾರಣೆ ನಡೆಸಿದ ದೆಹಲಿ ಸಿಬಿಐ ವಿಶೇಷ ಕೋರ್ಟ್ ಚೌತಲ ಮತ್ತು ಅವರ ಮಗ ತಪ್ಪಿತಸ್ಥರು ಎಂದು ತೀರ್ಪು ನೀಡಿದ ಹಿನ್ನೆಲೆಯಲ್ಲಿ ಅವರನ್ನು ಬಂಧಿಸಲಾಗಿದೆ.

**ಜಾರ್ಖಂಡ್ ನಲ್ಲಿ ರಾಷ್ಟ್ರಪತಿ ಆಳ್ವಿಕೆಗೆ ಶಿಫಾರಸ್ಸು**

ಜಾರ್ಖಂಡ್ ರಾಜ್ಯದಲ್ಲಿ ತಲೆದೂರಿರುವ ರಾಜಕೀಯ ಅಸ್ಥಿರತೆಯಿಂದ ರಾಷ್ಟ್ರಪತಿ ಆಳ್ವಿಕೆ ಹೇರುವಂತೆ ಜಾರ್ಖಂಡ್ ರಾಜ್ಯಪಾಲರಾದ ಸೈಯದ್ ಅಹಮದ್ ಕಳುಸಿರುವ ವರದಿಯನ್ನು ಕೇಂದ್ರ ಸಂಪುಟ ಒಪ್ಪಿದೆ. ಪ್ರಧಾನ ಮಂತ್ರಿ ಮನ ಮೋಹನ್ ಸಿಂಗ್ ನೇತೃತ್ವದಲ್ಲಿ ನಡೆದ ಸಭೆಯಲ್ಲಿ, ರಾಷ್ಟ್ರಪತಿ ಆಳ್ವಿಕೆ ಶಿಫಾರಸ್ಸು ಮಾಡಿರುವ ರಾಜ್ಯಪಾಲರ ವರದಿಯನ್ನು ಪರಿಶೀಲಿಸಿ ಮುಂದಿನ ಕ್ರಮಕ್ಕಾಗಿ ರಾಷ್ಟ್ರಪತಿಗಳಿಗೆ ಕಳುಹಿಸಲು ನಿರ್ಧರಿಸಲಾಗಿದೆ.

ರಾಷ್ಟ್ರಪತಿ ಆಳ್ವಿಕೆ ಏಕೆ?

- ಜಾರ್ಖಂಡ್ ಜನಮುಕ್ತಿ ಮೋರ್ಚ ಪಕ್ಷವು, ಆಡಳಿತ ಪಕ್ಷ ಬಿಜೆಪಿ ಗೆ ನೀಡಿದ್ದ ಬೆಂಬಲವನ್ನು ಜನವರಿ 8 ರಂದು ಹಿಂಪಡೆದಿತ್ತು. ಈ ರಾಜಕೀಯ ತಿರುವಿನಿಂದಾಗಿ ಅರ್ಜುನ್ ಮುಂಡಾ ನೇತೃತ್ವದ ಸರ್ಕಾರವು ಸಂಕಷ್ಟಕ್ಕೆ ಸಿಲುಕಿತ್ತು. ಸರ್ಕಾರಕ್ಕೆ ಸೂಕ್ತ ಬೆಂಬಲ ಇಲ್ಲದಿರುವುದನ್ನು ಅರಿತ ಮುಂಡಾ ರವರು ವಿಧಾನಸಭೆ ವಿಸರ್ಜಿಸುವಂತೆ ರಾಜ್ಯಪಾಲರಿಗೆ ಮನವಿ ಸಲ್ಲಿಸಿದ್ದರು.

2000ನೇ ಇಸವಿಯಲ್ಲಿ ಅಸ್ತಿತ್ವಕ್ಕೆ ಬಂದ ಜಾರ್ಖಂಡ್ ಸರ್ಕಾರ ಅನೇಕ ಭಾರಿ ರಾಜಕೀಯ ಏರುಪೇರುಗಳನ್ನು ಅನುಭವಿಸಿದೆ. ಈ ಹಿಂದೆ ಎರಡು ಭಾರಿ ರಾಷ್ಟ್ರಪತಿ ಆಳ್ವಿಕೆಯನ್ನು ಈ ರಾಜ್ಯದಲ್ಲಿ ಹೇರಲಾಗಿದೆ.

**ವಾರ್ಷಿಕ ಶಿಕ್ಷಣ ಸ್ಥಿತಿ ವರದಿ (Annual Status of Education Report)-2012**

ವಾರ್ಷಿಕ ಶಿಕ್ಷಣ ಸ್ಥಿತಿ 2012 ರ ವರದಿಯನ್ನು, ಕೇಂದ್ರ ಮಾನವ ಸಂಪನ್ಮೂಲ ಅಭಿವೃದ್ಧಿ ಸಚಿವರಾದ ಡಾ.ಪಲ್ಲಂ ರಾಜುರವರು ಇತ್ತೀಚೆಗೆ ಬಿಡುಗಡೆಗೊಳಿಸಿದರು. ಈ ವರದಿಯ ಕೆಲವು ಪ್ರಮುಖ ಅಂಶಗಳು ಇಲ್ಲಿವೆ.

- 6 ರಿಂದ 14 ವರ್ಷ ವಯಸ್ಸಿನ ಮಕ್ಕಳ ದಾಖಲಾತಿ ಪ್ರಮಾಣವು ಗ್ರಾಮೀಣ ಭಾಗದಲ್ಲಿ ಅತಿ ಹೆಚ್ಚಾಗಿದ್ದು, 2012 ರಲ್ಲಿ ಈ ವಯಸ್ಸಿನ ಮಕ್ಕಳಲ್ಲಿ ಶೇ.96.5% ಮಕ್ಕಳು ಶಾಲೆಗೆ ದಾಖಲಾಗಿದ್ದರೆ.
- 6 ರಿಂದ 14 ವರ್ಷ ವಯಸ್ಸಿನ ಶಾಲೆಗೆ ದಾಖಲಾಗದ ಮಕ್ಕಳ ಪ್ರಮಾಣವು 3.5% ರಷ್ಟಿದೆ, 2011 ರಲ್ಲಿ 3.3% ರಷ್ಟಿದ್ದು ಸ್ವಲ್ಪ ಹೆಚ್ಚಾಗಿದೆ. ಈ ಪಟ್ಟಿಯಲ್ಲಿ ರಾಜಸ್ತಾನ ಮತ್ತು ಉತ್ತರ ಪ್ರದೇಶಗಳು ಮೊದಲ ಸ್ಥಾನದಲ್ಲಿವೆ.
- ಈ ಸಮೀಕ್ಷೆಯ ಪ್ರಕಾರ ಮಕ್ಕಳ ಓದುವ ಮತ್ತು ಅಂಕ ಗಣಿತ ಕಲಿಯುವ ಸಾಮರ್ಥವು ಕುಸಿಯುತ್ತಿದೆ ಎಂದು ವರದಿಯು ತಿಳಿಸಿದೆ.

- ಖಾಸಗಿ ಶಾಲೆಗಳಿಗೆ ದಾಖಲಾಗುವ ಮಕ್ಕಳ ಸಂಖ್ಯೆಯು ರಾಷ್ಟ್ರೀಯ ಮಟ್ಟದಲ್ಲಿ ಹೆಚ್ಚಾಗಿದ್ದು, ಮುಂದಿನ 5 ವರ್ಷಗಳಲ್ಲಿ ಗ್ರಾಮೀಣ ಭಾಗದಲ್ಲು ಸಹ ಶೇ.50% ಮಕ್ಕಳು ಖಾಸಗಿ ಶಾಲೆಗೆ ದಾಖಲಾಗಲಿವೆ ಎಂದು ತಿಳಿಸಿದೆ.

**ವಾರ್ಷಿಕ ಶಿಕ್ಷಣ ಸ್ಥಿತಿ ವರದಿ ಬಗ್ಗೆ:** ಪ್ರಥಮ್ ಎಂಬ ಲಾಭದಾಯಕವಲ್ಲದ ಸಂಸ್ಥೆಯೊಂದು ಈ ಸಮೀಕ್ಷೆಯನ್ನು ವಾರ್ಷಿಕವಾಗಿ ನಡೆಸುತ್ತಿದ್ದು, 6 ರಿಂದ 14 ವರ್ಷದ ಮಕ್ಕಳ ದಾಖಲಾತಿ, ಓದುವ ಸಾಮರ್ಥ ಮತ್ತು ಅಂಕಗಣಿತವನ್ನು ಬಿಡಿಸುವ ಸಾಮರ್ಥ್ಯದ ಆಧಾರದ ಮೇಲೆ ಈ ವರದಿಯನ್ನು ಸಿದ್ದಪಡಿಸುತ್ತದೆ**. 2005** ರಲ್ಲಿ ಮೊದಲ ಭಾರಿಗೆ ಈ ಸಮೀಕ್ಷೆಯನ್ನು ನಡೆಸಲಾಗಿತ್ತು.

**ದೇಶದ ಮೊದಲ "ತಾಂತ್ರಿಕ ನಾವೀನ್ಯತೆ ಸಂಶೋಧನ ಕೇಂದ್ರ (National Innovation Research Centre)" ಆರಂಭ**

ಜವಳಿ ಉತ್ಪಾದನೆಯಲ್ಲಿ ಅತ್ಯುತ್ತಮ ತಾಂತ್ರಿಕತೆಯ ಪ್ರಾತ್ಯಕ್ಷತೆ ಮತ್ತು ಸಂಶೋಧನೆಯನ್ನು ಕೈಗೊಳ್ಳುವ ಸಲುವಾಗಿ ದೇಶದ ಮೊದಲ ತಾಂತ್ರಿಕ ನಾವೀನ್ಯತೆ ಸಂಶೋಧನ ಕೇಂದ್ರವನ್ನು, ಉಡುಪು ತರಭೇತಿ ಮತ್ತು ವಿನ್ಯಾಸ ಕೇಂದ್ರ ಮತ್ತು ಜುಕಿ (JUKI) ಇಂಡಿಯ ಸಹಯೋಗದೊಂದಿಗೆ ಗುರುಂಗಾವ್ ನಲ್ಲಿ ಇತ್ತೀಚೆಗೆ ಆರಂಭಿಸಲಾಯಿತು. ಜವಳಿ ಉದ್ಯಮದಲ್ಲಿ ಹೊಸ ಹೊಸ ತಂತ್ರಜ್ಞಾನ ಬಳಕೆಯಿಂದ ಉತ್ಪಾದನ ಸಾಮರ್ಥ, ಗುಣಮಟ್ಟ ಹೆಚ್ಚಿಸುವುದು ಅಲ್ಲದೇ ಅಂತರ್ ರಾಷ್ಟ್ರ ಮಟ್ಟದಲ್ಲಿ ಸ್ವರ್ಧಿಸಲು ಈ ಕೇಂದ್ರ ಸಹಕಾರಿಯಾಗಲಿದೆ.

**ಭಾರತ ಮತ್ತು ಬಾಂಗ್ಲದೇಶಗಳ ರೈಲು ಸಂಪರ್ಕ ಕುರಿತು: ಉಭಯ ದೇಶಗಳ ಸಭೆ**

ಭಾರತ ಮತ್ತು ಬಾಂಗ್ಲದೇಶಗಳ ನಡುವೆ ರೈಲು ಸಂಪರ್ಕವನ್ನು ವೃದ್ದಿಗೊಳಿಸುವ ಸಲುವಾಗಿ ಎರಡು ದೇಶಗಳ ಹಿರಿಯ ರೈಲ್ವೆ ಅಧಿಕಾರಿಗಳ ಸಭೆ ಇತ್ತೀಚೆಗೆ ಡಾಕಾದಲ್ಲಿ ನಡೆಯಿತು. ಉಭಯ ದೇಶಗಳ ನಡುವೆ ಹಾಲಿ ಕಾರ್ಯನಿರ್ವಹಿಸುತ್ತಿರುವ ಮೈತ್ರಿ ಎಕ್ಸ್ ಪ್ರೆಸ್ ರೈಲು ಸಂಪರ್ಕವನ್ನು ಉತ್ತಮ ಪಡಿಸುವುದಲ್ಲದೆ, ಈಗಾಗಲೇ ಉದ್ದೇಶಿಸಿರುವ ವಿವಿಧ ರೈಲು ಯೋಜನೆಗಳನ್ನು ತ್ವರಿತಗತಿಯಲ್ಲಿ ಪೂರ್ಣಗೊಳಿಸುವ ಸಂಬಂಧ ಉಭಯ ದೇಶಗಳು ಒಪ್ಪಂದಕ್ಕೆ ಸಹಿ ಹಾಕಿದವು.

ಭಾರತ - ಬಾಂಗ್ಲ ನಡುವೆ ಉದ್ದೇಶಿಸಿರುವ ರೈಲು ಯೋಜನೆಗಳು:

- ಅಕುರ (ಬಾಂಗ್ಲ) - ಅಗರ್ತಲ (ಭಾರತ)
- ಚಿಲಹತಿ (ಬಾಂಗ್ಲ) -ಹಾಲ್ದಿಬಾರಿ (ಭಾರತ)
- ಶಾಬಜ್ ಪುರ (ಬಾಂಗ್ಲ)- ಮಹಿಶಾಸನ್ (ಭಾರತ)
- ಬಿರೊಲ್ (ಬಾಂಗ್ಲ) - ರಾಧಿಕಪುರ್ (ಭಾರತ್)

**ಮೈತ್ರಿ ಎಕ್ಸ್ ಪ್ರೆಸ್:** ಮೈತ್ರಿ ಅಥವಾ **ಡಾಕ – ಕೋಲ್ಕತ್ತ** ರೈಲು ಸೇವೆಯು, ಭಾರತ ಮತ್ತು ಬಾಂಗ್ಲದೇಶಗಳ ನಡುವಿನ ರೈಲು ಸಂಪರ್ಕ ಸೇವೆಯಾಗಿದೆ. ಎರಡು ದೇಶಗಳ ನಡುವೆ ಪರಸ್ಪರ ಜನಸಂಪರ್ಕ ಬೆಸೆಯುವಂತಹ ಈ ಸೇವೆಗೆ ಏಪ್ರಿಲ್ 14, 2008 ರಂದು ಚಾಲನೆ ನೀಡಲಾಯಿತು.

**ಅಡುಗೆ ಅನಿಲ ಸಿಲಿಂಡರ್ ಮಿತಿ 6 ರಿಂದ 9ಕ್ಕೆ ಏರಿಕೆ**

ಗೃಹಬಳಕೆಗಾಗಿ ಒಂದು ವರ್ಷದ ಅವಧಿಯಲ್ಲಿ ಪೂರೈಸುವ ಸಬ್ಸಿಡಿ ದರದ ಅಡುಗೆ ಅನಿಲ ಸಿಲಿಂಡರ್ ಗಳ ಮಿತಿಯನ್ನು ಈಗಿರುವ 6 ರ ಬದಲು 9 ಕ್ಕೆ ಹೆಚ್ಚಿಸಲು ಕೇಂದ್ರ ಸರ್ಕಾರ ಒಪ್ಪಿದೆ.

**ಯಾವಾಗಿಂದ ಜಾರಿಗೆ?**

- ಏಪ್ರಿಲ್ ಒಂದರಿಂದ ಜಾರಿಗೆ ಬರಲಿದೆ, ಅಲ್ಲದೆ, ಮಾರ್ಚ್ 31 ರ ವರೆಗೆ ಪ್ರತಿ ಬಳಕೆದಾರರಿಗೆ 3 ರ ಬದಲು 5 ಸಬ್ಸಿಡಿ ಅನಿಲ ಸಿಲಿಂಡರ್ ಗಳು ದೊರೆಯಲಿವೆ ಎಂದು ಸರ್ಕಾರ ತಿಳಿಸಿದೆ.

**ಜಾರ್ಖಂಡ್ ರಾಜ್ಯ ಕ್ರಿಕೆಟ್ ಸಂಸ್ಥೆಯ (JRCA) ಹೊಸ ಕ್ರಿಡಾಂಗಣದ ಉದ್ಘಾಟನೆ**

ಜಾರ್ಖಂಡ್ ರಾಜ್ಯ ಕ್ರಿಕೆಟ್ ಸಂಸ್ಥೆಯು ನಿರ್ಮಿಸಿರುವ ಹೊಸ ಕ್ರಿಕೆಟ್ ಕ್ರೀಡಾಂಗಣವನ್ನು ಇತ್ತೀಚೆಗೆ ಉದ್ಘಾಟಿಸಿಲಾಯಿತು. ರಾಂಚಿ ನಗರದ ಧುರ್ವ ಎಂಬಲ್ಲಿ ಅತ್ಯಾಧುನಿಕ ಸೌಲಭ್ಯಗಳಿಂದ ನಿರ್ಮಾಣಗೊಂಡಿರುವ ಈ ಕ್ರೀಡಾಂಗಣವನ್ನು ರಾಜ್ಯಪಾಲ ಸಯ್ಯದ್ ಅಹ್ಮದ್ ಉದ್ಘಾಟಿಸಿದರು.

- JRCA ಕ್ರೀಡಾಂಗಣದಲ್ಲಿ ಕ್ರಿಕೆಟ್ ಅಲ್ಲದೆ, ಇತರ ಕ್ರೀಡಾ ಚಟುವಟಿಕೆಗಳಿಗೂ ಅವಕಾಶವಿದೆ. ಇದೇ ಕ್ರಿಡಾಂಗಣದಲ್ಲಿ ಟೆನ್ನಿಸ್ ಅಕಾಡೆಮಿಯೊಂದು ಈಗಾಗಲೇ ಕಾರ್ಯ ನಿರ್ವಹಿಸುತ್ತಿದೆ. ಅಂತರ್ ರಾಷ್ಟ್ರೀಯ ದರ್ಜೆಯ ಈಜು ಕೊಳ ಕೂಡಾ ಇದೆ.
- 180 ರೂ ಕೋಟಿ ವೆಚ್ಚದಲ್ಲಿ ನಿರ್ವಹಿಸಿರುವ ಈ ಕ್ರೀಡಾಂಗಣದಲ್ಲಿ 39 ರಿಂದ 40 ಸಾವಿರ ಪ್ರೇಕ್ಷಕರನ್ನು ಒಳಗೊಳ್ಳುವ ಸಾಮರ್ಥ್ಯ ಹೊಂದಿದೆ
- ಭಾರತ ಮತ್ತು ಇಂಗ್ಲೆಂಡ್ ನಡುವಿನ ಮೂರನೇ ಏಕದಿನ ಪಂದ್ಯ ಇಲ್ಲಿ ನಡೆಯಲಿರುವ ಪ್ರಥಮ ಪಂದ್ಯವಾಗಲಿದೆ.

**ನಕ್ಸಲ್ ನಿಗ್ರಹಕ್ಕೆ ವಿಶೇಷ ಕಾರ್ಯಪಡೆ: ಕೇಂದ್ರ ಸರ್ಕಾರ ಒಪ್ಪಿಗೆ**

ದೇಶದ ಕೆಲವು ರಾಜ್ಯಗಳಲ್ಲಿ ಗಂಭೀರವಾಗಿ ತಲೆದೂರಿರುವ ನಕ್ಸಲ್ ರ ಸಮಸ್ಯೆಯನ್ನು ಮಟ್ಟಹಾಕುವ ಸಲುವಾಗಿ ವಿಶೇಷ ಕಾರ್ಯಪಡೆಯೊಂದನ್ನು ರಚಿಸುವುದಾಗಿ ಕೇಂದ್ರ ಸರ್ಕಾರ ತಿಳಿಸಿದೆ. ಈ ಸಂಬಂಧ ಈಗಾಗಲೇ, ಸರ್ಕಾರ ಯೋಜನೆ ರೂಪಿಸಿದ್ದು ರೂ.280 ಕೋಟಿಯನ್ನು ಇದಕ್ಕಾಗಿ 12 ನೇ ಪಂಚವಾರ್ಷಿಕ ಯೋಜನೆಯಲ್ಲಿ ಭರಿಸುವುದಾಗಿ ಹೇಳಿದೆ. ಆಂಧ್ರ ಪ್ರದೇಶದ ಗ್ರೆ ಹೌಂಡ್ಸ್ (Greyhounds) ಪಡೆಯು ನಕ್ಸಲ್ ರನ್ನು ನಿಗ್ರಹಿಸುವಲ್ಲಿ ಯಶಸ್ವಿಯಾಗಿರುವುದರಿಂದ ಸ್ಪೂರ್ತಿ ಪಡೆದು ಅದೇ ಮಾದರಿಯಲ್ಲಿ ಈ ವಿಶೇಷ ಕಾರ್ಯಪಡೆಯನ್ನು ತಯಾರು ಮಾಡಲಾಗುತ್ತದೆ.

**ಯಾವ ಯಾವ ರಾಜ್ಯಗಳಲ್ಲಿ?**

- ನಕ್ಸಲ್ ಸಮಸ್ಯೆ ತೀವ್ರವಾಗಿ ಕಾಡುತ್ತಿರುವ 4 ರಾಜ್ಯಗಳಾದ ಚತ್ತೀಸ್ ಘರ್, ಒಡಿಶಾ, ಜಾರ್ಖಂಡ್ ಮತ್ತು ಬಿಹಾರ ರಾಜ್ಯಗಳಲ್ಲಿ ಈ ವಿಶೇಷ ಪಡೆ ಕಾರ್ಯನಿರ್ವಹಿಸಲಿದೆ.

- ಗೇರಿಲ್ಲಾ ಯುದ್ಧ ಕಲೆಯಲ್ಲಿ ಪರಿಣಿತಿ ಹೊಂದಿರುವ ಕಾರ್ಯಪಡೆ ಇದಾಗಲ್ಲಿದ್ದು, ದಟ್ಟ ಅರಣ್ಯದ ನಡುವೆ ನೆಲೆ ನಿಂತು ಕಾರ್ಯಾಚರಣೆ ಮಾಡಲಿದೆ.
- ಇದಕ್ಕೆ ಸಂಬಂಧಿಸಿದಂತೆ ಕೇಂದ್ರ ಸರ್ಕಾರ ಕೆಲವು ನಿಬಂಧನೆಗಳನ್ನು ವಿಧಿಸಿದ್ದು, ಈ ನಿಬಂಧನೆಗಳನ್ನು ಒಪ್ಪಿಕೊಳ್ಳುವ ರಾಜ್ಯಗಳಿಗೆ ಮಾತ್ರ ಕೇಂದ್ರ ಸರ್ಕಾರದ ಸಂಪೂರ್ಣ ಹಣಕಾಸು ನೆರವು ದೊರೆಯಲಿದೆ.

**ಬಿಎಚ್ಇಎಲ್ ಗೆ (BHEL) ಮಹಾರತ್ನ ಸ್ಥಾನ ಮಾನ ನೀಡಲು ಸಮ್ಮತಿ**

ದೇಶದ ಪ್ರಮುಖ ಸಾರ್ವಜನಿಕ ಸಂಸ್ಥೆಯಾದ ಭಾರತ್ ಹೆವಿ ಎಲೆಕ್ಟ್ರಾನಿಕ್ಸ್ ಲಿಮಿಟೆಡ್ ಕಂಪನಿಗೆ ಮಹಾರತ್ನ ಸ್ಥಾನಮಾನ ನೀಡುವ ಪ್ರಸ್ತಾವನೆಗೆ ಕೇಂದ್ರ ಸಚಿವ ಸಂಪುಟ ಒಪ್ಪಿರುವುದಾಗಿ ಬೃಹತ್ ಕೈಗಾರಿಕ ಸಚಿವ ಪ್ರಫುಲ್ ಪಟೇಲ್ ತಿಳಿಸಿದ್ದಾರೆ.

**ಏನಿದು ಮಹಾರತ್ನ ಸ್ಥಾನ?**

- ಮಹಾರತ್ನ ಸ್ಥಾನವನ್ನು ಸರ್ಕಾರವು 2009 ರಲ್ಲಿ ಸ್ಥಾಪಿಸಲಾಗಿದ್ದು, ಈ ಸ್ಥಾನವನ್ನು ಪಡೆಯುವ ಕಂಪನಿಯು ಸರ್ಕಾರದ ಪೂರ್ವನುಮತಿ ಇಲ್ಲದೆ ರೂ.5000 ಕೋಟಿ ತನಕ ಬಂಡವಾಳ ಹೂಡಬಹುದಾಗಿದೆ.
- ಅಲ್ಲದೆ ಮಹಾರತ್ನ ಕಂಪನಿಗಳು ತಮ್ಮ ನಿವ್ವಳ ಲಾಭದ ಶೇ 15% ರಷ್ಟನ್ನು ಬಂಡವಾಳ ಹೂಡಿಕೆಗೆ ಬಳಸಬಹುದಾಗಿದೆ.

**ಮಹಾರತ್ನ ಸ್ಥಾನ ಪಡೆಯಲು ಇರಬೇಕಾದ ಅರ್ಹತೆಗಳು**

- ನವರತ್ನ ಸ್ಥಾನಮಾನವನ್ನು ಹೊಂದಿರಬೇಕು
- ಭಾರತೀಯ ಷೇರು ವಿನಿಮಯದಲ್ಲಿ ಕನಿಷ್ಟ ನಿಗದಿತ ಸಾರ್ವಜನಿಕ ಷೇರನ್ನು SEBI ನಿಬಂಧನೆಗಳ ಅಡಿಯಲ್ಲಿ ನೊಂದಾಯಿಸಿರಬೇಕು.
- ಈ ಹಿಂದಿನ ಮೂರು ವರ್ಷಗಳಲ್ಲಿ ಸರಾಸರಿ ವಾರ್ಷಿಕ ವಹಿವಾಟು ರೂ.20,000 ಕ್ಕಿಂತಲೂ ಹೆಚ್ಚಿರಬೇಕು
- ಸರಾಸರಿ ವಾರ್ಷಿಕ ನಿವ್ವಳ ಕಳೆದ ಮೂರು ವರ್ಷಗಳಲ್ಲಿ ರೂ.10,000 ಕೋಟಿಯಷ್ಟು ಇರಬೇಕು.
- ತೆರಿಗೆ ನಂತರ ಸರಾಸರಿ ವಾರ್ಷಿಕ ನಿವ್ವಳ ಲಾಭ ಮೂರು ವರ್ಷಗಳಲ್ಲಿ ರೂ. 2,500 ಕ್ಕಿಂತಲೂ ಹೆಚ್ಚಿರಬೇಕು
- ಪ್ರಮುಖ ಜಾಗತಿಕ ಉಪಸ್ಥಿತಿ ಮತ್ತು ಅಂತರ್ ರಾಷ್ಟ್ರೀಯ ಮಟ್ಟದಲ್ಲಿ ಕಾರ್ಯನಿರ್ವಹಿಸುತ್ತಿರಬೇಕು

**ಸದ್ಯ ಎಷ್ಟು ಮಹಾರತ್ನ ಕಂಪನಿಗಳಿವೆ?**

ಸದ್ಯ 5 ಮಹಾರತ್ನ ಕಂಪನಿಗಳಿದ್ದು, BHEL ನಂತರ 6 ಕ್ಕೆ ಏರಲಿವೆ.

**ಮಹಾರತ್ನ ಕಂಪನಿಗಳು**

- ಕೋಲ್ ಇಂಡಿಯಾ ಲಿಮೆಟೆಡ್
- ಇಂಡಿಯನ್ ಆಯಿಲ್ ಕಾರ್ಪೋರೇಷನ್
- NTPC ಲಿಮಿಟೆಡ್
- ಆಯಿಲ್ ಅಂಡ್ ನ್ಯಾಚುರಲ್ ಗ್ಯಾಸ್ ಕಾರ್ಪೋರೇಷನ್ ಲಿಮಿಟೆಡ್
- ಸ್ಟೀಲ್ ಆಥಾರಿಟಿ ಆಫ್ ಇಂಡಿಯಾ ಲಿಮಿಟೆಡ್
- ಭಾರತ್ ಹೆವಿ ಎಲೆಕ್ಟ್ರಾನಿಕ್ಸ್ ಲಿಮಿಟೆಡ್

ಗಮನಿಸಿ: ಸದ್ಯ 15 ನವರತ್ನ ಮತ್ತು 68 ಮಿನಿರತ್ನ ಸ್ಥಾನ ಪಡೆದಿರುವ ಕಂಪನಿಗಳಿವೆ.

**ಸುದ್ದಿಯಲ್ಲಿರುವ ಪದ: ರೆಡ್ ಅಕ್ಟೋಬರ್**

ರೆಡ್ ಅಕ್ಟೋಬರ್ ಪದವು ಕಂಪ್ಯೂಟರ್ ವಲಯದಲ್ಲಿ ಇತ್ತೀಚಿಗೆ ಸುದ್ದಿಯಲ್ಲಿರುವ ಪದ. ಇದೊಂದು ಸೈಬರ್ ಗೂಡಚಾರಿಕೆಯಾಗಿದ್ದು, 2007 ರಿಂದ ಕಾರ್ಯನಿರ್ವಹಿಸುತ್ತ ಬಂದಿದೆ. ಇಲ್ಲಿಯವರೆಗೂ ಇದರ ಅಪರಾಧಿಗಳನ್ನು ಪತ್ತೆ ಹಚ್ಚಲು ಸಾಧ್ಯವಾಗಿಲ್ಲದಿರುವುದು ಗಮನಾರ್ಹ ಸಂಗತಿ.

**ಇದರ ಮುಖ್ಯ ಉದ್ದೇಶವೇನು?**

ಸರ್ಕಾರದ ವಿವಿಧ ಇಲಾಖೆಗಳಾದ ಮಿಲಿಟರಿ, ಅಣುಶಕ್ತಿ, ವಿಮಾನಯಾನ, ಇಂಧನ ಕೈಗಾರಿಕೆಗಳು ಮತ್ತು ಖಾಸಗಿ ಕಂಪನಿಗಳ ಕಂಪ್ಯೂಟರ್ ವ್ಯವಸ್ಥೆಗಳ ಮೇಲೆ ದಾಳಿ ಮಾಡಿ ಪ್ರಮುಖ ಮಾಹಿತಿಗಳನ್ನು ಕದಿಯುವುದಾಗಿದೆ. ರಷ್ಯಾದ Kaspersky ಆ್ಯಂಟಿ ವೈರಸ್ ಕಂಪನಿಯು ಇದನ್ನು ಭೇದಿಸಿದ್ದು, ರೆಡ್ ಅಕ್ಟೋಬರ್ ಮಾಲ್ವೇರ್ (Malware) ಎಂದು ಕರೆಯಲಾಗುವ ಬ್ಯಾಕ್ ಡೋರ್.ವಿನ್ 32.ಸ್ಪುಟ್ನಿಕ್ (Backdoor.win32.sputnik 32)ಯಿಂದ ಮಾಹಿತಿ ಕದಿಯಲಾಗುತ್ತಿದೆ ಎಂದು ತಿಳಿಸಿದೆ.

**ಯಾವ ದೇಶಗಳಿಂದ ಮಾಹಿತಿ ಕದಿಯಲಾಗುತ್ತಿದೆ?**

ಪ್ರಪಂಚದ ಅನೇಕ ದೇಶಗಳಿಂದ ಮಾಹಿತಿ ಕದಿಯಲಾಗುತ್ತಿದ್ದು, Kaspersky ಲ್ಯಾಬ್ ವರದಿ ಪ್ರಕಾರ ಅತಿ ಹೆಚ್ಚು ದಾಳಿಗೊಳಗಾದ ದೇಶಗಳ ಪಟ್ಟಿಯಲ್ಲಿ ರಷ್ಯಾ ಮೊದಲ ಸ್ಥಾನದಲ್ಲಿದ್ದರೆ, ಭಾರತ 4 ನೇ ಸ್ಥಾನದಲ್ಲಿದೆ.

**ಗುವಾಹಟಿಯಲ್ಲಿ: ಅಂತರ್ ರಾಷ್ಟ್ರೀಯ ಪ್ರವಾಸಿ ಮೇಳ**

ಈಶಾನ್ಯ ರಾಜ್ಯಗಳಲ್ಲಿ ಪ್ರವಾಸೋದ್ಯಮವನ್ನು, ದೇಶ ಮತ್ತು ವಿದೇಶ ಮಟ್ಟದಲ್ಲಿ ಪ್ರಸಿದ್ಧಗೊಳಿಸುವ ಸಲುವಾಗಿ, ಕೇಂದ್ರ ಪ್ರವಾಸೋದ್ಯಮ ಸಚಿವಾಲಯವು ಗುವಾಹಟಿಯಲ್ಲಿ ಪ್ರಥಮ ಅಂತರ್ ರಾಷ್ಟ್ರೀಯ ಪ್ರವಾಸಿ ಮೇಳವನ್ನು ಜನವರಿ 18 ರಿಂದ 20 ರವರೆಗೆ ಆಯೋಜಿಸಿದೆ. ಅಸ್ಸಾಂನ ರಾಜ್ಯಪಾಲರಾದ ಶ್ರೀ ಜಾನಕಿ ಬಲ್ಲವ್ ಪಟ್ನಾಯಕ್ ರವರು ಈ ಮೇಳವನ್ನು ಉದ್ಘಾಟಿಸಲ್ಲಿದ್ದರೆ. ಸುಮಾರು 23 ದೇಶಗಳ ಪ್ರತಿನಿಧಿಗಳು ಈ ಮೇಳದಲ್ಲಿ ಪಾಲ್ಗೊಳ್ಳಲ್ಲಿದ್ದಾರೆ ಎಂದು ನಿರೀಕ್ಷಿಸಲಾಗಿದೆ.

**ಆಹಾರ ಭದ್ರತಾ ಮಸೂದೆ: ತಿಂಗಳಿಗೆ 5 ಕೆ.ಜಿ ಧಾನ್ಯ ಸಂಸದೀಯ ಸಮಿತಿಯ ಶಿಫಾರಸ್ಸು**

ಆಹಾರ ಭದ್ರತಾ ಮಸೂದೆ (Food Security Bill) ಬಗ್ಗೆ ಕಾಂಗ್ರೆಸ್ ನ ಸಂಸತ್ ಸದಸ್ಯರಾದ ವಿಲಾಸ್ ಮುತ್ತೆಮ್ವರ್ ರವರು ಅಧ್ಯಕ್ಷತೆ ವಹಿಸಿದ್ದ ಸಂಸದೀಯ ಸಮಿತಿಯು ತನ್ನ ಶಿಫಾರಸ್ಸುಗಳನ್ನು ಲೋಕಸಭೆ ಸ್ಪೀಕರ್ ಗೆ ಇತ್ತೀಚಿಗೆ ನೀಡಿತು.

**ಶಿಫಾರಸ್ಸಿನ ಪ್ರಮುಖ ಅಂಶಗಳು**

- ಸಂಸದೀಯ ಸಮಿತಿಯು ತಿಂಗಳಿಗೆ ತಲಾ ಒಬ್ಬ ವ್ಯಕ್ತಿಗೆ 5 ಕೆ.ಜಿ ಯಂತೆ ಆಹಾರ ಧಾನ್ಯಗಳನ್ನು ಸಬ್ಸಿಡಿ ದರದಲ್ಲಿ, ದೇಶದ ಜನಸಂಖ್ಯೆಯ ಶೇ.67% ಜನರಿಗೆ ನೀಡುವಂತೆ ಸೂಚಿಸಿದೆ. ಈ ಹಿಂದೆ ಮಸೂದೆಯಲ್ಲಿ ತಿಳಿಸಿದ ಆದ್ಯತೆಯ ಕುಟುಂಬಗಳು (Priority households) ಮತ್ತು ಸಾಮಾನ್ಯ ಕುಟುಂಬಗಳು (General Households) ವರ್ಗೀಕರಣವನ್ನು ಕೈಬಿಟ್ಟು, ಏಕರೂಪದಲ್ಲಿ ಕ್ರಮಕೈಗೊಳ್ಳುವಂತೆ ಶಿಫಾರಸ್ಸು ಮಾಡಿದೆ.

- ಸಮಿತಿಯು ಆಹಾರ ಧಾನ್ಯಗಳನ್ನು ಕುಟುಂಬದಲ್ಲಿರುವ ಸದಸ್ಯರಿಗೆ ಅನುಗುಣವಾಗಿ ನೀಡಬೇಕು ಎಂದು ತಿಳಿಸಿದೆ. ಇದರಿಂದ ಜನಸಂಖ್ಯೆ ಹೆಚ್ಚಾಗಿರುವ ಕುಟುಂಬಗಳು ಹೆಚ್ಚು ಧಾನ್ಯಗಳನ್ನು ಪಡೆಯಲಿವೆ (ಉದಾಹರಣೆಗೆ ಒಂದು ಕುಟುಂಬದಲ್ಲಿ 8 ಜನರಿದ್ದರೆ ಆ ಕುಟುಂಬವು 8 * 5 = 40 ಕೆ.ಜಿ.ತಿಂಗಳಿಗೆ ಪಡೆಯಲಿದೆ). ಸದ್ಯ ಕುಟುಂಬಕ್ಕೆ ತಲಾ 35 ಕೆ,ಜಿ ಯಂತೆ ನೀಡಲಾಗುತ್ತಿದೆ.
- ಮಸೂದೆಯಲ್ಲಿ ಹೇಳಿರುವಂತೆ ಶೇ.75% ಗ್ರಾಮೀಣ ಭಾಗದ ಜನತೆ ಮತ್ತು ಶೇ.50% ನಗರ ಜನಸಂಖ್ಯೆಯನ್ನು ಈ ಈ ಯೋಜನೆಯಡಿ ತರಲು ಸಮ್ಮತಿ ಸೂಚಿಸಿದೆ.
- ಮಹಿಳೆಯು ಗರ್ಭಿಣಿಯಾಗಿದ್ದ ಸಂದರ್ಭದಲ್ಲಿ ಹೆಚ್ಚುವರಿಯಾಗಿ ತಿಂಗಳಿಗೆ 5 ಕೆ.ಜಿ ಯನ್ನು ಗರ್ಭವಸ್ಥೆಯಲ್ಲಿ ಮತ್ತು ಮಗು ಜನಸಿದ 2 ವರ್ಷಗಳ ತನಕ ನೀಡುವಂತೆ ತನ್ನ ಶಿಫಾರಸ್ಸಿನಲ್ಲಿ ಹೇಳಿದೆ.
- ನೇರ ನಗದು ಹಣವನ್ನು ಖಾತೆಗೆ ಸೇರಿಸುವ ಯೋಜನೆಯನ್ನು ದೇಶ ವ್ಯಾಪ್ತಿ ಜಾರಿಗೆ ತರುವ ಮುನ್ನ ಸಮರ್ಪಕ ಬ್ಯಾಂಕಿಗ್ ಸೌಲಭ್ಯವನ್ನು ಒದಗಿಸುವಂತೆ ಹೇಳಿದೆ. ಅಲ್ಲದೆ ಕಂಪ್ಯೂಟರ್ ಆಧಾರಿತ ನಾಗರೀಕ ಪಡಿತರ ವ್ಯವಸ್ಥೆಯನ್ನು ಜಾರಿಗೆ ತರುವ ಮೂಲಕ ಪಡಿತರ ವ್ಯವಸ್ಥೆಯನ್ನು ಉತ್ತಮಗೊಳಿಸುವಂತೆ ಸಮಿತಿ ವರದಿಯಲ್ಲಿ ಹೇಳಿದೆ.

**ಇಟಲಿ ನಾವಿಕರ ವಿಚಾರಣೆಗೆ ವಿಶೇಷ ಕೋರ್ಟ್: ಸುಪ್ರೀಂ ತೀರ್ಪು**

- ಕೇರಳದ ತೀರದಲ್ಲಿ ಭಾರತದ ಮೀನುಗಾರರನ್ನು ಗುಂಡಿಕ್ಕಿ ಹತ್ಯೆಗೈದ ಆರೋಪ ಹೊತ್ತಿರುವ ಇಟಲಿಯ ಇಬ್ಬರು ನಾವಿಕರ ವಿಚಾರಣೆಗೆ ವಿಶೇಷ ನ್ಯಾಯಾಲವೊಂದನ್ನು ಸ್ಥಾಪಿಸುವ ಮೂಲಕ ವಿಚಾರಣೆ ನಡೆಸಬೇಕೆಂದು ಸುಪ್ರೀಂ ಕೋರ್ಟ್ ಹೇಳಿದೆ. ಈ ಪ್ರಕರಣದಲ್ಲಿ ತಮ್ಮ ನಾವಿಕರ ವಿಚಾರಣೆ ನಡೆಸುವ ಅಧಿಕಾರ ಭಾರತ ನ್ಯಾಯಾಲಗಳಿಗೆ ಇಲ್ಲ ಎಂಬ ಇಟಲಿ ಸರ್ಕಾರದ ವಾದವನ್ನು ವಿಚಾರಣೆ ನಡೆಸಿದ ಅಲ್ತಮಸ್ ಕಬೀರ್ ರವರ ಪೀಠ ಈ ವಾದವನ್ನು ತಳ್ಳಿಹಾಕಿದೆ. ಅಲ್ಲದೆ, ಈ ನಾವಿಕರ ವಿಚಾರಣೆ ನಡೆಸುವ ಅಧಿಕಾರ ಕೇರಳ ಹೈಕೋರ್ಟ್ ಮತ್ತು ಕೇರಳ ಪೋಲಿಸರ ವ್ಯಾಪ್ತಿಗು ಒಳಪಟ್ಟಿಲ್ಲ ಎಂದು ತಿಳಿಸಿದೆ.

**ಜೋದ್ ಪುರ ರಾಜರ ಚಿನ್ನದ ಪೆನ್ನು ಹರಾಜಿಗೆ**

- ಜೋದ್ ಪುರದ ಮಹಾರಾಜರು ಭಾರತದ ಕೊನೆಯ ವೈಸ್ ರಾಯ್ ಮೌಂಟ್ ಬ್ಯಾಟನ್ ರವರಿಗೆ ಉಡುಗೊರೆಯಾಗಿ ನೀಡಿದ್ದ ಚಿನ್ನದ ಪೆನ್ನನ್ನು ಈಗ ಹರಾಜಿಗೆ ಇಡಲಾಗಿದ್ದು, ಇದರ ಬೆಲೆ ಈಗ ರೂ.4.14 ಲಕ್ಷ ದಿಂದ 6.16 ಲಕ್ಷದವರೆಗೆ ಮಾರಾಟವಾಗುವ ಸಾಧ್ಯತೆಗಳಿವೆ ಎಂದು ಅಂದಾಜಿಸಲಾಗಿದೆ. ಮೌಂಟ್ ಬ್ಯಾಟನ್ ಗೆಂದೆ ರೂಪಿಸಲಾಗಿದ್ದ ಈ ಪೆನ್ನು ಪಿಸ್ತೂಲನ್ನು ಸಹ ಹೊಂದಿತ್ತು ಎಂಬುದು ವಿಶೇಷ.

**ಮಹಾರಾಷ್ಟ್ರದ ಚಂದ್ರಪುರ ಜಿಲ್ಲೆಯಲ್ಲಿ ಮದ್ಯಪಾನ ನಿಷೇಧ**

ಮಹಾರಾಷ್ಟ್ರದ ವಿಧರ್ಭ ಪ್ರಾಂತೀಯಕ್ಕೆ ಸೇರುವ ಚಂದ್ರಪುರ ಜಿಲ್ಲೆಯಲ್ಲಿ ಮದ್ಯಪಾನ ತಯಾರಿಕೆ, ಮಾರಾಟ ಮತ್ತು ಬಳಕೆಯನ್ನು ಸಂಪೂರ್ಣವಾಗಿ ನಿಷೇಧಿಸುವಂತೆ ಸಚಿವರಾದ ಸಂಜಯ್ ದಿಯೊತಾಳೆ ಅಧ್ಯಕ್ಷತೆ ವಹಿಸಿರುವ ಸಮಿತಿಯೊಂದು ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಿದೆ. ಚಂದ್ರಪುರ ಜಿಲ್ಲೆಯ ಜನತೆಯ ಆರೋಗ್ಯ ಹಿತದೃಷ್ಟಿಯಿಂದ ಈ ಕ್ರಮವನ್ನು ಜಾರಿಗೆ ತರಬೇಕಾಗಿ ಸಮಿತಿ ಸರ್ಕಾರಕ್ಕೆ ಕೋರಿದೆ.

- ಈಗಾಗಲೇ ಚಂದ್ರಪುರ ಜಿಲ್ಲೆಯ ನೆರೆಯ ಜಿಲ್ಲೆಗಳಾದ ವಾರ್ದ ಮತ್ತು ಗಡ್ ಚಿರೋಲಿ ಜಿಲ್ಲೆಗಳಲ್ಲಿ ಮದ್ಯಪಾನವನ್ನು ಬಹುಕಾಲದ ಹಿಂದೆಯೇ ನಿಷೇಧಿಸಲಾಗಿದೆ. ಗಾಂಧೀಜಿಯವರ ಸೇವಾಶ್ರಮವಿರುವ ಕಾರಣದಿಂದ ವಾರ್ದ ಜಿಲ್ಲೆಯಲ್ಲಿ ಮದ್ಯಪಾನವನ್ನು ನಿಷೇಧಸಿದ್ದಾರೆ, ನಕ್ಸಲ್ ರ ಚಟುವಟಿಕೆಯಿಂದಾಗಿ ಗಡ್ ಚಿರೋಲಿ ಜಿಲ್ಲೆಯಲ್ಲಿ ನಿಷೇಧ ಜಾರಿಗೆ ತರಲಾಗಿದೆ.
- ಖನಿಜ ಜಿಲ್ಲೆಯೆಂದೇ ಖ್ಯಾತಿಗೊಳಿಸಿರುವ ಚಂದ್ರಪುರ ಮಹಾರಾಷ್ಟ್ರದ 35 ಜಿಲ್ಲೆಗಳಲ್ಲಿ ಮದ್ಯಪಾನದ ಮೇಲೆ ನಿಷೇಧ ಹೇರುವ ಮೂರನೇ ಜಿಲ್ಲೆಯಾಗಲಿದೆ.
- ಈ ಕ್ರಮದಿಂದ ವಾರ್ಷಿಕವಾಗಿ ರೂ.150 ಕೋಟಿ ಸರ್ಕಾರಕ್ಕೆ ನಷ್ಟವಾಗಬಹುದಾದರು, ಅಬಕಾರಿ ಇಲಾಖೆ ಈ ನಿರ್ಣಯವನ್ನು ಸ್ವಾಗತಿಸಿ ಸಮ್ಮತಿ ಸೂಚಿಸಿದೆ.

**ತ್ವರಿತ ಗತಿಯ (Fast Track) ನ್ಯಾಯಾಲಕ್ಕೆ ಶೀಘ್ರ 2,000 ನ್ಯಾಯಾಧೀಶರ ನೇಮಕ**

ದೇಶದಲ್ಲಿ ಬಾಕಿ ಉಳಿದಿರುವ ಪ್ರಕರಣಗಳನ್ನು ಶೀಘ್ರ ಇತ್ಯಾರ್ಥಗೊಳಿಸುವ ಸಲುವಾಗಿ ತ್ವರಿತಗತಿಯ ನ್ಯಾಯಾಲಯಗಳಿಗೆ 2,000 ನ್ಯಾಯಾಧೀಶರನ್ನು ನೇಮಕಮಾಡಿಕೊಳ್ಳಲು ಕೇಂದ್ರ ಕಾನೂನು ಸಚಿವಾಲಯ ನಿರ್ಧರಿಸಿದೆ, ಅಲ್ಲದೆ ಈ ಸಂಬಂಧ ರೂ.80 ಕೋಟಿಗೆ ಅನುಮೋದನೆ ನೀಡಿದ್ದು, ಕೇಂದ್ರ ಸರ್ಕಾರ ಈಗಾಗಲೇ ಎಲ್ಲಾ ರಾಜ್ಯ ಸರ್ಕಾರಗಳಿಗೂ ಈ ಬಗ್ಗೆ ನಿರ್ದೇಶನ ನೀಡಿದೆ.

**ತ್ವರಿತಗತಿ ನ್ಯಾಯಾಲಯಗಳು:-**

- ದೇಶದಲ್ಲಿ ತ್ವರಿತಗತಿ ನ್ಯಾಯಾಲಗಳ ಕಲ್ಪನೆ ಇತ್ತೀಚಿನದಲ್ಲ, ಸುಮಾರು 11 ವರ್ಷಗಳಿಂದಲೂ ಈ ನ್ಯಾಯಾಲಗಳು ಕಾರ್ಯನಿರ್ವಹಿಸುತ್ತಿದ್ದು, 2012 ರ ಮಾರ್ಚ್ ನಲ್ಲಿ ಸ್ಥಗಿತಗೊಳಿಸಲಾಗಿತ್ತು. ಬಳಿಕ ಕೆಲವು ರಾಜ್ಯಗಳು ಇವುಗಳನ್ನು ಸಾಮಾನ್ಯ ನ್ಯಾಯಾಲಗಳನ್ನಾಗಿ ಬದಲಾವಣೆ ಮಾಡಿದ್ದವು. ಆದರೆ ಮಹಾರಾಷ್ಟ್ರ, ಪಶ್ಚಿಮ ಬಂಗಾಳ ರಾಜ್ಯಗಳು ಕೇಂದ್ರ ಸರ್ಕಾರದ ಧನ ಸಹಾಯವಿಲ್ಲದೆ ತ್ವರಿತಗತಿ ನ್ಯಾಯಾಲಗಳನ್ನು ಮುಂದುವರೆಸಿದ್ದವು. ಬಿಹಾರ ರಾಜ್ಯದಲ್ಲಿ 179 ಕ್ಕೂ ಹೆಚ್ಚು ತ್ವರಿತ ನ್ಯಾಯಾಲಯಗಳು ಈಗಲೂ ಕಾರ್ಯನಿರ್ವಹಿಸುತ್ತಿವೆ.
- ಈ ಯೋಜನೆಯಡಿ ಕೇಂದ್ರ ಸರ್ಕಾರ ಪ್ರತಿ ನ್ಯಾಯಾಲಯಗಳಿಗೆ ವಾರ್ಷಿಕವಾಗಿ ರೂ.4.80ಲಕ್ಷವನ್ನು ಮರುಕಳಿಸುವ ವೆಚ್ಚಕ್ಕಾಗಿ ಮತ್ತು ರೂ.8.60 ಲಕ್ಷವನ್ನು ಮರುಕಳಿಸಿದಿರುವ ವೆಚ್ಚಕ್ಕಾಗಿ ನೀಡುತ್ತದೆ.

**ದೆಹಲಿಯಲ್ಲಿ ಬಡವರಿಗೆ 12 ಸಬ್ಸಿಡಿ ಸಹಿತ ಸಿಲಿಂಡರ್ : ಶೀಲಾ ದೀಕ್ಷಿತ್**

ದೆಹಲಿ ಸರ್ಕಾರ ಬಿಪಿಎಲ್ ಕಾರ್ಡು ಹೊಂದಿರುವವರಿಗೆ ಸಬ್ಸಿಡಿ ಸಹಿತ ಅನಿಲ ಗ್ಯಾಸ್ ಸಂಖ್ಯೆಯನ್ನು 9 ರಿಂದ 12 ಕ್ಕೆ ಏರಿಸುವ ನಿರ್ಣಯ ಕೈಗೊಂಡಿದೆ. ದೆಹಲಿಯ ಸಚಿವ ಸಂಪುಟ ಈ ಬಗ್ಗೆ ಇತ್ತೀಚೆಗೆ ನಡೆದ ಸಭೆಯಲ್ಲಿ ಈ ತಿರ್ಮಾನ ಕೈಗೊಂಡಿದೆ.

- ಕೇಂದ್ರ ಸರ್ಕಾರ ಇತ್ತೀಚೆಗೆ ಒಂದು ಕುಟುಂಬಕ್ಕೆ ವರ್ಷಕ್ಕೆ 6 ಸಬ್ಸಿಡಿ ಸಹಿತ ಸಿಲಿಂಡರ್ ನೀಡಲು ನಿರ್ಧರಿಸಿದ ಸಂಧರ್ಭದಲ್ಲಿ ದೆಹಲಿ ಸರ್ಕಾರ ಬಿಪಿಎಲ್ ಕಾರ್ಡುದಾರರಿಗೆ ಇನ್ನೂ 3 ಸಿಲಿಂಡರ್ ಹೆಚ್ಚುವರಿಯಾಗಿ ನೀಡುವ ಯೋಜನೆ ಜಾರಿಮಾಡಿತ್ತು.
- ಈಗ ಕೇಂದ್ರ ಸರ್ಕಾರ 6 ರ ಜೊತೆಗೆ ಮೂರು ಹೆಚ್ಚುವರಿ LPG ಸಿಲಿಂಡರ್ ನೀಡಲು ನಿರ್ಧರಿಸಿರುವ ಕಾರಣ, ದೆಹಲಿ ಸರ್ಕಾರ 3 ಹೆಚ್ಚುವರಿ ಸಿಲಿಂಡರ್ ನ್ನು ಹಾಗೇ ಉಳಿಸಿಕೊಂಡು, ಮತ್ತೇ ಮೂರು ಹೆಚ್ಚುವರಿ ಸಿಲಿಂಡರ್ ನೀಡುವ ಮೂಲಕ 12 ಕ್ಕೆ ಏರಿಸಲು ನಿರ್ಧರಿಸಿದೆ.

**ಮುಂಬೈ ದಾಳಿ ರೂವಾರಿ ರಾಣ ಗೆ 14 ವರ್ಷ ಜೈಲು**

ಚಿಕಾಗೋ ಮೂಲದ ಉದ್ಯಮಿ ತಹವ್ವೂರ್ ರಾಣ ಗೆ ಆಮೆರಿಕಾದ ಫೆಡರಲ್ ಕೋರ್ಟ್ 14 ವರ್ಷ ಜೈಲು ಶಿಕ್ಷೆ ವಿಧಿಸಿದೆ. ಪಾಕಿಸ್ತಾನದ ಭಯೋತ್ಪಾದಕರ ಗುಂಪಿನ ಜೊತೆ ಶಾಮೀಲಾಗುವ ಮೂಲಕ 26/11 ರಂದು ನಡೆದ ಮುಂಬೈ ದಾಳಿಯ ಸಂಚಿನ ಹಿಂದೆ ರಾಣ ನ ಕೈವಾಡವಿರುವುದಾಗಿ ಕೋರ್ಟ್ ತಿಳಿಸಿದೆ. ಅಷ್ಟೇ ಅಲ್ಲದೆ, ಡ್ಯಾನಿಶ್ ಪತ್ರಿಕೆಯೊಂದು ರಚಿಸಿದ ಪ್ರವಾದಿ ಮಹಮ್ಮದರ ವ್ಯಂಗ ಚಿತ್ರ ಪ್ರಕರಣದಲ್ಲೂ ರಾಣ ಭಾಗಿಯಾಗಿರುವುದಾಗಿ ಕೋರ್ಟ್ ತಿಳಿಸಿದೆ.

**ಜವಹಾರ್ ಲಾಲ್ ನೆಹರು ವಿಜ್ಞಾನ ಫೆಲೋಶಿಫ್/ ಪ್ರೋಫೆಸರ್ ಶಿಪ್ ಪ್ರೊಗ್ರಾಂ**

ಜವಹಾರ್ ಲಾಲ್ ನೆಹರು ವಿಜ್ಞಾನ ಫೆಲೋಶಿಫ್/ ಪ್ರೋಫೆಸರ್ ಶಿಪ್ ಪ್ರೊಗ್ರಾಂ ಇದು ಭಾರತ ಯೋಜನ ಮಂಡಳಿಯ ಉದ್ದೇಶಿತ ಯೋಜನೆಯಾಗಿದ್ದು, ಈ ಯೋಜನೆಯಡಿ ವಿದೇಶಗಳಲ್ಲಿ ಕೆಲಸ ನಿರ್ವಹಿಸುತ್ತಿರುವ ಭಾರತೀಯ ಮೂಲದ ವಿಜ್ಞಾನಿಗಳನ್ನು ದೇಶದ ತಾಂತ್ರಿಕ ಮತ್ತು ವೈಜ್ಞಾನಿಕ ಸಂಸ್ಥೆಗಳಲ್ಲಿ ತರಬೇತಿ ಮತ್ತು ಸಂಶೋಧನೆಗಳಲ್ಲಿ ಕೆಲ ಸಮಯಗಳ ಕಾಲ ತೊಡಗಿಸಿಕೊಳ್ಳುವ ಆಸೆಯನ್ನು ಹೊಂದಿದೆ.

ಯೋಜನೆಯ ಕೆಲವು ಮುಖ್ಯ ಅಂಶಗಳು:-

- ಈ ಯೋಜನೆಯಡಿ ವಿಜ್ಞಾನಿಗಳನ್ನು ನೇಮಕ ಮಾಡಿಕೊಳ್ಳುವ ಬದಲಾಗಿ, ಅಂತರ್ ರಾಷ್ಟ್ರೀಯ ಮತ್ತು ರಾಷ್ಟ್ರೀಯ ವಿಜ್ಞಾನಿಗಳನ್ನು ಒಳಗೊಂಡ ತಜ್ಞನರ ತಂಡವು ವಿಜ್ಞಾನಿಗಳನ್ನು ಆಯ್ಕೆ ಮಾಡುವ ಮೂಲಕ ಸಂಸ್ಥೆಗಳಲ್ಲಿ ಕೆಲ ಕಾಲ ಕೆಲಸ ಮಾಡಲು ಆಹ್ವಾನಿಸಲಾಗುವುದು.
- ಆಯ್ಕೆಯಾದ ವಿಜ್ಞಾನಿಗಳಿಗೆ ವಾರ್ಷಿಕ ಸುಮಾರು ರೂ.55 ಲಕ್ಷ ಸಂಭಾವನೆಯನ್ನು ನೀಡಲಾಗುವುದು. ಜೊತೆಗೆ ಇತರೆ ಸೌಲಭ್ಯ ಮತ್ತು ಭತ್ಯೆಗಳನ್ನು ನೀಡಲಾಗುವುದು.

- ಕೆಲಸ ಮಾಡುವ ಸ್ಥಳ ಮತ್ತು ಎಷ್ಟು ಕಾಲದ ವರೆಗೆ ಕೆಲಸ ಮಾಡಬೇಕು ಎಂಬುದನ್ನು ವಿಜ್ಞಾನಿಗಳೇ ನಿರ್ಣಯ ತೆಗೆದುಕೊಳ್ಳುವ ಅವಕಾಶ ಕಲ್ಪಿಸಿದೆ.
- ಖ್ಯಾತ ವಿಜ್ಞಾನಿಗಳ ಅನುಭವದಿಂದ ದೇಶದ ತಂತ್ರಜ್ಞಾನ ಕ್ಷೇತ್ರದಲ್ಲಿ ಅಭಿವೃದ್ಧಿ ಕಾಣುವ ಸಲುವಾಗಿ ಈ ಯೋಜನೆಯನ್ನು ಆರಂಭಿಸಲಾಗಿದೆ.

**ಮ್ಯಾಪಿಂಗ್ ಇಂಡಿಯಾ'ಸ್ ಮಹಾಕುಂಭಮೇಳ**

ಲಕ್ಷ ಲಕ್ಷ ಹಿಂದೂ ಭಕ್ತಾಧಿಗಳ ಸಮಾವೇಶದಿಂದ ದೇಶ ಮತ್ತು ವಿದೇಶಗಳಲ್ಲಿ ಪ್ರಸಿದ್ಧವಾಗಿರುವ ಕುಂಭಮೇಳ, ಈಗ ವಿಶ್ವ ವಿದ್ಯಾಲಯಗಳನ್ನು ಆಕರ್ಷಿಸುತ್ತಿದೆ. ಹಾರ್ವಡ್ ವಿಶ್ವ ವಿದ್ಯಾಲಯ ಮಹಾಕುಂಭಮೇಳದ ಬಗ್ಗೆ ಅಧ್ಯಯನವೊಂದನ್ನು ಕೈಗೊಳ್ಳಲು ಸಜ್ಜಾಗಿದೆ.

- ಮ್ಯಾಪಿಂಗ್ ಇಂಡಿಯಾ'ಸ್ ಮಹಾಕುಂಭ ಮೇಳ ಎಂಬ ಶೀರ್ಷಿಕೆಯಡಿ ಕೈಗೊಳ್ಳಲ್ಲಿರುವ ಈ ಅಧ್ಯಯನದಲ್ಲಿ ಸಾವಿರಾರು ಭಕ್ತಾಧಿಗಳು ಹೇಗೆ ಪಾಲ್ಗೊಳ್ಳುತ್ತಾರೆ, ಈ ಸಮಾವೇಶಕ್ಕೆ ನಗರ ಹೇಗೆ ಸಜ್ಜಾಗಲಿದೆ ಮತ್ತು ಕುಂಭಮೇಳದಲ್ಲಿ ಸಾರ್ವಜನಿಕರ ಆರೋಗ್ಯ ಇತ್ಯಾದಿ ಅಂಶಗಳ ಬಗ್ಗೆ ವರದಿ ಸಂಗ್ರಹಿಸುವುದಾಗಿ ತಿಳಿಸಿದೆ.

**ದೇಶದಾದ್ಯಂತ ಒಂದೇ ತುರ್ತು ಸೇವೆ ಸಹಾಯವಾಣಿ: ಟ್ರಾಯ್ ಚಿಂತನೆ**

ಆಮೆರಿಕಾದ 911 ಸಹಾಯವಾಣಿ ಮಾದರಿಯಲ್ಲಿ, ದೇಶದಾದ್ಯಂತ ಒಂದೇ ತುರ್ತು ಸಹಾಯ ವಾಣಿಯನ್ನು ಜಾರಿಗೆ ತರಲು "ಭಾರತೀಯ ದೂರಸಂಪರ್ಕ ನಿಯಂತ್ರಣ ಪ್ರಾಧಿಕಾರ" (Telecom Regulatory Authority of India) ಚಿಂತನೆ ನಡೆಸಿದೆ. ಜಾರಿಗೆ ತರಲಿರುವ ತುರ್ತು ಸೇವೆ ಸಹಾಯವಾಣಿಯನ್ನು ಪೋಲಿಸ್, ಅಗ್ನಿಶಾಮಕ ಮತ್ತು ಅಂಬುಲೆನ್ಸ್ ಸೇವೆಗೆ ಬಳಸಬಹುದಾಗಿದೆ.

- ಟ್ರಾಯ್ ಈಗಾಗಲೇ ಈ ಯೋಜನೆಯನ್ನು ಆರಂಭಿಸುವ ಸಂಬಂದ ಕರಡು ಪ್ರತಿಯೊಂದನ್ನು ಸಿದ್ದಪಡಿಸಿದೆ.
- ತುರ್ತು ಸೇವೆಯನ್ನು ಆರಂಭಿಸುವ ಸಲುವಾಗಿ ಕಾಲ್ ಸೆಂಟರ್ ಗಳನ್ನು ಸ್ಥಾಪಿಸಲಾಗುವುದು. ಈ ಕಾಲ್ ಸೆಂಟರ್ ಗಳು ಸಂಬಂಧಪಟ್ಟ ಇಲಾಖೆಗಳಿಗೆ ಮಾಹಿತಿ ರವಾನಿಸಲಿವೆ.

**"ವಿಶ್ವರೂಪಂ" ಸಿನಿಮಾ ಬಿಡುಗಡೆಗೆ ತಮಿಳುನಾಡು ಸರ್ಕಾರ ನಿಷೇಧ**

ಕಮಲ್ ಹಾಸನ್ ನಟಿಸಿರುವ ಮಹಾತ್ವಕಾಂಕ್ಷೆ ಸಿನಿಮಾ "ವಿಶ್ವರೂಪಂ" ಚಿತ್ರ ಪ್ರದರ್ಶನಕ್ಕೆ ತಮಿಳುನಾಡು ಸರ್ಕಾರ 15 ದಿನಗಳ ನಿಷೇಧ ಹೇರಿದೆ.

ನಿಷೇಧ ಏಕೆ?

- ವಿಶ್ವರೂಪಂ ಸಿನಿಮಾದಲ್ಲಿ ಮುಸ್ಲಿಂ ಸಮುದಾಯದ ಬಗ್ಗೆ ಅವಹೇಳನ ಮಾಡಲಾಗಿದೆಯೆಂದು ಮುಸ್ಲಿಂ ಪರ ಸಂಘಟನೆಗಳು ಸರ್ಕಾರಕ್ಕೆ ಮನವಿ ಸಲ್ಲಿಸಿದ್ದವು. ಸಿನಿಮಾದ ಪ್ರದರ್ಶನದಿಂದ ರಾಜ್ಯದಲ್ಲಿ ಅಶಾಂತಿ ಉಂಟಾಗಲಿದೆ ಎಂಬ ಮುನ್ಸೂಚನೆಯಿಂದ ತಮಿಳುನಾಡು ಸರ್ಕಾರ ತನ್ನ ರಾಜ್ಯದ್ಯಾಂತ ಚಿತ್ರ ಬಿಡುಗಡೆಯ ಮೇಲೆ ನಿಷೇಧ ಹೇರಿದೆ.

- ಕಮಲ್ ಹಾಸನ್ ನಟಿಸಿ, ನಿರ್ದೇಶಿಸಿರುವ ಮತ್ತು ಸಹ ನಿರ್ಮಾಪಕರಾಗಿರುವ ಚಿತ್ರ "ವಿಶ್ವರೂಪಂ" ಹಿಂದಿ, ತಮಿಳು ಮತ್ತು ತೆಲುಗು ಭಾಷೆಗಳಲ್ಲಿ ಪ್ರದರ್ಶನಗೊಳ್ಳಲಿದೆ.

**ಸದಸ್ಯರು/ಸಚಿವರ ಅನರ್ಹತೆಗೆ ಯಾರಾದರು ಸ್ಪೀಕರ್ ಗೆ ಮನವಿ ಸಲ್ಲಿಸಬಹುದು: ಸುಪ್ರಿಂ ಕೋರ್ಟ್**

ಸಚಿವರು ಅಥವಾ ಸದಸ್ಯರನ್ನು ಸಂವಿಧಾನದ 10 ನೇ ಷೆಡ್ಯೂಲ್ ನಲ್ಲಿ ಪಕ್ಷಾಂತರ ವಿರೋಧಿ ಕಾಯ್ದೆ ಅಡಿ ಅನರ್ಹಗೊಳಿಸುವಂತೆ ಕೇವಲ MLA ಗಳಲ್ಲದೇ, ಆಸಕ್ತಿಯಿರುವ ಯಾರಾದರು ಸ್ಪೀಕರ್ ಗೆ ಮನವಿ ಸಲ್ಲಿಸಬಹುದು ಎಂದು ಸುಪ್ರೀಂಕೋರ್ಟ್ ತಿಳಿಸಿದೆ. ಹಾಗೂ ಈ ರೀತಿ ಸಲ್ಲಿಸದ ಮನವಿಯು ನ್ಯಾಯಯುತವಾಗಿದಲ್ಲಿ ಪರಿಗಣಿಸಬಹುದೆಂದು ಕೋರ್ಟ್ ಹೇಳಿದೆ.

**ವಿವಾದ ಏಕೆ?**

ಓರಿಸ್ಸಾದ ನ್ಯಾಷನಲ್ ಕಾಂಗ್ರೆಸ್ ಪಕ್ಷದ ಅಧ್ಯಕ್ಷರಾದ ಉತ್ಕಲ್ ಕೇಸರಿಯವರು ತಮ್ಮ ಪಕ್ಷದಿಂದ ಬಿಜು ಜನತಾ ದಳಕ್ಕೆ ಸೇರ್ಪಡೆಗೊಂಡ 4 ಜನ MLA ಗಳನ್ನು ಅನರ್ಹಗೊಳಿಸುವಂತೆ ಸ್ಪೀಕರ್ ಗೆ ಮನವಿ ಸಲ್ಲಿಸಿದ್ದರು. ಆದರೆ ಇವರು MLA ಅಲ್ಲದ ಕಾರಣ ಸ್ಪೀಕರ್ ಈ ಬಗ್ಗೆ ಯಾವುದೇ ಕ್ರಮ ಕೈಗೊಳ್ಳದ ಕಾರಣ ಕೇಸರಿಯ ಕೋರ್ಟ್ ಗೆ ಮೇಲ್ಮನವಿ ಸಲ್ಲಿಸಿದರು. ಈ ಅರ್ಜಿಯ ವಿಚಾರಣೆಯನ್ನು ನಡೆಸಿದ ಪೀಠ, ಸ್ಪೀಕರ್ ಕ್ರಮ ಸರಿಯಲ್ಲ ಎಂದು ತಿಳಿಸಿ ಈ ತೀರ್ಪು ನೀಡಿದೆ.

**ಭೂತನ್ ದೊರೆ ಇಗ್ಮೆ ಕೇಸರ್ ನಮ್ ಗ್ಯಾಲ್ ವಾಂಗ್ ಚುಕ್ ಗಣರಾಜ್ಯ ದಿನದ ಫೇರಡ್ ನ ಮುಖ್ಯ ಅತಿಥಿ**

ಈ ಬಾರಿಯ 64 ನೇ ಗಣರಾಜ್ಯೋತ್ಸವ ದಿನದ ಫೆರೆಡ್ ನ ಮುಖ್ಯ ಅತಿಥಿಯಾಗಿ ಭೂತಾನ್ ದೊರೆ ಇಗ್ಮೆ ಕೇಸರ್ ನಮ್ ಗ್ಯಾಲ್ ವಾಂಗ್ ಚುಕ್ ಭಾಗವಹಿಸಲ್ಲಿದ್ದಾರೆ. ಆಗ್ರಾದಲ್ಲಿ ಜನವರಿ 27 ರಿಂದ 29 ರವರೆಗೆ ನಡೆಯುವ ಭಾರತ ಕೈಗಾರಿಕ ಪಾಲುಗಾರಿಕೆ ಸಮಾವೇಶ-2013 ರಲ್ಲೂ ಸಹ ವಾಂಗ್ ಚುಕ್ ಪಾಲ್ಗೊಳ್ಳಲ್ಲಿದ್ದಾರೆ.

- ನೇಪಾಳದ ಮಾಜಿ ದೊರೆ ಜಿಗ್ಮೆ ಸಿಂಗ್ಯೆ ವಾಂಗ್ ಚುಕ್ 2005 ರಲ್ಲಿ ಗಣರಾಜ್ಯದಿನದ ಫೇರಡ್ ನ ಮುಖ್ಯ ಅತಿಥಿಗಳಾಗಿ ಭಾಗವಹಿಸಿದ್ದರು.

**ವರದಿ ಸಲ್ಲಿಸಿದ ಜಸ್ಟೀಸ್ ವರ್ಮಾ ಸಮಿತಿ**

ದೆಹಲಿಯಲ್ಲಿ ಡಿಸೆಂಬರ್ 16 ರಂದು ನಡೆದ ಸಾಮೂಹಿಕ ಆತ್ಯಚಾರದ ಬಳಿಕ ಮಹಿಳೆಯರ ಮೇಲಿನ ದೌರ್ಜನ್ಯ ತಡೆಗೆ ಸಂಬಂಧಿಸಿದ ಕಾನೂನು ತಿದ್ದುಪಡಿಗಳಿಗೆ ವರದಿ ಮಾಡಲು ರಚಿಸಲಾದ ವರ್ಮಾ ಸಮಿತಿ ತನ್ನ ವರದಿಯನ್ನು ಸರ್ಕಾರಕ್ಕೆ ಸಲ್ಲಿಸಿತು. ಆಡಳಿತ ವೈಫಲ್ಯವೇ ಮಹಿಳೆಯರ ವಿರುದ್ದ ನಡೆಯುತ್ತಿರುವ ಅಪರಾಧಗಳಿಗೆ ಮೂಲ ಕಾರಣ ಹಾಗೂ ಇದರ ಜೊತೆಗೆ ಇದನ್ನು ತಡೆಯುವ ಅಧಿಕಾರಿಗಳು ಬೇಜವಾಬ್ದಾರಿ ತೋರುತ್ತಿರುವುದು ಆಘಾತಕಾರಿ ಸಂಗತಿ ಎಂದು ಸಮಿತಿ ವರದಿಯಲ್ಲಿ ಉಲ್ಲೇಖಿಸಿದೆ.

ಸಮಿತಿಯ ಮುಖ್ಯ ಶಿಫಾರಸ್ಸುಗಳೇನು?

- ಆತ್ಯಾಚಾರಿಗಳಿಗೆ ಮರಣ ದಂಡನೆ ವಿಧಿಸುವ ಬದಲು ಕನಿಷ್ಟ 20 ವರ್ಷ ಶಿಕ್ಷೆ ವಿಧಿಸಬೇಕು ಎಂದು ಸಮಿತಿ ತಿಳಿಸಿದೆ

- ಬಾಲ ನ್ಯಾಯ ಕಾಯ್ದೆ ವ್ಯಾಪ್ತಿಗೆ ಒಳಪಡುವವರ ವಯೋಮಿತಿ ಈಗಿರುವಂತೆ ಇರಲಿ ಅದರ ಇಳಿಕೆ ಬೇಡ ಎಂದು ಹೇಳಿದೆ.
- ಮಹಿಳೆಯರ ಘನತೆ, ಸುರಕ್ಷತೆಗೆ ಪ್ರತ್ಯೇಕ ಕಾಯಿದೆ ಮತ್ತು ಲೈಂಗಿಕ ಸಂಪರ್ಕ ಹೊಂದುವ ವಿಷಯದಲ್ಲಿ ಮಹಿಳೆಗೆ ನಿರ್ಧಾರ ಕೈಗೊಳ್ಳುವ ಪರಮಾಧಿಕಾರ ನೀಡಬೇಕು.
- ಸಶಸ್ತ್ರ ಪಡೆ ಸಿಬ್ಬಂದಿ ನಡೆಸುವ ಲೈಂಗಿಕ ದೌರ್ಜನ್ಯ ಪ್ರಕರಣವನ್ನು ಸಾಮಾನ್ಯ ಅಪರಾಧ ಕಾಯ್ದೆ ವ್ಯಾಪ್ತಿಗೆ ತರಬೇಕು ಎಂಬ ವಿಷಯನ್ನು ಸಮಿತಿ ವರದಿಯಲ್ಲಿ ಪ್ರಕಟಿಸಿದೆ.

ವರ್ಮಾ ನೇತೃತ್ವದ ತ್ರಿ ಸದಸ್ಯ ಸಮಿತಿಗೆ ವರದಿ ಸಲ್ಲಿಸಲು 30 ದಿನ ಕಾಲಾವಕಾಶ ನೀಡಲಾಗಿತ್ತು. ಆದರೆ ಸಮಿತಿಯು 29 ದಿನದಳೊಗೆ ವರದಿ ಸಲ್ಲಿಸಿದೆ. ಸುಮಾರು 80,000 ಸಲಹೆಗಳು ಸಾರ್ವಜನಿಕರಿಂದ ಸಮಿತಿಗೆ ಹರಿದು ಬಂದಿವೆ. ವರ್ಮಾ ಸಮಿತಿ ಸಲ್ಲಿಸಿರುವ ವರದಿಯನ್ನು ಸಂಸತ್ತಿನ ಸ್ಥಾಯಿ ಸಮಿತಿಗೆ ಕಳುಹಿಸಿಕೊಡಲು ಕೇಂದ್ರ ಸರ್ಕಾರ ನಿರ್ಧರಿಸಿದೆ. ಕೇಂದ್ರ ಸರ್ಕಾರ ಇತ್ತೀಚೆಗಷ್ಟೇ ಅಪರಾಧ ಕಾನೂನಿಗೆ ತಿದ್ದುಪಡಿ ತಂದು ಅದನ್ನು ಸಂಸತ್ತಿನಲ್ಲಿ ಮಂಡಿಸಿದೆ. ವರ್ಮಾ ಸಮಿತಿ ಶಿಫಾರಸ್ಸು ಮಾಡಿರುವ ಬಹುತೇಕ ಅಂಶಗಳು ತಿದ್ದುಪಡಿ ಮಸೂದೆಯಲ್ಲಿ ಅಳವಡಿಕೆಯಾಗಿದ್ದು, ಇದನ್ನು ಹೊರತುಪಡಿಸಿ ಬೇರೇನಾದರೂ ಅಂಶಗಳಿದ್ದರೆ ಅದನ್ನೂ ಮಸೂದೆಯಲ್ಲಿ ಸೇರಿಸಲು ಸ್ಥಾಯಿ ಸಮಿತಿ ಉದ್ದೇಶಿಸಿದೆ.

**ಶಾರುಖ್ ಖಾನ್ ಪೋಬ್ಸ್ ಸೆಲೆಬ್ರಿಟಿಯಾ ನಂ.1**

ಪ್ರಸಿದ್ಧ ನಿಯತಕಾಲಿಕೆ “ಪೋಬ್ಸ್ ಇಂಡಿಯಾ” 100 ಭಾರತೀಯ ಸೆಲಿಬ್ರಿಟಿಗಳ ಪಟ್ಟಿ ಪ್ರಕಟಿಸಿದ್ದು, ಬಾಲಿವುಡ್ ಬಾದ್ ಷಾ ಶಾರುಖ್ ನಂ.1 ಸ್ಥಾನದಲ್ಲಿದ್ದಾರೆ. ಅಕ್ಟೋಬರ್ 2011 ರಿಂದ ಸೆಪ್ಟಂಬರ್ 2012 ರ ಅವಧಿಯಲ್ಲಿ ಬರೋಬ್ಬರಿ 202.8 ಕೋಟಿ ರೂ ಸಂಪಾದನೆ ಮಾಡುವ ಮೂಲಕ ಖಾನ್ ಪಟ್ಟಿಯಲ್ಲಿ ಅಗ್ರಸ್ಥಾನಕ್ಕೇರಿದ್ದಾರೆ.

- ನಂತರದ ಸ್ಥಾನದಲ್ಲಿ ಸಲ್ಮಾನ್ ಖಾನ್ (144 ಕೋಟಿ), ಮತ್ತು ಎಂ.ಎಸ್. ಧೋನಿ (135 ಕೋಟಿ) ಕ್ರಮವಾಗಿ ಕಾಣಿಸಿಕೊಂಡಿದ್ದಾರೆ.
- ಉಳಿದಂತೆ ನಾಲ್ಕನೇ ಸ್ಥಾನದಲ್ಲಿ ಅಕ್ಷಯ್ ಕುಮಾರ್, ಐದನೇ ಸ್ಥಾನದಲ್ಲಿ ಅಮಿತಾಬ್ ಬಚನ್ ಜಾಗ ಗಿಟ್ಟಿಸಿದ್ದಾರೆ.

ಯಾವ ಯಾವ ಕ್ಷೇತ್ರದಲ್ಲಿ ಯಾರು ಮುಂದು?

ಕ್ರೀಡೆ: ಎಂ.ಎಸ್.ಧೋನಿ

ಸಂಗೀತಾ: ರೆಹಮಾನ್

ನಟ: ಶಾರುಖ್ ಖಾನ್

ನಿರ್ದೇಶನ: ಕರಣ್ ಜೋಹರ್

ಲೇಖಕ: ಚೇತನ್ ಭಗತ್

**ವಿಶ್ವದ ಅಸುರಕ್ಷಿತ ಏರ್ ಲೈನ್ ಗಳ ಪಟ್ಟಿಯಲ್ಲಿ ಏರ್ ಇಂಡಿಯಾಗೆ ಸ್ಥಾನ**

ಹ್ಯಾಂಬರ್ಗ್ ಮೂಲದ "ಜೆಟ್ ಏರ್ ಲೈನರ್ ಕ್ರಾಷ್ ಡಾಟಾ ಇವಾಲ್ಯೂಷನ್ ಸೆಂಟರ್ (Jet Airliner Crash Data Evaluation Centre)" ತಯಾರಿಸಿದ 60 ಸುರಕ್ಷಿತ ಏರ್ ಲೈನರ್ ಗಳ ಪಟ್ಟಿಯಲ್ಲಿ ಭಾರತದ ಏರ್ ಇಂಡಿಯಾ ಗೆ 58 ನೇ ಸ್ಥಾನ ಲಭಿಸಿದೆ.

- ವಿಶ್ವದ ಅಸುರಕ್ಷಿತ ಏರ್ ಲೈನರ್ ಗಳ ಪಟ್ಟಿಯಲ್ಲಿ ಚೀನಾ ಏರ್ ಲೈನ್ ಮತ್ತು ಟಿಎಎಂ ಏರ್ ಲೈನರ್ ಗಳು ಪ್ರಥಮ ಹಾಗೂ ದ್ವತೀಯ ಸ್ಥಾನದಲ್ಲಿವೆ. ಏರ್ ಇಂಡಿಯಾಗೆ 3 ನೇ ಸ್ಥಾನ ಲಭಿಸಿದೆ.
- ಸುರಕ್ಷಿತ ವಿಮಾನಗಳ ಪಟ್ಟಿಯಲ್ಲಿ ಫಿನ್ ಏರ್ ಪ್ರಥಮ ಸ್ಥಾನದಲ್ಲಿದೆ, ತದ ನಂತರದ ಸ್ಥಾನವನ್ನು ಏರ್ ನ್ಯೂಜಿಲ್ಯಾಂಡ್, ಕ್ಯಾಥಿ ಪೆಸಿಫಿಕ್ ಮತ್ತು ಎಮಿರೈಟ್ಸ್ ಪಡೆದುಕೊಂಡಿವೆ.
- ಈ ಪಟ್ಟಿಯ ಅಗ್ರಸ್ಥಾನದಲ್ಲಿರುವ 9 ವಿಮಾನಗಳು ಕಳೆದ 30 ವರ್ಷದಲ್ಲಿ ಯಾವುದೇ ಅಪಘಾತವಾಗಲಿ, ಅಥವಾ ಇನ್ಯಾವುದೇ ಸಮಸ್ಯೆಗಳನ್ನು ಎದುರಿಸಿಲ್ಲ ಎಂದು ಸಂಸ್ಥೆ ತಿಳಿಸಿದೆ.

**ಮೂರನೇ ರಾಷ್ಟ್ರೀಯ ಮತದಾರದ ದಿನ ಆಚರಣೆ**

ಭಾರತ ಚುನಾವಣಾ ಆಯೋಗ ಜನವರಿ 25 ರಂದು ಮೂರನೇ ರಾಷ್ಟ್ರೀಯ ಮತದಾರರ ದಿನಾಚರಣೆಯನ್ನು ದೇಶ ವ್ಯಾಪ್ತಿ ಆಚರಿಸಿತು. ಈ ಭಾರಿಯ ಮತದಾರದ ದಿನ ದ ಥೀಮ್ "ಇನ್ ಕ್ಲೂಷನ್ (Inclusion)". ಹೊಸದಾಗಿ ಸುಮಾರು 2.32 ಕೋಟಿ ಮತದಾರರನ್ನು ಈ ಭಾರಿ ಮತ ಪಟ್ಟಿಯಲ್ಲಿ ಸೇರಿಸಲಾಗಿದೆ. ಅದರಲ್ಲಿ 93 ಲಕ್ಷ 18 ರಿಂದ 19 ವಯಸ್ಸನವರನ್ನು ನೊಂದಾಯಿಸಲಾಗಿದೆ. ಹೊಸ ಸೇರ್ಪಡೆಯಿಂದ ದೇಶದಲ್ಲಿ ಸದ್ಯ ಮತದಾರರ ಸಂಖ್ಯೆ 77.78 ಕೋಟಿಗೆ ಏರಿಕೆಯಾಗಿದೆ.

- ಭಾರತ ಚುನಾವಣಾ ಆಯೋಗವನ್ನು ಸ್ಥಾಪಿಸಿದ ದಿನವಾದ ಜನವರಿ 25 (ಜನವರಿ 25,1950) ನ್ನು 2011 ರಿಂದ ರಾಷ್ಟ್ರೀಯ ಮತದಾರರ ದಿನವನ್ನಾಗಿ ಆಚರಿಸಲಾಗುತ್ತಿದೆ.
- ಯುವ ಜನತೆಯಲ್ಲಿ ಮತದಾನದ ಮಹತ್ವವನ್ನು ತಿಳಿಸಿ, ಚುನಾವಣೆಯಲ್ಲಿ ಸಕ್ರಿಯವಾಗಿ ಪಾಲ್ಗೊಳ್ಳುವಂತೆ ಅರಿವು ಮೂಡಿಸುವ ಸಲುವಾಗಿ ಆಚರಣೆಯನ್ನು ದೇಶ ವ್ಯಾಪ್ತಿ ಹಮ್ಮಿಕೊಳ್ಳಲಾಗುತ್ತಿದೆ.
- ವಿ.ಎಸ್. ಸಂಪತ್ ಕುಮಾರ್ ಭಾರತ ಚುನಾವಣಾ ಆಯೋಗದ ಮುಖ್ಯ ಚುನಾವಣಾಧಿಕಾರಿಗಳು.

**ಈಶಾನ್ಯದ ಮೂರು ರಾಜ್ಯಗಳು ವಿದೇಶಿ ಪ್ರವಾಸಿಗರಿಗೆ ಮುಕ್ತ**

ಈಶಾನ್ಯ ರಾಜ್ಯಗಳಲ್ಲಿ ಸುಮಾರು 50 ವರ್ಷಗಳಿಂದ ಜಾರಿಯಲ್ಲಿದ್ದ ನಿಯಮವೊಂದನ್ನು ಕೇಂದ್ರ ಸರ್ಕಾರ ಸಡಿಲಗೊಳಿಸಿದೆ. ಪ್ರವಾಸೋದ್ಯಮ ಉತ್ತೇಜನಕ್ಕಾಗಿ ಈ ನಿರ್ಧಾರ ಕೈಗೊಳ್ಳಲಾಗಿದೆ. ಈ ಹಿಂದೆ ಇದ್ದ ನಿಯಮದ ಪ್ರಕಾರ ವಿದೇಶಿಯರು ಈ ಸ್ಥಳಗಳಿಗೆ ಭೇಟಿ ನೀಡವುದಕ್ಕೆ ಮುನ್ನ ಕೇಂದ್ರ ಗೃಹ ಸಚಿವಾಲಯದಿಂದ ಅನುಮತಿ ಪಡೆಯುವುದು ಕಡ್ಡಾಯವಾಗಿತ್ತು ಆದರೆ ಈಗ ಅನುಮತಿ ಪಡೆಯುವ ಅವಶ್ಯಕತೆ ಇರುವುದಿಲ್ಲ.

**ಯಾವ ಯಾವ ರಾಜ್ಯಗಳಲ್ಲಿ?**

ಮಿಜೋರಾಂ, ನಾಗಾಲ್ಯಾಂಡ್ ಮತ್ತು ಮಣಿಪುರ ರಾಜ್ಯಗಳಲ್ಲಿ ಈ ನಿಯಮ ಅನ್ವಯವಾಗಲಿದೆ.

ಯಾವ ನಿಯಮದಡಿ ನಿರ್ಬಂಧ ಹೇರಲಾಗಿತ್ತು?

ವಿದೇಶಿ ನಿಯಮ -1952 ರ ಪ್ರಕಾರ ದೇಶದ ಕೆಲವು ಭಾಗಗಳನ್ನು ರಕ್ಷಿತ ವಲಯಗಳೆಂದು ಕೇಂದ್ರ ಸರ್ಕಾರ ಘೋಷಿಸುವ ಮೂಲಕ ಈ ಭಾಗಗಳಿಗೆ ವಿದೇಶಿಯರು ಭೇಟಿ ಮಾಡುವ ಮುನ್ನ ಕೇಂದ್ರ ಗೃಹ ಸಚಿವಾಲಯದ ಅನುಮತಿ ಪಡೆಯುವುದು ಕಡ್ಡಾಯವಾಗಿತ್ತು. ಈಶಾನ್ಯ ರಾಜ್ಯಗಳಾದ ಅಸ್ಸಾಂ, ಮಣಿಪುರ, ನಾಗಲ್ಯಾಂಡ್, ರಾಜಸ್ತಾನ ಮತ್ತು ಹಿಮಾಚಲ ಪ್ರದೇಶದ ಕೆಲವು ಭಾಗಗಳನ್ನು ಈ ನಿಯಮದಡಿ ತರಲಾಗಿದೆ.

**ನಿರ್ಬಂಧ ಹಿಂತೆಗಿರುವ ಕಾರಣವೇನು?**

- ಇತ್ತೀಚೆಗೆ ಗುವಾಹಟಿಯಲ್ಲಿ ನಡೆದ ಪ್ರಥಮ ಅಂತರ್ ರಾಷ್ಟ್ರೀಯ ಪ್ರವಾಸಿಮೇಳದಲ್ಲಿ ಕೇಂದ್ರ ಪ್ರವಾಸೋದ್ಯಮ ಸಚಿವರಾದ ಕೆ.ಚಿರಂಜೀವಿ ಈ ನಿರ್ಣಯದ ಬಗ್ಗೆ ಒಲವನ್ನು ವ್ಯಕ್ತಪಡಿಸಿದ್ದರು. ಈಶಾನ್ಯ ರಾಜ್ಯಗಳು ಅದರಲ್ಲೂ ಈ ಮೂರು ರಾಜ್ಯಗಳಲ್ಲಿ ಪ್ರವಾಸೋದ್ಯಮವನ್ನು ಉತ್ತೇಜಿಸಿ ಭಾರಿ ವರಮಾನ ನಿರೀಕ್ಷಿಸಲಾಗಿದೆ.
- ಇತ್ತೀಚಿನ ಅಂಶಗಳ ಪ್ರಕಾರ ಈ ಭಾಗಗಳಿಗೆ ಭೇಟಿ ಮಾಡಿರುವ ವಿದೇಶಿ ಪ್ರವಾಸಿಗರ ಸಂಖ್ಯೆ ಸಹ ಗಣನೀಯವಾಗಿ ಹೆಚ್ಚಾಗಿದೆ. ಈ ಕಾರಣದಿಂದಾಗಿ ಗೃಹ ಸಚಿವಾಲಯ ತನ್ನ ನಿಯಮವನ್ನು ಸಡಿಲಗೊಳಿಸಿದೆ.

## ಮಧುಮೇಹ ದಕ್ಷಿಣ ಭಾರತದಲ್ಲಿ ಅತಿ ಹೆಚ್ಚು

ಆರೋಗ್ಯ ಸಚಿವಾಲಯದ ಅಂಕಿ ಅಂಶಗಳ ಪ್ರಕಾರ ಮಧುಮೇಹ ಮತ್ತು ಅಧಿಕ ಒತ್ತಡಕ್ಕೆ ತುತ್ತಾಗಿರುವವರ ಸಂಖ್ಯೆ ದಕ್ಷಿಣ ಭಾರತದಲ್ಲಿ ಅತಿ ಹೆಚ್ಚು ಎಂಬ ಅಂಶವನ್ನು ಬೆಳಕಿಗೆ ತಂದಿದೆ. ಕೇವಲ ಶ್ರೀಮಂತರಿಗೆ ಮಾತ್ರ ಸೀಮಿತವಾಗಿದ್ದ ಈ ಕಾಯಿಲೆಗಳು ನಗರ ಪ್ರದೇಶದ ಕೊಳಚೆ ನಿವಾಸಿಗಳಲ್ಲು ಕಂಡು ಬಂದಿರುವುದು ಆಘಾತಕಾರಿ ಅಂಶವಾಗಿದೆ.

ಅಂಕಿ ಅಂಶ ಏನು ಹೇಳುತ್ತದೆ?

- ವರದಿಯ ಪ್ರಕಾರ ಚೆನ್ನೈನಲ್ಲಿ ವಾಸಿಸುತ್ತಿರುವ ಕೊಳವೆ ನಿವಾಸಿಗಳಲ್ಲಿ ಪ್ರತಿ ನಾಲ್ವರಲ್ಲಿ ಒಬ್ಬರು ಮಧುಮೇಹದಿಂದ ಬಳಲುತ್ತಿದ್ದಾರೆ. ರಾಷ್ಟ್ರ ಮಟ್ಟಕ್ಕೆ ಹೋಲಿಸಿದರೆ ಇದು ಮೂರು ಪಟ್ಟು ಹೆಚ್ಚಾಗಿದೆ.
- ಬೆಂಗಳೂರಿನಲ್ಲಿ ಶೇ.14.77%, ಅಹಮಾಬಾದ್ ನಲ್ಲಿ ಶೇ.13.77% ರಷ್ಟು ಜನ ಮಧುಮೇಹಕ್ಕೆ ತುತ್ತಾಗಿದ್ದರೆ. ದೇಶದ ರಾಜಧಾನಿ ದೆಹಲಿಯಲ್ಲಿ ಶೇ.5.02% ರಷ್ಟಿದ್ದು, ಅತಿ ಕಡಿಮೆ ದಾಖಲಾಗಿದೆ.
- ತಜ್ಞನರ ಪ್ರಕಾರ ಅಸಮರ್ಪಕ ಆಹಾರ ಸೇವನೆ ಕ್ರಮ ಮತ್ತು ಜೀವನ ಶೈಲಿಯೇ ಮಧುಮೇಹ ಮತ್ತು ಅಧಿಕ ಒತ್ತಡಕ್ಕೆ ಕಾರಣವಾಗಿದೆ.

## ಚುನಾವಣಾ ಆಯೋಗಕ್ಕೆ SC/ST ಕ್ಷೇತ್ರ ಮೀಸಲಾತಿ ಕಲ್ಪಿಸುವ ಮತ್ತು ಹಿಂಪಡೆಯುವ ಅಧಿಕಾರ

ಭಾರತ ಚುನಾವಣಾ ಆಯೋಗಕ್ಕೆ ಮತದಾನ ಕ್ಷೇತ್ರಗಳಿಗೆ ಎಸ್.ಸಿ ಮತ್ತು ಎಸ್.ಟಿ ಮೀಸಲಾತಿಯನ್ನು ಕಲ್ಪಿಸುವ ಮತ್ತು ಮೀಸಲಾತಿಯನ್ನು ರದ್ದುಪಡಿಸುವ ಅಧಿಕಾರವನ್ನು ಕೇಂದ್ರ ಸಚಿವ ಸಂಪುಟ ಒಪ್ಪಿಗೆ ನೀಡಿದೆ. ಈ ಮೊದಲು ಕ್ಷೇತ್ರ ಪುನರ್ ವಿಂಗಡಣಾ ಸಮಿತಿಯ (Delimitation) ವರದಿಯ ನಂತರವೇ ಮೀಸಲಾತಿಯನ್ನು ನಿಗದಿಪಡಿಸಲಾಗುತ್ತಿತ್ತು.

- ಇತ್ತೀಚೆಗೆ ಉತ್ತರ ಪ್ರದೇಶ ಸರ್ಕಾರ ಸುಮಾರು 10 SC ಗೆ ಸೇರಿದ ಜಾತಿಗಳನ್ನು ST ಪಟ್ಟಿಗೆ ಸೇರಿಸಿತ್ತು. ಈ ಕ್ರಮದಿಂದ 1 ಲಕ್ಷ ಜನರಿದ್ದ ST ಸಮುದಾಯದ ಸಂಖ್ಯೆ 6 ಲಕ್ಷಕ್ಕೆ ಹೇರಿದ ಕಾರಣ ಈ ಮತದಾನ ಕ್ಷೇತ್ರವನ್ನು ST ಗೆ ಮೀಸಲಿಡುವಂತೆ ಅಲ್ಲಿನ ಜನತೆ ತೀವ್ರ ಒತ್ತಡ ತಂದಿದ್ದರು.
- ಈ ವಿಚಾರಣೆಯನ್ನು ಕೈಗೆತ್ತಿಕೊಂಡ ಸುಪ್ರೀಂ ಕೋರ್ಟ್ ಚುನಾವಣಾ ಆಯೋಗಕ್ಕೆ ಈ ಅಧಿಕಾರವನ್ನು ನೀಡುವಂತೆ ಸರ್ಕಾರಕ್ಕೆ ಆದೇಶಿಸಿತ್ತು.

**ಕ್ಷೇತ್ರ ಪುನರ್ ವಿಂಗಡಣೆ ಆಯೋಗ?**

ಕ್ಷೇತ್ರ ಪುನರ್ ವಿಂಗಡಣೆ (Delimitation Commission) ಆಯೋಗವನ್ನು, ಕ್ಷೇತ್ರ ಪುನರ್ ವಿಂಗಡಣಾ ಕಾಯ್ದೆಯ ಪ್ರಕಾರ ಸ್ಥಾಪಿಸಲಾಗಿದೆ. ಜನಗಣತಿಯ ಆಧಾರದ ಮೇಲೆ ಲೋಕಸಭಾ ಮತ್ತು ವಿಧಾನ ಸಭಾ ಕ್ಷೇತ್ರಗಳನ್ನ ಪುನರ್ ರಚಿಸುವುದು ಈ ಆಯೋಗದ ಮುಖ್ಯ ಕಾರ್ಯವಾಗಿದೆ. ಈ ಆಯೋಗದ ಆದೇಶವನ್ನು ಯಾವುದೇ ನ್ಯಾಯಾಲಯಗಳಲ್ಲಿ ಪ್ರಶ್ನಿಸುವಂತಿಲ್ಲ.

**ಇಲ್ಲಿಯವರೆಗೆ ರಚಿಸಲಾದ ಆಯೋಗಗಳು:-**

- 1952, 1963, 1973 ಮತ್ತು 2002 ರಲ್ಲಿ ಒಟ್ಟು ನಾಲ್ಕು ಭಾರಿ ಪುನರ್ ವಿಂಗಡಣಾ ಆಯೋಗವನ್ನು ರಚಿಸಲಾಗಿದೆ.
- ಇತ್ತೀಚೆಗೆ ರಚಿಸಲಾದ ಆಯೋಗವೆಂದರೆ 2002 ರಲ್ಲಿ **ನ್ಯಾಯಮೂರ್ತಿ ಕುಲದೀಪ್ ಸಿಂಗ್** ರವರ ಅಧ್ಯಕ್ಷತೆಯಲ್ಲಿ ರಚಿಸಿರುವುದು. ಈ ಆಯೋಗದ ವರದಿಯನ್ನು ಮೇ 2008 ರಲ್ಲಿ ಅಂದಿನ ರಾಷ್ಟ್ರಪತಿಗಳಾದ ಪ್ರತಿಭಾ ಪಾಟೀಲ್ ರವರು ಅಂಗೀಕರಿಸಿದ್ದರು.
- 2008 ರಲ್ಲಿ ಕರ್ನಾಟಕದಲ್ಲಿ ನಡೆದ ವಿಧಾನ ಸಭೆ ಚುನಾವಣೆ ಈ ಆಯೋಗದ ಕ್ಷೇತ್ರ ಪುನರ್ ವಿಂಗಡಣೆಯ ನಂತರ ನಡೆದ ಮೊದಲ ಚುನಾವಣೆಯಾಗಿದೆ.

**ತ್ರಿಪುರದ ಮಾಣಿಕ್ ಸರ್ಕಾರ್ ದೇಶದ ಬಡ ಮುಖ್ಯಮಂತ್ರಿ**

ತ್ರಿಪುರದಲ್ಲಿ ಸತತ 15 ವರ್ಷಗಳಿಂದ ಆಳ್ವಿಕೆ ನಡೆಸುತ್ತಿರುವ ಮಾಣಿಕ್ ಸರ್ಕಾರ್ ರವರು ಈಗ ದೇಶದ ಬಡ ಮುಖ್ಯಮಂತ್ರಿ ಎಂಬ ಖ್ಯಾತಿ ಪಡೆದಿದ್ದಾರೆ. ನಾಲ್ಕನೇ ಭಾರಿಗೆ ಅಧಿಕಾರ ಹಿಡಿಯಲು ಸಜ್ಜಾಗುತ್ತಿರುವ ಮಾಣಿಕ್ ರವರ ಎಲ್ಲಾ ವಿಧದ ಆಸ್ತಿಯ ಮೊತ್ತ ಕೇವಲ 2.5 ಲಕ್ಷ ರೂಪಾಯಿ ಮಾತ್ರ.

- ಧಾನ್ ಪುರ ಕ್ಷೇತ್ರದಿಂದ ಸ್ಪರ್ಧಿಸಲು ನಾಮಪತ್ರ ಸಲ್ಲಿಸಿರುವ ಸರ್ಕಾರ್ ತಮ್ಮ ಬಳಿ ಕೇವಲ ರೂ.1080 ನಗದು ಹಾಗೂ ಬ್ಯಾಂಕ್ ಖಾತೆಯಲ್ಲಿ ರೂ.9720 ಇರುವುದಾಗಿ ತಿಳಿಸಿದ್ದಾರೆ. ತಮ್ಮ ತಾಯಿಯಿಂದ ಬಂದಿರುವ ಮನೆಯ ಮೌಲ್ಯ 2.2 ಲಕ್ಷ ರೂಗಳು ಎಂದು ಹೇಳಿದ್ದಾರೆ.
- ಕೇವಲ 9,200 ರೂಪಾಯಿ ಸಂಬಳ ಪಡೆಯುತ್ತಿರುವ ಸರ್ಕಾರ್ ಬರಿ ರೂ.5000 ತಮ್ಮ ಖರ್ಚಿಗೆ ಬಳಸಿ ಉಳಿದ್ದದನ್ನು ಪಕ್ಷದ ಖರ್ಚಿಗೆ ನೀಡುತ್ತಿದ್ದಾರೆ. ಇವರ ಪ್ರಾಮಾಣಿಕತೆಯನ್ನು ಪ್ರತಿಪಕ್ಷಗಳು ಕೂಡ ಹೊಗಳುತ್ತಿವೆ.
- ಸರ್ಕಾರ್ ರವರಿಗಿಂತ ಅವರ ಪತ್ನಿ ಶ್ರೀಮಂತರಾಗಿದ್ದರೆ, ಸರ್ಕಾರಿ ನೌಕರಿಯಿಂದ ಇತ್ತೀಚೆಗೆ ನಿವೃತ್ತಿ ಹೊಂದಿರುವ ಅವರ ಒಟ್ಟಾರೆ ಆಸ್ತಿ 24, 53, 395 ರೂಪಾಯಿಗಳು.

**ವಾಲ್ ಮಾರ್ಟ್ ಕಂಪನಿ ಲಾಬಿ ಆರೋಪ: ಏಕಸದಸ್ಯ ಸಮಿತಿ ರಚನೆಗೆ ಕೇಂದ್ರ ನಿರ್ಧಾರ**

ಅಮೆರಿಕಾ ಮೂಲದ ವಾಲ್ ಮಾರ್ಟ್ ಕಂಪನಿಯು ದೇಶದ ಮಾರುಕಟ್ಟೆಗೆ ಹೆಜ್ಜೆ ಇಡಲು ಲಾಬಿ ನಡೆಸಿದೆ ಎನ್ನುವ ಆರೋಪ ಕುರಿತು ವಿಚಾರಣೆಯನ್ನು ಕೈಗೊಳ್ಳಲು ಏಕ ಸದಸ್ಯರ ಸಮಿತಿಯೊಂದನ್ನು ರಚಿಸಲು ಕೇಂದ್ರ ಸರ್ಕಾರ ತಿರ್ಮಾನಿಸಿದೆ.

- ಅಮೆರಿಕಾ ದೇಶಕ್ಕೆ ಸೇರಿದ ಕಂಪನಿಯಾದ ವಾಲ್ ಮಾರ್ಟ್ ಭಾರತದ ಮಾರುಕಟ್ಟೆಯಲ್ಲಿ ಜಾಗ ಪಡೆಯಲು ಲಾಬಿ ಚಟುವಟಿಕೆ ಮಾಡಿರುವ ಬಗ್ಗೆ ಅಮೆರಿಕಾದ ಸೆನೆಟ್ ಎದುರು ಬಹಿರಂಗ ಮಾಡಿರುವ ಸುದ್ದಿ ಇತ್ತೀಚೆಗೆ ಪತ್ರಿಕೆಗಳಲ್ಲಿ ವರದಿಯಾಗಿತ್ತು. ಭಾರತದ ಕಾನೂನಿಗೆ ವಿರುದ್ಧವಾಗಿ ಈ ಕಂಪನಿ ಏನಾದರೂ ಚಟುವಟಿಕೆ ನಡೆಸಿದೆಯೇ ಎಂಬುದರ ಬಗ್ಗೆ ಈ ಸಮಿತಿ ವಿಚಾರಣೆ ನಡೆಸಲಿದೆ.

ಸಮಿತಿಯ ಅಧ್ಯಕ್ಷರು ಯಾರು?

- ಸುಪ್ರೀಂ ಕೋರ್ಟ್ ಅಥವಾ ಹೈಕೋರ್ಟ್ ನ ನಿವೃತ್ತ ಮುಖ್ಯ ನ್ಯಾಯಾಧೀಶರು ವಿಚಾರಣೆ ಸಮಿತಿಯ ನೇತೃತ್ವ ವಹಿಸಲ್ಲಿದ್ದಾರೆ.
- ಈ ಸಮಿತಿಗೆ ಮೂರು ತಿಂಗಳ ಒಳಗೆ ವರದಿ ಸಲ್ಲಿಸಲು ಸರ್ಕಾರ ಸೂಚಿಸಿದೆ.

**ಬಾಲಕಿಯರಿಗೆ ಐರನ್ ಪೋಲಿಕ್ ಟ್ಯಾಬ್ಲೆಟ್ ನೀಡುವ ಯೋಜನೆ: ಶೀಘ್ರವೇ ಆರಂಭ**

ದೇಶದ ಸುಮಾರು 13 ಕೋಟಿ ಬಾಲಕಿಯರಿಗೆ ಐರನ್ ಪೋಲಿಕ್ ಟ್ಯಾಬ್ಲೆಟ್ (Iron Folic Tablet) ನೀಡುವ ಯೋಜನೆಯನ್ನು ಶೀಘ್ರದಲ್ಲಿ ಆರಂಭಿಸುವುದಾಗಿ ಕೇಂದ್ರ ಸರ್ಕಾರ ತಿಳಿಸಿದೆ. 10 ರಿಂದ 19 ವಯಸ್ಸಿನ ಬಾಲಕಿಯರಿಗೆ ವಾರದ ಪ್ರತಿ ಸೋಮವಾರದಂದು ಈ ಮಾತ್ರೆಗಳನ್ನು ನೀಡಲಾಗುವುದು.

- ಆರೋಗ್ಯ ಸಚಿವಾಲಯವು ಮುಂದಿನ ಮೂರು ತಿಂಗಳಲ್ಲಿ ಈ ಯೋಜನೆಯನ್ನು ಜಾರಿಗೊಳಿಸಲಿದ್ದು, ಸುಮಾರು 6 ಕೋಟಿ ಬಾಲಕಿಯರಿಗೆ ಶಾಲೆಯ ಒಳಗೆ ಮತ್ತು ಸುಮಾರು 6 ರಿಂದ 7 ಕೋಟಿ ಬಾಲಕಿಯರಿಗೆ ಶಾಲೆಯ ಹೊರಗೆ ಈ ಮಾತ್ರೆಗಳನ್ನು ನೀಡಲಾಗುವುದೆಂದು ರಾಷ್ಟ್ರೀಯ ಗ್ರಾಮೀಣ ಆರೋಗ್ಯ ಅಭಿಯಾನದ ನಿರ್ದೇಶಕಿಯಾದ ಅನುಪಮ್ ಗುಪ್ತ ತಿಳಿಸಿದ್ದಾರೆ. ಅಷ್ಟೇ ಅಲ್ಲದೆ, ಈ ಯೋಜನೆಯಲ್ಲಿ ಪ್ರೌಢವ್ಯಸ್ಥೆಯಲ್ಲಿರುವ ಬಾಲಕಿಯರಿಗೆ ಅಲ್ಬೆಂಡಜೋಲ್ (Albedazole 400 mg) ಮಾತ್ರೆಗಳನ್ನು ಸಹ ನೀಡಲಾಗುವುದೆಂದು ಅವರು ಈ ಸಂದರ್ಭದಲ್ಲಿ ತಿಳಿಸಿದ್ದಾರೆ.

**ಐರನ್ ಪೋಲಿಕ್ ಟ್ಯಾಬ್ಲೆಟ್**

- ಇತ್ತೀಚಿನ ಸಂಶೋಧನೆಗಳ ಪ್ರಕಾರ ಐರನ್ ಪೋಲಿಕ್ ಮಾತ್ರೆಗಳ ಸೇವನೆಯಿಂದ ಗರ್ಭಿಣಿಯರಲ್ಲಿ ತೀವ್ರವಾಗಿ ಕಾಡುವ ಅನಿಮೀಯಾ ಕಾಯಿಲೆಯನ್ನು ತಡೆಗಟ್ಟಬಹುದಾಗಿದೆ. ಅಲ್ಲದೆ ಈ ಮಾತ್ರಗಳ ಸೇವನೆಯಿಂದ ಶಿಶು ಮರಣ ಪ್ರಮಾಣವು ತಗ್ಗಲಿದೆ ಎಂದು ತಿಳಿದು ಬಂದಿದೆ.
- ರಕ್ತದಲ್ಲಿರುವ ಕೆಂಪು ರಕ್ತ ಕಣಗಳು ಗರ್ಭವಾಸ್ಥೆಯಲ್ಲಿ ಗಣನೀಯವಾಗಿ ಕಡಿಮೆಯಾಗುವುದರಿಂದ, ದೇಹಕ್ಕೆ ಆಮ್ಲಜನಕದ ಕೊರತೆ ಉಂಟಾಗುತ್ತದೆ. ಈ ಕೊರತೆಯನ್ನು ಹೋಗಲಾಡಿಸಲು ಗರ್ಭಿಣಿ ಸ್ತ್ರೀಯರು ಇತರೆ ಸ್ತ್ರೀಯರಿಗಿಂತ ನಾಲ್ಕು ಪಟ್ಟು ಇಂತಹ ಮಾತ್ರೆಗಳನ್ನು ಸೇವಿಸುವುದ ಅತಿ ಅವಶ್ಯಕವಾಗಿದೆ.

**ಭಾರತ – ಬಾಂಗ್ಲ ಮಹತ್ವದ ಒಪ್ಪಂದಕ್ಕೆಸಹಿ**

ಭಾರತದ ಗೃಹ ಸಚಿವರಾದ ಸುಶೀಲ್ ಕುಮಾರ್ ಶಿಂಧೆ ಮತ್ತು ಬಾಂಗ್ಲದ ಗೃಹಮಂತ್ರಿಗಳಾದ ಡಾ.ಮಯೂದ್ದೀನ್ ಖಾನ್ ಅಲಂಗಿರ್ ರವರು ಅಪರಾಧಿಗಳನ್ನು ಹಸ್ತಾಂತರಿಸುವ ಮತ್ತು ಪರಿಷ್ಕೃತ ಪ್ರಯಾಣ ವ್ಯವಸ್ಥೆ (Extradition Treaty and Revised Travel Arrangements ) ಒಪ್ಪಂದಕ್ಕೆ ಸಹಿ ಹಾಕಿದರು. ಈ ಒಪ್ಪಂದವೂ ಉಭಯ ದೇಶಗಳ ನಡುವೆ ಕಾನೂನು ಸಹಕಾರ ಹೆಚ್ಚಿಸಲು ಮತ್ತು ಅಪರಾಧ ಚಟುವಟಿಕೆಗಳನ್ನು ನಿಗ್ರಹಿಸಲು ಸಹಕಾರಿಯಾಗಲಿದೆ ಮತ್ತು ಪರಿಷ್ಕೃತ ಪ್ರಯಾಣ ವ್ಯವಸ್ಥೆಯಿಂದ ವೀಸಾ ಪಡೆಯುವ ವಿಧಾನ ಸುಲಭಗೊಳ್ಳಲಿದೆ.

ಏನಿದು ಒಪ್ಪಂದ?

- ಈ ಒಪ್ಪಂದದ ಪ್ರಕಾರ ಉಭಯ ದೇಶಗಳು, ಶಿಕ್ಷೆಗೆ ಗುರಿಯಾದ ಮತ್ತು ವಿಚಾರಣಾಧೀನ ಕೈದಿಗಳನ್ನು ಹಸ್ತಾಂತರ ಮಾಡಿಕೊಳ್ಳಬಹುದಾಗಿದೆ. ಆದರೆ ರಾಜಕೀಯ ಕೈದಿಗಳನ್ನು ಈ ಒಪ್ಪಂದದಿಂದ ಹೊರಗಿಡಲಾಗಿದೆ.
- ಸಣ್ಣ ಪುಟ್ಟ ಅಪರಾಧ ಕೃತ್ಯಗಳಲ್ಲಿ ತೊಡಗಿದವರು ಮತ್ತು ಒಂದು ವರ್ಷ ಅವಧಿಯ ಶಿಕ್ಷೆಗೆ ಒಳಗಾದ ಅಪರಾಧಿಗಳಿಗೆ ಈ ಒಪ್ಪಂದ ಅನ್ವಯವಾಗುವುದಿಲ್ಲ.
- ಪರಿಷ್ಕೃತ ಪ್ರಯಾಣ ವ್ಯವಸ್ಥೆಯ ಅಡಿಯಲ್ಲಿ ವ್ಯಾಪಾರ ವಹಿವಾಟು, ಮತ್ತು ಸಂಬಂಧಿಕರನ್ನು ಬೇಟಿಮಾಡಲು ಪರಸ್ಪರ ರಾಷ್ಟ್ರಗಳಿಗೆ ತೆರಳುವ ನಾಗರಿಕರಿಗೆ ಮತ್ತು ವಿದ್ಯಾರ್ಥಿಗಳಿಗೆ ಇದ್ದ ವೀಸಾ ನೀತಿಯನ್ನು ಸಡಿಲಗೊಳಿಸಲಾಗಿದೆ.

**ಜನವರಿ 30: ಹುತಾತ್ಮರ ದಿನ**

ಪ್ರತಿ ವರ್ಷ ಜನವರಿ 30 ನ್ನು ಭಾರತದಲ್ಲಿ ಹುತಾತ್ಮರ ದಿನವನ್ನಾಗಿ ಆಚರಣೆ ಮಾಡಲಾಗುತ್ತಿದೆ. ಜನವರಿ 30, 1948 ರಲ್ಲಿ ಭಾರತದ ರಾಷ್ಟ್ರಪಿತ ಮಹಾತ್ಮ ಗಾಂಧೀಜಿ ಮೃತರಾದ ದಿನ. ಈ ದಿನದಂದು ಗಾಂಧೀಜಿ ನಾಥೂರಾಮ್ ಗೂಡ್ಸೆಯ ಗುಂಡೇಟಿಗೆ ಬಲಿಯಾಗಿದ್ದರು, ಆದ್ದರಿಂದ ಈ ದಿನಕ್ಕೆ ರಾಷ್ಟ್ರ ಮನ್ನಣೆ ದೊರೆತಿದೆ. ಈ ದಿನದಂದು ಬೆಳಗಿನ ಸಮಯ 11 ಗಂಟೆಗೆ ಸರಿಯಾಗಿ 2 ನಿಮಿಷಗಳ ಕಾಲ ಮೌನಚರಣೆ ಮಾಡಲಾಗುತ್ತದೆ.

- ಮಾ.23 ರಂದು ಭಗತ್ ಸಿಂಗ್, ಸುಖದೇವ್ ಮತ್ತು ರಾಜ ಗುರು ರವರನ್ನು ಗಲ್ಲಿಗೇರಿಸಿದ ದಿನ ಆಗಿರುವುದರಿಂದ ಈ ದಿನವನ್ನು ಹುತಾತ್ಮರ ದಿನವೆಂದು ಪರಿಗಣಿಸಲಾಗುತ್ತದೆ.
- ಒರಿಸ್ಸಾದಲ್ಲಿ ಲಾಲಾ ಲಜಪತ್ ರಾಯ್ ರವರ ಪುಣ್ಯ ತಿಥಿಯಾದ ನವೆಂಬರ್ 17 ನ್ನು ಹುತಾತ್ಮರ ದಿನವೆಂದು ಆಚರಿಸಲಾಗುತ್ತದೆ.

**ನವೀಕರಿಸಬಹುದಾದ ಇಂಧನ ಅಭಿವೃದ್ಧಿಗೆ ಭಾರತ ಮತ್ತು ಸ್ಪೇನ್ ಒಪ್ಪಿಗೆ**

ನವೀಕರಿಸಬಹುದಾದ ಇಂಧನ ಕ್ಷೇತ್ರದಲ್ಲಿ ಸಂಶೋಧನೆ, ಸಹಕಾರ ಮತ್ತು ತಂತ್ರಜ್ಞಾನ ವಿನಿಮಯ ಮತ್ತು ಅಭಿವೃದ್ಧಿ ಮಾಡುವ ಸಲುವಾಗಿ ಭಾರತ ಮತ್ತು ಸ್ಪೇನ್ ಒಪ್ಪಿಗೆ ಸೂಚಿಸಿವೆ. ಕೇಂದ್ರ ಹೊಸ ಮತ್ತು ನವೀಕರಿಸಬಹುದಾದ ಇಂಧನ ಸಚಿವರಾದ ಫಾರಕ್ ಅಬ್ದುಲ್ಲ ರವರು, ಭಾರತಕ್ಕೆ ಬೇಟಿ ನೀಡಿರುವ ಸ್ಪೇನ್ ಸಚಿವರಾದ ಕಾರ್ಮೆನ್ ವೆಲ ಒಲ್ಮೊ (Carmen Vela Olmo) ರವರ

ಜೊತೆ ನಡೆಸಿದ ಸಭೆಯಲ್ಲಿ ಈ ನಿರ್ಣಯ ಕೈಗೊಳ್ಳಲಾಯಿತು. ಅಲ್ಲದೇ, ಪವನ ವಿದ್ಯುತ್ ಮತ್ತು ಕಡಿಮೆ ವೆಚ್ಚದ ಸೌರ ಕೋಶಗಳ ಅಭಿವೃದ್ಧಿಗೆ ಉಭಯ ದೇಶಗಳು ಧನ ಸಹಾಯ ಮಾಡಲು ಒಪ್ಪಿಗೆ ನೀಡಿವೆ. ನವೀಕರಿಸಬಲ್ಲ ಇಂಧನ ಕ್ಷೇತ್ರದಲ್ಲಿ ತಾಂತ್ರಿಕ ಸಹಕಾರ ವೃದ್ಧಿಸುವ ಜಂಟಿ ಇಂಡೋ-ಸ್ಪಾನಿಶ್ ಕಾರ್ಯಕ್ರಮಕ್ಕೆ ಕಳೆದ ವರ್ಷ ಭಾರತದ ಹೊಸ ಮತ್ತು ನವೀಕರಿಸಬಹುದಾದ ಇಂಧನ ಸಚಿವರು ಸ್ಪೇನ್ ಗೆ ಭೇಟಿ ನೀಡಿದ ಸಂದರ್ಭದಲ್ಲಿ ಸಹಿ ಹಾಕಲಾಗಿತ್ತು.

- ಸದ್ಯ ಪವನ ವಿದ್ಯುತ್ ಉತ್ಪಾದನೆಯಲ್ಲಿ ಭಾರತ 5 ನೇ ಸ್ಥಾನದಲ್ಲಿದ್ದರೆ, ಸ್ಪೇನ್ 4 ನೇ ಸ್ಥಾನದಲ್ಲಿದೆ.
- ಸ್ಪೇನ್ ಫೋಟೊವೋಲ್ಟಾಯಿಕ್ ಆಧಾರಿತ ಸೌರ ವಿದ್ಯುತ್ ಉತ್ಪಾದನೆಯಲ್ಲಿ ವಿಶ್ವದಲ್ಲೆ ಅಗ್ರ ಸ್ಥಾನದಲ್ಲಿದೆ.

**ಪತ್ರಿಕಾ ಸ್ವಾತಂತ್ರ್ಯ: ಭಾರತಕ್ಕೆ 140 ನೇ ಸ್ಥಾನ**

ರಿಪೋರ್ಟರ್ ವಿದೌಟ್ ಬಾರ್ಡರ್ (Reporter Without Border) ಇತ್ತೀಚೆಗೆ ಬಿಡುಗಡೆ ಮಾಡಿರುವ ವಿಶ್ವ ಪತ್ರಿಕಾ ಸ್ವಾತಂತ್ರ್ಯ 2013 ವರದಿಯ ಪ್ರಕಾರ ಭಾರತಕ್ಕೆ 140 ನೇ ಸ್ಥಾನ ಲಭಿಸಿದೆ. ವಿಶ್ವದ ಒಟ್ಟು 179 ರಾಷ್ಟ್ರಗಳ ಪೈಕಿ ಭಾರತಕ್ಕೆ ಈ ಸ್ಥಾನ ಲಭಿಸಿದ್ದು, ಕಳೆದ ಬಾರಿಗಿಂತ ಒಂಬತ್ತು ಸ್ಥಾನ ಕೆಳಕ್ಕೆ ಕುಸಿದಿದೆ.

- ಐರೋಪ್ಯ ದೇಶಗಳಾದ ಫಿನ್ ಲ್ಯಾಂಡ್, ನೆದರ್ ಲ್ಯಾಂಡ್ ಮತ್ತು ನಾರ್ವೆ ಕ್ರಮವಾಗಿ ಪ್ರಥಮ, ದ್ವಿತೀಯ ಹಾಗೂ ತೃತೀಯ ಸ್ಥಾನಗಳನ್ನು ಪಡೆದಿವೆ.
- ಉತ್ತರ ಕೊರಿಯಾ ಮತ್ತು ಎರಿಟ್ರಿಯಾ ದೇಶಗಳು ಅತಿ ಕಳಪೆ ಸಾಧನೆ ಮೂಲಕ ಕೆಳ ಸ್ಥಾನದಲ್ಲಿವೆ.
- ಚೀನಾ ದೇಶ 173 ನೇ ಸ್ಥಾನಗಳಿಸಿದ್ದು, ಕಳೆದು ಬಾರಿಗಿಂತ ಒಂದು ಸ್ಥಾನ ಮೇಲೇರಿದೆ.

ಭಾರತದ ಕಳಪೆ ಸಾಧನೆ ಏಕೆ?

- ರಿಪೋರ್ಟರ್ ವಿದೌಟ್ ಬಾರ್ಡರ್ (Reporter without Boarder) ವರದಿಯ ಪ್ರಕಾರ ಭಾರತದಲ್ಲಿ 2002 ರಿಂದ ಪತ್ರಕರ್ತರ ವಿರುದ್ಧ ದೌರ್ಜನ್ಯ ಪ್ರಕರಣಗಳ ಸಂಖ್ಯೆ ಹೆಚ್ಚುತ್ತಿದೆ. ಅಂತರ್ಜಾಲದ ಮೇಲೂ ನಿರಂತರವಾಗಿ ನಿರ್ಬಂಧ ವಿಧಿಸಲಾಗುತ್ತಿದೆ. ಭಾರತದಲ್ಲಿ ಪ್ರಮುಖವಾಗಿ ಜಮ್ಮು ಮತ್ತು ಕಾಶ್ಮೀರ ಮತ್ತು ಛತ್ತೀಸ್ ಗಢ್ ನಲ್ಲಿ ಪತ್ರಕರ್ತರ ಮೇಲೆ ದೌರ್ಜನ್ಯ ಪ್ರಕರಣಗಳು ಹೆಚ್ಚಿವೆ. ಇದೇ ಸಮಸ್ಯೆ ಚೀನಾದಲ್ಲೂ ಸಹ ಮುಂದುವರೆದಿರುವುದು ಚೀನಾ ತೀರ ಕೆಳ ಮಟ್ಟದಲ್ಲಿ ಸ್ಥಾನ ಪಡೆದಿರುವುದಕ್ಕೆ ನಿದರ್ಶನವಾಗಿದೆ.
- ಶ್ರೀಲಂಕಾದಲ್ಲಿ ಇತ್ತೀಚೆಗೆ "ಬ್ಲಾಕ್ ಜನವರಿ" ಎಂಬ ಶೀರ್ಷಿಕೆಯಡಿ ಪತ್ರಕರ್ತರು ಬೀದಿಗಿಳಿದು ಪ್ರತಿಭಟಿಸಿದ್ದನ್ನು ಇಲ್ಲಿ ಸ್ಮರಿಸಬಹುದು. ಕಳೆದ ನಾಲ್ಕು ವರ್ಷಗಳಲ್ಲಿ ಶ್ರೀಲಂಕಾದ ಪತ್ರಕರ್ತರ ಮೇಲೆ ಅನೇಕ ದಾಳಿ ನಡೆಸಿರುವ ಜೊತೆಗೆ, ಕೆಲವರನ್ನು ಕೊಲೆ ಸಹ ಮಾಡಲಾಗಿದ್ದರು, ಅಲ್ಲಿನ ಸರ್ಕಾರ ಯಾವುದೇ ಕ್ರಮವಹಿಸದೆ ಸುಮ್ಮನೆ ಕುಳಿತಿದೆ ಎಂದು ಪತ್ರಕರ್ತರು ಪ್ರತಿಭಟನೆ ನಡೆಸಿದ್ದರು.

**ಅಣ್ಣಾ ಹಜಾರೆ ಅತ್ಯಂತ ವಿಶ್ವಾಸಾರ್ಹ ವ್ಯಕ್ತಿ**

ಭ್ರಷ್ಟಾಚಾರದ ವಿರುದ್ಧ ದೇಶದಾದ್ಯಂತ ಸಮರ ಸಾರುತ್ತಿರುವ ಅಣ್ಣಾ ಹಜಾರೆ ಸತತ ಎರಡನೇ ಬಾರಿಗೆ ದೇಶದ ಅತ್ಯಂತ ವಿಶ್ವಾಸಾರ್ಹ ವ್ಯಕ್ತಿ ಎಂಬ ಹೆಗ್ಗಳಿಕೆಗೆ ಪಾತ್ರರಾಗಿದ್ದಾರೆ. "ಟ್ರಸ್ಟ್ ರಿಸರ್ಚ್ ಅಡ್ವೆಸರಿ" ಸಂಸ್ಥೆ ಒಟ್ಟು 211 ವಿಭಾಗಗಳಲ್ಲಿ ಸಮೀಕ್ಷೆ ನಡೆಸಿದ್ದು, ವ್ಯಕ್ತಿಗಳ ವಿಭಾಗದಲ್ಲಿ ಹಜಾರೆ ಅಗ್ರ ಸ್ಥಾನ ಪಡೆದಿದ್ದಾರೆ. ಎರಡನೇ ಮತ್ತು ಮೂರನೇ ಸ್ಥಾನದಲ್ಲಿ ನಟ ಅಮೀರ್ ಖಾನ್ ಮತ್ತು ಸಲ್ಮಾನ್ ಖಾನ್ ಸ್ಥಾನ ಪಡೆದಿದ್ದಾರೆ.

- ಕಳೆದ ಬಾರಿ 5 ನೇ ಸ್ಥಾನದಲ್ಲಿದ್ದ ಅಮೀರ್ ಖಾನ್ ಈ ಬಾರಿ ಎರಡನೇ ಸ್ಥಾನಕ್ಕೆ ಏರಿರುವುದು ವಿಶೇಷ.
- ರತನ್ ಟಾಟ 4 ನೇ, ಸಚಿನ್ 5 ನೇ, ಯೋಗ ಗುರು ರಾಮ್ ದೇವ್ 10 ನೇ, ರಾಷ್ಟ್ರಪಿತ ಮಹಾತ್ಮ ಗಾಂಧಿ 12 ನೇ ಮತ್ತು ನಟ ರಜನಿ ಕಾಂತ್ 13 ನೇ ಸ್ಥಾನದಲ್ಲಿದ್ದಾರೆ.
- ಮೊಬೈಲ್ ಹ್ಯಾಂಡ್ ಸೆಟ್ ನಿರ್ಮಾಣ ಕಂಪನಿ ನೋಕಿಯಾ ಅತ್ಯಂತ ವಿಶ್ವಾಸದ ಬ್ರಾಂಡ್ ಆಗಿ ಗುರುತಿಸಿಕೊಂಡಿದೆ.

**ರಾಷ್ಟ್ರೀಯ ಗ್ರಾಮೀಣ ಆರೋಗ್ಯ ಅಭಿಯಾನ ಕುರಿತಾದ ಹನ್ನೊಂದನೇ ಅಂತರ್ ರಾಷ್ಟ್ರೀಯ ಸಲಹಾ ಸಮಿತಿ ಸಭೆ**

ರಾಷ್ಟ್ರೀಯ ಗ್ರಾಮೀಣ ಆರೋಗ್ಯ ಅಭಿಯಾನ ಕುರಿತಾದ ಹನ್ನೊಂದನೇ ಅಂತರ್ ರಾಷ್ಟ್ರೀಯ ಸಲಹಾ ಸಮಿತಿ ಸಭೆಯನ್ನು ಇತ್ತೀಚೆಗೆ ನವ ದೆಹಲಿಯಲ್ಲಿ ಆಯೋಜಿಸಲಾಗಿತ್ತು. ಈ ಸಭೆಯ ಅಧ್ಯಕ್ಷತೆಯನ್ನು ಶ್ರೀ ಪ್ರಧಾನ್, ಕಾರ್ಯದರ್ಶಿಗಳು, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ರವರು ವಹಿಸಿದ್ದರು. ಅಂತರ್ ರಾಷ್ಟ್ರೀಯ ಸಲಹಾ ಸಮಿತಿ ಸದಸ್ಯರು ಮತ್ತು ಆರೋಗ್ಯ ಇಲಾಖೆಯ ಅಧಿಕಾರಿಗಳು ಈ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು. ಈ ಸಭೆಯಲ್ಲಿ ಶ್ರೀ ಪ್ರಧಾನ್ ರವರು ಹೇಳಲಾದ ಕೆಲವು ಉಪಯುಕ್ತ ಮಾಹಿತಿಗಳು ಇಲ್ಲಿವೆ

- ರಾಷ್ಟ್ರೀಯ ಗ್ರಾಮೀಣ ಆರೋಗ್ಯ ಅಭಿಯಾನ (National Rural Health Mission) ವನ್ನು 2005 ರಲ್ಲಿ ಜಾರಿಗೊಳಿಸಲಾಗಿದ್ದು, ಈ ಯೋಜನೆಯಿಂದ ನಾಗರಿಕರಿಗೆ ಆರೋಗ್ಯ ಸೇವೆಯು ಸುಲಭವಾಗಿ ಮತ್ತು ನ್ಯಾಯಯುತವಾಗಿ ದೊರೆಯುತ್ತಿದೆ. ಅಲ್ಲದೇ, ಆರೋಗ್ಯ ಸೇವೆಯನ್ನು ಉತ್ತಮಪಡಿಸುವಲ್ಲಿ ಗಮನಾರ್ಹ ಸಾಧನೆಯನ್ನು ಮಾಡಿರುವುದಾಗಿ ತಿಳಿಸಿದರು. 12 ನೇ ಪಂಚವಾರ್ಷಿಕ ಯೋಜನೆಯಲ್ಲೂ ಈ ಕಾರ್ಯಕ್ರಮವನ್ನು ವಿಸ್ತರಿಸಲಾಗಿದ್ದು, ವಿಶೇಷವಾಗಿ ಆರೋಗ್ಯ ವಲಯಕ್ಕೆ ಹೆಚ್ಚು ಒತ್ತು ನೀಡುವುದಾಗಿ ಹೇಳಿದರು. ಆರೋಗ್ಯ ವಲಯಕ್ಕೆ 11 ನೇ ಪಂಚವಾರ್ಷಿಕ ಯೋಜನೆಗಿಂತ ಮೂರು ಪಟ್ಟು ಹೆಚ್ಚು ಅನುದಾನವನ್ನು 12 ನೇ ಪಂಚವಾರ್ಷಿಕ ಯೋಜನೆಯಲ್ಲಿ ನಿಗದಿಪಡಿಸಲಾಗಿರುವುದಾಗಿ ತಿಳಿಸಿದ್ದಾರೆ
- ಜನನಿ ಸುರಕ್ಷಾ ಯೋಜನೆಯಲ್ಲಿ ಫಲಾನುಭವಿಗಳ ಸಂಖ್ಯೆ ಗಣನೀಯವಾಗಿ ಹೆಚ್ಚಳವಾಗಿದೆ. 2005-06 ರಲ್ಲಿ 7.8 ಲಕ್ಷ ಇದ್ದ ಫಲಾನುಭವಿಗಳ ಸಂಖ್ಯೆ 2011-12 ರಲ್ಲಿ 1.10 ಕೋಟಿ ಹೆಚ್ಚಳವಾಗಿರುವುದು ಶ್ಲಾಘನೀಯ.
- ಶಿಶು ಮರಣ ಪ್ರಮಾಣವು (Infant Mortality Rate) 2008 ರಿಂದ ಪ್ರತಿ ವರ್ಷ 3 ಅಂಕಿ ಕಡಿಮೆಯಾಗುತ್ತಿರುವುದು ಸಂತಸದ ವಿಷಯವಾಗಿದೆ. ಇತ್ತೀಚಿನ ವರದಿಯ ಪ್ರಕಾರ 2011 ರಲ್ಲಿ ಶಿಶು ಮರಣ ಪ್ರಮಾಣವು 44 ದಾಖಲಾಗಿದೆ. 5

ವರ್ಷದ ಒಳಗಿನ ಮಕ್ಕಳ ಮರಣ ಪ್ರಮಾಣವು 2008 ರಲ್ಲಿ 69 ರಷ್ಟಿದ್ದು, 2010 ರಲ್ಲಿ 59 ಆಗುವ ಮೂಲಕ ಗಣನೀಯವಾಗಿ ಇಳಿಕೆಯಾಗಿದೆ,

- ಜನವರಿ 13,2013 ಕ್ಕೆ ಭಾರತದಲ್ಲಿ ಎರಡು ವರ್ಷಗಳಿಂದ ಯಾವುದೇ ಪೋಲೀಯೋ ಪ್ರಕರಣ ದಾಖಲಾಗದಿರುವುದು ಹೆಮ್ಮೆಯ ಸಂಗತಿಯಾಗಿದೆ. ಅಲ್ಲದೇ, ಭಾರತ ಪೋಲೀಯೋ ಮುಕ್ತ ದೇಶವಾಗಿ ಹೊರಹೊಮ್ಮಿದೆ.

**ಅಮೃತ ಶೇರ್ ಗಿಲ್‌ರವರ ಜನ್ಮ ಶತಮಾನೋತ್ಸವದ ಆಚರಣೆ**

ಅಮೃತ ಶೇರ್ ಗಿಲ್ ರವರ ಜನ್ಮ ಶತಮಾನೋತ್ಸವ ಆಚರಣೆಯನ್ನು ನ್ಯಾಷನಲ್ ಗ್ಯಾಲರಿ ಆಫ್ ಮಾಡರ್ನ್ ಆರ್ಟ್, ನವ ದೆಹಲಿಯಲ್ಲಿ ಆಚರಿಸಲಾಯಿತು. ಇಂಡಿಯನ್ ಕೌನ್ಸಿಲ್ ಫಾರ್ ಕಲ್ಚರಲ್ ರಿಲೇಶನ್ ನ ಅಧ್ಯಕ್ಷರಾದ ಡಾ.ಕರಣ್ ಸಿಂಗ್ ರವರು ಕಾರ್ಯಕ್ರಮವನ್ನು ಉದ್ಘಾಟಿಸಿದರು. ಯುನೆಸ್ಕೊ (UNESCO) ದ ಜನರಲ್ ಕಾನ್ಫೇರನ್ಸ್ ನ ಅಧ್ಯಕ್ಷರು ಮತ್ತು ಹಂಗೇರಿಯಾದ ಯುನೆಸ್ಕೊ ರಾಯಭಾರಿಯೂ ಆಗಿರುವ ಮಿಸ್.ಕತಲಿನ್ ಬಾಗ್ಯೆ (Ms.Katalin Bagyay) ರವರು ಈ ಕಾರ್ಯಕ್ರಮದಲ್ಲಿ ಭಾಗವಹಿಸಿರುವುದು ವಿಶೇಷವಾಗಿತ್ತು. ಅಮೃತ ಗಿಲ್ ರವರ ಚಿತ್ರಕಲೆಗಳನ್ನು ಪ್ರದರ್ಶನಕ್ಕೆ ಇಡಲಾಗಿದ್ದು, ಗಿಲ್ ರವರು ಕಲೆಗೆ ನೀಡಿರುವ ಕೊಡುಗೆಯನ್ನು ಬಣ್ಣಿಸಲಾಯಿತು. ಅಲ್ಲದೇ, ಈ ಸಂದರ್ಭವು ಭಾರತ ಮತ್ತು ಹಂಗೇರಿ ದೇಶಗಳ ನಡುವಿನ ಸಂಬಂಧವನ್ನು ಗಟ್ಟಿಗೊಳಿಸುವುದಾಗಿ ಕತಲಿನ್ ಹೇಳಿದರರು.

**ಅಮೃತ ಶೇರ್ ಗಿಲ್ (30 ಜನವರಿ 1913-5 ಡಿಸೆಂಬರ್ 1941 ):** ಅಮೃತ ರವರು ಭಾರತ ಕಂಡ ಅಪ್ರತಿಮೆ ವರ್ಣ ಚಿತ್ರಕಾರರಲ್ಲಿ ಒಬ್ಬರೆನಿಸಿದ್ದಾರೆ. ಪಂಜಾಬ್ ಮೂಲದ ತಂದೆ ಮತ್ತು ಹಂಗೇರಿ ಮೂಲದ ತಾಯಿ ದಂಪತಿಗೆ ಜನಿಸಿದ ಇವರು ತಮ್ಮ ಅಲ್ಪ ಅವಧಿಯ ಜೀವನದಲ್ಲಿ ಅಪಾರ ಕೀರ್ತಿಯನ್ನುಗಳಿಸಿದರು. 20 ನೇ ಶತಮಾನದಲ್ಲಿ ಭಾರತದ ಪ್ರಮುಖ ಮಹಿಳಾ ವರ್ಣಚಿತ್ರಕಾರರಾದ ಇವರನ್ನು ಭಾರತದ ಪ್ರಿದ ಕಹ್ಲೊ (Frida Kahlo) ಎಂತಲೂ ಕರೆಯುತ್ತಾರೆ. ಯೂರೋಪಿಯನ್ ಮತ್ತು ಇಂಡಿಯನ್ ಮಿಶ್ರಣ ಶೈಲಿಯ ಅವರ ವರ್ಣಕಲೆ ಅಪಾರ ಮೆಚ್ಚುಗೆಯನ್ನು ಗಳಿಸಿತ್ತು.

ತ್ರಿ ಗರ್ಲ್ಸ್ (Three Girls) ಅವರ ಮೊದಲ ಚಿತ್ರಕಲೆಯಾಗಿದ್ದು, 1935 ರಲ್ಲಿ ಗಿಲ್ ರವರು ಯೂರೋಪ್ ನಲ್ಲಿ ತಮ್ಮ ವಿದ್ಯಾಭ್ಯಾಸ ಮುಗಿಸಿ ಹಿಂತಿರುಗಿದ ನಂತರ ರಚಿಸಿದ್ದರು. ಈ ಕಲೆಗೆ ಬಾಂಬೆ ಆರ್ಟ್ ಸೊಸೈಟಿಯಿಂದ ಚಿನ್ನದ ಪದಕ ದೊರೆತಿತ್ತು.

---

## ಅಂತರ್ ರಾಷ್ಟ್ರೀಯ

### ಮಲಾಲ ತಂದೆಗೆ ಬ್ರಿಟನ್ ನಲ್ಲಿ ಉದ್ಯೋಗ

ಪಾಕಿಸ್ತಾನದಲ್ಲಿ ಮುಸ್ಲಿಂ ಮಹಿಳೆಯರ ಶೈಕ್ಷಣಿಕ ಹಕ್ಕುಗಳಿಗಾಗಿ ಹೋರಾಡುತ್ತಿರುವ ಪಾಕಿಸ್ತಾನದ ಯುವತಿ ಮಲಾಲ ರವರ ತಂದೆ ಜೈವುದ್ದೀನ್ ಯೂಸಫ್ ಝಾಯ್ ರವರಿಗೆ ಬ್ರಿಟನ್ ಸರ್ಕಾರ ತನ್ನ ರಾಯಭಾರಿ ಕಛೇರಿಯಲ್ಲಿ ಉದ್ಯೋಗ ನೀಡಿರುವುದಾಗಿ ಅಲ್ಲಿನ ಪತ್ರಿಕೆಯೊಂದು ತಿಳಿಸಿದೆ.

- ಬ್ರಿಟನ್ ನ ಬರ್ಮಿಂಗ್ ಹ್ಯಾಮ್ನಲ್ಲಿರುವ ಪಾಕಿಸ್ತಾನ ರಾಯಭಾರಿ ಕಚೇರಿಯಲ್ಲಿ ಪಾಕಿಸ್ತಾನ ಶೈಕ್ಷಣಿಕ ಸಲಹೆಗಾರರಿಗೆ ಜೈವುದ್ದೀನ್ ರವರನ್ನು ನೇಮಿಸಲಾಗಿದೆ.

### ಆಮೆರಿಕಾದಲ್ಲಿ ಬೃಹತ್ ಹಿಂದೂ ದೇವಾಲಯ ಲೋಕಾರ್ಪಣೆ

ಆಮೆರಿಕಾದ ಲಾಸ್ಎಂಜಲೀಸ್ ನ ಹಾಲಿವುಡ್ ಬಳಿ ನಿರ್ಮಾಣಗೊಂಡಿರುವ ಹಿಂದೂ ದೇವಾಲಯವೊಂದು ಇತ್ತೀಚೆಗೆ ಲೋಕಾರ್ಪಣೆಗೊಂಡಿತು. ಶ್ರೀ ಸ್ವಾಮಿ ನಾರಾಯಣ ಹೆಸರಿರುವ ಈ ದೇವಸ್ಥಾನವನ್ನು ಬೋಚನವಾಸಿ ಶ್ರೀ ಅಕ್ಷರ ಪುರೋಷತ್ತಮ ಸ್ವಾಮಿನಾರಾಯಣ ಸಂಸ್ಥೆ (ಬಿಎಪಿಎಸ್) ನಿರ್ಮಿಸಿದೆ.

ದೇವಾಲಯದ ವಿಶೇಷಗಳು:-

- ಈ ದೇವಾಲಯ ಆಮೆರಿಕಾದ ಹಿಂದೂ ದೇವಾಲಯಗಳಲ್ಲೇ ಅತ್ಯಂತ ಬೃಹತ್ ದೇವಾಲಯವೆನಿಸಿದೆ.
- ವಿಶ್ವದ ಮೊದಲ ಭೂಕಂಪ ನಿರೋಧಕ ದೇವಾಲಯ ಎಂಬ ಹಿರಿಮೆಯನ್ನು ಹೊಂದಿದೆ.
- ದೇಗುಲದ ಎತ್ತರ 912 ಅಡಿ, 2 ಬೃಹತ್ ಗುಮ್ಮಟಗಳು, 4 ಬಾಲ್ಕನಿಗಳು, 122 ಕಂಬಗಳು ಮತ್ತು 129 ಕಮಾನುಗಳಿವೆ. ಸೌರಶಕ್ತಿ ಮೂಲಕ ವಿದ್ಯುತ್ ಉತ್ಪಾದನೆ ಸೌಲಭ್ಯವನ್ನು ಅಳವಡಿಸಲಾಗಿದೆ.

### ಜನಸಿಲು ಸೂಕ್ತ ಸ್ಥಳ ಪಟ್ಟಿಯಲ್ಲಿ ಸ್ವಿಟ್ಜರ್ಲ್ಯಾಂಡ್ ಗೆ ನಂ.1 ಸ್ಥಾನ

ಪ್ರವಾಸಿಗರ ಸ್ವರ್ಗ ತಾಣ ಎನಿಸಿರುವ ಸ್ವಿಟ್ಜರ್ಲ್ಯಾಂಡ್ ಕೀರಿಟಕ್ಕೆ ಈಗ ಮತ್ತೊಂದು ಗರಿ ಸೇರ್ಪಡೆಯಾಗಿದೆ. ವಿಶ್ವದಲ್ಲಿ ಮಗು ಜನಿಸಲು ಸ್ವಿಟ್ಜರ್ಲ್ಯಾಂಡ್ ಅತ್ಯಂತ ಸೂಕ್ತ ಸ್ಥಳ ಎಂಬ ವಿಷಯನ್ನು ಸಮೀಕ್ಷೆಯೊಂದು ವರದಿ ಮಾಡಿದೆ. ಎಕಾನಿಮಕ್ ಇಂಟಲಿಜೆನ್ಸಿ ಎಂಬ ಕಂಪನಿ ನಡೆಸಿರುವ ಸಮೀಕ್ಷೆಯಲ್ಲಿ ಸ್ವಿಟ್ಜರ್ಲ್ಯಾಂಡ್ ಗೆ ಅಗ್ರ ಸ್ಥಾನ ಲಭಿಸಿದರೆ, ಭಾರತಕ್ಕೆ ಈ ಪಟ್ಟಿಯಲ್ಲಿ 66 ನೇ ಸ್ಥಾನ ಲಭಿಸಿದೆ.

- ಒಟ್ಟು 80 ದೇಶಗಳಲ್ಲಿ ಈ ಸಮೀಕ್ಷೆಯನ್ನು ಕೈಗೊಳ್ಳಲಾಗಿದ್ದು, ಆಫ್ರಿಕಾ ಖಂಡಾದ ನತದೃಷ್ಟ ದೇಶ ಅಲ್ಜೀರಿಯಾ ಈ ಪಟ್ಟಿಯಲ್ಲಿ ಕೊನೆಯ ಸ್ಥಾನದಲ್ಲಿದೆ.
- ಆರ್ಥಿಕವಾಗಿ ಧೃಡವಾಗಿರುವ ದೇಶಗಳು ಸಹ ಈ ಪಟ್ಟಿಯಲ್ಲಿ ಹಿಂದೆ ಬಿದ್ದಿರುವುದು ಗಮನಾರ್ಹ. ರಷ್ಯಾ 72, ಚೀನಾ 49, ಬ್ರೆಜಿಲ್ 37 ಮತ್ತು ದಕ್ಷಿಣಾ ಆಫ್ರಿಕಾ 53 ನೇ ಸ್ಥಾನದಲ್ಲಿವೆ.

- ಇಂತಹದೇ ಸಮೀಕ್ಷೆಯನ್ನು 25 ವರ್ಷಗಳ ಹಿಂದೆ ನಡೆಸಲಾಗಿತ್ತು, ಆಗ ನಂ.1 ಸ್ಥಾನದಲ್ಲಿದ್ದ ಆಮೆರಿಕಾ ಈಗ 16 ನೇ ಸ್ಥಾನಕ್ಕೆ ತಳ್ಳಲ್ಪಟ್ಟಿದೆ.
- ಆಸ್ಟ್ರೇಲಿಯಾ, ನಾರ್ವೆ, ಸ್ವೀಡನ್, ಡೆನ್ಮಾರ್ಕ್, ಸಿಂಗಪೂರ್, ನೆದರ್ ಲ್ಯಾಂಡ್, ಹಾಂಗ್ ಕಾಂಗ್, ಕೆನಡಾ ಮತ್ತು ನ್ಯೂಜಿಲ್ಯಾಂಡ್ ಕ್ರಮವಾಗಿ ಪಟ್ಟಿಯಲ್ಲಿ ಸ್ಥಾನ ಪಡೆದಿರುವ ಮೊದಲ 10 ದೇಶಗಳಾಗಿವೆ.

ಸಮೀಕ್ಷೆ ಹೇಗೆ?

- ಸಮೀಕ್ಷೆಯಲ್ಲಿ ದೇಶದ ಭೌಗೋಳಿಕ ಅಂಶ, ಸಂಸ್ಕೃತಿ, ಜನ ಸಂಖ್ಯೆ ಲಕ್ಷಣ, ದೇಶದ ಆರ್ಥಿಕ ಸ್ಥಿತಿ ಮತ್ತು ಮಗು ಜನಿಸಿದ ಮೇಲೆ ಅದರ ಜೀವನ ಮಟ್ಟ ಹೇಗಿರಲಿದೆ ಎಂಬ ಮುಂತಾದ ಅಂಶಗಳನ್ನು ಗಣನೆ ತೆಗೆದುಕೊಂಡು ಪಟ್ಟಿಯನ್ನು ಸಿದ್ದಪಡಿಸಲಾಗಿದೆ.

**ರಾಸಾಯನಿಕ ನೀರ್ವೀರ್ಯಕರಣ ಶಿಕ್ಷೆ ವಿಧಿಸಿದ ಏಷ್ಯಾದ ಮೊದಲ ದೇಶ: ದಕ್ಷಿಣ ಕೊರಿಯಾ**

ಅತ್ಯಾಚಾರ ಪ್ರಕರಣಗಳಲ್ಲಿ ಭಾಗಿಯಾಗಿರುವ ಅಪರಾಧಿಯೊಬ್ಬನಿಗೆ ರಾಸಾಯನಿಕ ನೀರ್ವೀರ್ಯಕರಣ (Chemical Castration) ಶಿಕ್ಷೆ ನೀಡಿದ ಏಷ್ಯಾದ ಪ್ರಥಮ ದೇಶವಾಗಿ ದಕ್ಷಿಣಾ ಕೊರಿಯಾ ಸುದ್ದಿಮಾಡಿದೆ. ಅಪ್ರಾಪ್ತ ಬಾಲಕಿಯರಿಗೆ ಕೊಲೆ ಬೆದರಿಕೆ ಹಾಕಿ ಲೈಂಗಿಕ ಕ್ರಿಯೆ ನಡೆಸಿದಲ್ಲದೇ, ತಾನು ಲೈಂಗಿಕ ಕ್ರಿಯೆ ನಡೆಸಿದ ಯುವತಿಯರ ನಗ್ನ ಚಿತ್ರ ಮತ್ತು ವಿಡಿಯೋಗಳನ್ನು ಅಂತರ್ಜಾಲದಲ್ಲಿ ಹರಿಯಲು ಬಿಟ್ಟ Pyo ಎಂಬ ಹೆಸರಿನ ವ್ಯಕ್ತಿಗೆ ಈ ಶಿಕ್ಷೆ ಜೊತೆಗೆ 15 ವರ್ಷಗಳ ಸೆರೆಮನೆ ವಾಸವನ್ನು ಸಹ ವಿಧಿಸಲಾಗಿದೆ.

- ದಕ್ಷಿಣ ಕೊರಿಯಾದಲ್ಲಿ 2011 ರಲ್ಲಿ ಈ ಕಾಯ್ದೆಯನ್ನು ರೂಪಿಸಲಾಗಿದ್ದು, ಅತ್ಯಾಚಾರ ಎಸಗಿದವರಿಗೆ ಇಂತಹ ಶಿಕ್ಷೆಯನ್ನು ವಿಧಿಸಬಹುದಾದ ಅವಕಾಶವನ್ನು ಈ ಕಾಯ್ದೆಯಡಿ ಕಲ್ಪಿಸಲಾಗಿದೆ. ಈ ಕಾಯ್ದೆಯಡಿ ವಿಧಿಸಲಾದ ಪ್ರಥಮ ಶಿಕ್ಷೆ ಇದಾಗಿದೆ.

ರಾಸಾಯನಿಕ ನೀರ್ವೀರ್ಯಕರಣ ಎಂದರೇನು?

ರಾಸಾಯನಿಕ ನೀರ್ವೀರ್ಯಕರಣ ವಿಧಾನದಲ್ಲಿ ಅಪರಾಧಿತ ವ್ಯಕ್ತಿಗೆ ಲೈಂಗಿಕ ಆಸಕ್ತಿ ಮತ್ತು ಲೈಂಗಿಕ ಕ್ರಿಯೆ ನಡೆಸುವ ಸಾಮರ್ಥ್ಯವನ್ನು ಕುಗ್ಗಿಸಲಾಗುತ್ತದೆ. ಆ್ಯಂಟಿ ಆಂಡ್ರೋಜನ್ (Anti Androgen) ಔಷಧಿಗಳಾದ ಸಿಪ್ರೋಟೆನ್ ಅಸಿಟೇಟ್ (Cyprotene acetate) ಮತ್ತು Depo-provera ಎಂಬ ಔಷಧಿಗಳನ್ನು ಪ್ರತಿ ಮೂರು ತಿಂಗಳಿಗೊಮ್ಮೆ ಇಂಜೆಕ್ಷನ್ ಮೂಲಕ ದೇಹಕ್ಕೆ ನೀಡಲಾಗುತ್ತದೆ. ಈ ಔಷಧಿಗಳು ವ್ಯಕ್ತಿಯ ಲೈಂಗಿಕ ಆಸಕ್ತಿಯನ್ನು ಕಾಲ ಕ್ರಮೇಣ ಕಡಿಮೆಗೊಳಿಸುತ್ತವೆ.

ರಾಸಾಯನಿಕ ನೀರ್ವೀರ್ಯಕರಣ ಇತರೆ ದೇಶಗಳಲ್ಲಿ

ವಿಶ್ವದ ಅನೇಕ ದೇಶಗಳಲ್ಲಿ ಈ ವಿಧಾನವನ್ನು ಈಗಾಗಲೇ ಜಾರಿಗೊಳಿಸಲಾಗಿದೆ. ಅವುಗಳಲ್ಲಿ ಪ್ರಮುಖವಾದವುಗಳೆಂದರೆ ಡೆನ್ಮಾರ್ಕ್, ಪೋಲ್ಯಾಂಡ್, ಸ್ವೀಡನ್, ಆಮೆರಿಕಾದ ಕ್ಯಾಲಿಫೋರ್ನಿಯಾ ಮತ್ತು ರಷ್ಯಾ.

- ರಷ್ಯಾದಲ್ಲಿ 14 ವರ್ಷದೊಳಗಿನ ಅಪ್ರಾಪ್ತರ ಮೇಲೆ ಲೈಂಗಿಕ ಕ್ರಿಯೆ ನಡೆಸಿದರೆ ಈ ಶಿಕ್ಷೆಯನ್ನು ವಿಧಿಸಲಾಗುವುದು. ಇತ್ತೀಚೆಗೆ ಮಲೇಷಿಯಾದ ಬಾರ್ ಕೌನ್ಸಿಲ್ ಸಹ ಈ ಶಿಕ್ಷೆಯನ್ನು ಮಲೇಷಿಯಾದಲ್ಲಿ ಜಾರಿಗೆ ತರಲು ಒತ್ತಡ ಹೇರಿವೆ.

- ದೆಹಲಿ ಅತ್ಯಾಚಾರದ ನಂತರ ಭಾರತದಲ್ಲೂ ಸಹ ಈ ಶಿಕ್ಷೆ ಜಾರಿಗೆ ತರುವಂತೆ ಅನೇಕ ಸಂಘಟನೆಗಳು ಕೇಂದ್ರ ಸರ್ಕಾರದ ಮೇಲೆ ಒತ್ತಡ ತಂದಿವೆ.

**ಸೆಂಕಾಕು ದ್ವೀಪ ಸಮೂಹಗಳ ವಿವಾದ: ಚೀನಾ ಮತ್ತು ಜಪಾನ್ ನಡುವೆ ತಾರಕಕ್ಕೇರಿದ ಸಂಘರ್ಷ**

ಪೂರ್ವ ಚೀನಾದ ಸಮುದ್ರದಲ್ಲಿರುವ ಸೆಂಕಾಕು (Senkaku Islands) ದ್ವೀಪ ಸಮೂಹಗಳ ಒಡೆತನ ಸಾಧಿಸಲು ಚೀನಾ ಮತ್ತು ಜಪಾನ್ ನಡುವಿನ ಸಂಘರ್ಷ ದಿನೇ ದಿನೇ ಉಗ್ರ ಸ್ವರೂಪ ಪಡೆಯುತ್ತಿದ್ದು, ಉಭಯ ದೇಶಗಳ ಯುದ್ಧ ವಿಮಾನಗಳು ವಿವಾದಿತ ಪ್ರದೇಶದಲ್ಲಿ ಗಸ್ತು ತಿರುಗುತ್ತಿವೆ. ಜಪಾನ್ ಎಫ್-15 ಎರಡು ಯುದ್ಧ ವಿಮಾನಗಳನ್ನು ನಿಯೋಜಿಸಿದ ಬೆನ್ನಲ್ಲೆ, ಚೀನಾ ಕೂಡ ಜೆ-10 ಎಂಬ ಎರಡು ಯುದ್ಧ ವಿಮಾನಗಳನ್ನು ನಿಯೋಜಿಸಿದೆ. ಈ ಮಧ್ಯೆ ಚೀನಾ, ದ್ವೀಪ ಸಮೂಹದಲ್ಲಿ ಜಪಾನ್ ವಿರುದ್ಧ ಸಡ್ಡು ಹೊಡೆಯಲು ದಕ್ಷಿಣ ಕೊರಿಯಾದ ಜತೆ ಮೈತ್ರಿ ಕೂಟ ರಚಿಸಲು ಪ್ರಯತ್ನಿಸಿದೆ.

**ಸೆಂಕಾಕು ದ್ವೀಪ ಸಮೂಹ:** ಸೆಂಕಾಕು ದ್ವೀಪ ಸಮೂಹವು ಪೂರ್ವ ಚೀನಾದ ಸಮುದ್ರಲ್ಲಿದ್ದು, ಪೂರ್ವಕ್ಕೆ ಚೀನಾದ ಭೂಭಾಗ, ಪಶ್ಚಿಮಕ್ಕೆ ಒಕಿನಾವ ದ್ವೀಪ, ನೈರುತ್ಯಕ್ಕೆ ತೈವಾನ್ ಮತ್ತು ವಾಯುವ್ಯಕ್ಕೆ ರೈಯುಕ್ಯು ದ್ವೀಪ ಸಮೂಹಗಳಿಂದ ಸುತ್ತುವರೆದಿದೆ. ಸದ್ಯ ಈ ದ್ವೀಪವೂ ಜಪಾನ್ ಒಡೆತನದಲ್ಲಿದೆ. ಆದರೆ ಈಗ ರಿಪಬ್ಲಿಕ್ ಆಫ್ ಚೀನಾ(ತೈವಾನ್), ಪೀಪಲ್ ರಿಪಬ್ಲಿಕ್ ಆಫ್ ಚೀನಾ ಮತ್ತು ಜಪಾನ್ ನಡುವೆ ಒಡೆತನಕ್ಕಾಗಿ ಸಂಘರ್ಷ ಏರ್ಪಟ್ಟಿದೆ. ಚೀನಾ ಮತ್ತು ತೈವಾನ್ ಹೇಳಿಕೆಗಳ ಪ್ರಕಾರ ಈ ದ್ವೀಪ ಸಮೂಹವು 1534 ರಿಂದಲೇ ಚೀನಾದ ಒಡೆತನದಲ್ಲಿದ್ದವು, ಆದರೆ 1894-95 ರಲ್ಲಿ ಮೊದಲ ಸಿನೊ-ಜಪಾನೀಸ್ ಯುದ್ಧದ ನಂತರ ಜಪಾನ್ ಆಡಳಿತಕ್ಕೆ ಒಳಪಟ್ಟಿದ್ದು, ತದನಂತರ ಶಿಮೋನೆಸ್ಕಿ ಒಪ್ಪಂದದ ಪ್ರಕಾರ ಜಪಾನ್ ಈ ಭಾಗಗಳನ್ನು ಹಿಂತಿರುಗಿಸಿದೆ ಎಂದು ಹೇಳುತ್ತಿವೆ. ಆದರೆ ಇದನ್ನು ಅಲ್ಲಗೆಳೆದಿರುವ ಜಪಾನ್ ಈ ದ್ವೀಪ ಸಮೂಹಗಳು ಚೀನಾಕ್ಕೆ ಸಂಬಂದಸಿಯೇ ಇಲ್ಲ ಎಂದು ಹೇಳುವ ಮೂಲಕ ತಿರುಗೇಟು ನೀಡಿದೆ. ಒಟ್ಟಿನಲ್ಲಿ ಈ ವಿವಾದಕ್ಕೆ ಸದ್ಯ ಅಂತ್ಯ ಕಾಣುವಾಗಿಲ್ಲ.

ಸೆಂಕಾಕು ದ್ವೀಪಕ್ಕೆ ಪ್ರಾಮುಖ್ಯತೆ ಏಕೆ?

- ಸೆಂಕಾಕು ದ್ವೀಪ ಸಮೂಹವು ಸುಮಾರು 7 ಚದರ ಕೀ.ಮೀ ವಿಸ್ತೀರ್ಣವನ್ನು ಹೊಂದಿದೆ. ಈ ದ್ವೀಪ ಸಮೂಹವು ಪ್ರಮುಖ ಮೀನುಗಾರಿಕೆ ಪ್ರದೇಶವಾಗಿದೆ. ಅಲ್ಲದೇ, ಇತ್ತೀಚಿನ ಸಮೀಕ್ಷೆಗಳ ಪ್ರಕಾರ ಈ ಭಾಗದಲ್ಲಿ ಹೇರಳವಾಗಿ ತೈಲ ನಿಕ್ಷೇಪಗಳು ಇರುವುದು ತಿಳಿದು ಬಂದಿರುವುದು ಈ ದ್ವೀಪ ಸಮೂಹಗಳ ಒಡೆತನಕ್ಕೆ ಪೈಪೋಟಿ ಹೆಚ್ಚಾಗಲು ಕಾರಣವಾಗಿದೆ.

**ಶ್ರೀಲಂಕಾ ಮುಖ್ಯ ನ್ಯಾಯಮೂರ್ತಿ ಭಂಡಾರ ನಾಯಕೆ ಪದಚ್ಯುತಿಗೆ ಕ್ಷಣಗಣನೆ:**

ಶ್ರೀಲಂಕಾ ಸಂಸತ್ ದೇಶದ ಮೊದಲ ಮಹಿಳಾ ಮುಖ್ಯ ನ್ಯಾಯಮೂರ್ತಿ ಶಿರಾನಿ ಭಂಡಾರನಾಯಕೆ ಅವರನ್ನು ಪದಚ್ಯುತಿಗೊಳಿಸುವ ವಾಗ್ದಂಡನೆಯಲ್ಲಿ ಬಹುಮತಗಳ ನಿರ್ಣಯ ಕೈಗೊಂಡಿದೆ. ಭಂಡಾರ ನಾಯಕೆಯನ್ನು ಸೇವೆಯಿಂದ ವಜಾಗೊಳಿಸುವ ವಾಗ್ದಂಡನೆ ಪರವಾಗಿ 155 ಮತ್ತು ವಿರುದ್ಧವಾಗಿ 49 ಮತಗಳು ಚಲಾವಣೆಯಾಗಿವೆ.

ಪದಚ್ಯುತಿ ಏಕೆ?

ಆಘೋಷಿತ ಆಸ್ತಿ ಹೊಂದಿ ಹಣಕಾಸು ಅವ್ಯವಹಾರಗಳಲ್ಲಿ ತೊಡಗಿರುವ ಮತ್ತು ವಿಫಲಗೊಂಡ ಬಂಡವಾಳ ಹೂಡಿಕೆ ಕಂಪನಿಯೊಂದಕ್ಕೆ ಸಂಬಂಧಿಸಿದ ಪ್ರಕರಣದಲ್ಲಿ ಪ್ರಶ್ನಾರ್ಹ ಹಿತಾಸಕ್ತಿ ಹೊಂದಿರುವ ಆರೋಪವನ್ನು ಅವರ ಮೇಲೆ ಹೊರಿಸಲಾಗಿದೆ.

**ಭಾರತ – ಪಾಕಿಸ್ತಾನ ಹೊಸ ವೀಸಾ ವ್ಯವಸ್ಥೆ (Visa on Arrival) ಜನವರಿ 15 ರಿಂದ ಜಾರಿಗೆ**

ಭಾರತ ಮತ್ತು ಪಾಕಿಸ್ತಾನ ನಡುವಿನ ಹೊಸ ವೀಸಾ ಸೌಲಭ್ಯವು ಜನವರಿ 15 ರಿಂದ ಆರಂಭವಾಗಲಿದೆ. ಅಟಾರಿ - ವಾಘಾ ಗಡಿಯಲ್ಲಿನ ಜಂಟಿ ತಪಾಸಣಾ ಕೇಂದ್ರಗಳಲ್ಲಿ ಉಭಯ ದೇಶಗಳ ಹಿರಿಯ ನಾಗರೀಕರು ಈ ವೀಸಾಗಳನ್ನು ಪಡೆಯಬಹುದಾಗಿದೆ.

- ಹಿರಿಯ ನಾಗರೀಕರೆಂದರೆ 65 ವರ್ಷಕ್ಕಿಂತಲೂ ಮೇಲ್ಪಟ್ಟವರು ಮಾತ್ರ ಈ ವೀಸಾ ಪಡೆಯಲು ಅರ್ಹರಾಗಿದ್ದಾರೆ.
- ಈ ವೀಸಾದಿಂದ ವರ್ಷದಲ್ಲಿ ಎರಡು ಭಾರಿ ಮಾತ್ರ ಭೇಟಿ ನೀಡಬಹುದು ಹಾಗೂ ಕೇವಲ 5 ಸ್ಥಳಗಳಿಗೆ ಮಾತ್ರ ಹೋಗಬಹುದು
- ಈ ವೀಸಾದಡಿ ಕೇರಳ, ಪಂಜಾಬ್ ಮತ್ತು ಜಮ್ಮು - ಕಾಶ್ಮೀರ ರಾಜ್ಯಗಳಲ್ಲಿ ತಂಗಲು ಅವಕಾಶವನ್ನು ಕಲ್ಪಿಸಲಾಗಿಲ್ಲ.

**ಅಲೋನ್ ಸ್ವಾರ್ಟ್ಜ್ (Aaron Swarth)ಆತ್ಮಹತ್ಯೆ**

ಕಂಪ್ಯೂಟರ್ ತಜ್ಞ ಮತ್ತು ಪ್ರಸಿದ್ಧ ಸಾಮಾಜಿಕ ತಾಣ RSS ನ ಸಹ ಸಂಸ್ಥಾಪಕ ಅಲೋನ್ ಸ್ವಾರ್ಟ್ಜ್ ಆತ್ಮಹತ್ಯೆ ಮಾಡಿಕೊಂಡಿರುವುದಾಗಿ ಪೋಲಿಸರು ತಿಳಿಸಿದ್ದಾರೆ. ತಮ್ಮ 14 ನೇ ವಯಸ್ಸಿನಲ್ಲೇ ಸಾಮಾಜಿಕ ತಾಣವನ್ನು ಸ್ಥಾಪಿಸಿ ಹೆಸರುಗಳಿಸಿದ್ದ ಸ್ವಾರ್ಟ್ಜ್ ಅವರು ಅಂತರ್ಜಾಲ ತಾಣಗಳಿಗೆ ಕನ್ನ ಹಾಕಿ ಮಾಹಿತಿ ಕದ್ದ ಆರೋಪಕ್ಕೆ ಒಳಗಾಗಿದ್ದರು.

**RSS: Resource Rich Summery** ಒಂದು ರೀತಿಯ ಅಂತರ್ಜಾಲ ತಾಣವಾಗಿದ್ದು, ಇದರಲ್ಲಿ ಬಳಕೆದಾರರು ಸುಲಭವಾಗಿ ಸುದ್ದಿಯನ್ನು ಒದಬಹುದಾಗಿದೆ.

**ಬಲೂಚಿಸ್ಥಾನ ಪ್ರಾಂತೀಯ ಸರ್ಕಾರ ವಜಾ ಮಾಡಿದ ಪಾಕ್:**

ಪಾಕಿಸ್ತಾನದ ಪ್ರಧಾನಿ ರಜಾ ಪರ್ವೇಜ್ ಅಶ್ರಫ್ ರವರು ಬಲೂಚಿಸ್ತಾನ ಪ್ರಾಂತೀಯ ಸರ್ಕಾರವನ್ನು ವಜಾಗೊಳಿಸಿ ನಿರ್ಧಾರ ಪ್ರಕಟಿಸಿದ್ದಾರೆ. ಈ ಪ್ರಾಂತ್ಯದಲ್ಲಿ ಈಗ ರಾಜ್ಯಪಾಲರ ಆಳ್ವಿಕೆ ಹೇರಲಾಗಿದೆ.

ನಿರ್ಧಾರಕ್ಕೆ ಕಾರಣವೇನು?

- ಬಲೂಚಿಸ್ತಾನದ ರಾಜಧಾನಿ ಕ್ವೆಟ್ಟಾದಲ್ಲಿ ಇತ್ತೀಚೆಗೆ ಉಗ್ರರು ನಡೆಸಿದ ದಾಳಿಯಿಂದ ಸುಮಾರು 100 ಮಂದಿ ಶಿಯಾ ಪಂಗಡದವರು ಸಾವನ್ನಪ್ಪಿದ್ದರು. ಈ ಪ್ರತಿಭಟನೆಯನ್ನು ಖಂಡಿಸಿ ಶಿಯಾ ಮುಸ್ಲಿಂಮರು ರಸ್ತೆಯಲ್ಲಿ ಸುಮಾರು ಶವಗಳನ್ನು ಇಟ್ಟುಕೊಂಡು ಪ್ರತಿಭಟನೆ ಮಾಡುತ್ತಿದ್ದರು. ಅಲ್ಲದೇ ಬಲೂಚಿಸ್ತಾನ ಸರ್ಕಾರ ವಜಾಮಾಡುವ ತನಕ ಶವಗಳನ್ನು ಸಮಾಧಿ ಮಾಡುವುದಿಲ್ಲ ಎಂದು ಪಟ್ಟು ಹಿಡಿದಿದ್ದರು. ಈಗ ಸರ್ಕಾರ ವಜಾ ಮಾಡಿದ ನಂತರ ಇವರು ತಮ್ಮ ಪ್ರತಿಭಟನೆಯನ್ನು ಕೈಬಿಟ್ಟಿದ್ದಾರೆ.

## ಪಾಕ್ ಪ್ರಧಾನಿ ಆಶ್ರಫ್ ಬಂಧನಕ್ಕೆ ಸುಪ್ರೀಂ ಕೋರ್ಟ್ ಆದೇಶ

ವಿದ್ಯುತ್ ಯೋಜನೆಯೊಂದರ ಅವ್ಯವಹಾರ ಸಂಬಂಧ ಪಾಕಿಸ್ತಾನದ ಹಾಲಿ ಪ್ರಧಾನಿ ರಾಜಾ ಆಶ್ರಫ್ ವರ್ವೇಜ್ ರವರನ್ನು 24 ಗಂಟೆಯೊಳಗೆ ಬಂಧಿಸುವಂತೆ ಸುಪ್ರೀಂ ಕೋರ್ಟ್ ಆದೇಶಿಸಿದೆ. ಸುಪ್ರೀಂ ಕೋರ್ಟ್ ನ ಈ ತೀರ್ಪಿನಿಂದ ಪಾಕಿಸ್ತಾನದಲ್ಲಿ ಹೊಸ ರಾಜಕೀಯ ಬಿಕ್ಕಟ್ಟು ಶುರುವಾಗಿರುವುದಲ್ಲದೇ, ಅನೇಕ ಕಾನೂನು ತಜ್ಞರಲ್ಲಿ ಈ ನಿರ್ಣಯ ಸಂಶಯಕ್ಕೆ ದಾರಿಮಾಡಿದೆ.

ಏನಿದು ವಿವಾದ?

- ರೆಂಟಲ್ ಪವರ್ ಪ್ರೊಜೆಕ್ಟ್ ಕಂಪನಿಯು ಭಾರೀ ಮೊತ್ತದ ಲಂಚ ಸಂದಾಯ ಮಾಡಿ ವಿದ್ಯುತ್ ಗುತ್ತಿಗೆಗಳನ್ನು ಪಡೆದಿದೆ ಎಂದು ಸುಪ್ರೀ ಕೋರ್ಟ್ ನಲ್ಲಿ ಪಿ.ಎಂ.ಎಲ್.ಕ್ಯೂ ಸಂಸದ ಮಖೂಮ್ ಪೈಸಲ್ ಸಲೇ ಹಯಾತ್ ರವರು ದೂರು ದಾಖಲಿಸಿದ್ದರು. ಈ ಕಂಪನಿ ಜೊತೆ ಮಾಡಿಕೊಂಡ ಎಲ್ಲ ಗುತ್ತಿಗೆಗಳನ್ನು ಕೋರ್ಟ್ ಕಳೆದ ಮಾರ್ಚ್ ನಲ್ಲಿ ವಜಾ ಮಾಡಿತ್ತು. ಅಲ್ಲದೆ, ಈ ಹಿಂದೆ ವಿದ್ಯುತ್ ಹಾಗೂ ಜಲಸಂಪನ್ಮೂಲ ಸಚಿವರಾಗಿದ್ದ ಹಾಲಿ ಪ್ರಧಾನಿ ಸೇರಿದಂತೆ ಯೋಜನೆಗೆ ಮಂಜೂರು ನೀಡಿದ್ದ ಎಲ್ಲರ ವಿರುದ್ಧವೂ ಕಾನೂನು ಕ್ರಮ ಜರುಗಿಸುವಂತೆ ರಾಷ್ಟ್ರೀಯ ಹೊಣೆಗಾರಿಕೆ ದಳಕ್ಕೆ ತಾಕೀತು ಮಾಡಿತ್ತು. ಆದರೆ ರಾಷ್ಟ್ರೀಯ ಹೊಣೆಗಾರಿಕೆ ದಳಕ್ಕೆ ಕ್ರಮಕೈಗೊಳ್ಳುವಲ್ಲಿ ವಿಫಲವಾಗಿತ್ತು. ಈ ವಿಚಾರಣೆಯನ್ನು ನಡೆಸಿದ ಕೋರ್ಟ್ ರಾಷ್ಟ್ರೀಯ ಹೊಣೆಗಾರಿಕೆ ದಳದ ಮುಖ್ಯಸ್ಥರಿಗೆ ನ್ಯಾಯಾಂಗ ನಿಂದನೆ ನೋಟಿಸ್ ಜಾರಿ ಮಾಡಿ ಪ್ರಧಾನಿ ರಾಜಾ ಆಶ್ರಫ್ ವರ್ವೇಜ್ ರವರನ್ನು 24 ಗಂಟೆಯೊಳಗೆ ಬಂಧಿಸುವಂತೆ ಸುಪ್ರೀಂ ಕೋರ್ಟ್ ಆದೇಶಿಸಿದೆ.

## ಸುದ್ದಿಯಲ್ಲಿರುವ ವ್ಯಕ್ತಿ: ತಹಿರ್ –ಉಲ್-ಖಾದ್ರಿ

ಖಾದ್ರಿ ಒಬ್ಬ ಸೂಫಿ ಪಂಡಿತ. ಪಾಕಿಸ್ತಾನದ ಪಂಜಾಬ್ ಮೂಲದಲ್ಲಿ ಜನಿಸಿದ ಇವರು ಸದ್ಯ ಕೆನಾಡದ ನಾಗರಿಕ ಪೌರತ್ವ ಹೊಂದಿದ್ದಾರೆ. ಭಾರತದ ಸಿಎನ್ಎನ್-ಐಬಿಎನ್ ಇವರಿಗೆ ಶಾಂತಿದೂತ ಎಂಬ ಬಿರುದು ನೀಡಿದೆ. ಏಳು ವರ್ಷಗಳ ನಂತರ ಪಾಕಿಸ್ತಾನಕ್ಕೆ ಮರಳಿರುವ ಇವರು "**ಮಿನ್ ಹಜ್-ಉಲ್-ಖುರಾನ್**" ಎಂಬ ಸಂಘಟನೆ ಸ್ಥಾಪಿಸಿ ಪಾಕಿಸ್ಥಾನದ ಸರ್ಕಾರದ ವಿರುದ್ಧ ತಮ್ಮ ಸಾವಿರಾರು ಬೆಂಬಲಿಗರಂದಿಗೆ ಬೀದಿಗಿಳಿದು ಪ್ರತಿಭಟನೆ ನಡೆಸುತ್ತಿದ್ದಾರೆ.

## ಉದ್ದೀಪನ ಮದ್ದು ಸೇವಿಸಿದ್ದು ನಿಜ: ಆರ್ಮ್ ಸ್ಟ್ರಾಂಗ್

ನಿಷೇಧಿತ ಮದ್ದು ಸೇವಿಸಿ ಕ್ರೀಡಾಕಣಕ್ಕೆ ಇಳಿದಿದ್ದು ನಿಜ ಎಂದು ಅಮೆರಿಕಾದ ಸೈಕ್ಲಿಸ್ಟ್ ಆರ್ಮ್ ಸ್ಟ್ರಾಂಗ್ ತಪ್ಪೊಪ್ಪಿಗೊಂಡಿದ್ದಾರೆ. ಖ್ಯಾತ ಸಂದರ್ಶಕಿ ಓಪ್ರಾ ವೆನ್ ಪ್ರೇ ಜೊತೆ ನಡೆಸಿದ ಸಂದರ್ಶನದಲ್ಲಿ ಜಗತ್ತಿನ ಬಹುದೊಡ್ಡ ಸತ್ಯವೊಂದು ಈ ಮೂಲಕ ಬಹಿರಂಗಗೊಂಡಿದೆ.

ಆರ್ಮ್ ಸ್ಟ್ರಾಂಗ್ ಹೇಳಿದ್ದೇನು?

- ಕ್ಯಾನ್ಸರ್ ನಿಂದ ಚೇತರಿಸಿಕೊಂಡ ಬಳಿಕ ದೊಡ್ಡ ಸಾಧನೆ ಮಾಡಬೇಕು ಎನಿಸಿತು ಆದ್ದರಿಂದ ನಾನು ನಿಷೇಧಿತ ಮದ್ದನ್ನು ಸೇವಿಸಬೇಕಾಯಿತು ಎಂದು ತಿಳಿಸಿದ್ದಾರೆ.

- ನಿಷೇಧಿತ "ಎರಿತ್ರೊಪ್ರೊಯಿಟಿನ್ ಮತ್ತು ಟೆಸ್ಟೊಸ್ಟಿರಿನ್" ನ್ನು ಸೇವಿಸಿರುವುದಾಗಿ ಹೇಳಿರುವ ಅವರು ಇದೊಂದು ತಮ್ಮ ಜೀವನದ ಬಹು ದೊಡ್ಡ ತಪ್ಪಾಗಿದ್ದು, ತಮ್ಮ ಜೀವನದ ಉಳಿದ ಭಾಗವನ್ನು ತಾವು ಕಳೆದುಕೊಂಡಿರುವ ನಂಬಿಕೆಯನ್ನ ಮತ್ತೆ ಸಂಪಾದಿಸಲು ಬಳಸುವುದಾಗಿ ಹೇಳಿದ್ದಾರೆ.

ಏಳು ಭಾರಿ "ಟೂರ್ ಡಿ ಫ್ರಾನ್ಸ್" ಪ್ರಶಸ್ತಿ ಗೆದ್ದಿರುವ ಆರ್ಮ್ ಸ್ಟ್ರಾಂಗ್ ಗೆ ಈಗಾಗಲೇ ಅಜೀವ ನಿಷೇಧ ಹೇರಲಾಗಿದೆ, ಅಲ್ಲದೆ ಅವರು ಇವರೆಗು ಗೆದ್ದಿರುವ ಎಲ್ಲಾ ಪ್ರಶಸ್ತಿಗಳನ್ನು ವಾಪಸ್ ಪಡೆಯಲಾಗಿದೆ. ಸಿಡ್ನಿ ಒಲಂಪಿಕ್ ನಲ್ಲಿ ಅವರು ಗೆದ್ದಿರುವ ಕಂಚಿನ ಪದಕವನ್ನು ಒಲಂಪಿಕ್ ಸಮಿತಿ ಹಿಂಪಡೆದಿದೆ.

**ಬ್ಯಾಟರಿಯಲ್ಲಿ ದೋಷ: ಬೋಯಿಂಗ್ ಡ್ರೀಮ್ ಲೈನರ್ ಹಾರಾಟ ಸ್ಥಗಿತ**

ತಾಂತ್ರಿಕ ದೋಷದ ಕಾರಣ ಭಾರತದ ಏರ್ ಇಂಡಿಯಾ ಸೇರಿದಂತೆ ಆಮೆರಿಕಾ ಮತ್ತು ಜಪಾನ್ ದೇಶಗಳಲ್ಲಿ ಬೋಯಿಂಗ್ ವಿಮಾನ ಹಾರಾಟವನ್ನು ಸ್ಥಗಿತಗೊಳಿಸಿದ್ದವು. ಇತ್ತೀಚೆಗೆ ಜಪಾನ್ ಬೊಸ್ಟೊನ್ ಲೊಗನ್ ಇಂಟರ್ ನ್ಯಾಷನಲ್ ವಿಮಾನ ನಿಲ್ದಾಣದಲ್ಲಿ ಬೋಯಿಂಗ್ 787 ವಿಮಾನದಲ್ಲಿ ಬ್ಯಾಟರಿ ಅತಿ ಬಿಸಿಯಾಗಿ ಬೆಂಕಿ ಕಾಣಿಸಿಕೊಂಡ ಹಿನ್ನೆಲೆಯಲ್ಲಿ ಬೋಯಿಂಗ್ ಕಂಪನಿಯ ಅತ್ಯಾಧುನಿಕ ತಂತ್ರಜ್ಞಾನದ ವಿಮಾನ ಆತಂಕ ಸೃಷ್ಟಿಸಿತ್ತು. ವಿಮಾನದಲ್ಲಿ ಕಂಡುಬಂದಿರುವ ದೋಷ ಮತ್ತು ಸುರಕ್ಷತೆ ಧೃಡಪಡಿಸುವ ಸಲುವಾಗಿ ಆಮೆರಿಕಾ ಮತ್ತು ಜಪಾನ್ ತಜ್ಞನರು ಡ್ರೀಮ್ ಲೈನರ್ ನ ತಪಾಸಣೆ ನಡೆಸಿದರು.

**ಬ್ಯಾಟರಿ ದೋಷ ಏಕೆ?**

- ಎಲ್ಲಾ ವಿಮಾನಗಳಲ್ಲಿ ಬ್ಯಾಟರಿ ಸಾಮಾನ್ಯವಾಗಿದ್ದರು, ಬೋಯಿಂಗ್ ವಿಮಾನಗಳಲ್ಲಿ ಬಳಸುವ ಬ್ಯಾಟರಿಯು ಲಿಥೀಯಂ-ಐಯಾನ್ (Lithium-ion)ಬ್ಯಾಟರಿಯಾಗಿದ್ದು, ಇದು ಶೀಘ್ರ ಮತ್ತು ಅತ್ಯಧಿಕ ಶಕ್ತಿ ನೀಡುವ ಸಾಮರ್ಥವನ್ನು ಹೊಂದಿದೆ. ಡ್ರೀಮ್ ಲೈನರ್ ವಿಮಾನಗಳ ವ್ಯವಸ್ಥೆಯು ಎಲೆಕ್ಟ್ರಾನಿಕ್ ಸಿಗ್ನಲ್ ಗಳಿಂದ ಚಲಿಸುವಂತದಾಗಿದ್ದು ಇದು ಸಾಮಾನ್ಯ ವಿಮಾನಗಳಿಗಿಂತ ಭಿನ್ನವಾಗಿದೆ (ಇಲ್ಲಿ ವ್ಯವಸ್ಥೆಯು ಹೈಡ್ರೋಲಿಕ್ ನಿಂದ ನಿಯಂತ್ರಣಗೊಳ್ಳುತ್ತದೆ). ಈ ಕಾರಣಕ್ಕಾಗಿಯೇ ಲಿಥೀಯಂ-ಐಯಾನ್ ಬ್ಯಾಟರಿಗಳನ್ನು ಬಳಸಲಾಗುತ್ತದೆ. ಲಿಥೀಯಂ-ಐಯಾನ್ ಬ್ಯಾಟರಿಯ ಮತ್ತೆರೆಡು ವಿಶೇಷ ಗುಣಗಳೆಂದರೆ, ಅತಿ ಹೆಚ್ಚು ಶಕ್ತಿಯ ಸಾಂದ್ರತೆ (Energy Density) ಮತ್ತು ಯಾವ ರೂಪದಲ್ಲಾದರು ತಯಾರಿಸಬಹುದಾದ ಗುಣ. ಈ ಗುಣಲಕ್ಷಣಗಳಿಂದಲೆ, ಇಂದು ಇವುಗಳ ಬಳಕೆಯನ್ನು ನಾವು ಲ್ಯಾಪ್ ಟಾಪ್, ಮೊಬೈಲ್ ಗಳಲ್ಲು ನೋಡಬಹುದಾಗಿದೆ.
- ಬಹುಉಪಯೋಗಿಗಳಾಗಿರುವ ಈ ಬ್ಯಾಟರಿಗಳು ತೊಂದರೆಯಿಂದ ಹೊರತಗಿಲ್ಲ. ಇಂತಹ ಬ್ಯಾಟರಿಗಳಲ್ಲಿ ನಿರ್ವಹಣೆ ಸ್ವಲ್ಪ ಕ್ಲಿಷ್ಟಕರವಾಗಿದೆ ಮತ್ತು ಅತಿ ಮುಖ್ಯವಾದ ಅನಾನುಕೂಲವೆಂದರೆ ಉಷ್ಣಾಂಶ ಏರಿಕೆ ಅಥವಾ Thermal runway. ಥರ್ಮಲ್ ರನ್ ವೇ ಲಕ್ಷಣಗಳೆಂದರೆ ಬ್ಯಾಟರಿಯು ನಿಖರ ಉಷ್ಣಾಂಶ ತಲುಪಿದೆ ಕೂಡಲೇ ತನ್ನಷ್ಟಕ್ಕೆ ತಾನೇ ಬಿಸಿಯಾಗಿ ಬೆಂಕಿ ಕಾಣಿಸಿಕೊಳ್ಳುತ್ತದೆ. ಈ ದುರಂತವನ್ನು ನಾವು ಕೆಲವೂಮ್ಮೆ ಮೊಬೈಲ್ ಬ್ಯಾಟರಿಯಲ್ಲು ಸಹ ನೋಡಬಹುದಾಗಿದೆ. ಈ ಸ್ವರೂಪದ ದೋಷವೇ ಇತ್ತೀಚೆಗೆ ಬೋಯಿಂಗ್ ವಿಮಾನಗಳಲ್ಲಿ ಕಂಡುಬಂದಿರುವುದಾಗಿದೆ.

## ಅಮೆರಿಕಾದ ವಿಮಾನ ನಿಲ್ದಾಣಗಳಲ್ಲಿ ಸ್ಕ್ಯಾನರ್ ಬಳಕೆ ನಿಲುಗಡೆ

ಅಮೆರಿಕಾದ ವಿಮಾನ ನಿಲ್ದಾಣಗಳಲ್ಲಿ ಅಳವಡಿಸಲಾಗಿದ್ದ ಕೂಲಂಕುಷ ತಪಾಸಣಾ ಯಂತ್ರಗಳ ಬಳಕೆಯನ್ನು ನಿಲ್ಲಿಸುವುದಾಗಿ ಒಬಾಮ ಸರ್ಕಾರ ತಿಳಿಸಿದೆ. ಭದ್ರತಾ ದೃಷ್ಟಿಯಿಂದ ಕೈಗೊಳ್ಳಲಾಗಿದ್ದ ಈ ಕ್ರಮದ ವಿರುದ್ದ ಇತ್ತೀಚಿಗೆ ಭಾರಿ ಟೀಕೆ ಮತ್ತು ವಿರೋಧ ವ್ಯಕ್ತವಾದ ಕಾರಣ ಇದರ ಬಳಕೆಯನ್ನು ಜೂನ್ ತಿಂಗಳಿಂದ ನಿಲ್ಲಿಸುವುದಾಗಿ ಸರ್ಕಾರ ಹೇಳಿದೆ.

ವಿರೋಧ ಏಕೆ?

- ಇಡೀ ದೇಹವನ್ನು ಬೆತ್ತಲಾಗಿ ಸ್ಕ್ಯಾನರ್ ನ ಪರದೆಯ ಮೇಲೆ ಬಿಂಬಿಸುವ ಈ ತಪಾಸಣೆಯಿಂದ ಖಾಸಗಿತನಕ್ಕೆ ದಕ್ಕೆಯನ್ನು ಉಂಟುಮಾಡುತ್ತಿವೆ ಎಂಬ ಆರೋಪಗಳು ಕೇಳಿ ಬಂದಿದ್ದವು. ಇದರಿಂದ ಪ್ರಯಾಣಿಕರಿಗೆ ಕಿರಿಕಿರಿಯಾಗುವ ಜೊತೆಗೆ ಮಾನವ ಹಕ್ಕು ಉಲ್ಲಂಘನೆಯೂ ಆಗುತ್ತಿದೆ ಎಂಬ ಟೀಕೆಗಳಿಗೆ ಸರ್ಕಾರ ಗುರಿಯಾಗಿತ್ತು.

## FARC ಗೆ ಕೊಲಂಬಿಯಾ ಅಧ್ಯಕ್ಷರ ಎಚ್ಚರಿಕೆ

ಕೊಲಂಬಿಯಾದ ಅಧ್ಯಕ್ಷರಾದ ಜಾನ್ ಮ್ಯಾನುಯೆಲ್ ಸ್ಯಾಂಟೋಸ್ ರವರು ತಮ್ಮ ದೇಶದ ಎಡ ಪಂಥೀಯ ಬಂಡುಕೋರರು ನೀಡಿರುವ ಹೇಳಿಕೆಗೆ ತಿರುಗೇಟು ನೀಡಿದ್ದಾರೆ. ತಮ್ಮ ದೇಶದ ಸೇನೆ ಬಂಡುಕೋರರನ್ನು ಹತ್ತಿಕ್ಕಲು ಸಮರ್ಪಕವಾಗಿದೆ ಎಂದು ಎಚ್ಚರಿಸಿದ್ದರೆ.

**FARC ಎಂದರೇನು?**

FARC ಅಥವಾ Revolutionary Armed Force of Columbia - People's army ಕೊಲಂಬಿಯಾದಲ್ಲಿ ಕಾರ್ಯನಿರ್ವಹಿಸುತ್ತಿರುವ ಲೆನಿನ್- ಮಾರ್ಕ್ಸಿಸ್ಟ್ ವಾದಿ ಕ್ರಾಂತಿಕಾರಿ ಗೆರಿಲ್ಲ ಸಂಘಟನೆಯಾಗಿದೆ. 1964 ರಿಂದ ನಿರಂತರವಾಗಿ ಕೊಲಂಬಿಯಾದಲ್ಲಿ ಸಶಸ್ತ್ರ ಸಂಘರ್ಷವನ್ನು ನಡೆಸುತ್ತ ಬಂದಿದೆ. FARC ಸಂಘಟನೆಯ ಪ್ರಕಾರ ಇದು ಕೊಲಂಬಿಯಾದ ಬಡ ಜನರಿಂದ ನಿರ್ವಹಿಸುತ್ತಿರು ಸಂಘಟನೆಯಾಗಿದ್ದು ಕೊಲಂಬಿಯಾ ಸರ್ಕಾರದ ನ್ಯೂನತೆಗಳ ವಿರುದ್ಧ ಹೋರಾಡುವುದಾಗಿದೆ. ಇತ್ತೀಚಿನ ಅಂಕಿ ಅಂಶಗಳ ಪ್ರಕಾರ ಸುಮಾರು 8,000 ಸಶಸ್ತ್ರ ಗೆರಿಲ್ಲ ತರಭೇತಿ ಪಡೆದಿರುವ ಸದಸ್ಯರನ್ನು ಇದು ಹೊಂದಿದೆ.

**ಈಗಿನ ವಿವಾದವೇನು?**

- ಕಳೆದ ವರ್ಷ ನವೆಂಬರ್ ನಲ್ಲಿ FARC ಏಕಪಕ್ಷೀಯವಾಗಿ ಯುದ್ದವಿರಾಮನ್ನು ಘೋಷಿಸುವ ಮೂಲಕ ಸರ್ಕಾರಕ್ಕೆ ತನ್ನ ಜೊತೆ ಶಾಂತಿ ಮಾತುಕತೆ ನಡೆಸುವ ಸಲುವಾಗಿ ಕಾಲವಕಾಶ ನೀಡುವ ಮೂಲಕ ಗಡುವು ನೀಡಿತ್ತು. ಆದರೆ ಈಗ ಗಡುವು ಮುಗಿಯಲ್ಲಿದ್ದು, ಯಾವುದೇ ಮಾತುಕತೆ ನಡೆಯದ ಕಾರಣ ಮತ್ತೆ ತನ್ನ ಕಾರ್ಯಾಚರಣೆಯನ್ನು ಮುಂದುವರೆಸುವುದಾಗಿ FARC ಸರ್ಕಾರಕ್ಕೆ ತಿಳಿಸಿದೆ.

## ಬಾಂಗ್ಲದೇಶದ ಯುದ್ಧ ಅಪರಾಧ ಪ್ರಕರಣ: ಮೊದಲ ತೀರ್ಪು ಪ್ರಕಟ

ಬಾಂಗ್ಲದೇಶದ ಯುದ್ಧ ಅಪರಾಧ ಪ್ರಕರಣದಲ್ಲಿ ದುಷ್ಕೃತ್ಯ ಎಸೆದವರ ವಿಚಾರಣೆಗೆಂದೆ ಸ್ಥಾಪಿಸಲಾಗಿರುವ ಯುದ್ಧ ಅಪರಾಧ ನ್ಯಾಯ ಮಂಡಳಿಯು (ಅಥವಾ ಅಂತರ್ ರಾಷ್ಟ್ರೀಯ ಅಪರಾಧ ನ್ಯಾಯಮಂಡಳಿ) ತನ್ನ ಮೊದಲ ತೀರ್ಪನ್ನು ಪ್ರಕಟಿಸಿದೆ. 1971 ರಲ್ಲಿ ನಡೆದ ಬಾಂಗ್ಲ ವಿಮೋಚನ ಯುದ್ದದಲ್ಲಿ ಭಾಗಿಯಾಗಿದ್ದ ಜಮಾತ್-ಎ-ಇಸ್ಲಾಂ ನ ನಾಯಕ ಮೌಲಾನ ಅಬ್ದುಲ್ ಕಲಾಮ್

ಅಜಾದ್ ಗೆ ಜೀವಾವಧಿ ಶಿಕ್ಷೆ ವಿಧಿಸಲಾಗಿದೆ. ಈ ಪ್ರಕರಣದಲ್ಲಿ ಶಿಕ್ಷೆಗೆ ಒಳಗಾದವರಲ್ಲಿ ಅಜಾದ್ ಮೊದಲಿಗರಾಗಿದ್ದರೆ. ಅಜಾದ್ ಅಲಿಯಾಸ್ ಬಚ್ಚು ರಝುಕಾರ್ ರವರು ಜಮಾತ್-ಎ-ಇಸ್ಲಾಂ ನ ವಿಧ್ಯಾರ್ಥಿ ಸಂಘವಾಗಿದ್ದ ಇಸ್ಲಾಮಿ ಚಾತ್ಃ ಸಂಘದ ನಾಯಕರಾಗಿದ್ದರು. 1971 ರಲ್ಲಿ ನಡೆದ ಯುದ್ದಕ್ಕೆ ಸಂಬಂಧಿಸಿದಂತೆ 8 ಆರೋಪಗಳನ್ನು ಇವರ ಮೇಲೆ ಹೊರೆಸಲಾಗಿತ್ತು.

**ಯುದ್ಧ ಅಪರಾಧ ನ್ಯಾಯ ಮಂಡಳಿ?**

ಬಾಂಗ್ಲ ದೇಶದ ಪ್ರಧಾನಿಯಾಗಿರುವ ಹವಾಮಿ ಲೀಗ್ ನ ಶೇಕ್ ಹಸೀನಾ ರವರು ಚುನಾವಣೆ ಸಮಯದಲ್ಲಿ ನೀಡಿದ್ದ ಆಶ್ವಾಸನೆ ಮೇರೆಗೆ ಮೊದಲ ಯುದ್ಧ ಅಪರಾಧ ನ್ಯಾಯ ಮಂಡಳಿಯನ್ನು 2009 ರಲ್ಲಿ ಸ್ಥಾಪಿಸಲಾಗಿತ್ತು.

**ಬಾಂಗ್ಲದೇಶ ವಿಮೋಚನಾ ಯುದ್ಧ 1971:** ಪೂರ್ವ ಪಾಕಿಸ್ತಾನ (ಬಾಂಗ್ಲ ದೇಶ) ಮತ್ತು ಪಶ್ಚಿಮ ಪಾಕಿಸ್ತಾನ (ಪಾಕಿಸ್ತಾನ) ನಡುವೆ 9 ತಿಂಗಳ ಕಾಲ ನಡೆದ ಸಶಸ್ತ್ರ ಸಂಘರ್ಷವೇ ಬಾಂಗ್ಲದೇಶ ವಿಮೋಚನ ಯುದ್ಧ. ಡಿಸೆಂಬರ್ 3, 1971 ರಲ್ಲಿ ಭಾರತ ಸೈನ್ಯ ಮಧ್ಯಸ್ತಿಕೆ ನಂತರ ಈ ಯುದ್ಧ ಡಿಸೆಂಬರ್ 16, 1971 ರಂದು ಕೊನೆಗೊಂಡಿತಲ್ಲದೆ, ಬಾಂಗ್ಲದೇಶ ಪಾಕಿಸ್ತಾನದಿಂದ ಬಿಡುಗಡೆ ಹೊಂದಿ ಸ್ವಾತಂತ್ರ್ಯ ರಾಷ್ಟ್ರವಾಗಿ ಉದಯಿಸಿತು.

- ಪ್ರತಿ ವರ್ಷ ಮಾರ್ಚ್ 26 ರನ್ನು ಬಾಂಗ್ಲ ಸ್ವಾತಂತ್ರ್ಯ ದಿನವನ್ನಾಗಿ ಆಚರಿಸಲಾಗುವುದು.

## ಎರಡನೇ ಅವಧಿಗೆ ಒಬಾಮಾ ಪ್ರಮಾಣ ವಚನ ಸ್ವೀಕಾರ

- ಆಮೆರಿಕಾದ ಅಧ್ಯಕ್ಷರಾಗಿ ಬರಾಕ್ ಒಬಾಮಾ ಎರಡನೇ ಅವಧಿಗೆ ಪ್ರಮಾಣ ವಚನ ಸ್ವೀಕರಿಸಿದರು. ಮುಖ್ಯ ನ್ಯಾಯಮೂರ್ತಿಗಳಿಂದ ಒಬಾಮ ಮತ್ತು ಉಪಾಧ್ಯಕ್ಷರಾಗಿ ಜೋ ಬಿಡೆನ್ ರವರು ಪ್ರಮಾಣ ವಚನ ಸ್ವೀಕರಿಸಿದರು.

## 5 ದೇಶಗಳ ಸಾರಥ್ಯದಲ್ಲಿ ವಿಶ್ವದ ಅತಿ ದೊಡ್ಡ ಆಪ್ಟಿಕಲ್ ಟೆಲಿಸ್ಕೋಪ್ ಸ್ಥಾಪನೆ

ಭಾರತ ಸೇರಿದಂತೆ 5 ದೇಶಗಳ ಸಹಭಾಗಿತ್ವದಲ್ಲಿ ವಿಶ್ವದ ಅತಿ ದೊಡ್ಡ ಆಪ್ಟಿಕಲ್ ಟೆಲಿಸ್ಕೋಪ್ (Optical Telescope) ನಿರ್ಮಾಣವಾಗಲಿದೆ. ಹವಾಯಿಯ ಮೌನ ಕಿ ವೊಲ್ಕನೊ ದ ಶಿಖರದಲ್ಲಿ ಈ ಟೆಲಿಸ್ಕೊಪ್ ಸ್ಥಾಪನೆಯಾಗಲಿದೆ.

- ಭಾರತ, ಆಮೆರಿಕಾ, ಜಪಾನ್, ಚೀನಾ ಮತ್ತು ಕೆನಡಾ ದೇಶಗಳ ಸಹಭಾಗಿತ್ವದಲ್ಲಿ ಈ ಟೆಲಿಸ್ಕೋಪ್ ಸ್ಥಾಪನೆಯಾಗಲಿದ್ದು, 2014 ರಿಂದ ಪ್ರಾರಂಭವಾಗಲಿದೆ.
- ಮೂವತ್ತು ಮೀಟರ್ ಟೆಲಿಸ್ಕೋಪ್ (Thirty Meter Telescope (TMT)) ವಿಶ್ವದ ಅತ್ಯಂತ ಮುಂದುವರೆದ ಭೂಸಂಬಂಧಿ ವೀಕ್ಷಣಾಲಯವಾಗಲಿದೆ. ಸುಮಾರು 1.2 ಬಿಲಿಯನ್ ಡಾಲರ್ ವೆಚ್ಚದಲ್ಲಿ ಇದನ್ನು ನಿರ್ಮಿಸಲಾಗುವುದು.
- ಈಗ ಕಾರ್ಯನಿರ್ವಹಿಸುತ್ತಿರುವ ಟೆಲಿಸ್ಕೋಪ್ ಗಳಿಗಿಂತ TMT ಯು 15 ಪಟ್ಟು ಹೆಚ್ಚು ಸೂಕ್ಷ ಸಂವೇದಿಯಾಗಿದೆ. ಇದರ ವಿನ್ಯಾಸಕ್ಕೆ ಭಾರತದ ವಿಜ್ಞಾನಿಗಳ ಕೊಡುಗೆ ಅಪಾರವಾಗಲಿದೆ.

## ವೆನೆಜುವೆಲಾ ಜೈಲಿನಲ್ಲಿ ಗುಂಪು ಘರ್ಷಣೆ: 50 ಜನರ ಮರಣ

ವೆನುಜುವೆಲಾದ ಉರಿಬಾನಾ ಜೈಲಿನಲ್ಲಿ ಜೈಲು ಸಿಬ್ಬಂದಿ ಮತ್ತು ಕೈದಿಗಳ ನಡುವೆ ನಡೆದ ಜಗಳದಲ್ಲಿ ಸುಮಾರು 50 ಕ್ಕೂ ಹೆಚ್ಚು ಜನರು ಮರಣ ಹೊಂದಿದ್ದು, ಸುಮಾರು 90 ಕ್ಕೂ ಹೆಚ್ಚು ಜನರು ಗಾಯಗೊಂಡಿದ್ದಾರೆ. ಕಾರಗೃಹದಲ್ಲಿ ಕೈದಿಗಳು ಶಸ್ತ್ರಾಸ್ತ್ರಗಳನ್ನು ಹೊಂದಿದ್ದಾರೆ ಎಂಬ ಹಿನ್ನಲೆಯಲ್ಲಿ ಅಲ್ಲಿನ ಅಧಿಕಾರಿಗಳು ತಪಾಸಣೆಗೆ ತೆರೆಳಿದಾಗ ಈ ದುರ್ಘಟನೆ ನಡೆದಿದೆ.

- ವೆನೆಜುವೆಲಾ ಜೈಲುಗಳು ಅತ್ಯಂತ ಶೋಚನೀಯ ಸ್ಥಿತಿಯಲ್ಲಿದ್ದು, ಕೈದಿಗಳ ದಟ್ಟಣೆಯಿಂದ ಹೊಂದಿವೆ. ಇಲ್ಲಿನ ಕಾರಾಗೃಹದ ಸಾಮರ್ಥ್ಯ 14,000 ಕೈದಿಗಳಿಗಾದರೆ, ಸದ್ಯ ಈ ಜೈಲುಗಳಲ್ಲಿ 50,000 ಕೈದಿಗಳನ್ನು ಇಡಲಾಗಿದೆ.

## ಚೆಜ್ ರಿಪಬ್ಲಿಕ್ ನ (Czech Republic) ನೂತನ ಅಧ್ಯಕ್ಷರಾಗಿ: ಮಿಲೊಸ್ ಜೆಮನ್ (Milos Zeman)

ಚೆಜ್ ರಿಪಬ್ಲಿಕ್ ನ ಮೂರನೇ ಮತ್ತು ನೂತನ ಅಧ್ಯಕ್ಷರಾಗಿ ಮಿಲೊಸ್ ಜೆಮನ್ ರವರು ಆಯ್ಕೆಯಾಗಿದ್ದರೆ. ಅಲ್ಲದೇ, ನೇರವಾಗಿ ಆಯ್ಕೆಯಾದ ಚೆಜ್ ರಿಪಬ್ಲಿಕ್ ನ ಮೊದಲ ಅಧ್ಯಕ್ಷರು ಎಂಬ ಹೆಗ್ಗಳಿಕೆಯು ಅವರಿಗೆ ಸಂದಿದೆ. ಮಾರ್ಚ್ 8, 2013 ರಂದು ಜೆಮನ್ ರವರು ವಕ್ಲವಾ ಕ್ಲಾಸ್ (Vaclav Klaws) ರವರಿಂದ ಅಧ್ಯಕ್ಷರಾಗಿ ಅಧಿಕಾರ ವಹಿಸಿಕೊಳ್ಳಲ್ಲಿದ್ದಾರೆ. ಈ ಹಿಂದೆ 1998 ರಿಂದ 2002ರ ವರೆಗೆ ಜೆಮನ್ ರವರು ಚೆಜ್ ರಿಪಬ್ಲಿಕ್ ಪ್ರಧಾನ ಮಂತ್ರಿಯಾಗಿ ಸಹ ಅಧಿಕಾರ ನಿರ್ವಹಿಸಿದ್ದರು.

- ಒಟ್ಟು ಮತದಾನದಲ್ಲಿ ಜೆಮನ್ ರವರು ಶೇ.54.8% ಮತಗಳನ್ನುಗಳಿಸಿದ್ದಾರೆ, ಇವರ ಪ್ರತಿ ಸ್ಪರ್ಧಿ ಹಾಗೂ ಕನ್ಸರೇಟಿವ್ ಪಕ್ಷದ ಸಚಿವರು ಆದ ಕರೆಲ್ ಸ್ವರಜನ್ ಬರ್ಗ (Karel Schwarzenberg) ಶೇ.45.2% ಮತಗಳನ್ನು ಪಡೆಯುವ ಮೂಲಕ ಪರಾಭವಗೊಂಡಿದ್ದಾರೆ.

**ಚೆಜ್ ರಿಪಬ್ಲಿಕ್ ಬಗ್ಗೆ:-**

- ಚೆಜ್ ರಿಪಬ್ಲಿಕ್ ಸೆಂಟ್ರಲ್ ಯುರೋಪ್ ನ ನೆಲಾವೃತ (Landlocked) ದೇಶವಾಗಿದೆ. ಜರ್ಮನಿ, ಪೋಲೆಂಡ್, ಸ್ಲೊವಕಿಯಾ ಮತ್ತು ಆಸ್ಟ್ರೀಯಾ ದೇಶಗಳಿಂದ ಇದು ಸುತ್ತುವರೆದಿದೆ. ಪ್ರೆಗ್ ಇದರ ರಾಜಧಾನಿ ಮತ್ತು ಅತಿ ದೊಡ್ಡ ನಗರ.
- ಚೆಜೆಚೊಸ್ಲೊವಾಕಿಯ (Czechslovakia) 1993 ರಲ್ಲಿ ಸ್ಲೊವಕಿಯಾ ಮತ್ತು ಚೆಜ್ ರಿಪಬ್ಲಿಕ್ ಆಗಿ ವಿಭಜನೆಗೊಂಡ ನಂತರ ಚೆಜ್ ರಿಪಬ್ಲಿಕ್ ಸ್ವತಂತ್ರ ದೇಶವಾಗಿ ಉದಯಿಸಿತು.
- ಚೆಜ್ ರಿಪಬ್ಲಿಕ್ ನ ಸಂವಿಧಾನದ ಪ್ರಕಾರ ಅಲ್ಲಿನ ಅಧ್ಯಕ್ಷರು ಸಾವರ್ತಿಕ ಚುನಾವಣೆಯ ನಂತರ ಪ್ರಧಾನ ಮಂತ್ರಿಯನ್ನು ಮತ್ತು ಸೆಂಟ್ರಲ್ ಬೋರ್ಡ್ ಆಫ್ ಬ್ಯಾಂಕ್ ಗೆ ಸದಸ್ಯರನ್ನು ಆಯ್ಕೆ ಮಾಡುವ ಅಧಿಕಾರವನ್ನು ಹೊಂದಿದ್ದಾರೆ.

## ಅಂತರ್ ರಾಷ್ಟ್ರೀಯ ಚಹಾ ಉತ್ಪಾದಕರ ವೇದಿಕೆ (International Tea Producing Forum) ರಚನೆಗೆ ಒಪ್ಪಿಗೆ

ಜಾಗತಿಕ ಮಟ್ಟದಲ್ಲಿ ಚಹಾ ಉತ್ಪಾದನೆ ಮತ್ತು ಬಳಕೆಯನ್ನು ಪ್ರೇರೆಪಿಸುವ ಸಲುವಾಗಿ ಅಂತರ್ ರಾಷ್ಟ್ರೀಯ ಚಹಾ ಉತ್ಪಾದಕರ ವೇದಿಕೆಯನ್ನು ರಚಿಸಲು ಚಹಾ ಬೆಳೆಯುವ ದೇಶಗಳು ನಿರ್ಣಯ ಕೈಗೊಂಡಿವೆ. ಶ್ರೀಲಂಕಾದ ಕೊಲಂಬೊದಲ್ಲಿ ಇತ್ತೀಚೆಗೆ ನಡೆದ ಚಹಾ ಬೆಳೆಯುವ ದೇಶಗಳಾದ ಶ್ರೀಲಂಕ, ಇಂಡೋನೇಷಿಯಾ, ಕೀನ್ಯಾ, ಚೀನಾ, ಮಲಾವಿ ಮತ್ತು ರಾವಂಡ ದೇಶಗಳ ಸಭೆಯಲ್ಲಿ ಈ ನಿರ್ಧಾರಕ್ಕೆ ಸಹಿ ಹಾಕಲಾಗಿದೆ. ಆದರೆ ಈ ವೇದಿಕೆಗೆ ಚೀನಾ ಸೇರಲಿದೆಯೇ ಅಥವಾ ಇಲ್ಲವೇ ಎಂಬುದು ಇನ್ನೂ ಖಚಿತವಾಗಿಲ್ಲ.

ಈ ವೇದಿಕೆಯ ಮುಖ್ಯ ಉದ್ದೇಶವೇನು?

- ಜಾಗತಿಕ ಮಟ್ಟದಲ್ಲಿ ಪರಿಸರದ ಬದಲಾವಣೆಯಿಂದ ಚಹಾ ಉತ್ಪಾದನೆಯ ಮೇಲೆ ಆಗುತ್ತಿರುವ ಪರಿಣಾಮವನ್ನು ಸಂಶೋಧನೆ ಮಾಡುವುದು.
- ಚಹಾ ಉತ್ಪಾದನೆ ಮತ್ತು ಬಳಕೆಯನ್ನು ಉತ್ತೇಜಿಸುವುದು ಹಾಗೂ ಸದಸ್ಯ ದೇಶಗಳ ನಡುವೆ ಪರಸ್ಪರ ತಂತ್ರಜ್ಞಾನವನ್ನು ವಿನಿಮಯ ಮಾಡುಕೊಳ್ಳುವುದು ಈ ವೇದಿಕೆಯ ಮುಖ್ಯ ಗುರಿಯಾಗಿದೆ.

ಕರುನಾಡು ಎಗ್ಸಾಮ್ಸ್

## ಪರಿಸರ

**ಮಧ್ಯಪ್ರದೇಶ ಸರ್ಕಾರ: 17 ಪರಿಸರ ಸೂಕ್ಷ್ಮ ವಲಯಗಳ ರಚನೆಗೆ ನಿರ್ಧಾರ**

ಮಧ್ಯಪ್ರದೇಶ ಸರ್ಕಾರದ ಅರಣ್ಯ ಇಲಾಖೆಯು 17 ಹೊಸ ಪರಿಸರ ಸೂಕ್ಷ್ಮವಲಯಗಳನ್ನು ತನ್ನ ರಾಜ್ಯದ ರಾಷ್ಟ್ರೀಯ ಉದ್ಯಾನವನ ಮತ್ತು ವನ್ಯಜೀವಿ ಅಭಯಾರಣ್ಯಗಳ ಬಳಿ ಗುರುತಿಸಿದ್ದು ಈ ಪ್ರದೇಶಗಳಲ್ಲಿ ಕಾನೂನು ಬಾಹಿರ ಚಟುವಟಿಕೆ ಮತ್ತು ಅಕ್ರಮ ಗಣಿಗಾರಿಕೆಯನ್ನು ನಿರ್ಬಂಧಿಸಲು ಕ್ರಮಕೈಗೊಳ್ಳಲು ನೆರವಾಗಲಿದೆ.

- **ಪರಿಸರ ಸೂಕ್ಷ್ಮವಲಯಗಳು ಎಲ್ಲೆಲ್ಲಿ**: ಕನ್ಹ ರಾಷ್ಟ್ರೀಯ ಉದ್ಯಾನವನ, ಪೆಂಚ್ ರಾಷ್ಟ್ರೀಯ ಉದ್ಯಾನವನ, ಬಾಂದವಗರ್ ರಾಷ್ಟ್ರೀಯ ಉದ್ಯಾನವನ, ಪನ್ನಾ ರಾಷ್ಟ್ರೀಯ ಉದ್ಯಾನವನ, ಕುನ್ನೊ ವನ್ಯಜೀವಿ ಅಭಯಾರಣ್ಯ ಮತ್ತು ಇತರೆ ಕಡೆ ಗುರುತಿಸಿಲಾಗಿದೆ
- ಮಧ್ಯಪ್ರದೇಶವು 8 ರಾಷ್ಟ್ರೀಯ ಉದ್ಯಾನವನಗಳು ಮತ್ತು 25 ವನ್ಯಜೀವಿ ಅಭಯಾರಣ್ಯಗಳನ್ನು ಹೊಂದಿದೆ

**ಪರಿಸರ ಸೂಕ್ಷ್ಮವಲಯ ಎಂದರೇನು?**

ರಾಷ್ಟ್ರೀಯ ಉದ್ಯಾನವನ ಮತ್ತು ವನ್ಯಜೀವಿ ಅಭಯಾರಣ್ಯಗಳ ಗಡಿಮಿತಿಯಿಂದ 10 ಕಿ.ಮೀ ವ್ಯಾಪ್ತಿಯ ಪ್ರದೇಶವನ್ನು ಪರಿಸರ ಸೂಕ್ಷ್ಮವಲಯ ಎಂದು ಕರೆಯಲಾಗುತ್ತದೆ. ಈ ಪ್ರದೇಶದಲ್ಲಿ ಪರಿಸರಕ್ಕೆ ಹಾನಿ ಉಂಟುಮಾಡುವ ಚಟುವಟಿಕೆಗಳಾದ ಕೈಗಾರಿಕೆಗಳ ನಿರ್ಮಾಣ, ಹೋಟೆಲ್, ರೆಸಾರ್ಟ್ ಮತ್ತು ಗಣಿಗಾರಿಕೆ ಇತ್ಯಾದಿಗಳನ್ನು ಸಂಪೂರ್ಣವಾಗಿ ನೀಷೇಧಿಸಲಾಗುವುದು.

**ಮಾಹಿತಿ ಸಂವಹನ ಮತ್ತು ತಂತ್ರಜ್ಞಾನದಿಂದ 830 ಮಿಲಿಯನ್ ಟನ್ ನಷ್ಟು ಕಾರ್ಬನ್ ಡೈ ಆಕ್ಸೈಡ್**

ಇತ್ತೀಚಿನ ಮಾಹಿತಿ ಪ್ರಕಾರ ಮಾಹಿತಿ ಸಂವಹನ ಮತ್ತು ತಂತ್ರಜ್ಞಾನ ಕ್ಷೇತ್ರದಿಂದ ವಾರ್ಷಿಕದಲ್ಲಿ ಸುಮಾರು 830 ಮಿಲಿಯನ್ ಟನ್ ನಷ್ಟು ಇಂಗಾಲದ ಆಮ್ಲ ಉತ್ಪಾದನೆಯಾಗುತ್ತಿದೆ ಎಂಬ ಅಂಶವನ್ನು ಪರಿಸರ ವಿಜ್ಞಾನ ಮತ್ತು ತಂತ್ರಜ್ಞಾನ ಎಂಬ ಜರ್ನಲ್ ಬಹಿರಂಗಗೊಳಿಸಿದೆ. ಇಂಗಾಲದ ಆಮ್ಲವು ಪ್ರಮುಖ ಹಸಿರು ಮನೆ ಪರಿಣಾಮ ಬೀರುವ ಅನಿಲವಾಗಿದ್ದು 2020 ಕ್ಕೆ ಇದರ ಪ್ರಮಾಣ ದುಪ್ಪಟವಾಗಲಿದೆ ಎಂದು ವರದಿ ತಿಳಿಸಿದೆ.

**ಭಾರತದ ಮೊದಲ ಬಾಹ್ಯಕಾಶ ಹವಾಮಾನ ಅಧ್ಯಯನ ಕೇಂದ್ರ(Space Weather Reading Centre) ಕೊಲ್ಕತ್ತದಲ್ಲಿ**

ದೇಶದಲ್ಲಿ ಮೊಟ್ಟ ಮೊದಲ "ಬಾಹ್ಯಕಾಶ ಹವಾಮಾನ ಅಧ್ಯಯನ ಕೇಂದ್ರ" ಈ ವರ್ಷದ ಮದ್ಯದಲ್ಲಿ ಕೊಲ್ಕತ್ತದಲ್ಲಿ ಅಸ್ತಿತ್ವಕ್ಕೆ ಬರಲಿದೆ. ಈಗಾಗಲೇ ಕೇಂದ್ರ ಮಾನವ ಸಂಪನ್ಮೂಲ ಸಚಿವಾಲಯ 4 ಕೋಟಿ ರೂಪಾಯಿ ಅನುದಾನ ನೀಡಿದ್ದು, ಕೊಲ್ಕತ್ತದ ಭಾರತೀಯ ವಿಜ್ಞಾನ, ಶಿಕ್ಷಣ ಮತ್ತು ಸಂಶೋಧನ ಕೇಂದ್ರದ ಆವರಣದಲ್ಲಿ ಈ ಕೇಂದ್ರ ಸ್ಥಾಪನೆಯಾಗಲಿದೆ.

**ಉಪಯೋಗವೇನು?**

- ದೇಶದ ನಾಗರಿಕ ವೈಮಾನಿಕ ಸಂಚಾರ ನಿರ್ವಹಣೆ ವ್ಯವಸ್ಥೆಯಲ್ಲಿ ಸುಧಾರಣೆ ತರುವುದು ಇದರ ಮುಖ್ಯ ಉದ್ದೇಶವಾಗಿದೆ. ಅಲ್ಲದೆ ಜಿಪಿಎಸ್ ಮತ್ತು ಮೊಬೈಲ್ ತರಂಗಾಂತರ ಕಾರ್ಯನಿರ್ವಹಣೆಯಲ್ಲೂ ಬದಲಾವಣೆಗಳು ಆಗುವ ಮೂಲಕ ಸುಗಮವಾಗಲಿದೆ.

**ನಾಗರಿಕ ಸಂಚಾರ ವ್ಯವಸ್ಥೆಗೆ ಅನುಕೂಲ ಹೇಗೆ?**

- ಸೂರ್ಯನ ಮೇಲ್ಮೈನಿಂದ ಹೊರಹೊಮ್ಮುವ ಸೌರ ಜ್ವಾಲೆಗಳ ವಿಕಿರಣಗಳು (Solar Flames) ಧ್ರುವಗಳ ಮೇಲೆ ಚಲಿಸುವ ವಿಮಾನಗಳ ಮೇಲೆ ತೀವ್ರ ದುಷ್ಪಾರಿಣಾಮ ಬೀರುತ್ತವೆ. ಇಂಥ ಸೌರ ಜ್ವಾಲೆಗಳ ಬಗ್ಗೆ ಈ ಕೇಂದ್ರವು ಮಾಹಿತಿ ಪಡೆದು ವಿಮಾನ ನಿಯಂತ್ರಣ ಕೊಠಡಿಗೆ ಮಾಹಿತಿಯನ್ನು ರವಾನಿಸುತ್ತ ಮುನ್ಸೂಚನೆ ನೀಡುತ್ತದೆ.
- ಅಲ್ಲದೆ ಸೌರ ಮಂಡಲ ಮತ್ತು ಬಾಹ್ಯಕಾಶದಲ್ಲಿ ನಡೆಯುವ ಯಾವುದೇ ಚಿಕ್ಕ ವಿದ್ಯಮಾನವನ್ನು ಕೂಡ ಈ ಕೇಂದ್ರ ಗ್ರಹಿಸಬಲ್ಲದಾಗಿರುವುದರಿಂದ, ದೂರಸಂಪರ್ಕ ಇಲಾಖೆ ಮತ್ತು ವಿಮಾನಯಾನ ಇಲಾಖೆಗಳು ಸುಲಭವಾಗಿ ಮುನ್ಸೂಚನೆ ಪಡೆಯಬಹುದಾಗಿದೆ.

**<u>ಭಾರತೀಯ ಹವಾಮಾನ ಇಲಾಖೆಯ " ಹವಾಮಾನ ಸೇವೆ ಮೊಬೈಲ್ ನಲ್ಲಿ" ಸೇವೆಗೆ ಚಾಲನೆ</u>**

ಕೇಂದ್ರ ವಿಜ್ಞಾನ & ತಂತ್ರಜ್ಞಾನ ಮತ್ತು ಭೂ ವಿಜ್ಞಾನ ಸಚಿವರಾದ ಶ್ರೀ ಜೈಪಾಲ್ ರೆಡ್ಡಿಯವರು, ಭಾರತ ಹವಮಾನ ಇಲಾಖೆಯ "ಹವಾಮಾನ ಸೇವೆ ಮೊಬೈಲ್ ನಲ್ಲಿ ಎಂಬ ಸೇವೆಗೆ ಇತ್ತೀಚೆಗೆ ಚಾಲನೆ ನೀಡಿದರು. ಭಾರತ ಹವಾಮಾನ ಇಲಾಖೆಗೆ 138 ವರ್ಷಗಳು ತುಂಬಿದ ಪ್ರಯುಕ್ತ ಈ ಸೇವೆಯನ್ನು ಆರಂಭಿಸಲಾಗಿದೆ.

**ಏನಿದು ಸೇವೆ?**

ಭಾರತ ಹವಾಮಾನ ಇಲಾಖೆಯು "ಇಂಡಿಯಾ ವೆದರ್ ಎಂಬ ಅಪ್ಲಿಕೇಶನ್ (Apps) ಅಭಿವೃದ್ದಿಪಡಿಸಲಾಗಿದ್ದು, ಇದು ಅಂಡ್ರಾಯಿಡ್ ಆಪರೇಟಿಂಗ್ ಸಿಸ್ಟಮ್ ಹೊಂದಿರುವ ಸ್ಮಾರ್ಟ್ ಫೋನ್ ಮತ್ತು ಟ್ಯಾಬ್ ಗಳಲ್ಲಿ ಸುಲಭವಾಗಿ ಕಾರ್ಯನಿರ್ವಹಿಸಬಲ್ಲದಾಗಿದೆ. ಈ ಅಪ್ಲಿಕೇಶನ್ ಮೇಲೆ ಕ್ಲಿಕ್ ಮಾಡಿದರೆ ಆ ಪ್ರದೇಶದ ಅಂದಿನ ಹವಾಮಾನದ ಬಗ್ಗೆ ಸಂಪೂರ್ಣವಾಗಿ ಮಾಹಿತಿ ತಿಳಿದುಕೊಳ್ಳಬಹುದಾಗಿದೆ.

**<u>ನೋಯ್ಡ ಮತ್ತು ಗ್ರೇಟರ್ ನೋಯ್ಡದಲ್ಲಿ ಕಟ್ಟಡ ಕಾಮಗಾರಿ ನಿಲ್ಲಿಸಲು: ರಾಷ್ಟ್ರೀಯ ಹಸಿರು ನ್ಯಾಯಮಂಡಳಿ ಆದೇಶ</u>**

ಉತ್ತರ ಪ್ರದೇಶದ ನೋಯ್ಡ ಮತ್ತು ಗ್ರೇಟರ್ ನೋಯ್ಡ ನಗರಗಳಲ್ಲಿ ನಡೆಯುತ್ತಿರುವ ಕಟ್ಟಡ ಕಾಮಗಾರಿಗಳನ್ನು ನಿಲ್ಲುಸುವಂತೆ ರಾಷ್ಟ್ರೀಯ ಹಸಿರು ನ್ಯಾಯ ಮಂಡಳಿ (National Green Tribunal) ಆದೇಶಿಸಿದೆ.

ಕಾರಣವೇನು?

- ನ್ಯಾಯ ಮಂಡಳಿಯ ಪ್ರಕಾರ ಇಲ್ಲಿನ ಗುತ್ತಿಗೆದಾರರು ಪರಿಸರ ಗುಣಮಟ್ಟದ ನಿಯಮಗಳನ್ನು ಪಾಲಿಸಿದೆ ಇರುವುದು ಮುಖ್ಯಕಾರಣವಾಗಿದೆ.

- ಕಟ್ಟಡ ಕಾಮಗಾರಿಗಳಿಗೆ ಅಂತರ್ಜಲವನ್ನು ಬಳಸುತ್ತಿದ್ದು, ಅಂತರ್ಜಲದ ಮಟ್ಟ ಕಡಿಮೆಯಾಗುವುದಲ್ಲದೆ ಮಲೀನಗೊಳ್ಳಲಿದೆ. ಅಲ್ಲದೆ, ಕೆಂದ್ರ ಅಂತರ್ಜಲ ಮಂಡಳಿಯ ನಿಯಮಗಳನ್ನು ಉಲ್ಲಂಘಿಸಲಾಗಿದೆ ಎಂದು ತನ್ನ ಆದೇಶದಲ್ಲಿ ತಿಳಿಸಿದೆ

**ರಾಷ್ಟ್ರೀಯ ಹಸಿರು ನ್ಯಾಯ ಮಂಡಳಿ:-**

- ರಾಷ್ಟ್ರೀಯ ಹಸಿರು ನ್ಯಾಯ ಮಂಡಳಿ ಕಾಯ್ದೆ-2010 ನ್ನು ಭಾರತ ಸಂವಿಧಾನದ ಪರಿಚ್ಛೇದ 21 ರ ಅಡಿಯಲ್ಲಿ ಸ್ಥಾಪಿಸಲಾಗಿದೆ. ಸಂವಿಧಾನದ 21 ನೇ ಪರಿಚ್ಛೇದ ದೇಶದ ಪ್ರತಿ ಪ್ರಜೆಗೂ ಶುದ್ಧ ಮತ್ತು ಆರೋಗ್ಯಕರ ಪರಿಸರ ಹೊಂದುವ ಹಕ್ಕನ್ನು ನೀಡಿದೆ.
- ಈ ಕಾಯ್ದೆಯಡಿ ರಾಷ್ಟ್ರೀಯ ಹಸಿರು ನ್ಯಾಯಮಂಡಳಿಯನ್ನು ಸ್ಥಾಪಿಸಲು ಅವಕಾಶ ನೀಡಲಾಗಿದ್ದು, ಅದರಂತೆ ಅಕ್ಟೋಬರ್ 2010 ರಲ್ಲಿ ಸಂಸತ್ತು ನಿರ್ಣಯದ ಆಧಾರದ ಮೇಲೆ ಜಾರಿಗೆ ಬಂದಿದೆ.
- **ಜಸ್ಟೀಸ್.ಲೋಕೇಶ್ವರ್ ಸಿಂಗ್ ಪಾಟ್ನ ಈ ನ್ಯಾಯಮಂಡಳಿಯ ಪ್ರಥಮ ಅಧ್ಯಕ್ಷರಾಗಿದ್ದರು. ಸದ್ಯ ಜಸ್ಟೀಸ್ ಸರಸ್ವತ್ ಕುಮಾರ್ ಡಿಸೆಂಬರ್ 2012 ರಿಂದ ಅಧಿಕಾರ ವಹಿಸಿಕೊಂಡಿದ್ದಾರೆ.**

**ರಾಷ್ಟ್ರೀಯ ಹಸಿರು ನ್ಯಾಯ ಮಂಡಳಿಯ ಕಾರ್ಯಗಳೇನು?**

- ಪರಿಸರ ಮತ್ತು ಪರಿಸರ ಸಂರಕ್ಷಣೆ, ಅರಣ್ಯ ರಕ್ಷಣೆ ಮತ್ತು ನೈಸರ್ಗಿಕ ಸಂಪನ್ಮೂಲಗಳಿಗೆ ಸಂಬಂಧಿಸಿದ ಪ್ರಕರಣಗಳನ್ನು ಪರಿಣಾಮಕಾರಿಯಾಗಿ ಮತ್ತು ತ್ವರಿತವಾಗಿ ವಿಲೇವಾರಿ ಮಾಡುವುದು.
- ಪರಿಸರಕ್ಕೆ ಸಂಬಂಧಿಸಿದ ಯಾವುದೇ ವ್ಯಕ್ತಿ ಮತ್ತು ಆಸ್ತಿಗಳಿಗೆ ಸೂಕ್ತ ಪರಿಹಾರ ನೀಡುವುದು ಮತ್ತು ಕಾನೂನು ಹಕ್ಕು ಜಾರಿ ಮಾಡುವುದಾಗಿ.

**ಎಲ್ಲೆಲ್ಲಿ ಕಾರ್ಯನಿರ್ವಹಿಸುತ್ತಿದೆ?**

- ರಾಷ್ಟ್ರೀಯ ಹಸಿರು ನ್ಯಾಯ ಮಂಡಳಿಯ ಪ್ರಧಾನ ಪೀಠವನ್ನು ನವ ದೆಹಲಿಯಲ್ಲಿ ಸ್ಥಾಪಿಸಲಾಗಿದೆ. ದೇಶದ ಇತರ ನಾಲ್ಕು ಪ್ರಮುಖ ನಗರಗಳಾದ ಪುಣೆ, ಕೊಲ್ಕತ್ತಾ, ಬೋಪಾಲ್ ಮತ್ತು ಚೆನ್ನೈನಲ್ಲಿ ಸಹ ಪೀಠಗಳನ್ನು ಸ್ಥಾಪಿಸಲಾಗಿದೆ.
- ಆಸ್ಟ್ರೇಲಿಯಾ ಮತ್ತು ನ್ಯೂಜಿಲ್ಯಾಂಡ್ ನಂತರ ಪರಿಸರ ಸಂಬಂಧಿತ ಪ್ರಕರಣಗಳ ವಿಚಾರಣೆಗಾಗಿಯೇ ವಿಶೇಷ ಕೋರ್ಟ್ ನ್ನು ಸ್ಥಾಪಿಸಿದ ಮೂರನೇ ದೇಶ ಭಾರತ.

**ಹಿಮಾಲಯದಲ್ಲಿ ಅಣೆಕಟ್ಟು ಮುಂದೆ ಕಾದಿದೆ ಸಂಕಟ**

ಹಿಮಾಲಯದ ಪರ್ವತ ಶ್ರೇಣಿಯಲ್ಲಿ ಭಾರತ ಸರ್ಕಾರ ಕೈಗೊಂಡಿರುವ ಅಣೆಕಟ್ಟು ಕಾಮಗಾರಿಗಳಿಂದ ಮುಂದೆ ಪರಿಸರ ಮತ್ತು ಮಾನವ ಸಂಕುಲದ ಮೇಲೆ ವ್ಯತಿರಿಕ್ತ ಪರಿಣಾಮ ಬೀರಲಿದೆ ಎಂದು ಸಮಿತಿಯೊಂದು ತನ್ನ ವರದಿಯಲ್ಲಿ ತಿಳಿಸಿದೆ.

- ಸಿಂಗಾಪುರದ ರಾಷ್ಟ್ರೀಯ ವಿಶ್ವ ವಿದ್ಯಾಲಯದ ಸಂಶೋಧಕ ಪ್ರೊ.ಮಹಾರಾಜ್ ಕೆ ಪಂಡಿತ್ ನೇತೃತ್ವದ ಅಧ್ಯಯನ ತಂಡ ನಡೆಸಿದ ಈ ಅಂಶ ಬೆಳಕಿಗೆ ಬಂದಿದೆ
- ಹಿಮಾಲಯದ ಪರ್ವತ ಶ್ರೇಣಿಯಲ್ಲಿ ಹರಿದು ಬರುವ ದೊಡ್ಡ ಮತ್ತು ಸಾಧಾರಣ ನದಿಗಳಿಗೆ ಅಡ್ಡಲಾಗಿ ಸುಮಾರು 300 ಕ್ಕೂ ಹೆಚ್ಚು ಅಣೆಕಟ್ಟುಗಳನ್ನು ವಿದ್ಯುತ್ ಉತ್ಪಾದನೆಗೆ ನಿರ್ಮಿಸುತ್ತಿದೆ.

**ಪಾದರಸ ಬಳಸುವಿಕೆಯನ್ನು ತಗ್ಗಿಸುವ ಒಪ್ಪಂದಕ್ಕೆ 140 ದೇಶಗಳು ಸಹಿ**

- ಜಾಗತಿಕ ಮಟ್ಟದಲ್ಲಿ ಪಾದರಸ ಹೊರಸುಸುವಿಕೆ ಮತ್ತು ಬಳಕೆಯನ್ನು ತಗ್ಗಿಸುವ ಸಲುವಾಗಿ ವಿಶ್ವದ ಮೊದಲ ಕಾನೂನು ಬದ್ಧ ಒಪ್ಪಂದಕ್ಕೆ 140 ದೇಶಗಳು ಸಹಿ ಹಾಕುವ ಮೂಲಕ ಸಾಕ್ಷಿಯಾದವು. ಕ್ವಿಕ್ ಸಿಲ್ವರ್ ಎಂದು ಕರೆಯಲ್ಪಡುವ ಪಾದರಸದಿಂದ ಜೀವಿಗಳ ಮೇಲಾಗುವ ದುಷ್ಪರಿಣಾಮವನ್ನು ತಡೆಯುವುದು ಈ ಒಪ್ಪಂದದ ಧ್ಯೇಯವಾಗಿದೆ.
- ಈ ಒಪ್ಪಂದಕ್ಕೆ ಮಿನಿಮಾಟ ಸಮ್ಮೆಳನ ಒಪ್ಪಂದವೆಂದು (Mnimata Convention on Treaty) ಹೆಸರಿಡಲಾಗಿದೆ. ದಶಕಗಳ ಹಿಂದೆ ಜಪಾನ್ ನ ಮಿನಿಮಾಟ ನಗರದಲ್ಲಿ ಪಾದರಸದಿಂದ ಉಂಟಾದ ಮಾಲಿನ್ಯದಿಂದ ಅನೇಕ ಜನರು ರೋಗಕ್ಕೆ ತುತ್ತಾಗಿದ್ದರು ಈ ಕಾರಣದಿಂದ ಈ ಒಪ್ಪಂದಕ್ಕೆ ಮಿನಿಮಾಟ ಒಪ್ಪಂದ ಎಂದು ಹೆಸರಿಡಲಾಗಿದೆ
- ಒಪ್ಪಂದದ ಪ್ರಕಾರ 2020 ರ ಒಳಗೆ ಸದಸ್ಯ ದೇಶಗಳು ಪಾದರಸ ಬಳಕೆಯನ್ನು ಹಂತ ಹಂತವಾಗಿ ನಿಲ್ಲಿಸುವುದಾಗಿದೆ. ಅಲ್ಲದೆ, ಪಾದರಸ ಬಳಸುವ ಉಪಕರಣಗಳಾದ ಮರ್ಕ್ಯೂರಿ ಥರ್ಮೋಮೀಟರ್, ರಕ್ತದೊತ್ತಡ ಅಳೆಯುವ ಮಾಪನ, ಬ್ಯಾಟರಿ, ಫ್ಲೋರೊಸೆಂಟ್ ಬಲ್ಬ್ ಗಳು ಮತ್ತು ಪಾದರಸ ಹೊಂದಿರುವ ಸೌಂಧರ್ಯ ವರ್ಧಕಗಳ ಬಳಕೆ ಮತ್ತು ತಯಾರಿಕೆಯನ್ನು ನಿಲ್ಲಿಸುವುದು. ದಂತ ಚಿಕಿತ್ಸಾಲಯಗಳಲ್ಲಿ ಪಾದರಸ ಬಳಕೆ ಸದ್ಯ ವಿನಾಯಿತಿ ದೊರೆತ್ತಿದ್ದು, ಮುಂದಿನ ದಿನಗಳಲ್ಲಿ ಬಳಕೆಯನ್ನು ತಗ್ಗಿಸಲು ಒಪ್ಪಲಾಗಿದೆ.
- ಸ್ವಿಟ್ಜರ್ ಲ್ಯಾಂಡ್, ನಾರ್ವೆ ಮತ್ತು ಜಪಾನ್ ಈ ಒಪ್ಪಂದವನ್ನು ಜಾರಿಗೆ ತರುವ ಸಲುವಾಗಿ 3 ಮಿಲಿಯಮ್ ಡಾಲರ್ ನಷ್ಟು ಆರ್ಥಿಕ ಸಹಾಯ ನೀಡಿವೆ.

**ಪುಕೋಶಿಮಾ ಅಣು ರಿಯಾಕ್ಟರ್ ಜಾಗದಲ್ಲಿ ಪವನ ವಿದ್ಯುತ್ ಸ್ಥಾವರ: ಜಪಾನ್**

2011 ರ ಸಂಭವಿಸದ ಭೀಕರ ಸುನಾಮಿಗೆ ತುತ್ತಾದದ ಜಪಾನ್ ನ ಅಣು ವಿದ್ಯುತ್ ಘಟಕ ಪುಕೋಶಿಮಾದ ಸ್ಥಳದಲ್ಲಿ ಪವನ ವಿದ್ಯುತ್ ಸ್ಥಾವರವನ್ನು ಸ್ಥಾಪಿಸುವುದಾಗಿ ಜಪಾನ್ ತಿಳಿಸಿದೆ. ಭೀಕರ ಸುನಾಮಿಯ ನಂತರ ಉಂಟಾದ ಅಣು ಸೋರಿಕೆಯಿಂದ ತತ್ತರಿಸಿ ಹೋಗಿದ್ದ ಜಪಾನ್ ಕಾಲ ಕ್ರಮೇಣ ಅಣು ವಿದ್ಯುತ್ ಸ್ಥವರಗಳನ್ನು ಮುಚ್ಚುವುದಾಗಿ ಈ ಹಿಂದೆ ತಿಳಿಸಿತ್ತು.

**ಕಸ್ತೂರಿ ರಂಗನ್ ಆಯೋಗದ ವರದಿ ಸಲ್ಲಿಕೆ**

ಡಾ. ಕಸ್ತೂರಿ ರಂಗನ್ ನೇತೃತ್ವ ವಹಿಸಿರುವ ಪಶ್ಚಿಮ ಘಟ್ಟಗಳ ಪರಿಸರ ತಜ್ಞನರ ಸಮಿತಿ ಇತ್ತೀಚೆಗೆ ತನ್ನ ವರದಿಯನ್ನು ಸರ್ಕಾರಕ್ಕೆ ಸಲ್ಲಿಸಿತು. ಈ ಆಯೋಗದ ಕೆಲವು ಪ್ರಮುಖ ಶಿಫಾರಸ್ಸುಗಳು ಇಲ್ಲಿವೆ.

- ವಿವಾದತ್ಮಕ ಪರಿಸರ ಸೂಕ್ಷ್ಮ ವಲಯಗಳ (Eco Sensitive Zone) ಗಾತ್ರವನ್ನು ಕುಗ್ಗಿಸುವಂತೆ ಸಮಿತಿ ಸೂಚಿಸಿದೆ. ಈಗಿರುವ 9 X 9 ಕಿಲೋಮಿಟರ್ (81 ಚದರ ಕಿ.ಮೀ) ಪರಿಸರ ಸೂಕ್ಷ್ಮ ವಲಯಗಳ ಗಾತ್ರವನ್ನು 30 X 30 ಮೀ (900 ಚದರ ಮೀ) ಗಳಿಗೆ ಇಳಿಸುವಂತೆ ಸಮಿತಿ ವರದಿಯಲ್ಲಿ ಶಿಫಾರಸ್ಸು ಮಾಡಿದೆ.

- ವೈವಿಧ್ಯತೆಯಿಂದ ಕೂಡಿರುವ ಪಶ್ಚಿಮ ಘಟ್ಟದ ಪರಿಸರ ಮತ್ತು ವನ್ಯಜೀವಿಗಳ ದೃಷ್ಟಿಯಿಂದ ಪರಿಸರ ಸೂಕ್ಷ್ಮ ವಲಯಗಳ ಪುನರ್ ರಚನೆ ಅತಿ ಅವಶ್ಯಕವಾಗಿದೆ ಎಂದು ಸಮಿತಿ ಅಭಿಪ್ರಾಯಪಟ್ಟಿದೆ.
- ಪರಿಸರ ಸೂಕ್ಷ್ಮ ವಲಯಗಳ ಪುನರ್ ವಿಂಗಡಣೆಯನ್ನು ರಾಷ್ಟ್ರೀಯ ದೂರ ಸಂವೇದಿ ಕೇಂದ್ರ ಮತ್ತು ಭಾರತೀಯ ಬಾಹ್ಯಕಾಶ ಸಂಶೋಧನ ಸಂಸ್ಥೆಗಳ ಸಹಾಯದಲ್ಲಿ ಮಾಡಲಾಗುವುದೆಂದು ಕಸ್ತೂರಿ ರಂಗನ್ ತಿಳಿಸಿದ್ದಾರೆ.

ಕಸ್ತೂರಿ ರಂಗನ್ ಆಯೋಗವನ್ನು ಕೇಂದ್ರ ಪರಿಸರ ಮತ್ತು ಅರಣ್ಯ ಸಚಿವಾಲಯವು, ಈ ಹಿಂದೆ ಮಾದವ ಗಾಡ್ಗಿಲ್ ನೇತೃತ್ವದ ಪಶ್ಚಿಮ ಘಟ್ಟಗಳ ಪರಿಸರ ತಜ್ಞನರ ಸಮಿತಿ ನೀಡಿದ್ದ ವರದಿಯನ್ನು ಪುನರ್ ವಿಮರ್ಶಿಸುವ ಸಲುವಾಗಿ ನೇಮಕ ಮಾಡಿತ್ತು. ಈ ಸಮಿತಿಯು ಆರು ಜನ ಸದಸ್ಯರನ್ನು ಒಳಗೊಂಡಿದೆ.

**ಮೋಡದಲ್ಲಿ ಸೂಕ್ಷ್ಮಾಣು ಜೀವಿಗಳನ್ನು ಪತ್ತೆ ಹಚ್ಚಿರುವ ವಿಜ್ಞಾನಿಗಳು**

ವಾಯು ಮಂಡಲದ ಮಧ್ಯ ಮತ್ತು ಮೇಲ್ಭಾಗದಲ್ಲಿ ಅಪಾರ ಪ್ರಮಾಣದ ಸೂಕ್ಷಣು ಜೀವಿಗಳನ್ನು ಪತ್ತೆ ಹಚ್ಚಿರುವುದಾಗಿ ಲಂಡನ್ ಮೂಲದ ವಿಜ್ಞಾನಿಗಳು ಹೇಳಿದ್ದಾರೆ.

- ಭೂಮಿಯಿಂದ ಮೇಲೆ ಸುಮಾರು 8 ರಿಂದ 15 ಕಿ.ಮೀ ದೂರದಲ್ಲಿ ನೆಲೆಗೊಂಡಿರುವ ಈ ಜೀವಿಗಳು, ಮೋಡಗಳ ರಚನೆಯಲ್ಲಿ ಪಾತ್ರವಹಿಸಬಹುದು ಎಂದು ಅಂದಾಜಿಸಲಾಗಿದೆ. ಅಲ್ಲದೇ, ಈ ಜೀವಿಗಳು ಗಾಳಿಯ ಮೂಲಕ ರೋಗ, ರುಜಿನಗಳನ್ನು ಹರಡುತ್ತವೆ ಎಂದು ತಿಳಿಸಿದ್ದಾರೆ.
- ಆಮೆರಿಕ, ಪಶ್ಚಿಮ ಅಂಟಾರ್ಟಿಕ ಮತ್ತು ಕೆರಿಬಿಯನ್ ಸಮುದ್ರಗಳ ಮೇಲೆ "ಡಿಸಿ-8" ಎಂಬ ವಿಮಾನ ಸಂಗ್ರಹಿಸಿದ ಗಾಳಿಯ ಮಾದರಿಯಲ್ಲಿ ಈ ಜೀವಿಗಳನ್ನು ಪತ್ತೆ ಹಚ್ಚಲಾಗಿದ್ದು, ಸುಮಾರು 17 ಬಗೆಯ ಸೂಕ್ಷ್ಮಾಣು ಜೀವಿಗಳು ದೊರಕಿವೆ.

**ಬ್ರಹ್ಮಪುತ್ರ ನದಿಯಲ್ಲಿ ಚೀನಾದಿಂದ ಮತ್ತೆ ಮೂರು ಅಣೆಕಟ್ಟು**

ಬ್ರಹ್ಮಪುತ್ರ ನದಿಯಲ್ಲಿ ಅಣೆಕಟ್ಟು ಕಟ್ಟುತ್ತಿರುವ ಚೀನಾದ ಕ್ರಮಕ್ಕೆ ಭಾರತದಿಂದ ಭಾರಿ ವಿರೋಧ ವ್ಯಕ್ತವಾಗುತ್ತಿರುವ ಬೆನ್ನಲ್ಲೇ, ಚೀನಾ ಮತ್ತೆ ಮೂರು ಹೊಸ ಅಣೆಕಟ್ಟುಗಳನ್ನು ನಿರ್ಮಿಸಲು ಸಕಲ ಸಿದ್ಧತೆಗಳನ್ನು ನಡೆಸುತ್ತಿದೆ. ಚೀನಾದ ಹೊಸ ಇಂಧನ ಅಭಿವೃದ್ಧಿ ಯೋಜನೆ-2015 (New Energy Development Plan-2015) ರ ಅಡಿಯಲ್ಲಿ ಈ ಮೂರು ಅಣೆಕಟ್ಟುಗಳನ್ನು ಜಲವಿದ್ಯುತ್ ಉತ್ಪಾದನೆಗಾಗಿ ನಿರ್ಮಿಸಲು ಚೀನಾದ ಸಚಿವ ಸಂಪುಟ ಒಪ್ಪಿಗೆ ನೀಡಿದೆ.

- ಈಗಾಗಲೇ ಚೀನಾ 2010 ರಿಂದ ಝಾಂಗ್ಮು (Zangmu) ಎಂಬ ಸ್ಥಳದಲ್ಲಿ ಅಣೆಕಟ್ಟು ಕಾಮಗಾರಿ ಪ್ರಾರಂಬಿಸಿದ್ದು, 510 ಮೆಗಾ ವ್ಯಾಟ್ ವಿದ್ಯುತ್ ಉತ್ಪಾದಿಸುವ ಗುರಿ ಹೊಂದಿದೆ.
- ಈಗ ನಿರ್ಮಿಸಲು ಉದ್ದೇಶಿಸಿರುವ ಮೂರು ಅಣೆಕಟ್ಟುಗಳಲ್ಲಿ, 640 ಮೆಗಾ ವ್ಯಾಟ್ ಯೋಜನೆಯ ದಗು (Dagu), 320 ಮೆಗಾ ವ್ಯಾಟ್ ಯೋಜನೆಯ ಅಣೆಕಟ್ಟನ್ನು ಜೈಚ(Jiacha) ಮತ್ತು ಜಿಕ್ಸೂ (Jixue) ಎಂಬಲ್ಲಿ ಮೂರನೇ ಅಣೆಕಟ್ಟನ್ನು ನಿರ್ಮಿಸಲು ಮುಂದಾಗಿದೆ. ಈ ಸಂಬಂಧ ಈಗಾಗಲೇ ಹಾಡಾಂಗ್ ಇಂಜನಿಯರಿಂಗ್ ಕಾರ್ಪೊರೇಶನ್ ಆಪ್ ಚೀನಾ ಸ್ಥಳ ಸಮೀಕ್ಷೆಯನ್ನು ಸಹ ಮುಗಿಸಿದೆ.

ಭಾರತದ ನಿಲುವೇನು?

ಬ್ರಹ್ಮಪುತ್ರ ನದಿಯ ಮೇಲೆ ಚೀನಾ ನಿರ್ಮಿಸುತ್ತಿರುವ ಅಣೆಕಟ್ಟು ಕ್ರಮವನ್ನು ಭಾರತ ವಿರೋಧಿಸುತ್ತ ಬಂದಿದೆ. ಬ್ರಹ್ಮ ಪುತ್ರ ನದಿಯ ಹರಿವನ್ನು ತಿರುವುಗೊಳಿಸಲು ಚೀನಾ ಪ್ರಯತ್ನಿಸುತ್ತಿದೆ ಎಂದು ಭಾರತ ಈ ಹಿಂದೆ ಆಕ್ಷೇಪಿಸಿತ್ತು. ಆದರೆ ಇದನ್ನು ಅಲ್ಲೆಗೆಳೆದ ಚೀನಾ ತನ್ನ ಈ ಯೋಜನೆಯಿಂದ ನದಿ ಹರಿವಿಗೆ ಯಾವುದೇ ರೀತಿಯ ಅಡ್ಡಿಯಿಲ್ಲ ಎಂದು ಪ್ರತಿಪಾದಿಸಿತ್ತು. ತಜ್ಞನರ ಪ್ರಕಾರ ಜಲವಿದ್ಯುತ್ ಯೋಜನೆಗಳಿಗೆ ನೀರಿನ ಶೇಖರಣೆ ಅವಶ್ಯಕವಾಗಿರುವುದರಿಂದ ಈಗಲೇ ಭಾರತ ಎಚ್ಚೆತ್ತುಕೊಂಡರೆ ಮುಂದೆ ಆಗುವ ಸಮಸ್ಯೆಗಳನ್ನು ತಡೆಯಬಹುದಾಗಿದೆ.

**ಹವಾಮಾನ ಬದಲಾವಣೆ ಕುರಿತಾದ ಕಾರ್ಯನಿರ್ವಾಹಕ ಸಮಿತಿ ಸ್ಥಾಪನೆ**

ಪ್ರಧಾನ ಮಂತ್ರಿಯವರ ಹವಾಮಾನ ಬದಲಾವಣೆ ಕುರಿತಾದ ಮತೀಯ ಸಭೆಗೆ ಸಹಕರಿಸುವ ಸಲುವಾಗಿ ಕಾರ್ಯನಿರ್ವಾಹಕ ಸಮಿತಿಯೊಂದನ್ನು ಇತ್ತೀಚೆಗೆ ಸ್ಥಾಪಿಸಲಾಯಿತು. ಈ ಸಮಿತಿಯ ಮುಖ್ಯ ಕಾರ್ಯಗಳು ಈ ಕೆಳಕಂಡಂತಿವೆ.

- ರಾಷ್ಟ್ರ ಮಟ್ಟದಲ್ಲಿ ಹವಾಮಾನ ಬದಲಾವಣೆಗೆ ಸಂಬಂಧಿಸಿದ ಸಮಸ್ಯೆಗಳಿಗೆ ಒಂದು ಸುಸಂಘಟಿತ ಸಲಹೆಯನ್ನು ಪ್ರಧಾನ ಮಂತ್ರಿಯವರ ಮತೀಯ ಸಭೆಗೆ ನೀಡುವುದು
- ಪರಿಸರ ಬದಲಾವಣೆಗೆ ಸಂಬಂಧಿಸಿದಂತೆ ರೂಪಿಸಲಾಗಿರುವ 8 ರಾಷ್ಟ್ರೀಯ ಅಭಿಯಾನಗಳನ್ನು (8 missions on climate change) ಮತ್ತು ಇತರೆ ಪರಿಸರ ಸಂಬಂಧಿತ ಕಾರ್ಯಕ್ರಮಗಳ ಅನುಷ್ಠಾನದ ಮೇಲ್ವಿಚಾರಣೆಯನ್ನು ನೋಡಿಕೊಳ್ಳುವುದು.
- ಅಗತ್ಯವೆನಿಸದಲ್ಲಿ ಪರಿಸರ ಸಂಬಂಧಿತ ರಾಷ್ಟ್ರೀಯ ಅಭಿಯಾನಗಳ ಉದ್ದೇಶಗಳನ್ನು, ರಚನೆಯನ್ನು ಮಾರ್ಪಾಡು ಮಾಡಲು ಪ್ರಧಾನ ಮಂತ್ರಿಯವರ ಸಮಿತಿಗೆ ಸಲಹೆ ನೀಡುವುದು..
- ಹವಾಮಾನ ಬದಲಾವಣೆಗೆ ಸಂಬಂಧಿಸಿದಂತೆ ವಿವಿಧ ಸಂಸ್ಥೆಗಳೊಂದಿಗೆ ಸಮನ್ವಯತೆ ಸಾಧಿಸುವುದು ಈ ಸಮಿತಿಯ ಮುಖ್ಯ ಕರ್ತವ್ಯವಾಗಿದೆ.

ಈ ಸಮಿತಿಯ ಅಧ್ಯಕ್ಷರು ಯಾರು?

- ಪ್ರಧಾನ ಮಂತ್ರಿಯವರ ಪ್ರಧಾನ ಕಾರ್ಯದರ್ಶಿಗಳು ಈ ಸಮಿತಿಯ ಅಧ್ಯಕ್ಷತೆಯನ್ನು ವಹಿಸಲ್ಲಿದ್ದು, ಪರಿಸರ ಮತ್ತು ಅರಣ್ಯ ಇಲಾಖೆಯು ಸದಸ್ಯರು ಕಾರ್ಯದರ್ಶಿಯಾಗಿ ಕಾರ್ಯನಿರ್ವಹಿಸಲಿದ್ದಾರೆ.
- ಹಣಕಾಸು ಕಾರ್ಯದರ್ಶಿ, ಸಂಪುಟ ಕಾರ್ಯದರ್ಶಿ, ಯೋಜನಾ ಮಂಡಳಿ, ಇಂಧನ ಸಚಿವಾಲಯ, ಜಲ ಸಂಪನ್ಮೂಲ ಕಾರ್ಯದರ್ಶಿ ಹಾಗೂ ಮತ್ತಿತರೆ ಇಲಾಖೆಗಳು ಈ ಸಮಿತಿಯ ಸದಸ್ಯರಾಗಿ ನೇಮಕಗೊಂಡಿದ್ದಾರೆ.

ಪರಿಸರ ಬದಲಾವಣೆಯನ್ನು ತಗ್ಗಿಸುವ ಸಲುವಾಗಿ ರಾಷ್ಟ್ರ ಮಟ್ಟದ ಕ್ರೀಯಾ ಯೋಜನೆಯನ್ನು ರೂಪಿಸಲು 2007 ರಲ್ಲಿ ಪ್ರಧಾನ ಮಂತ್ರಿಯವರ ಹವಾಮಾನ ಬದಲಾವಣೆ ಕುರಿತಾದ ಮತೀಯ ಸಭೆಯನ್ನು (Prime minister Council on Climate change) ಸ್ಥಾಪಿಸಲಾಗಿದೆ. ಈ ಸಂಬಂಧ ಹವಾಮಾನ ಬದಲಾವಣೆ ಕುರಿತಾದ ರಾಷ್ಟ್ರ ಮಟ್ಟದ ಕ್ರೀಯಾ ಯೋಜನೆಯನ್ನು (National Action Plan of Climate Change) ಪ್ರಧಾನ ಮಂತ್ರಿಯವರು 2008 ಜೂನ್ ನಲ್ಲಿ ಬಿಡುಗಡೆಗೊಳಿಸಿದ್ದರು. ಸದ್ಯ ಈ ಕ್ರೀಯಾ ಯೋಜನೆಯಡಿ 8 ರಾಷ್ಟ್ರೀಯ ಅಭಿಯಾನಗಳನ್ನು ಜಾರಿಗೊಳಿಸಲಾಗಿದೆ.

# ವಿಜ್ಞಾನ ಮತ್ತು ತಂತ್ರ ಜ್ಞಾನ

## ಇಂಟರ್ ನೆಟ್ ಗೆ ಈಗ 30 ವರ್ಷ

ದಿನ ನಿತ್ಯದ ಜೀವನದಲ್ಲಿ ಅವಿಭಾಜ್ಯ ಅಂಗವೇ ಆಗಿರುವ, ವಿಶ್ವದಾದ್ಯಂತ ಕೋಟ್ಯಾಂತರ ಜನರು ಬಳಕೆ ಮಾಡುತ್ತಿರುವ ಅಂತರ್ಜಾಲ ಸೇವೆಗೆ ಈಗ ಮೂವತ್ತು ವರ್ಷ ತುಂಬಿದೆ.

**ಇಂಟರ್ ನೆಟ್ ನಡೆದು ಬಂದ ದಾರಿ**

- ಪ್ರಥಮ ಭಾರಿಗೆ 1960 ರಲ್ಲಿ ಸೇನಾ ಯೋಜನೆಯ ಭಾಗವಾಗಿ ಅರ್ಪಾನೆಟ್ ಆರಂಭವಾಯಿತು. ವೇಲ್ಸ್ ನ ವಿಜ್ಞಾನಿ ಡೊನಾಲ್ಡ್ ಡವೈಸ್ ರವರು ತಯಾರಿಸಿದ ತಾಂತ್ರಿಕ ವಿನ್ಯಾಸದ ಆಧಾರದ ಮೇಲೆ ಈ ಯೋಜನೆ ಕಾರ್ಯಾಚರಣೆ ಮಾಡಿತು.
- 1973 ರಲ್ಲಿ ಐಪಿಎಸ್ ಮತ್ತು ಟ್ರಾನ್ಸ್ ಮಿಷನ್ ಪ್ರೊಟೊಕಲ್ ತಂತ್ರಜ್ಞಾ ನ ಬಳಕೆ ಆರಂಭವಾಯಿತು.
- ಜನವರಿ 1, 1983 ರಲ್ಲಿ ಹೊತ್ತಿಗೆ ಇಂಟರ್ ನೆಟ್ ಪ್ರೊಟೊಕಾಲ್ ಬಳಕೆ ಸಂಪೂರ್ಣವಾಗಿ ಯಶಸ್ವಿಯಾಗಿತು.
- 1999 ರಲ್ಲಿ ಬ್ರಿಟನ್ನ ಕಂಪ್ಯೂಟರ್ ವಿಜ್ಞಾನಿ **ಟಿಮ್ ಬನರ್ ಲೀ ಅವರು ವರ್ಲ್ಡ್ ವೆಬ್ ವೈಡ್** (www) ಉಗಮಕ್ಕೆ ಕಾರಣರಾದರು.
- ಪ್ರಪಂಚದಾದ್ಯಂತ ಅತಿ ಹೆಚ್ಚು ಇಂಟರ್ ನೆಟ್ ಬಳಸು ದೇಶಗಳ ಪಟ್ಟಿಯಲ್ಲಿ ಚೀನಾ ಮೊದಲ ಸ್ಥಾನದಲ್ಲಿದೆ. ಅಮೆರಿಕಾ, ಭಾರತ ಮತ್ತು ಜಪಾನ್ ಕ್ರಮವಾಗಿ ಮೊದಲ ನಾಲ್ಕು ಸ್ಥಾನಗಳಲ್ಲಿವೆ.

## ಅಸ್ತ್ರ ಕ್ಷಿಪಣಿ (Astra Missile) ಮೂರನೇ ಪರೀಕ್ಷಾರ್ಥ ಪ್ರಯೋಗವೂ ಯಶಸ್ವಿ

ಶತ್ರು ವಿಮಾನಗಳನ್ನು ಗಾಳಿಯಲ್ಲೇ ಹೊಡೆದು ಉರುಳಿಸಬಲ್ಲ ಅಸ್ತ್ರ ಕ್ಷಿಪಣಿಯ ಮೂರನೇ ಪರೀಕ್ಷಾರ್ಥ ಪ್ರಯೋಗವು ಯಶಸ್ವಿಯಾಗಿದೆ. ಒಡಿಶಾದ ಚಂಡೀಪುರದಲ್ಲಿ ನಡೆಸಲಾದ ಈ ಪ್ರಯೋಗದಲ್ಲಿ ಫೈಲಟ್ ರಹಿತ ವಿಮಾನ "ಲಕ್ಷ್ಯ"ವನ್ನು ಹೊಡೆದು ಉರುಳಿಸುವ ಮೂಲಕ ಯಶಸ್ವಿಯಾಗಿದ್ದು, ರಕ್ಷಣಾ ಕ್ಷೇತ್ರದಲ್ಲಿ ಭಾರತ ಮತ್ತೊಂದು ಮೈಲುಗಲ್ಲು ಸಾಧಿಸಿದಂತಾಗಿದೆ.

ಅಸ್ತ್ರ ಕ್ಷಿಪಣಿ ಬಗ್ಗೆ:

- ರಕ್ಷಣಾ ಸಂಶೋಧನೆ ಮತ್ತು ಅಭಿವೃದ್ಧಿ ಸಂಸ್ಥೆ (DRDO) ಅಭಿವೃದ್ಧಿ ಪಡಿಸಿರುವ ಅಸ್ತ್ರವು Beyond Visual Range (ದೃಷ್ಟಿ ವ್ಯಾಪ್ತಿಯನ್ನು ಮೀರಿ(BVRAAM)) ಶ್ರೇಣಿಗೆ ಸೇರಿರುವ ಕ್ಷಿಪಣಿಯಾಗಿದ್ದು, ಗಾಳಿಯಿಂದ ಗಾಳಿಯಲ್ಲಿ ಉಡಾಯಿಸಬಲ್ಲದಾಗಿದೆ.
- ಸುಕೋಯ್ 30 MKI, ಮಿಗ್-29, ಮಿರೇಜ್-2000, ತೇಜಸ್ ಮತ್ತು ಜಾಗ್ವಾರ್ ಯುದ್ಧ ವಿಮಾನಗಳಿಗೆ ಇದನ್ನು ಅಳವಡಿಸಬಹುದಾಗಿದೆ. ಗಾಳಿಯಲ್ಲೇ ಶತ್ರು ವಿಮಾನಗಳನ್ನು ಧ್ವಂಸ ಮಾಡುವ ಶಕ್ತಿಯನ್ನು ಅಸ್ತ್ರ ಕ್ಷಿಪಣಿ ಹೊಂದಿದೆ.
- 2003 ರಂದು ಇದರ ಮೊದಲ ಪರೀಕ್ಷಾರ್ಥ ಪ್ರಯೋಗವನ್ನು ಮಾಡಲಾಗಿದ್ದು ಅದು ಸಹ ಯಶಸ್ವಿಯಾಗಿತ್ತು. ಮುಂದಿನ ದಿನಗಳಲ್ಲಿ ಮತ್ತೆರಡು ಪ್ರಯೋಗಗಳನ್ನು ಮಾಡಿದ ಮೇಲೆ ಅಸ್ತ್ರವನ್ನು ಸೇನೆಗೆ ಸೇರಿಸಲಾಗುವುದು.

Beyond Visual Range Air-to-Air missile (BVRAAR) ಎಂದರೇನು?

- ಕ್ಷಿಪಣಿಗಳ ಉಡಾವಣಾ ಸಾಮರ್ಥ್ಯದ ಮೇಲೆ ಕ್ಷಿಪಣಿಗಳನ್ನು ಸಾಮಾನ್ಯವಾಗಿ ಎರಡು ವಿಧಗಳಾಗಿ ವಿಂಗಡಿಸಬಹುದು. ಕ್ಷಿಪಣಿಯ ಸಾಮರ್ಥ್ಯವು 20 ನಾಟಿಕಲ್ ಮೈಲ್ಸ್ ಅಥವಾ 37 ಕೀ.ಮೀ ಗಿಂತ ಹೆಚ್ಚಿರುವ, ಗಾಳಿಯಿಂದ ಗಾಳಿಯಲ್ಲಿ ಉಡಾಯಿಸಬಲ್ಲ ಕ್ಷಿಪಣಿಯನ್ನು BVRAAR ಕ್ಷಿಪಣಿ ಎನ್ನಲಾಗುತ್ತದೆ. ಕ್ಷಿಪಣಿಯ ಸಾಮರ್ಥ್ಯವು 20 ನಾಟಿಕಲ್ ಮೈಲ್ಸ್ ಗಿಂತ ಕಡಿಮೆ ಇದ್ದರೆ ಅದನ್ನು Short Visual Range Air-to-Air missile ಎನ್ನುವರು.

**ಮಂಗಳ ಗ್ರಹದಲ್ಲಿ "ಹೂವು" ನಾಸಾ ವಿಜ್ಞಾನಿಗಳ ಹೇಳಿಕೆ**

ಅಮೆರಿಕಾದ ಬಾಹ್ಯಕಾಶ ಸಂಶೋಧನ ಸಂಸ್ಥೆ ನಾಸಾ, ಕೆಂಪು ಗ್ರಹಕ್ಕೆ ಕಳುಹಿಸಿರುವ "ಕ್ಯೂರಿಯಾಸಿಟಿ ರೋವರ್ ಕಳೆದ ತಿಂಗಳು ಸೆರೆಹಿಡಿದ ಚಿತ್ರದಲ್ಲಿ ಹೂವಿನ ದಳದ ಆಕಾರದ ವಿಶಿಷ್ಟ ಗುಚ್ಚವೊಂದು ಪತ್ತೆ ಹಚ್ಚಿದೆ. ಮಂಗಳ ಗ್ರಹದಲ್ಲಿ ಹೂವು ಅರಳುತ್ತವೆ ಎನ್ನುವ ವದಂತಿಗೆ ಇದು ಪುಷ್ಟಿ ನೀಡಿದೆ. ಚಿತ್ರದಲ್ಲಿ ಕಂಡುಬಂದಿರುವ ಹೂವಿನ ಆಕಾರವು ಬೆಣಚುಕಲ್ಲು ಆಗಿರುವ ಸಾಧ್ಯತೆ ಇದೆಯೆಂದು ಕೆಲವರು ಅಭಿಪ್ರಾಯಪಟ್ಟಿದ್ದರೆ.

ಕ್ಯೂರಿಯಾಸಿಟಿ ರೋವರ್: ನಾಸಾದ ಮಾರ್ಸ್ ಸೈನ್ಸ್ ಲ್ಯಾಬೋರೆಟರಿ ಮಿಷನ್ (MSL) ಭಾಗವಾಗಿ ಮಂಗಳ ಗ್ರಹಕ್ಕೆ ಕಳುಹಿಸಲಾದ ಕಾರು ಗಾತ್ರದ ರೋಬೋಟಿಕ್ ರೋವರ್ ಇದಾಗಿದೆ. ಮಂಗಳ ಗ್ರಹದ ಹವಾಮಾನ ಮತ್ತು ಭೂ ರಚನೆ, ಸೂಕ್ಷ್ಮ ಜೀವಿಗಳ ಜೀವನಕ್ಕೆ ಅನುಕೂಲಕರ ವಾತಾವರಣ, ಈ ಹಿಂದೆ ಮಂಗಳ ಗ್ರಹದ ವಾತಾವರಣ ಜೀವಿಗಳ ಉಗಮಕ್ಕೆ ಪೂರಕವಾಗಿತ್ತೆ ಮತ್ತು ಭವಿಷ್ಯದಲ್ಲಿ ಮಾನವನ ವಾಸಕ್ಕೆ ಯೋಗ್ಯವಾಗಲಿದೆಯೇ ಎಂಬ ಅಧ್ಯಯನವನ್ನು ಮಾಡಲು ನಾಸಾ ಇದನ್ನು 2011 ರ ನವೆಂಬರ್ ನಲ್ಲಿ ಕಳುಹಿಸಿದೆ. ಕ್ಯೂರಿಯಾಸಿಟಿಯ ವಿನ್ಯಾಸವು 2020 ರಲ್ಲಿ ನಾಸಾ ಕೈಗೊಳ್ಳಲ್ಲಿರುವ ಹೆಸರಿಡಿದ ಮಾರ್ಸ್ ಮಿಷನ್ ಗೆ ಆಧಾರವಾಗಲಿದೆ ಎಂದು ನಂಬಲಾಗಿದೆ. ಡಿಸೆಂಬರ್ 2012 ರಲ್ಲಿ ಕ್ಯೂರಿಯಾಸಿಟಿಯು ಎರಡು ವರ್ಷ ಕಾರ್ಯಚರಣೆಯನ್ನು ನಾಸಾ ಅನಿರ್ದಿಷ್ಟವಾಗಿ ವಿಸ್ತರಿಸಿತು.

**ಜೀವ ಸೃಷ್ಟಿಗೆ ಕಾರಣವಾದ ಪೂರ್ವವರ್ತಿ ರಾಸಾಯನಿಕ (Precursor Chemical) ಪತ್ತೆ ಹಚ್ಚಿದ ವಿಜ್ಞಾನಿಗಳು**

ಜೀವಿಯ ಮೂಲಘಟಕಗಳ ನಿರ್ಮಾಣಕ್ಕೆ ಬಹುಮುಖ್ಯವೆನ್ನಲಾದ "ಪೂರ್ವವರ್ತಿ ರಾಸಾಯನಿಕ" ವನ್ನು ಒಂದು ಸಾವಿರ ಬೆಳಕಿನ ವರ್ಷಗಳಷ್ಟು ದೂರದಲ್ಲಿರುವ ತಾರಾ ಸೃಷ್ಟಿವಲಯದಲ್ಲಿ ಪತ್ತೆಹಚ್ಚಿರುವುದಾಗಿ ಖಗೋಳ ವಿಜ್ಞಾನಿಗಳು ಹೇಳಿದ್ದಾರೆ. **ಸಾರಜನಕ, ಆಮ್ಲಜನಕ ಮತ್ತು ಜಲಜನಕ** ಪರಮಾಣುಗಳನ್ನು ಒಳಗೊಂಡ **"ಹೈಡ್ರಾಕ್ಸಿಲ್ ಅಮೈನ್"** ಅಣುವು ಇದಾಗಿದ್ದು, ಅದನ್ನೀಗ ಖಚಿತಪಡಿಸಿಕೊಳ್ಳುವ ಪ್ರಯತ್ನ ನಡೆಯಬೇಕಿದೆ ಎಂದು ತಿಳಿಸಿದ್ದಾರೆ.

**ಕ್ಯಾನ್ಸರ್ ಚಿಕಿತ್ಸೆಗೆ ಹೊಸ ಅಣು ಕಣ ಸಂಶೋಧನೆ**

ಬೆಂಗಳೂರಿನ ಭಾರತೀಯ ವಿಜ್ಞಾನ ಸಂಸ್ಥೆಯ (Indian Institute of Science) ವಿಜ್ಞಾನಿಗಳು ಕ್ಯಾನ್ಸರ್ ಚಿಕಿತ್ಸೆಯಲ್ಲಿ ಕ್ರಾಂತಿಕಾರಿ ಬದಲಾವಣೆ ತರಲಿರುವ ಅಣು ಕಣವೊಂದನ್ನು ಪತ್ತೆಹಚ್ಚಿರುವುದಾಗಿ ತಿಳಿಸಿದ್ದಾರೆ.

- ಡಾ.ಸತೀಶ್ ಸಿ. ರಾಘವನ್ ನೇತೃತ್ವದ ಸಂಶೋಧಕರ ತಂಡ ಕಂಡುಹಿಡಿದ ಈ ಅಣುಕಣಕ್ಕೆ **"ಸತೀಶ್ ಲ್ಯಾಬ್ SCR7"** ಎಂದು ಹೆಸರಿಡಲಾಗಿದೆ. ಕ್ಯಾನ್ಸರ್ ಸೃಷ್ಟಿಸುವ ಜೀವಕಣಗಳ ವಿರುದ್ಧ ಇದು ಪ್ರಯೋಗಕಾರಿಯಾಗಿ ವರ್ತಿಸಲಿದೆ ಎಂದು ವಿಜ್ಞಾನಿಗಳು ಹೇಳಿದ್ದಾರೆ.

**Y-20 ಟ್ರಾನ್ಸ್ ಪೋರ್ಟರ್ (Y-20 Transporter): ಚೀನಾದಿಂದ ಯಶಸ್ವಿ ಪ್ರಯೋಗ**

ಸ್ವದೇಶಿ ನಿರ್ಮಿತ, ಗಾಳಿಯಲ್ಲಿ ಯುದ್ಧ ಟ್ಯಾಂಕ್ ಗಳನ್ನು ಕೊಂಡಯ್ಯಬಲ್ಲ ಸರಕು ವಿಮಾನವನ್ನು ಚೀನಾ ಯಶಸ್ವಿಯಾಗಿ ಪ್ರಯೋಗ ಪರೀಕ್ಷೆಯನ್ನು ನಡೆಸಿದೆ. ಈ ಯಶಸ್ಸು ಚೀನಾದ ಮಿಲಿಟರಿ ಸಾಮರ್ಥ್ಯವನ್ನು ಹೆಚ್ಚಸಲಿದ್ದು, ಜಪಾನ್ ಮತ್ತು ಭಾರತ ದೇಶಗಳಿಗೆ ತೀವ್ರ ಪೈಪೋಟಿಯಾಗಲಿದೆ ಎಂದು ನಂಬಲಾಗಿದೆ.

**Y-20 ಟ್ರಾನ್ಸ್ ಪೋರ್ಟರ್:-**

- ರಷ್ಯಾ ಅಭಿವೃದ್ಧಿ ಪಡಿಸಿರುವ D-30KP-2 ಎಂಬ ನಾಲ್ಕು ಇಂಜಿನ್ ಗಳನ್ನು ಹೊಂದಿರುವ Y-20 ಸರಕು ವಿಮಾನವು, 66 ಟನ್ ತೂಕವನ್ನು ಸುಮಾರು 13,000 ಮೀಟರ್ ಗಳಷ್ಟು ಎತ್ತರಕ್ಕೆ ಕೊಂಡಯ್ಯಬಲ್ಲ ಸಾಮರ್ಥ್ಯವನ್ನು ಹೊಂದಿದೆ.
- ಹಿಮಾಚಲ ಪ್ರದೇಶದಂತ ಅಪಾಯಕಾರಿ ಪ್ರದೇಶಗಳಲ್ಲೂ ಸಹ ಸಮರ್ಥವಾಗಿ ಕೆಲಸ ನಿರ್ವಹಿಸುವ ಸಾಮರ್ಥ್ಯವನ್ನು ಇದು ಹೊಂದಿದೆ.
- "ಏವಿಯೇಷನ್ ಇಂಡಸ್ಟ್ರಿ ಆಫ್ ಚೀನಾ"ದ (Aviation Industry of China) ಅಂಗ ಸಂಸ್ಥೆಯಾದ "ಜೀಯಾನ್ ಏರ್ ಕ್ರಾಫ್ಟ್ ಇಂಡಸ್ಟ್ರಿ" (Xian Aircraft Industry) ಇದನ್ನು ಚೀನಾದ ನ್ಯಾಷನಲ್ ಸೈಂಟಿಫಿಕ್ ಅಂಡ್ ಟೆಕ್ನಾಲಜಿ ಡೆವೆಲಪ್ ಮೆಂಟ್ 2006-2020 ಕಾರ್ಯಕ್ರಮದಡಿ ಅಭಿವೃದ್ಧಿ ಪಡಿಸಿದೆ.

**ಪ್ರಪಂಚದ ಮೊದಲ ಕ್ಲೋನಿಂಗ್ ಎಮ್ಮೆ ಈಗ ತಾಯಿ**

- ವಿಶ್ವದಲ್ಲಿ ಕ್ಲೋನಿಂಗ್ ತಂತ್ರಜ್ಞಾನದ ಮೂಲಕ ಜನಿಸಿದ ಮೊದಲ ಎಮ್ಮೆ "ಗರಿಮ II" (Garima II) ಆರೋಗ್ಯವಂತ ಕರುವಿಗೆ ಜನ್ಮ ನೀಡಿದೆ. 2009 ರಲ್ಲಿ ಹರಿಯಾಣದ ಕರ್ನಲ್ ನಲ್ಲಿರುವ "ರಾಷ್ಟ್ರೀಯ ಡೈರಿ ಅಭಿವೃದ್ಧಿ ಸಂಸ್ಥೆ"ಯು ವಿಶ್ವದಲ್ಲೇ ಪ್ರಥಮ ಬಾರಿಗೆ ಕ್ಲೋನಿಂಗ್ ತಂತ್ರಜ್ಞಾನವನ್ನು ಬಳಸಿ ಎಮ್ಮೆಯನ್ನು ಸೃಷ್ಟಿಸಿದ್ದರು.
- ಈ ಕರುವಿಗೆ "ಮಹಿಮ" ಎಂದು ಹೆಸರಿಡಲಾಗಿದೆ. 32 ಕೆ.ಜಿ ತೂಕವಿರುವ ಈ ಕರು ಆರೋಗ್ಯವಾಗಿದೆ ಎಂದು ವೈದ್ಯರು ತಿಳಿಸಿದ್ದಾರೆ. ಇದೊಂದು ಅದ್ಬುತ ಯಶಸ್ಸಾಗಿದ್ದು, ಇಡಿ ಭಾರತವೇ ಹೆಮ್ಮೆ ಪಡುವಂತ ಸಾಧನೆ ಇದಾಗಿದೆ ಎಂದು ರಾಷ್ಟ್ರೀಯ ಡೈರಿ ಅಭಿವೃದ್ಧಿ ಸಂಸ್ಥೆ"ಯು ನಿರ್ದೇಶಕರಾದ ಎ.ಕೆ.ಶ್ರೀವತ್ಸ ರವರು ಹೇಳಿದ್ದಾರೆ.

**ಬಾಹ್ಯಕಾಶಕ್ಕೆ ಮಂಗನನ್ನು ಕಳುಹಿಸಿದ್ದೇವೆ: ಇರಾನ್**

ಇತ್ತೀಚೆಗೆ ಬಾಹ್ಯಕಾಶಕ್ಕೆ ಮಂಗನನ್ನು ಕಳುಹಿಸಿರುವುದಾಗಿ ಇರಾನ್ ಹೇಳಿದೆ. ಮುಂದಿನ ದಿನಗಳಲ್ಲಿ ಬಾಹ್ಯಕಾಶಕ್ಕೆ ಮಾನವನನ್ನು ಕಳುಹಿಸುವ ಸಿದ್ದತೆಯಲ್ಲಿರುವ ಇರಾನ್ ಅದಕ್ಕೆ ಪೂರ್ವಭಾವಿಯಾಗಿ ಮಂಗನನ್ನು ಕಳುಹಿಸಿರುವುದಾಗಿ ತಿಳಿಸಿದೆ.

- ಕವೋಷ್ಗರ್ (Pishgam) ಎಂಬ ರಾಕೆಟ್ ಮಂಗನನ್ನು ಹೊತ್ತು 120 ಕೀ.ಮೀ ಪ್ರಯಾಣಿಸಿದ್ದು, ಮಂಗ ಸುರಕ್ಷಿತವಾಗಿದೆ ಎಂದು ಬಲ್ಲ ಮೂಲಗಳು ಹೇಳಿವೆ
- 2009 ರಲ್ಲಿ ಇರಾನ್ ಸ್ವದೇಶಿ ನಿರ್ಮಿತ ಹೊಮಿಡ್ (Omid) ಹೆಸರಿನ ಉಪಗ್ರಹವನ್ನು ಬಾಹ್ಯಕಾಶಕ್ಕೆ ಕಳುಹಿಸಿತ್ತು. ಈ ಮೂಲಕ ಉಪಗ್ರಹವನ್ನು ಉಡಾವಣೆಯನ್ನು ಮಾಡಬಲ್ಲ ಸಾಮರ್ಥ್ಯವಿರುವ ಒಂಭತ್ತನೇ ದೇಶವಾಗಿ ಇರಾನ್ ಸುದ್ದಿಮಾಡಿತ್ತು.
- ಈ ಹಿಂದೆ 2010 ರಲ್ಲಿ ಕವೊಶಗರ್ (Kavoshagar-3) ಇರಾನ್ ಇಲಿ, ಆಮೆ ಮತ್ತು ಹುಳುಗಳನ್ನು ಯಶಸ್ವಿಯಾಗಿ ಬಾಹ್ಯಕಾಶಕ್ಕೆ ಕಳುಹಿಸಿತ್ತು.

**ಕಡಲೆ (Chick pea) ಯ ವಂಶವಾಹಿನಿಯನ್ನು ಭೇದಿಸಿದ ವಿಜ್ಞಾನಿಗಳು**

ಜಾಗತಿಕ ಮಟ್ಟದ ವಿಜ್ಞಾನಿಗಳನ್ನು ಒಳಗೊಂಡ ತಂಡವೊಂದು, ನ್ಯಾಷನಲ್ ಕ್ರಾಪ್ ರಿಸರ್ಚ್ ಇನ್ ಸ್ಟಿಟ್ಯೂಟ್ ಫಾರ್ ದಿ ಸೆಮಿ ಏರಿಡ್ ಟ್ರಾಪಿಕ್ಸ್ (ICRISAT) ನ ನೇತೃತ್ವದಡಿಯಲ್ಲಿ ಕಡಲೆ ಯ ಅನುವಂಶಿಯ ಜೀನ್ ಗಳ ಅನುಕ್ರಮವನ್ನು ಬೇದಿಸಿದ್ದಾರೆ.

- ಈ ಮಹತ್ತರ ಸಾಧನೆಯಿಂದ ಬರ ಸಹಿಷ್ಣುತೆಯುಳ್ಳ, ರೋಗ ನಿರೋಧಕ ಮತ್ತು ಅತಿ ಹೆಚ್ಚು ಇಳುವರಿ ನೀಡಬಲ್ಲ ಹೊಸ ಕಡಲೆ ತಳಿಗಳನ್ನು ಅಭಿವೃದ್ಧಿಪಡಿಸಲು ಸಹಾಯವಾಗಲಿದೆ.
- ಅಂದಾಜು 28,269 ಜೀನ್ ಗಳನ್ನು ಈ ಸಂಶೋಧನೆಯಲ್ಲಿ ಕಂಡುಹಿಡಿದಿರುವುದಾಗಿ ವಿಜ್ಞಾನಿಗಳು ತಿಳಿಸಿದ್ದಾರೆ.
- ಕಡಲೆ ಭಾರತದ ಎರಡನೇ ಅತಿ ಹೆಚ್ಚು ಬೆಳೆಯುವ ಧಾನ್ಯ ಬೆಳೆಯಾಗಿದ್ದು, ಸುಮಾರು 11.5 ಮಿಲಿಯನ್ ಹೆಕ್ಟೇರ್ ನಷ್ಟು ವಿಸ್ತೀರ್ಣದಲ್ಲಿ ಬೆಳೆಯಲಾಗುತ್ತಿದೆ. ಬಡ ರೈತರು ಅತಿ ಹೆಚ್ಚಾಗಿ ಈ ಬೆಳೆಯನ್ನು ಒಣ ಭೂಮಿಯಲ್ಲಿ ಬೆಳೆಯಲಾಗುತ್ತದೆ. ಆದ್ದರಿಂದ ಈ ಅನ್ವೇಷಣೆ ಭಾರತದ ಮಟ್ಟಿಗೆ ಒಂದು ವರದಾನ ಆಗಲಿದೆ.
- ಭಾರತವಲ್ಲದೇ ಕಡಲೇಯನ್ನು ಆಫ್ರಿಕಾದ ಕೆಲವು ದೇಶಗಳಾದ ಈಥೋಪಿಯಾ, ತಾಂಜಾನಿಯಾ ಮತ್ತ ಕೀನ್ಯಾ ದೇಶಗಳಲ್ಲೂ ಪ್ರಮುಖ ಬೆಳೆಯಾಗಿ ಬೆಳೆಯಲಾಗುತ್ತದೆ.

**ಕೃತಕ ರಕ್ತ ಉತ್ಪಾದನೆ: ಐಐಟಿ ಮದ್ರಾಸ್ ನ ಸಾಧನೆ**

ಐಐಟಿ ಮದ್ರಾಸ್ ನ ವಿಜ್ಞಾನಿಗಳು ಆಕರ ಕೋಶಗಳಿಂದ (Stem cells) ಕೆಂಪು ರಕ್ತ ಕಣಗಳನ್ನು ಸಂಶೋಧಿಸಿದ್ದು ಇವುಗಳನ್ನು ಕೃತಕ ರಕ್ತವನ್ನಾಗಿ ಉಪಯೋಗಿಸಬಹುದು ಎಂದು ಹೇಳದ್ದಾರೆ. ಆಮ್ಲಜನಕವನ್ನು ಕೊಂಡಯ್ಯಬಲ್ಲ ಸಾಮರ್ಥ್ಯವನ್ನು ಈ ಕೆಂಪು ರಕ್ತ ಕಣಗಳು ಹೊಂದಿದ್ದು ಪ್ರಾಣಿಗಳ ಮೇಲೆ ಪರೀಕ್ಷೆ ನಡೆಸಿದ ಬಳಿಕ ಮನುಷ್ಯರ ಮೇಲೆ ಪ್ರಯೋಗ ಮಾಡಲಾಗುವುದೆಂದು ತಿಳಿಸಿದ್ದಾರೆ.

# ವ್ಯವಹಾರ

**ಭಾರತದಿಂದ ಹತ್ತಿ ನೂಲು ಆಮದು ಮೇಲೆ ವಿಧಿಸಿದ್ದ ಸುರಕ್ಷತ ಸುಂಕವನ್ನು ಹಿಂತೆಗೆದ ಟರ್ಕಿ ದೇಶ**

ಭಾರತದಿಂದ ಆಮದು ಮಾಡಿಕೊಳ್ಳುವ ಹತ್ತಿ ನೂಲಿನ ಮೇಲೆ ವಿಧಿಸುತ್ತಿದ್ದ ಸುರಕ್ಷತ ಸುಂಕವನ್ನು ಟರ್ಕಿ ದೇಶ ಡಿಸೆಂಬರ್ 31ರಿಂದ ಜಾರಿಗೆ ಬರುವಂತೆ ಹಿಂತೆಗೆದುಕೊಂಡಿದೆ. ಇದರಿಂದ ಭಾರತದ ಹತ್ತಿ ರಫ್ತುಗೆ ಇದ್ದ ಅಡಚಣೆ ದೂರವಾಗಿದೆ. 2008 ರಲ್ಲಿ ಮೊದಲು ಸುರಕ್ಷತ ಸುಂಕವನ್ನು ವಿಧಿಸಲಾಗಿದ್ದು ಮತ್ತೆ ಮೂರು ವರ್ಷಗಳ ಕಾಲ ಟರ್ಕಿ ದೇಶ ವಿಸ್ತರಿಸಿತ್ತು.

**ಬಯೋಕಾನ್ ನ ಆ್ಯಂಟಿ-ಸೋರಿಯಾಸಿಸ್ ಔಷದ ಮಾರುಕಟ್ಟೆಗೆ**

ಬೆಂಗಳೂರು ಮೂಲದ ಬಯೋಕಾನ್ ಕಂಪನಿ ತಯಾರಿಸಿರುವ ಆ್ಯಂಟಿ ಸೋರಿಯಾಸಿಸ್ ಔಷಧ "Itolizumb" ಗೆ ಭಾರತೀಯ ಔಷಧ ನಿಯಂತ್ರಣ ಮಂಡಳಿಯು (Drug Control of India) ಅನುಮತಿ ನೀಡಿದ್ದು ಶೀಘ್ರದಲ್ಲಿ ಮಾರುಕಟ್ಟೆಗೆ ಬರಲಿದೆ.

**GAAR ಏಪ್ರಿಲ್ 1, 2016 ರಿಂದ ಜಾರಿ: ಚಿದಂಬರಂ**

ವಿವಾದಿತ "ತೆರಿಗೆ ತಪ್ಪಿಸುವ ಪ್ರವೃತ್ತಿ ತಡೆ ಸಾಮಾನ್ಯ ನಿಯಮ" (General Anti-Avoidance Rules)ವನ್ನು ಏಪ್ರಿಲ್ 1, 2016 ರಿಂದ ಜಾರಿಗೆ ತರಲು ಕೇಂದ್ರ ಸರ್ಕಾರ ನಿರ್ಧರಿಸಿದೆ.

**GAAR ಬಗ್ಗೆ ಒಂದಿಷ್ಟು ಮಾಹಿತಿ:**

- ಸರ್ಕಾರಕ್ಕೆ ತೆರಿಗೆ ವಂಚಿಸುವು ಪ್ರವೃತ್ತಿ ವಿಶ್ವದಾದ್ಯಂತ ಈಗ ತಲೆದೂರಿರುವ ಸಮಸ್ಯೆಯಾಗಿದೆ. ಈ ಸಮಸ್ಯೆಯನ್ನು ನಿರ್ಮೂಲನೆ ಮಾಡುವ ಸಲುವಾಗಿ ರೂಪಿಸಲಾದ ನಿಯಮಗಳ ಒಂದು ವಿಧಾನವೇ GAAR.

**ಭಾರತದಲ್ಲಿ GAAR ಅಲೆ ಮೂಡಿದ್ದು ಯಾವಾಗ?**

- 2012-13 ನೇ ಸಾಲಿನ ಬಜೆಟ್ ನಲ್ಲಿ ಅಂದಿನ ಹಣಕಾಸು ಸಚಿವರಾಗಿದ್ದ ಪ್ರಣಬ್ ಮುಖರ್ಜಿಯವರು GAAR ಬಗ್ಗೆ ಪ್ರಕಟಿಸಿದ್ದರು, ಅಲ್ಲದೇ ಮಾರಿಷಸ್ ಸೇರಿದಂತೆ ಇತರೆ ದೇಶಗಳಿಂದ ತೆರಿಗೆ ವಂಚಿಸಿ ಷೇರು ಮಾರುಕಟ್ಟೆಗೆ ಹರಿದು ಬರುವ ಬಂಡವಾಳವನ್ನು ನಿಯಂತ್ರಿಸಲು ಇದು ಪ್ರಮುಖ ಅಸ್ತ್ರವಾಗಲಿದೆ ಎಂದು ಹೇಳಿದ್ದರು.

**GAAR ಜಾರಿಗೆ ತರಲು ವಿಳಂಬವೇಕೆ?**

- GAAR ಬಳಕೆಗೆ ಹೂಡಿಕೆದಾರರು ತೀವ್ರವಾಗಿ ವಿರೋಧಿಸುತ್ತಿರುವುದು ವಿಳಂಬಕ್ಕೆ ಮುಖ್ಯ ಕಾರಣವಾಗಿದೆ. ಹೂಡಿಕೆದಾರರ ಪ್ರಕಾರ GAAR ಬಳಸಿ ತೆರಿಗೆ ಅಧಿಕಾರಿಗಳು ವಹಿವಾಟಿಗೆ ಅನಗತ್ಯ ತೊಂದರೆ ಕೊಡುತ್ತಾರೆ ಎನ್ನುವುದಾಗಿದೆ. ಅಲ್ಲದೇ, ಆರ್ಥಿಕ ತಜ್ಞರು ವಿದೇಶಿ ಸಾಂಸ್ಥಿಕ ಹೂಡಿಕೆ ಗಣನೀಯವಾಗಿ ತಗ್ಗಲಿದೆ ಎಂದು ಅಭಿಪ್ರಾಯಪಟ್ಟಿದ್ದರು.

**ಶೋಮ್ ಸಮಿತಿ: ಮತ್ತು ಸಮಿತಿಯ ಪ್ರಮುಖ ಶಿಫಾರಸ್ಸುಗಳು**

- GAAR ಜಾರಿಗೆ ಸಂಬಂಧಿಸಿದಂತೆ ಹೂಡಿಕೆದಾರರ ಅಭಿಪ್ರಾಯ ಸಂಗ್ರಹಿಸಲು ಪ್ರಧಾನಿ ಮನ ಮೋಹನ್ ಸಿಂಗ್ ರವರು ಜುಲೈನಲ್ಲಿ ಪಾರ್ಥಸಾರಥಿ ಶೋಮ್ ರವರ ನೇತೃತ್ವದಲ್ಲಿ ಮೂರು ತಜ್ಞರನ್ನು ಒಳಗೊಂಡ ಸಮಿತಿಯೊಂದನ್ನು

ರಚಿಸಿತ್ತು, ಶೋಮ್ ಸಮಿತಿಯಲ್ಲಿ ಮೂರು ವರ್ಷಗಳ ಕಾಲ ಮುಂದೂಡುವಂತೆ ಸರ್ಕಾರಕ್ಕೆ ಶಿಫಾರಸ್ಸು ಮಾಡಲಾಗಿದೆ. ಅದರಂತೆ ಈ ಸಮಿತಿಯ ಶಿಫಾರಸ್ಸಿನ ಮೇರಿಗೆ GAAR ಜಾರಿಯನ್ನು ಮುಂದೂಡಲಾಗಿದೆ ಎಂದು ಸರ್ಕಾರ ತಿಳಿಸಿದೆ.

- ಆದಾಯ ತೆರಿಗೆ ಕಾಯ್ದೆ-1962 ನ್ನು ತಿದ್ದುಪಡಿ ಮಾಡುವಂತೆ ಸಮಿತಿ ತನ್ನ ವರದಿಯಲ್ಲಿ ತಿಳಿಸಿದೆ, ಅಲ್ಲದೇ ತೆರಿಗೆ ಲಾಭದ ವಿತ್ತೀಯ ಮಿತಿಯು ರೂ.3 ಕೋಟಿ ಮತ್ತು ಅದಕ್ಕಿಂತ ಹೆಚ್ಚಿದಲ್ಲಿ ಮಾತ್ರ GAAR ನಿಯಮಗಳು ಅನ್ವಯಿಸಬೇಕು ಎಂದು ಹೇಳಿದೆ.
- GAAR ನಿಬಂಧನೆಗಳನ್ನು ಅಳವಡಿಸಲು ರಚಿಸುವ ಅನುಮೋದನೆ ಸಮಿತಿಯು 5 ಸದಸ್ಯರನ್ನು ಒಳಗೊಂಡಿರಬೇಕು, ಅಲ್ಲದೆ ಸಮಿತಿಯ ಅಧ್ಯಕ್ಷರು **ನಿವೃತ್ತ ಹೈಕೋರ್ಟ್ ನ್ಯಾಯಮೂರ್ತಿಯಾಗಿರಬೇಕೆಂದು** ತಿಳಿಸಿದೆ. ಉಳಿದಂತೆ ಇಬ್ಬರು ಸದಸ್ಯರನ್ನರು ಅರ್ಥಶಾಸ್ತ್ರ, ವ್ಯವಹಾರ ಅಥವಾ ಆದಾಯ ತೆರಿಗೆ ಸಂಬಂಧಿಸದ ವಿಷಯಗಳಲ್ಲಿ ಪರಿಣಿತಿ ಹೊಂದಿರುವವರನ್ನು ಆಯ್ಕೆ ಮಾಡುವುದು ಹಾಗೂ ಉಳಿದ ಇಬ್ಬರು ಸದಸ್ಯರು ಆದಾಯ ತೆರಿಗೆ ಇಲಾಖೆಯ ಕಮೀಷನರ್ ಆಗಿರಬೇಕು ಎಂದು ಹೇಳಿದೆ.

**ವಿಶ್ವಬ್ಯಾಂಕ್ ಜಾಗತಿಕ ಆರ್ಥಿಕ ಭವಿಷ್ಯದ ನೋಟ-2013**

ವಿಶ್ವಬ್ಯಾಂಕ್ ಇತ್ತೀಚೆಗೆ ಬಿಡುಗಡೆ ಮಾಡಿದ ತನ್ನ ಜಾಗತಿಕ ಆರ್ಥಿಕ ಭವಿಷ್ಯದ ನೋಟ-2013 ವರದಿಯಲ್ಲಿ 2013 ನೇ ವರ್ಷದಲ್ಲಿ ಜಾಗತಿಕ ಬೆಳವಣಿಗೆಯನ್ನು ಈ ಹಿಂದೆ ಅಂದಾಜಿಸಲಾಗಿದ್ದ 3% ರಿಂದ 2.4% ಬೆಳವಣಿಗೆಗೆ ಇಳಿಸಿದೆ. ಭಾರತದ ಮಂದಗತಿ ಬೆಳವಣಿಗೆಯು ದಕ್ಷಿಣ ಏಷ್ಯಾ ವಲಯದ ಮೇಲೆ ಪ್ರಭಾವಿ ಬೀರಿದೆ ಹಾಗಾಗಿ ದಕ್ಷಿಣ ಏಷ್ಯಾ 2012 ರ ಅಭಿವೃದ್ಧಿ ಪಥದಲ್ಲಿ ಹಿಂದೆ ಬಿದ್ದಿದೆ ಎಂದು ಬ್ಯಾಂಕ್ ತಿಳಿಸಿದೆ.

- ಆದಷ್ಟೂ ಆರ್ಥಿಕ ಪ್ರಗತಿಯನ್ನು ಮೇಲ್ಮಟ್ಟದಲ್ಲಿರುವಂತೆ ಕಾಯ್ದುಕೊಳ್ಳಿರಿ ಎಂದು ವಿಶ್ವ ಬ್ಯಾಂಕ್ ಅಭಿವೃದ್ಧಿ ದೇಶಗಳಿಗೆ ಎಚ್ಚರಿಸಿದೆ.
- ಜಾಗತಿಕ ಆರ್ಥಿಕ ಸ್ಥಿತಿ ತುಂಬಾ ಸೂಕ್ಷವಾಗಿದೆ. ಅತ್ಯಧಿಕ ಶ್ರೀಮಂತ ರಾಷ್ಟ್ರಗಳು ಸಹ ಆರ್ಥಿಕ ವಿಷಯದಲ್ಲಿ ದುರ್ಬಲಗೊಳ್ಳುತ್ತಿವೆ ಇದರಿಂದಾಗಿಯೇ 2012 ರ ಜಾಗತಿಕ ಜಿಡಿಪಿ ಶೇ.2.3 ಕ್ಕೆ ಬಂದಿದೆ ಎಂದು ವರದಿಯಲ್ಲಿ ತಿಳಿಸಿದೆ.

**ಮೆಟ್ ಲೈಫ್ ಇನ್ಸೂರೆನ್ಸ್ ನಲ್ಲಿ 30% ಪಾಲು ಖರೀದಿಸಲಿರುವ ಪಂಜಾಬ್ ನ್ಯಾಷನಲ್ ಬ್ಯಾಂಕ್**

- ಅಮೆರಿಕಾದ ಮೆಟ್ ಲೈಫ್ ಇನ್ಸೂರೆನ್ಸ್ ನಲ್ಲಿ 30% ಪಾಲನ್ನು ಖರೀದಿಸುವುದಾಗಿ ಪಂಜಾಬ್ ನ್ಯಾಷನಲ್ ಬ್ಯಾಂಕ್ ಹೇಳಿದೆ. ಈ ಸಂಬಂಧ ಬೇಕಾಗಿರುವ ಅನಮೋದನೆಗಳನ್ನು SEBI ಯಿಂದ ಪಡೆದಿರುವದಾಗಿ ಬ್ಯಾಂಕ್ ತಿಳಿಸಿದೆ. ಖರೀದಿ ಪ್ರಕ್ರಿಯೆ ಪೂರ್ಣಗೊಂಡ ನಂತರ ಮೆಟ್ ಲೈಫ್ ಕಂಪನಿಯ ಹೆಸರನ್ನು ಪಂಜಾಬ್ ನ್ಯಾಷನಲ್ ಬ್ಯಾಂಕ್ ಮೆಟ್ ಲೈಫ್ ಎಂದು ಬದಲಿಸಲಾಗುವುದು.

**ರಾಷ್ಟ್ರೀಯ ಔಷಧೀಯ ಬೆಲೆ ನೀತಿ ಪ್ರಕಟಿಸಿದ ಕೇಂದ್ರ ಸರ್ಕಾರ**

- ಕೇಂದ್ರ ಸರ್ಕಾರ ಹೊಸ ಔಷಧಿ ಬೆಲೆ ನೀತಿಯನ್ನು ಪ್ರಕಟಿಸಿದ್ದು, ಅತ್ಯಧಿಕ ಔಷಧಗಳನ್ನು ಬೆಲೆ ನಿಯಂತ್ರಣದಡಿ ತರಲು ನಿರ್ಧರಿಸಿದೆ. ರಾಷ್ಟ್ರೀಯ ಔಷಧೀಯ ಬೆಲೆ ನೀತಿ-2012 (National Drug Control Policy-2012) ನ್ನು ಕೇಂದ್ರ ಸರ್ಕಾರದ ಸಚಿವ ಸಂಪುಟ ನವಂಬರ್ ನಲ್ಲಿ ಅನುಮೋದಿಸಿದ್ದು, ಈ ನೀತಿಯಡಿ **348** ಪ್ರಮುಖ ಔಷಧಗಳನ್ನು ತರಲಾಗಿದೆ.
- ರಾಷ್ಟ್ರೀಯ ಔಷಧೀಯ ಬೆಲೆ ನೀತಿ-2012 ಜಾರಿಗೆ ಬಂದ ಮೇಲೆ ಈ ಹಿಂದೆ ಇದ್ದ ಔಷದ ಬೆಲೆ ನಿಯಂತ್ರಣ ಆದೇಶ-1994 ರದ್ದುಗೊಳ್ಳಲ್ಲಿದೆ.
- ಭಾರತದಲ್ಲಿ ಪ್ರಥಮ ಭಾರಿಗೆ 1962 ರಲ್ಲಿ ಔಷಧ ಬೆಲೆ ನೀತಿಯನ್ನು ಜಾರಿಗೆ ತರಲಾಗಿತ್ತು.

**ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾಗೆ ರೂ.3004 ಕೋಟಿ ನೆರವು**

ಸ್ಟೇಟ್ ಬ್ಯಾಂಕ್ ಸಮೂಹ ಸಂಸ್ಥೆಗಳ ದೇಶಿಯ ಮತ್ತು ವಿದೇಶಿಯ ಮಟ್ಟದಲ್ಲಿ ಕಾರ್ಯನಿರ್ವಹಣೆಗಾಗಿ ಕೇಂದ್ರ ಸರ್ಕಾರ ರೂ.3004 ಕೋಟಿ ನೆರವು ನೀಡಲು ನಿರ್ಧರಿಸಿದೆ. ಮಾರ್ಚ್ ಅಂತ್ಯದ ವೇಳೆಗೆ ಈ ನೆರವನ್ನು ಒದಲಾಗಿಸುವುದು ಎಂದು ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ ತಿಳಿಸಿದೆ.

- ಕಳೆದ ಹಣಕಾಸು ವರ್ಷದಲ್ಲಿ ಕೇಂದ್ರ ಸರ್ಕಾರ ರೂ.7,900 ಕೋಟಿ ಬಂಡವಾಳ ನೆರವು ನೀಡಿತ್ತು.

**ವಿದೇಶಿ ನೇರ ಬಂಡವಾಳ (Foreign Direct Investment) ಹರಿವು ಇಳಿಮುಖ**

ಜಾಗತಿಕ ಆರ್ಥಿಕತೆಯ ಅನಿಶ್ಚತೆಯಿಂದ ಭಾರತದಲ್ಲಿ ವಿದೇಶಿ ನೇರ ಬಂಡವಾಳವದ ಹರಿವು ಎರಡು ವರ್ಷಗಳ ಅವಧಿಯಲ್ಲೇ ಅತಿ ಕಡಿಮೆ ದಾಖಲಾಗಿದೆ. 2011 ರ ನವೆಂಬರ್ ನಲ್ಲಿ 2.5 ಬಿಲಿಯನ್ ಡಾಲರ್ ನಷ್ಟಿದ್ದ ವಿದೇಶಿ ನೇರ ಬಂಡವಾಳವೂ, 2012 ರಲ್ಲಿ 1.05 ಬಿಲಿಯನ್ ಡಾಲರ್ ನಷ್ಟು ಮಾತ್ರ ಹರಿದು ಬಂದಿದೆ.

- ಕೈಗಾರಿಕ ನೀತಿ ಮತ್ತು ಅಭಿವೃದ್ಧಿ ಇಲಾಖೆ ಯ ಪ್ರಕಾರ 2012-13 ರ ನವೆಂಬರ್ ಮತ್ತು ಏಪ್ರಿಲ್ ಅವಧಿಯಲ್ಲಿ ವಿದೇಶಿ ನೇರ ಬಂಡವಾಳದ ಹರಿವು 15.84 ಬಿಲಿಯನ್ ಡಾಲರ್ ನಷ್ಟಿದ್ದರೆ, 2011-12 ರ ಇದೇ ವೇಳೆಯಲ್ಲಿ 22.83 ಬಿಲಿಯನ್ ಡಾಲರ್ ನಷ್ಟಿತ್ತು. ಕಳೆದ ವರ್ಷಕ್ಕೆ ಹೋಲಿಸಿದರೆ ಶೇ.31% ಕಡಿಮೆಯಾಗಿದೆ.
- 2012-13 ರಲ್ಲಿ ಧನಾತ್ಮಕ ಬೆಳೆವಣಿಗೆಯನ್ನು ಹೊಂದಿರುವ ವಲಯಗಳೆಂದರೆ: ಸೇವಾ ವಲಯ, ಹೋಟೆಲ್, ಪ್ರವಾಸೋದ್ಯಮ ಮತ್ತು ಆಟೋಮೊಬೈಲ್ ವಲಯ.
- ಭಾರತದಲ್ಲಿ ಅತಿ ಹೆಚ್ಚು ವಿದೇಶಿ ಬಂಡವಾಳ ಹೂಡುವ ದೇಶಗಳೆಂದರೆ, ಮಾರಿಷಸ್ (7.2 ಬಿಲಿಯನ್ ಡಾಲರ್), ಜಪಾನ್ (1.56 ಬಿಲಿಯನ್ ಡಾಲರ್), ಸಿಂಗಾಪುರ್ (1.5 ಬಿಲಿಯನ್ ಡಾಲರ್), ನೆದರ್ ಲ್ಯಾಂಡ್ (1.09 ಬಿಲಿಯನ್ ಡಾಲರ್) ಮತ್ತು (ಯು.ಕೆ 615 ಮಿಲಿಯನ್ ಡಾಲರ್).

ಕಾರಣವೇನು?

ಜಾಗತಿಕ ಆರ್ಥಿಕ ಸನ್ನಿವೇಶದಲ್ಲಿ ಸಂಭವಿಸಬಹುದಾದ ಸಮಸ್ಯೆಗಳು, ಆರ್ಥಿಕ ಕುಸಿತ ಹಾಗೂ ವಿದೇಶಿ ನೇರ ಬಂಡವಾಳ ಬಗ್ಗೆ ರಾಜಕೀಯ ಒಮ್ಮತ ಅನುಪಸ್ಥಿತಿಯಲ್ಲಿ ವಿದೇಶಿ ನೇರ ಬಂಡವಾಳ ಹರಿವು ಇಳಿಮುಖವಾಗಿದೆ ಎಂದು ಊಹಿಸಲಾಗಿದೆ.

## ಪ್ರಾದೇಶಿಕ ಗ್ರಾಮೀಣ ಬ್ಯಾಂಕ್ (Regional Rural Banks) ಗಳ ವಿಲೀನ

ಪ್ರಸ್ತಕ ಸಾಲಿನ ಹಣಕಾಸು ವರ್ಷದಲ್ಲಿ ಪ್ರಾದೇಶಿಕ ಗ್ರಾಮೀಣ ಬ್ಯಾಂಕ್ ಗಳ ವಿಲೀನ ಭರದಿಂದ ಸಾಗಿದೆ. ಮೊದಲ 9 ತಿಂಗಳಲ್ಲಿ 25 RRB ಗಳು ವಿಲೀನಗೊಂಡು, 10 ದೊಡ್ಡ ಬ್ಯಾಂಕ್ ಗಳಾಗಿ ಹೊರಹೊಮ್ಮಿವೆ. ಇದರಿಂದಾಗಿ ಪ್ರಾದೇಶಿಕ ಗ್ರಾಮೀಣ ಬ್ಯಾಂಕ್ ಗಳ ಸಂಖ್ಯೆ 67 ಕ್ಕೆ ಇಳಿದಿದೆ.

**ವಿಲೀನ ಎಲ್ಲೆಲ್ಲಿ?**

ಬಿಹಾರ, ಕರ್ನಾಟಕ, ಉತ್ತರ ಪ್ರದೇಶ, ಮಧ್ಯ ಪ್ರದೇಶ, ಒಡಿಶಾ, ರಾಜಸ್ತಾನ ಮತ್ತು ಉತ್ತರ ಖಂಡ ರಾಜ್ಯಗಳಲ್ಲಿ ವಿಲೀನ ಕ್ರಿಯೆ ಆರಂಭಗೊಂಡಿದೆ.

**ವಿಲೀನ ಏಕೆ?**

- RRB ಗಳ ವಿಲೀನ ಪ್ರಕ್ರಿಯೆ 2005 ರಿಂದಲೇ ಆರಂಭಗೊಂಡಿದೆ. 2005 ರಲ್ಲಿ ರಚಿಸಲಾದ RBI ನ ಡೆಪ್ಯೂಟಿ ಗೌವರ್ನರ್ ಕೆ.ಸಿ. ಚಕ್ರಭಾರತಿ ಸಮಿತಿಯು 21 ರಾಜ್ಯಗಳಲ್ಲಿ 40 ಆಯ್ದ ಬ್ಯಾಂಕ್ ಗಳಿಗೆ ಮಾತ್ರ ಮರು ಬಂಡವಾಳ ಮಾಡುವಂತೆ ಶಿಫಾರಸ್ಸು ಮಾಡಿತ್ತು. ಈ ಸಮಿತಿಯ ಅನ್ವಯ ಈಗ ಗ್ರಾಮೀಣ ಬ್ಯಾಂಕ್ ಗಳ ವಿಲೀನ ಕಾರ್ಯ ನಡೆದಿದೆ.
- 2005 ರ ಮಾರ್ಚ್ ನಲ್ಲಿ 196 ರಷ್ಟಿದ್ದ ಪ್ರಾದೇಶಿಕ ಗ್ರಾಮೀಣ ಬ್ಯಾಂಕ್ ಗಳ ಸಂಖ್ಯೆ 2006 ರಲ್ಲಿ 133 ಕ್ಕೆ ಕುಸಿಯಿತು.
- 2012 ರಲ್ಲಿ ಏಪ್ರಿಲ್ ಹೊತ್ತಿಗೆ 82 ಪ್ರಾದೇಶಿಕ ಗ್ರಾಮೀಣ ಬ್ಯಾಂಕ್ ಗಳು ಕಾರ್ಯನಿರ್ವಹಿಸುತ್ತಿದ್ದವು. ಸದ್ಯ ಚಾಲ್ತಿಯಲ್ಲಿರುವ ಬ್ಯಾಂಕ್ ಗಳಲ್ಲಿ 79 ಲಾಭದಲ್ಲಿದ್ದರೆ, 3 ಬ್ಯಾಂಕ್ ಗಳು ನಷ್ಟದಲ್ಲಿವೆ.

**ಗಮನಿಸಿ:** RRB ಯಲ್ಲಿ ಕೇಂದ್ರ 50%, ಪ್ರಾಯೋಜಕ ಬ್ಯಾಂಕ್ 35% ಮತ್ತು ಸಂಬಂಧ ಪಟ್ಟ ರಾಜ್ಯಗಳು 15% ಷೇರನ್ನು ಹೊಂದಿರುತ್ತವೆ. RRB ಯನ್ನು ಮೊದಲು 1975 ರಲ್ಲಿ ಸ್ಥಾಪಿಸಲಾಗಿತು.

## ಉಕ್ಕು ಉತ್ಪಾದನೆ ಭಾರತಕ್ಕೆ 4 ನೇ ಸ್ಥಾನ

ಉಕ್ಕು ಉತ್ಪಾದನೆಯಲ್ಲಿ ಭಾರತವು ವಿಶ್ವದಲ್ಲಿ ನಾಲ್ಕನೇ ಸ್ಥಾನದಲ್ಲಿದೆ. 2012 ನೇ ಸಾಲಿನಲ್ಲಿ 767 ಲಕ್ಷ ಟನ್ ಉಕ್ಕು ತಯಾರಿಸಿದ್ದು, ಶೇ.4.2 ರಷ್ಟು ಪ್ರಗತಿ ದಾಖಲಿಸಲಾಗಿದೆ ಎಂದು ವಿಶ್ವ ಉಕ್ಕು ಸಂಸ್ಥೆ (World Steel Association) ತಿಳಿಸಿದೆ.

- ಅತಿ ಹೆಚ್ಚು ಉಕ್ಕು ಉತ್ಪಾದಿಸುವ ಪಟ್ಟಿಯಲ್ಲಿ ಚೀನಾ ಪ್ರಥಮ ಸ್ಥಾನದಲ್ಲಿದರೆ, ಜಪಾನ್ ಮತ್ತು ಆಮೆರಿಕಾ ನಂತರದ ಸ್ಥಾನದಲ್ಲಿವೆ.

ಕಬ್ಬಿಣದ ಅದಿರು ರಫ್ತು ಭಾರಿ ಕುಸಿತ

- ಗೋವಾ ಮತ್ತು ಕರ್ನಾಟಕ ರಾಜ್ಯಗಳಲ್ಲಿ ಗಣಿಗಾರಿಕೆ ನಿಷೇಧಿಸಿರುವುದರಿಂದ ಮತ್ತು ಸಾಗಣೆ ದರ ಗಣನೀಯವಾಗಿ ಹೆಚ್ಚಿರುವುದರಿಂದ ಕಬ್ಬಿಣದ ಅದಿರು ರಫ್ತು ಏಪ್ರಿಲ್ - ನವೆಂಬರ್ ಅವಧಿಯಲ್ಲಿ ಶೇ.62 ರಷ್ಟು ಕುಸಿದಿದ್ದು, ಕೇವಲ 150 ಲಕ್ಷ ಟನ್ ಮಾತ್ರ ರಫ್ತಾಗಿದೆ.

- ಕಳೆದ ವರ್ಷ ಏಪ್ರಿಲ್ - ನವೆಂಬರ್ ಅವಧಿಯಲ್ಲಿ 400 ಲಕ್ಷ ಟನ್ ಗಳಷ್ಟು ರಫ್ತಾಗಿತ್ತು. ರಫ್ತಿನ ಮೇಲೆ ಶೇ.30% ರಷ್ಟು ಸುಂಕ ವಿಧಿಸಿರುವ ಕಾರಣ ಉದ್ಯಮ ಪ್ರಗತಿಗೆ ಭಾರಿ ಹಿನ್ನಡೆ ಉಂಟಾಗಿದೆ ಎಂದು ಭಾರತೀಯ ಗಣಿಗಾರಿಕೆ ಉದ್ಯಮಗಳ ಒಕ್ಕೂಟ ತಿಳಿಸಿದೆ.

**ಬೋಯಿಂಗ್ ನಿಂದ ಭಾರತಕ್ಕೆ C -17 ಯುದ್ಧ ವಿಮಾನ ರವಾನೆ**

- ಆಮೆರಿಕಾದ ಹೆಸರಾಂತ ವಿಮಾನ ನಿರ್ಮಾಣ ಕಂಪನಿ ಬೋಯಿಂಗ್, ಹತ್ತು C-17 ಗ್ಲೋಬ್ ಮಾಸ್ಟರ್ III ಯುದ್ಧ ವಿಮಾನಗಳನ್ನು ಭಾರತದ ವಾಯು ದಳಕ್ಕೆ ಹಸ್ತಾಂತರಿಸಿದೆ. ಇನ್ನೂ ನಾಲ್ಕು C-17 ವಿಮಾನಗಳನ್ನು 2014 ರ ಅಂತ್ಯಕ್ಕೆ ರವಾನಿಸಲಾಗುವುದೆಂದು ಸಂಸ್ಥೆ ತಿಳಿಸಿದೆ. 2011 ರಲ್ಲಿ ಭಾರತ C-17 ಯುದ್ಧ ವಿಮಾನಗಳನ್ನು ಕೊಳ್ಳುವ ಸಲುವಾಗಿ ಆಮೆರಿಕಾದೊಂದಿಗೆ ಒಪ್ಪಂದವನ್ನು ಮಾಡಿಕೊಂಡಿತ್ತು.
- ಏನಿದು C-17 ಗ್ಲೋಬ್ ಮಾಸ್ಟರ್ III?
- C-17 ಗ್ಲೋಬ್ ಮಾಸ್ಟರ್ III ಮಿಲಿಟರಿ ಸರಕು ಸಾಗಿಸುವ ವಿಮಾನವಾಗಿದ್ದು, ಅತಿ ಕಿರಿದಾದ ಮತ್ತು ಸೂಕ್ಷ್ಮ ಪ್ರದೇಶಗಳಲ್ಲೂ ಸಹ ಸಮರ್ಥವಾಗಿ ಕೆಲಸ ನಿರ್ವಹಿಸಲಿದೆ. ಹಗಲು ಮತ್ತು ರಾತ್ರಿ ವೇಳೆಗಳಲ್ಲೂ ಸಹ ಇದನ್ನು ಬಳಸಬಹುದಾಗಿದೆ. ಸುಮಾರು 7,600 ಮೀಟರ್ ಎತ್ತರಕ್ಕೆ ಹಾರಬಲ್ಲದಾಗಿದ್ದು, 160,000 ಫೌಂಡ್ ಭಾರ ಎತ್ತುವ ಸಾಮರ್ಥ್ಯವನ್ನು ಈ ವಿಮಾನ ಹೊಂದಿದೆ.

**RBI ನಿಂದ ತ್ರೈಮಾಸಿಕ ಹಣಕಾಸು ನೀತಿ ಪರಾಮರ್ಶೆ: ಬಡ್ಡಿ ದರ ಇಳಿಕೆ**

ಭಾರತೀಯ ರಿಸರ್ವ್ ಬ್ಯಾಂಕ್ ತನ್ನ ತ್ರೈಮಾಸಿಕ ಹಣಕಾಸು ನೀತಿ ಪರಾಮರ್ಶೆಯನ್ನು ಪ್ರಕಟಿಸಿದ್ದು, 9 ತಿಂಗಳ ನಂತರ ಇದೇ ಮೊದಲ ಬಾರಿಗೆ ರೆಪೊ ದರವನ್ನು ಶೇ.025 ರಷ್ಟು ತಗ್ಗಿಸಿದೆ. ರೆಪೂ ದರ ತಗ್ಗಿರುವುದರಿಂದ ಗೃಹ, ವಾಣಿಜ್ಯ, ವಾಹನ ಮತ್ತು ಕಾರ್ಪೊರೇಟ್ ಸಾಲಗಳ ಮೇಲಿನ ಬಡ್ಡಿ ದರವು ತಗ್ಗಲಿದೆ ಎಂದು ಅಂದಾಜಿಸಲಾಗಿದೆ.

- ಆರ್ಥಿಕ ಬೆಳವಣಿಗೆಯನ್ನು ಹೆಚ್ಚಿಸಲು ಮತ್ತು ಹೂಡಿಕೆಗೆ ಉತ್ತೇಜನ ನೀಡಲು ಈ ನಿರ್ಧಾರ ಕೈಗೊಂಡಿರುವುದಾಗಿ ರಿಸರ್ವ್ ಬ್ಯಾಂಕ್ ನ ಗವರ್ನರ್ ಡಿ.ಸುಬ್ಬುರಾವ್ ಹೇಳಿದ್ದಾರೆ.
- RBI ನ ಈ ಕ್ರಮದಿಂದ ಕೈಗಾರಿಕೆ ಮತ್ತು ತಯಾರಿಕ ವಲಯಕ್ಕೆ ಇದರಿಂದ ಗರಿಷ್ಟ ಉತ್ತೇಜನ ಲಭಿಸಲಿದೆ ಎಂದು ಪಿಕ್ಕಿಯ ಅಧ್ಯಕ್ಷೆ ಲಾಲ್ ಕಿದ್ವಾಯಿ ಹೇಳಿದ್ದಾರೆ. ಒಟ್ಟಾರೆ ಬಡ್ಡಿ ದರವನ್ನು ಕಡಿತಗೊಳಿಸಿರುವುದನ್ನು ಎಲ್ಲಾ ವರ್ಗಗಳು ಸ್ವಾಗತಿಸಿವೆ.
- ತ್ರೈಮಾಸಿಕ ಹಣಕಾಸು ನೀತಿ ಪರಾಮರ್ಶೆ-2012-13 ರ ಪ್ರಕಾರ ಸಿಆರ್ಆರ್ (CRR) 4.00%, ರಿವರ್ಸ್ ರಿಪೊ (Reverse repo) 6.75%, ರೆಪೊ ದರ (Repo rate) 7.75% ಆಗಿದೆ.

**ಭಾರತ ಮತ್ತು ಚೀನಾದ ನಡುವೆ ವಿಮಾನ ಸಂಪರ್ಕ ಕಲ್ಪಿಸಲಿರುವ: ಸ್ಪೈಸ್ ಜೆಟ್**

ಭಾರತದಿಂದ ಚೀನಾಕ್ಕೆ ವಿಮಾನಯಾನ ವ್ಯವಸ್ಥೆ ಕಲ್ಪಿಸಲು ಖಾಸಗಿ ವಿಮಾನ ಕಂಪನಿ ಸ್ಪೈಸ್ ಜೆಟ್ ಸಜ್ಜಾಗಿದೆ. ನವದೆಹಲಿಯಿಂದ ಚೀನಾದ ಗುವಾಂಗ್ಜು (Guangzhou) ನಡುವೆ ನಾಲ್ಕು ಸಾಪ್ತಾಹಿಕ ವಿಮಾನಗಳನ್ನು ಆರಂಭಿಸಲಾಗುವುದಾಗಿ ಕಂಪನಿ ತಿಳಿಸಿದೆ. ಅಲ್ಲದೇ ಚೀನಾಕ್ಕೆ ವಿಮಾನ ಸೌಕರ್ಯ ಕಲ್ಪಿಸಿದ ಮೊದಲ ಖಾಸಗಿ ಸಂಸ್ಥೆ ಎಂಬ ಹೆಗ್ಗಳಿಕೆಗೆ ಸ್ಪೈಸ್ ಜೆಟ್ ಪಾತ್ರವಾಗಲಿದೆ.

- ಚೀನಾದ ಶಾಂಘೈ ನಂತರ ಭಾರತದಿಂದ ವಿಮಾನ ಸಂಪರ್ಕ ಹೊಂದಲಿರುವ ಎರಡನೇ ನಗರವಾಗಿ ಗುವಾಂಗ್ಜು ಆಗಲಿದೆ. ಏರ್ ಇಂಡಿಯಾ ಮತ್ತು ಏರ್ ಚೀನಾ ವಿಮಾನಗಳು ಶಾಂಘೈ ಮತ್ತು ಭಾರತದ ನಡುವೆ ಸದ್ಯ ಕಾರ್ಯನಿರ್ವಹಿಸುತ್ತಿವೆ.
- ಇಂತಹ ಹೊಸ ಯೋಜನೆಯಿಂದ ಭಾರತ ಮತ್ತು ಚೀನಾ ದೇಶಗಳ ನಡುವಿನ ಸಂಬಂಧ ಮತ್ತಷ್ಟು ಬಿಗಿಗೊಳ್ಳಲಿದೆ ಎಂದು ಆಶಿಸಲಾಗಿದೆ.

## ಕ್ರೀಡೆ

**ಆಸ್ಟ್ರೇಲಿಯಾದ ಮಿಸ್ಟರ್ ಕ್ರಿಕೆಟ್ ಮೈಕ್ ಹಸ್ಸಿ ಟೆಸ್ಟ್ ಕ್ರಿಕೆಟ್ ನಿಂದ ನಿವೃತ್ತಿ**

ಆಸ್ಟ್ರೇಲಿಯಾದ ಶ್ರೇಷ್ಠ ಕ್ರಿಕೆಟ್ ಬ್ಯಾಟ್ಸ್ಮನ್ ಮೈಕ್ ಹಸ್ಸಿ ಶ್ರೀಲಂಕ ಮತ್ತು ಆಸ್ಟ್ರೇಲಿಯಾದ ನಡುವಿನ ಸರಣಿಯ ಕೊನೆಯ ಪಂದ್ಯದ ಬಳಿಕ ತಮ್ಮ ಟೆಸ್ಟ್ ಕ್ರಿಕೆಟ್ ವೃತ್ತಿಯಿಂದ ನಿವೃತ್ತಿ ಹೊಂದಲ್ಲಿದ್ದಾರೆ. ಈ ಪಂದ್ಯ ಅವರ 79 ನೇ ಮತ್ತು ಕೊನೆಯ ಟೆಸ್ಟ್ ಪಂದ್ಯವಾಗಲಿದೆ. ಮಿಸ್ಟರ್. ಕ್ರಿಕೆಟ್ ಎಂದು ಹೆಸರಾಗಿರುವ ಹಸ್ಸಿ ಇಲ್ಲಿಯವರೆಗೆ 78 ಟೆಸ್ಟ್ ಪಂದ್ಯಗಳನ್ನು ಆಡುವ ಮೂಲಕ 6183 ರನ್ ಗಳನ್ನು ಗಳಿಸಿದ್ದಾರೆ ಇದರಲ್ಲಿ 19 ಶತಕ ಮತ್ತು 29 ಅರ್ಧ ಶತಕಗಳು ಸೇರಿವೆ.

**ಇಂಗ್ಲೆಂಡ್ ಕ್ರಿಕೆಟ್ ನ ಮಾಜಿ ನಾಯಕ ಮತ್ತು ಕ್ರಿಕೆಟ್ ವ್ಯಾಖ್ಯಾನುಕಾರ (Commentator) ಟೋನಿ ಗ್ರೇಗ್ ನಿಧನ**

ಇಂಗ್ಲೆಂಡ್ ಕ್ರಿಕೆಟ್ ನ ಮಾಜಿ ನಾಯಕ ಮತ್ತು ವ್ಯಾಖ್ಯಾನುಕಾರ ಅಂಥೋನಿ ವಿಲಿಯಂ ಟೋನಿ ಗ್ರೇಗ್ ತಮ್ಮ 66 ನೇ ವಯಸ್ಸಿನಲ್ಲಿ ಕೊನೆಯುಸಿರೆಳೆದರು. ಟೋನಿ 58 ಟೆಸ್ಟ್ ಪಂದ್ಯಗಳಿಂದ 3,599 ರನ್ ಗಳನ್ನು 40.43 ಸರಾಸರಿಯಲ್ಲಿ ಗಳಿಸಿದ್ದರು ಅಲ್ಲದೇ ಅವರು 141 ವಿಕೆಟ್ ಗಳನ್ನು ಸಹ ಪಡೆದಿದ್ದರು.

**ಪಾಕಿಸ್ತಾನದ ಪಾಲಾದ ಏಕದಿನ ಪಂದ್ಯ ಸರಣಿ**

ಭಾರತ ಮತ್ತು ಪಾಕಿಸ್ತಾನ ದೇಶಗಳಲ್ಲಿ ಕುತೂಹಲ ಮೂಡಿಸಿದ್ದ ಏಕದಿನ ಕ್ರಿಕೆಟ್ ಸರಣಿ ಪಂದ್ಯದಲ್ಲಿ ಪಾಕಿಸ್ತಾನವು ಭಾರತವನ್ನು 2-1 ಅಂತರದಿಂದ ಪರಾಭವಗೊಳಿಸಿ ಪ್ರಶಸ್ತಿಯನ್ನು ಮುಡಿಗೇರಿಸಿಕೊಂಡಿತು.

**ರಾಷ್ಟ್ರೀಯ ಭಾರ ಎತ್ತುವ ಚಾಂಪಿಯನ್ ಷಿಪ್ ಗೆದ್ದ: ವಿಕಾಸ್ ಠಾಕೂರ್**

19 ವರ್ಷದ ಯುವಕ ವಿಕಾಸ್ ಠಾಕೂರ್ ಮನಸೆಳವ ಪ್ರದರ್ಶನ ನೀಡುವ ಮೂಲಕ ರಾಷ್ಟ್ರೀಯ ಭಾರ ಎತ್ತುವ ಚಾಂಪಿಯನ್ ಷಿಪ್ ನಲ್ಲಿ ವಿಜೇತರಾಗಿ ಹೊರಹೊಮ್ಮಿದರು.

**ಮಾಜಿ ಟೆಸ್ಟ್ ಕ್ರಿಕೆಟಿಗ ಸುರ್ತಿ ನಿಧನ**

ಭಾರತ ಕ್ರಿಕೆಟ್ ತಂಡದ ಮಾಜಿ ಟೆಸ್ಟ್ ಆಟಗಾರ ರುಸಿ ಸುರ್ತಿ ಅನಾರೋಗ್ಯದ ಕಾರಣ ನಿಧನರಾದರು, ಅವರಿಗೆ 76 ವರ್ಷ ವಯಸ್ಸಾಗಿತ್ತು. 1960 ಹಾಗೂ 1969 ರ ನಡುವೆ ಸುರ್ತಿಯವರು 26 ಟೆಸ್ಟ್ ಪಂದ್ಯಗಳಲ್ಲಿ ಆಡಿದ್ದರು. 28.70 ಸರಾಸರಿಯಲ್ಲಿ 1263 ರನ್ ಗಳನ್ನು ಗಳಿಸಿದ್ದರು.

**ದಕ್ಷಿಣಾ ಆಫ್ರಿಕಾ – ನ್ಯೂಜಿಲ್ಯಾಂಡ್ ಟೆಸ್ಟ್ ಸರಣಿ:**

ದಕ್ಷಿಣಾ ಆಫ್ರಿಕಾ ಮತ್ತು ನ್ಯೂಜಿಲ್ಯಾಂಡ್ ನಡುವೆ ನಡೆದ ಎರಡು ಟೆಸ್ಟ್ ಪಂದ್ಯಗಳಲ್ಲಿ ದಕ್ಷಿಣಾ ಆಫ್ರಿಕಾ 2-0ರಲ್ಲಿ ಸರಣಿಯನ್ನು ಮುಡಿಗೇರಿಸಿಕೊಂಡಿತು.

**ಹಾಕಿ ಇಂಡಿಯಾ ಲೀಗ್ ಗೆ ಅದ್ದೂರಿ ಚಾಲನೆ:**

- ಐಪಿಲ್ ಕ್ರಿಕೆಟ್ ಮಾದರಿಯಲ್ಲೇ ಹಾಕಿ ಲೀಗ್ ನಡೆಸಲಾಗುತ್ತಿದ್ದು, ಮೇಜರ್ ಧ್ಯಾನ್ ಚಂದ್ ರಾಷ್ಟ್ರೀಯ ಕ್ರೀಡಾಂಗಣದಲ್ಲಿ ಚೊಚ್ಚಲ ಹಾಕಿ ಇಂಡಿಯಾ ಲೀಗ್ ಗೆ ಚಾಲನೆ ನೀಡಲಾಯಿತು. ಲೇಸರ್ ಶೋ, ಸಾಹಸ ಮತ್ತು ನೃತ್ಯ ಕಾರ್ಯಕ್ರಮಗಳ ಮೂಲಕ ಲೀಗ್ ಗೆ ಚಾಲನೆ ನೀಡಿದ್ದು ಪ್ರೇಕ್ಷಕರ ಮನಸೂರೆ ಮಾಡಿತು
- ಚೊಚ್ಚಲ ಹಾಕಿ ಲೀಗ್ ನಲ್ಲಿ ಒಟ್ಟು 34 ಪಂದ್ಯಗಳು ನಡೆಯಲಿವೆ. ದೆಹಲಿ ವೇವ್ ರೈಡರ್ಸ್, ಮುಂಬೈ ಮೆಜಿಷಿಯನ್ಸ್, ಜೇಪಿ ಪಂಜಾಬ್ ವಾರಿಯರ್ಸ್, ರಾಂಚಿ ರಿನೋಸ್ ಮತ್ತು ಉತ್ತರ ಪ್ರದೇಶದ ವಿಜಾರ್ಡ್ ತಂಡಗಳು ಈ ಲೀಗ್ ನಲ್ಲಿ ಭಾಗವಹಿಸುವ ಪ್ರಮುಖ ತಂಡಗಳಾಗಿವೆ.
- .ಮಾಜಿ **ಕ್ರಿಕೆಟಿಗ ನವಜೋತ್ ಸಿಧು** ರವರನ್ನು ಈ ಲೀಗ್ ನ ರಾಯಭಾರಿಯನ್ನಾಗಿ ನೇಮಕಮಾಡಲಾಗಿದೆ.

**ಮಲೇಷಿಯಾ ಓಪನ್ ಟೂರ್ನಿ: ಸೆಮಿಫೈನಲ್ ನಲ್ಲಿ ಸೈನಾಗೆ ಸೋಲು**

ವಿಶ್ವದ ನಂ.2 ಬ್ಯಾಡಮಿಟನ್ ಆಟಗಾರ್ತಿ ಭಾರತದ ಸೈನಾ ನೆಹ್ವಾಲ್ ರವರು ತನಗಿಂತ ಕೆಳಗಿನ ಶ್ರೇಯಾಂಕದ ಚೀನಾದ ಆಟಗಾರ್ತಿ ತ್ಸುಯಿಂಗ್ ಯಿ ರವರ ವಿರುದ್ದ ಆಘಾತ ಅನುಭವಿಸುವ ಮೂಲಕ ಟೂರ್ನಿಯಿಂದ ಸೆಮಿಫೈನಲ್ ಹಂತದಲ್ಲಿ ಹೊರಬಿದ್ದಿದ್ದಾರೆ. 22-20, 21-14 ನೇರ ಸೆಟ್ ಗಳಿಂದ 12 ನೇ ಶ್ರೇಯಾಂಕಿತ ತ್ಯುಯಿಂಗ್ ರವರ ವಿರುದ್ದ ಸೋಲನ್ನು ಅನುಭವಿಸಿದರು.

- ವಿಶ್ವ ಬ್ಯಾಡ್ಮಿಟನ್ ಫಡೇರೆಷನ್ ಪ್ರಕಟಿಸಿರುವ ಇತ್ತೀಚಿನ ಶ್ರೇಣಿಯ ಪ್ರಕಾರ ಸೈನಾ ರವರು ನಂ.2 ಸ್ಥಾನದಲ್ಲಿದ್ದಾರೆ. ಚೀನಾದ ಲೀ ಜುಯಾ ರೈ (Li Xuerui) ನಂ.1 ಸ್ಥಾನದಲ್ಲಿದ್ದಾರೆ.
- ಪುರುಷರ ವಿಭಾಗದಲ್ಲಿ ಮಲೇಷಿಯಾದ ಲೀ ಚಾಂಗ್ ವೈ (Lee Chang Wei) ರವರು ನಂ.1, ಚೀನಾದ ಚೆನ್ ಲಾಂಗ್ ನಂ.2 ಸ್ಥಾನದಲ್ಲಿದ್ದಾರೆ. ಭಾರತದ **ಪಾರುಪಲ್ಲಿ ಕಶ್ಯಪ್ 10ನೇ** ಸ್ಥಾನದಲ್ಲಿದ್ದಾರೆ.

**ವಿರಾಟ್ ಕೊಹ್ಲಿ: ಏಕದಿನ ಪಂದ್ಯದಲ್ಲಿ ಅತಿವೇಗದ 4000 ರನ್ ಪೂರೈಸಿದ ಸಾಧನೆ**

ಭಾರತ ತಂಡದ ಉಪನಾಯಕ ಹಾಗೂ ಸ್ಪೋಟಕ ಬ್ಯಾಟ್ಸ್ಮನ್ ವಿರಾಟ್ ಕೊಹ್ಲಿ ಮೂರನೇ ಭಾರತ ಮತ್ತು ಇಂಗ್ಲೆಂಡ್ ನಡುವಿನ ಏಕದಿನ ಪಂದ್ಯದಲ್ಲಿ 4000 ರನ್ ಪೂರೈಸುವ ಮೂಲಕ ಅತಿ ವೇಗವಾಗಿ ಈ ಸಾಧನೆಗೈದ ವಿಶ್ವದ ಎರಡನೇ ಎಂಬ ಹೆಗ್ಗಳಿಕೆಗೆ ಪಾತ್ರರಾದರು.

- ಕೊಹ್ಲಿ ತಮ್ಮ 96 ನೇ ಪಂದ್ಯದಲ್ಲಿ 93 ನೇ ಇನ್ನಿಂಗ್ಸ್ ನಲ್ಲಿ ಈ ಸಾಧನೆ ಮಾಡಿದರು. ಈ ಹಿಂದೆ ವೆಸ್ಟ್ ಇಂಡೀಸ್ ನ ವಿವಿಯನ್ ರಿಚರ್ಡ್ ರವರು ಈ ಸಾಧನೆಗೈದ ಪ್ರಥಮ ಬ್ಯಾಟ್ಸ್ ಮನ್ ಎನಿಸಿದ್ದರು. ರಿಚರ್ಡ್ ಕೂಡ ತಮ್ಮ 96 ನೇ ಪಂದ್ಯದಲ್ಲಿ 4000 ರನ್ ಪೂರೈಸಿದ್ದರು ಆದರೆ ಅವರು ಈ ಅವಧಿಯಲ್ಲಿ 88 ಇನ್ನಿಂಗ್ಸ್ ಮಾತ್ರ ಆಡಿದ್ದರು.
- ಭಾರತದ ಸೌರವ್ ಗಂಗೂಲಿಯವರನ್ನು ಹಿಂದಿಕ್ಕಿದ ಕೊಹ್ಲಿ ಭಾರತದ ಬ್ಯಾಟ್ಸ್ ಮನ್ ಗಳಲ್ಲಿ ಅಗ್ರಸ್ಥಾನದಲ್ಲಿ ನಿಂತರು.

- ಕೊಹ್ಲಿ ಭಾರತದ 4000 ರನ್ ಪೂರೈಸಿದ 12 ನೇ ಬ್ಯಾಟ್ಸ್ ಮನ್. ಈ ಹಿಂದೆ ಸಚಿನ್, ರಾಹುಲ್ ದ್ರಾವಿಡ್, ಸೌರವ್ ಗಂಗೂಲಿ ಮತ್ತಿತರು ಸಹ 4000 ರನ್ ಪೂರೈಸಿದ್ದರೆ.

**ರಾಯಲ್ ಚಾಲೆಂಜರ್ಸ್ ಗೆ ಕುಂಬ್ಳೆ ಗುಡ್ ಬೈ**

ಭಾರತ ಕ್ರಿಕೆಟ್ ತಂಡದ ಮಾಜಿ ಲೆಗ್ ಸ್ಪಿನ್ನರ್ ಅನಿಲ್ ಕುಂಬ್ಳೆ ರಾಯಲ್ ಚಾಲೆಂಜರ್ಸ್ ತಂಡದ ಮಾರ್ಗದರ್ಶಿ ಸ್ಥಾನದಿಂದ ನಿರ್ಗಮಿಸಿದ್ದಾರೆ. ಮೊದಲ ಮೂರು ಆವೃತ್ತಿಗಳಲ್ಲಿ RCB ಯ ಮಾರ್ಗದರ್ಶಿಯಾಗಿ ಕಾರ್ಯನಿರ್ವಹಿಸಿದ್ದ ಕುಂಬ್ಳೆ ಈಗ ಮುಂಬೈ ಇಂಡಿಯನ್ಸ್ ತಂಡದ ಮಾರ್ಗದರ್ಶಿಯಾಗಿ ನೇಮಕವಾಗಿದ್ದರೆ. ಈ ಬಗ್ಗೆ ಪ್ರತಿಕ್ರಯಿಸಿರುವ ಕುಂಬ್ಳೆ ರಿಲಾಯನ್ಸ್ ಸಮೂಹ ಭಾರತ ಕ್ರೀಡಾ ಕ್ಷೇತ್ರದಲ್ಲಿ ಹೊಂದಿರುವ ದೂರದೃಷ್ಟಿಯನ್ನು ಗಮನಿಸಿ ಸೇರ್ಪಡೆಯಾಗಿರುವುದಾಗಿ ತಿಳಿಸಿದ್ದಾರೆ.

- 42 ವರ್ಷದ ಕುಂಬ್ಳೆ ಆರನೇ ಆವೃತ್ತಿಯ ಐಪಿಎಲ್ ನಲ್ಲಿ ಮುಂಬೈ ಇಂಡಿಯನ್ಸ್ ತಂಡದ ಮಾರ್ಗದರ್ಶಿಯಾಗಿ ಕಾರ್ಯನಿರ್ವಹಿಸಲ್ಲಿದ್ದಾರೆ.
- ಈ ಹಿಂದೆ ಮಾರ್ಗದರ್ಶಿಯಾಗಿ ಕಾರ್ಯನಿರ್ವಹಿಸುತ್ತಿದ್ದ, ರಾಬಿನ್ ಸಿಂಗ್ ರವರು ತಂಡದೊಂದಿಗೆ ಮುಂದುವರೆಯಲ್ಲಿದ್ದಾರೆ ಎಂದು ಮುಂಬೈ ಇಂಡಿಯನ್ಸ್ ನ ಅಧಿಕೃತ ಮೂಲಗಳು ತಿಳಿಸಿವೆ.

**ಮೋಹನ್ ಬಗಾನ್ ತಂಡದ ಒಡಾಫಾಗೆ ದಂಡ**

ಮೋಹನ್ ಬಗಾನ್ ತಂಡದ ನಾಯಕ "ಒಡಾಫಾ ಒಕೊಲಿ"ಗೆ ಅಖಿಲ ಭಾರತ ಫುಟ್ಬಾಲ್ ಸಂಸ್ಥೆ ಒಂದು ಪಂದ್ಯ ನಿಷೇಧ ಹಾಗೂ ರೂ.1.5 ಲಕ್ಷ ಮೊತ್ತ ದಂಡ ವಿಧಿಸಿದೆ.

- ಈಸ್ಟ್ ಬೆಂಗಾಲ್ ವಿರುದ್ಧದ ಪಂದ್ಯದಲ್ಲಿ ಘಟನೆಗೆ ಪರೋಕ್ಷವಾಗಿ ಒಡಫಾ ಕಾರಣರಾಗಿದ್ದರು. ಡಿಸೆಂಬರ್ 9 ರಂದು ನಡೆದ ಪಂದ್ಯದ ವೇಳೆ ರೆಫರಿ ತಿರ್ಮಾನವನ್ನು ಪ್ರಶ್ನಿಸಿದಲ್ಲದೆ, ಪಂದ್ಯದಿಂದ ಹೊರನಡೆಯುವುದಾಗಿ ಬೆದರಿಕೆ ಹಾಕಿದ್ದರು. ಇದರಿಂದ ಉದ್ವಿಗ್ನಗೊಂಡ ಜನರು ಕಲ್ಲು ತೂರಾಟ ನಡೆಸಿದ್ದರಿಂದ 40 ಕ್ಕೂ ಅಧಿಕ ಮಂದಿ ಗಾಯಗೊಂಡಿದ್ದರು.

**ಮ್ಯಾರಥಾನ್ ಓಟಕ್ಕೆ ಫೌಜ ಸಿಂಗ್ ಗುಡ್ ಬೈ**

ವಿಶ್ವದ ಅತ್ಯಂತ ಹಿರಿಯ ಮ್ಯಾರಥಾನ್ ಓಟಗಾರ "ಫೌಜ ಸಿಂಗ್" ಮ್ಯಾರಥಾನ್ ಓಟದಿಂದ ನಿವೃತ್ತಿ ಹೊಂದುವುದಾಗಿ ಹೇಳಿದ್ದಾರೆ. ಫೆಬ್ರವರಿ 2013 ರಲ್ಲಿ ನಡೆಯಲಿರುವ ಹಾಂಕ್ ಕಾಂಗ್ ಮ್ಯಾರಥಾನ್ ಓಟವೇ ಅವರ ಕೊನೆಯ ಓಟವಾಗಲಿದೆ, ಇದಕ್ಕೂ ಮುನ್ನ ನಡೆಯುವ ಆಸ್ಟ್ರೇಲಿಯಾ ಓಟದಲ್ಲೂ ಅವರು ಭಾಗವಹಿಸಲ್ಲಿದ್ದಾರೆ.

- ಏಪ್ರಿಲ್ 11, 1911 ರಲ್ಲಿ ಜನಿಸಿರುವ ಫೌಜ ಸಿಂಗ್ "Turbaned Tornado" ಎಂತಲೇ ಪ್ರಸಿದ್ಧಿ ಹೊಂದಿದ್ದಾರೆ.

**ದಕ್ಷಿಣಾ ಆಫ್ರಿಕಾದ ಕ್ರಿಕೆಟ್ ತಂಢದ ಮಾಜಿ ನಾಯಕ ಪೀಟರ್ ನಿಧನ**

ದಕ್ಷಿಣಾ ಆಫ್ರಿಕಾ ಕ್ರಿಕೆಟ್ ತಂಡದ ಮಾಜಿ ನಾಯಕ ಪೀಟರ್ ವ್ಯಾನ್ ಡರ್ ಮರ್ಮ್ (75) ಅನಾರೋಗ್ಯದಿಂದ ನಿಧನರಾದರು. 1963 ರಿಂದ 1967 ರವರೆಗೆ ದ.ಆಫ್ರಿಕಾ ಪರ 15 ಟೆಸ್ಟ್ ಗಳನ್ನು ಆಡಿದ್ದ ಅವರು 8 ಪಂದ್ಯಗಳಲ್ಲಿ ನಾಯಕತ್ವ ವಹಿಸಿದ್ದರು.

ಎಡಗೈ ಸ್ಪಿನ್ನರ್ ಆಗಿದ್ದ ಮರ್ಮ್ ರವರು 1991 ರ ನಂತರ ಆಯ್ಕೆ ಸಮಿತಿಯ ಅಧ್ಯಕ್ಷರಾಗಿ 1992 ರಿಂದ 1999 ರವರೆಗೆ ಐಸಿಸಿ ಯ ಮ್ಯಾಚ್ ರೆಫ್ರರಿಯಾಗಿ ಕಾರ್ಯನಿರ್ವಹಿಸಿದ್ದರು

**ಭಾರತ – ಇಂಗ್ಲೆಂಡ್ ಏಕದಿನ ಸರಣಿ ಪಂದ್ಯ: ಭಾರತಕ್ಕೆ ಗೆಲುವಿನ ಹಾರ**

ಭಾರತ ಮತ್ತು ಇಂಗ್ಲೆಂಡ್ ನಡುವಿನ ಏಕದಿನ ಸರಣಿ ಪಂದ್ಯದಲ್ಲಿ ಭಾರತ 3-2 ಅಂತರದಿಂದ ಸರಣಿ ಗೆದ್ದುಕೊಂಡಿತು. ಒಟ್ಟು 5 ಪಂದ್ಯಗಳಲ್ಲಿ ಮೊದಲ ಮತ್ತು ಕೊನೆಯ ಪಂದ್ಯದಲ್ಲಿ ಮಾತ್ರ ಇಂಗ್ಲೆಂಡ್ ತಂಡ ಗೆಲುವು ಪಡೆಯಲು ಸಾಧ್ಯವಾಯಿತು. ಭಾರತದ ಸುರೇಶ್ ರೈನಾ ಸರಣಿ ಶ್ರೇಷ್ಠ ಪ್ರಶಸ್ತಿಗೆ ಭಾಜನರಾದರು.

- ಈ ಸರಣಿ ಪಂದ್ಯಗಳಲ್ಲಿ ಭಾರತದ ಸುರೇಶ್ ರೈನಾ ಮತ್ತು ವಿರಾಟ್ ಕೊಹ್ಲಿ 4000 ರನ್ ಪೂರೈಸಿದೆ ಬ್ಯಾಟ್ಸಮನ್ ಗಳ ಪಟ್ಟಿಗೆ ಸೇರ್ಪಡೆಯಾದದ್ದು ವಿಶೇಷ.
- ಸುರೇಶ್ ರೈನಾ 159 ಪಂದ್ಯ ಮತ್ತು 138 ನೇ ಇನ್ನಿಂಗ್ಸ್ ನಲ್ಲಿ ಈ ಸಾಧನೆಗೈದ ಭಾರತದ 13 ನೇ ಆಟಗಾರರೆಂಬ ಗೌರವವನ್ನು ಪಡೆದರು.
- ಸರಣಿಯಲ್ಲಿ ಉತ್ತಮ ಪ್ರದರ್ಶನ ತೋರಿದ ಭಾರತ ತಂಡ ಈಗ ಐಸಿಸಿ ಅಂತರ್ ರಾಷ್ಟ್ರೀಯ ಶ್ರೇಣಿಯಲ್ಲಿ ನಂ.1 ಸ್ಥಾನದಲ್ಲಿದೆ.

**ಬೆಂಗಳೂರಿನ ವೀರ್ ಮೆನನ್ ಗೆ ಚಿನ್ನದ ಪದಕ**

- ಮಲೇಷಿಯಾದ ಲಾಂಕ್ವಾವಿಯಲ್ಲಿ ನಡೆದ 10 ನೇ ಅಂತರ್ ರಾಷ್ಟ್ರೀಯ ಹಾಯಿದೋಣಿ ಚಾಂಪಿಯನ್ ಷಿಪ್ ನ ಲೇಸರ್ 4.7 ಕ್ಲಾಸ್ ವಿಭಾಗದಲ್ಲಿ ವೀರ್ ಮೆನನ್ ಚಿನ್ನದ ಪದಕ ಜಯಿಸಿ ಕರ್ನಾಟಕಕ್ಕೆ ಕೀರ್ತಿ ತಂದಿದ್ದಾರೆ.
- ವೈಟ್ ಫೀಲ್ಡ್ - ಸರ್ಜಾಪುರ ರಸ್ತೆಯಲ್ಲಿರುವ ಇನ್ ವೆಂಚರ್ ಅಕಾಡೆಮಿಯಲ್ಲಿ ವೀರ್ ಮೆನನ್ 10 ನೇ ತರಗತಿಯಲ್ಲಿ ವ್ಯಾಸಂಗ ಮಾಡುತ್ತಿದ್ದಾರೆ.

**ಜಾನ್ ರೈಟ್ ಮುಂಬೈ ಇಂಡಿಯನ್ಸ್ ತಂಡದ ಕೋಚ್**

ಭಾರತ ಕ್ರಿಕೆಟ್ ತಂಡದ ಮಾಜಿ ತರಬೇತುದಾರ "ಜಾನ್ ರೈಟ್" ರವರನ್ನು ಐಪಿಲ್ ನ ಆರನೇ ಆವೃತಿಗೆ ಮುಂಬೈ ಇಂಡಿಯನ್ಸ್ ತಂಡಕ್ಕೆ ತರಬೇತುದಾರರಾಗಿ ನೇಮಕ ಮಾಡಲಾಗಿದೆ.

- ನ್ಯೂಜಿಲ್ಯಾಂಡ್ ನ ಮಾಜಿ ಪ್ರಾರಂಭಿಕ ಬ್ಯಾಟ್ಸ ಮನ್ ಆಗಿದ್ದ ಜಾನ್ ರೈಟ್ 2000-2005 ರ ತನಕ ಭಾರತ ಕ್ರಿಕೆಟ್ ತಂಡಕ್ಕೆ ಕೋಚ್ ಆಗಿ ಕಾರ್ಯನಿರ್ವಹಿಸಿದ್ದರು
- 2010 ರಿಂದ 2012 ರ ವರೆಗೆ ತಮ್ಮ ತಾಯಿನಾಡಾದ ನ್ಯೂಜಿಲ್ಯಾಂಡ್ ದೇಶದ ತಂಡಕ್ಕೆ ಕೋಚ್ ಆಗಿ ಜಾನ್ ಕೆಲಸ ನಿರ್ವಹಿಸಿದ್ದರು.

- ಸದ್ಯ ಮುಂಬೈ ಇಂಡಿಯನ್ಸ್ ತಂಡದ ಕೋಚ್ ಆಗಿರುವ ರಾಬಿನ್ ಸಿಂಗ್ ರವರು ಮುಂಬೈ ಇಂಡಿಯನ್ಸ್ ತಂಡದೊಂದಿಗೆ ಮುಂದುವರಿಯಲ್ಲಿದ್ದಾರೆ ಎಂದು ಮೂಲಗಳು ತಿಳಿಸಿವೆ.

**ಮುಂಬೈ ಮ್ಯಾಜಿಕ್: 40ನೇ ಬಾರಿ ರಣಜಿ ಟ್ರೋಪಿ**

ಮುಂಬೈ ತಂಡದ ನಾಯಕ ಅಜಿತ್ ಅಗರ್ಕರ್ ಹಾಗೂ ಧವಳ್ ಕುಲಕರ್ಣಿ ಇಬ್ಬರ ಅಮೋಘ ಬೌಲಿಂಗ್ ಪ್ರದರ್ಶನದಿಂದ ಮುಂಬೈ ತಂಡ ಫೈನಲ್ ನಲ್ಲಿ ಸೌರಾಷ್ಟ ತಂಡವನ್ನು ಮಣಿಸುವು ಮೂಲಕ ವಿಜಯ ಪತಾಕೆ ಹಾರಿಸಿತು. ಮುಂಬೈ ತಂಡ ಈ ಗೆಲುವಿನಿಂದ 40 ನೇ ಬಾರಿ ರಣಜಿ ಟ್ರೋಪಿಯನ್ನು ಮುಡಿಗೇರಿಸಿಕೊಂಡಿತು.

- ಸೌರಾಷ್ಟ್ರ ತಂಡ ಮೊದಲ ಇನ್ನಿಂಗ್ಸ್ ನಲ್ಲಿ ನೀಡಿದ 148 ರನ್ ಗುರಿಯನ್ನು ಬೆನ್ನತ್ತಿದ ಮುಂಬೈ ತಂಡ 355 ರನ್ ಗಳನ್ನು ಪೇರಿಸು ಮೂಲಕ ಒಟ್ಟು 207 ರನ್ ಮುನ್ನಡೆ ಪಡೆದುಕೊಂಡಿತ್ತು.
- ಈ ಅಂತರವನ್ನು ಕ್ರಮಿಸಲು ಕ್ರಿಸ್ ಗೆ ಇಳಿದ ಸೌರಾಷ್ಟ್ರ ತನ್ನ ದ್ವಿತೀಯ ಇನ್ನಿಂಗ್ಸ್ ನಲ್ಲಿ ಕೇವಲ 82 ರನ್ ಗಳಿಗೆ ಅಲೌಟ್ ಆಯಿತು. ಸೌರಾಷ್ಟ್ರ ಅನುಭವಿಸಿದ ಈ ವೈಫಲ್ಯದಿಂದ ಮುಂಬೈ ತಂಡ 125 ರನ್ ಗಳ ಭರ್ಜರಿ ಜಯಗಳಿಸಿತಲ್ಲದೇ, ಅತಿ ಹೆಚ್ಚು ಬಾರಿ ರಣಜಿ ಪ್ರಶಸ್ತಿಯನ್ನು ಗೆದ್ದ ಹಿರಿಮೆಗೆ ಭಾಜನವಾಯಿತು.
- ಸಚಿನ್ ಗೆ ಇದು 5 ನೇ ರಣಜಿ ಪ್ರಶಸ್ತಿ.
- ಚಾಂಪಿಯನ್ ಆಗಿರುವ ಮುಂಬೈ ತಂಡ ರೂ.2 ಕೋಟಿ ಬಹುಮಾನ ಪಡೆಯಲಿದೆ, ರನ್ನರ್ ಆಪ್ ಸೌರಾಷ್ಟ್ರ 1 ಕೋಟಿ ಮತ್ತು ಮುಂಬೈ ಕ್ರಿಕೆಟ್ ಸಂಸ್ಥೆ ಅಜಿತ್ ಅಗರ್ಕರ್ ಬಳಗಕ್ಕೆ ರೂ.3 ಕೋಟಿ ಬಹುಮಾನ ಪ್ರಕಟಿಸಿದೆ.
- ದೆಹಲಿ ಏಳು ಬಾರಿ ಮತ್ತು ಕರ್ನಾಟಕ ಆರು ಬಾರಿ ರಣಜಿ ಪ್ರಶಸ್ತಿಯನ್ನು ಗೆದ್ದಿವೆ.

**ಟಿ-20 ಪಂದ್ಯದಲ್ಲಿ ಭಾರತಕ್ಕೆ ಮೂರನೇ ಶ್ರೇಣಿ**

ಐಸಿಸಿ ಟಿ-20 ಪಂದ್ಯಗಳ ಪಟ್ಟಿಯನ್ನು ಬಿಡುಗಡೆ ಮಾಡಿದ್ದು ಭಾರತಕ್ಕೆ ಮೂರನೇ ಸ್ಥಾನ ಲಭಿಸಿದೆ. ಶ್ರೀಲಂಕ ಮತ್ತು ವೆಸ್ಟ್ ಇಂಡೀಸ್ ತಂಡಗಳು ಮೊದಲ ಎರಡು ಸ್ಥಾನಗಳಿವೆ.

- 131 ಪಾಯಿಂಟ್ ಗಳಿಂದ ಶ್ರೀಲಂಕ ತಂಡ ಅಗ್ರ ಸ್ಥಾನವನ್ನು ಅಲಂಕರಿಸಿದ್ದರೆ, 119 ಪಾಯಿಂಟ್ ಗಳಿಸಿರುವ ಭಾರತ ಮೂರನೇ ಸ್ಥಾನದಲ್ಲಿದೆ.
- ಟಿ-20 ಬ್ಯಾಟ್ಸ್ ಮನ್ ಗಳ ವಿಭಾಗದಲ್ಲಿ ನ್ಯೂಜಿಲ್ಯಾಂಡ್ ನ ವಿಕೆಟ್ ಕೀಪರ್ ಬ್ರೆಂಡನ್ ಮ್ಯಾಕುಲಂ 794 ಪಾಯಿಂಟ್ ಗಳೊಂದಿಗೆ ಪ್ರಥಮ ಸ್ಥಾನದಲ್ಲಿದ್ದಾರೆ, ಎರಡನೇ ಸ್ಥಾನದಲ್ಲಿ ವೆಸ್ಟ್ ಇಂಡೀಸ್ ನ ಕ್ರಿಸ್ ಗೇಲ್ (792) ಮತ್ತು ಮೂರನೇ ಸ್ಥಾನದಲ್ಲಿ ಶ್ರೀಲಂಕಾದ ಮಹಲೆ ಜಯವರ್ಧನೆ (768) ಪಟ್ಟಿಯಲ್ಲಿದ್ದಾರೆ.
- ಭಾರತದ ಸ್ಫೋಟಕ ಆಟಗಾರ ವಿರಾಟ್ ಕೊಹ್ಲಿ ಟಿ-20 ಬ್ಯಾಟ್ಸ್ ಮನ್ ಗಳ ಪಟ್ಟಿಯಲ್ಲಿ 731 ಪಾಯಿಂಟ್ ಗಳಿಸುವ ಒಂದು ಸ್ಥಾನ ಕುಸಿದಿದ್ದು ಆರನೇ ಸ್ಥಾನಕ್ಕೆ ತೃಪ್ತಿ ಪಡೆದ್ದಿದ್ದಾರೆ. ಸುರೇಶ್ ರೈನಾ 9 ನೇ ಸ್ಥಾನ ಮತ್ತು ಯುವರಾಜ್ ಸಿಂಗ್ 14 ನೇ ಸ್ಥಾನದಲ್ಲಿದ್ದಾರೆ.

- ಬೌಲಿಂಗ್ ವಿಭಾಗದಲ್ಲಿ ಪಾಕಿಸ್ತಾನದ ಸಯೀದ್ ಅಜ್ಮಲ್ (756) ಮೊದಲ ಸ್ತಾನದಲ್ಲಿ, ನಂತರದ ಸ್ಥಾನದಲ್ಲಿ ಶ್ರೀಲಂಕಾದ ಅಜಂತ ಮೆಂಡೀಸ್ (731) ಮತ್ತು ಇಂಗ್ಲೆಂಡ್ ನ ಗ್ರಿಮ್ ಸ್ವಾನ್ (720) ಇದ್ದಾರೆ. ಬೌಲಿಂಗ್ ವಿಭಾಗದಲ್ಲಿ ರವಿಚಂದ್ರನ್ ಅಶ್ವಿನ್ 16 ನೇ ಸ್ಥಾನಗಳಿಸುವ ಮೂಲಕ ಪಟ್ಟಿಯಲ್ಲಿ ಸ್ಥಾನಗಳಿಸಿರುವ ಏಕೈಕ ಭಾರತೀಯ ಆಟಗಾರ ಎನಿಸಿದ್ದಾರೆ.

**ಐಸಿಸಿ ಮಹಿಳೆಯರ ಏಕದಿನ ಕ್ರಿಕೆಟ್ ಪಂದ್ಯ ಶ್ರೇಣಿ ಪಟ್ಟಿ: ಭಾರತದ ಮಿಥಿಲಿ ರಾಜ್ ನಂ.1**

ಭಾರತದ ವನಿತೆಯರ ಕ್ರಿಕೆಟ್ ತಂಡದ ನಾಯಕಿ ಮಿಥಿಲಿ ರಾಜ್, ಐಸಿಸಿ ಮಹಿಳೆಯರ ಏಕದಿನ ಕ್ರಿಕೆಟ್ ಪಂದ್ಯದ ಬ್ಯಾಟಿಂಗ್ ವಿಭಾಗದಲ್ಲಿ ಅಗ್ರ ಸ್ಥಾನಗಳಿಸಿದ್ದಾರೆ. ಸತತವಾಗಿ ನಾಲ್ಕನೇ ಬಾರಿ ಮಹಿಳೆಯರ ವಿಶ್ವ ಕಪ್ ನಲ್ಲಿ ಆಡುತ್ತಿರುವ ರಾಜ್ 767 ಪಾಯಿಂಟ್ ಗಳಿಸುವ ಮೂಲಕ ನಂ.1 ಆಟಗಾರ್ತಿಯಾಗಿ ಹೊರಹೊಮ್ಮಿದ್ದಾರೆ. ಎರಡನೇ ಸ್ಥಾನದಲ್ಲಿ ವೆಸ್ಟ್ ಇಂಡೀಸ್ ನ ಸ್ಟಫಾನಿ ಟೈಲರ್ ಮತ್ತು ಮೂರನೇ ಸ್ಥಾನದಲ್ಲಿ ಇಂಗ್ಲೆಂಡ್ ನ ಸರಾಃ ಟೈಲರ್ ಜಾಗ ಪಡೆದಿದ್ದಾರೆ.

ಬೌಲಿಂಗ್ ವಿಭಾಗದಲ್ಲಿ ಭಾರತದ ಜೂಲನ್ ಗೋಸ್ವಾಮಿ 3 ನೇ ಸ್ಥಾನದಲ್ಲಿದ್ದರೆ, ಇಂಗ್ಲೆಂಡ್ ನ ಕಥೇರಿನ ಬ್ರಂಟ್ ರವರು 777 ಪಾಯಿಂಟ್ ಗಳೊಂದಿಗೆ ಪ್ರಥಮ ಸ್ಥಾನ ಗಳಿಸಿದ್ದಾರೆ. ಎರಡನೇ ಸ್ಥಾನದಲ್ಲಿ ಆಸ್ಟ್ರೇಲಿಯಾದ ಲಿಸಾ ಸ್ಥಾಲೇಕರ್ ಇದ್ದಾರೆ.

## ಸುದ್ದಿಯಲ್ಲಿರುವ ವ್ಯಕ್ತಿ/ನೇಮಕ

### ಎಸ್.ಎ.ಇಬ್ರಾಹಿಂ: ಗುಪ್ತಚರ ಇಲಾಖೆಯ ನೂತನ ಮುಖ್ಯಸ್ಥರು

ಐಪಿಎಸ್ ಅಧಿಕಾರಿ ಎಸ್.ಎ.ಇಬ್ರಾಹಿಂ ಅವರನ್ನು ಗುಪ್ತಚರ ಇಲಾಖೆಯ ಮುಖ್ಯಸ್ಥರಾಗಿ ನೇಮಕ ಮಾಡಲಾಗಿದೆ. ಈ ಹಿಂದೆ ಮುಖ್ಯಸ್ಥರಾಗಿ ಕಾರ್ಯನಿರ್ವಹಿಸುತ್ತಿದ್ದ ನೆಚಾಲ್ ಸಂಧು ನಿವೃತ್ತಿ ಹೊಂದಿದ ಕಾರಣ ಈ ಸ್ಥಾನ ತೆರವುಗೊಂಡಿತ್ತು. ಭಯೋತ್ಪಾದನೆ ಮತ್ತಿತ್ತರ ಶಾಂತಿ ಕದಡುವ ಪ್ರಕರಣಗಳ ಮಾಹಿತಿಯನ್ನು ಕಲೆ ಹಾಕುವ ಜವಬ್ದಾರಿಯನ್ನು ಹೊಂದಿರುವ ಗುಪ್ತಚರ ಇಲಾಖೆಯು ಕೇಂದ್ರ ಗೃಹ ಸಚಿವಾಲಯದಡಿ ಕಾರ್ಯನಿರ್ವಹಿಸುತ್ತುತ್ತಿದೆ.

- ಎಸ್.ಎ. ಇಬ್ರಾಹಿಂ ರವರು ಈ ಹುದ್ದೆಯನ್ನೇರುತ್ತಿರುವ ಮೊದಲ **ಮುಸ್ಲಿಂ ಐಪಿಎಸ್ ಅಧಿಕಾರಿ**, ಇವರ ಅಧಿಕಾರ ಅವಧಿ 2 ವರ್ಷ.

ಗುಪ್ತಚರ ಇಲಾಖೆಯನ್ನು 1887 ರಲ್ಲಿ ಸ್ಥಾಪಿಸಲಾಗಿದ್ದು, ಸಂಸತ್ತಿನ ಯಾವುದೇ ಕಾಯ್ದೆ ಮುಖಾಂತರವಾಗಲಿ ಅಥವಾ ಕಾರ್ಯಾಂಗದ ಆದೇಶದಿಂದ ಸ್ಥಾಪಿಸಿಲ್ಲ. 2012 ರಲ್ಲಿ ಸುಪ್ರೀಕೋರ್ಟ್ ಗೆ ಸಾರ್ವಜನಿಕ ಹಿತಾಸಕ್ತಿ ಅರ್ಜಿ ಸಲ್ಲಿಸುವ ಮೂಲಕ ಗುಪ್ತಚರ ಇಲಾಖೆಯ ಅಸ್ತಿತ್ವದ ನ್ಯಾಯಬದ್ದತೆಯನ್ನು ಪ್ರಶ್ನಿಸಲಾಗಿತ್ತು.

### 14 ನೇ ಹಣಕಾಸು ಆಯೋಗಕ್ಕೆ ಅಧ್ಯಕ್ಷರಾಗಿ ವೈ.ವಿ.ರೆಡ್ಡಿ ನೇಮಕ

- ಭಾರತೀಯ ರಿರ್ಸವ್ ಭ್ಯಾಂಕ್ ಆಫ್ ಇಂಡಿಯಾ (RBI) ದ ಮಾಜಿ ಗವರ್ನರ್ ವೈ.ವೇಣುಗೋಪಲ್ ರೆಡ್ಡಿಯವರ ಅಧ್ಯಕ್ಷತೆಯಲ್ಲಿ ಕೇಂದ್ರ ಸರ್ಕಾರ 14ನೇ ಹಣಕಾಸು ಆಯೋಗವನ್ನು ರಚಿಸಿದೆ.
- 2014ರ ಅಕ್ಟೋಬರ್ 14ರ ಒಳಗೆ ವರದಿ ಸಲ್ಲಿಸುವಂತೆ ಆಯೋಗಕ್ಕೆ ತಿಳಿಸಲಾಗಿದ್ದು, ಆಯೋಗ ನೀಡುವ ವರದಿಯನ್ವಯ 2015ರ ಏಪ್ರಿಲ್ 1 ರಿಂದ ರಾಜ್ಯಗಳು ಮತ್ತು ಕೇಂದ್ರಾಡಳಿತ ಪ್ರದೇಶಗಳಲ್ಲಿ ಜಾರಿಗೊಳ್ಳಲಿದೆ.
- ಆಯೋಗದ ಇತರೆ ಸದಸ್ಯರುಗಳು: ಮಾಜಿ ಹಣಕಾಸು ಕಾರ್ಯದರ್ಶಿ ಸುಷ್ಮಾ ನಾಥ್, ರಾಷ್ಟ್ರೀಯ ಸಾರ್ವಜನಿಕ ಹಣಕಾಸು ನೀತಿ ಸಂಸ್ಥೆ ಸಿರ್ದೇಶಕ ಎಂ.ಗೋವಿಂದ ರಾವ್, ಯೋಜನ ಆಯೋಗದ ಸದಸ್ಯ ಅಭಿಜಿತ್ ಸೇನ್ ಮತ್ತು ಅಂಕಿ - ಅಂಶ ಆಯೋಗದ ಅಧ್ಯಕ್ಷ ಸುದೀಪ್ತೊ ಮಂಡಲ್.

ಹಣಕಾಸು ಆಯೋಗದ ಕಾರ್ಯವೇನು?

- ಹಣಕಾಸು ಆಯೋಗ ಮುಖ್ಯವಾಗಿ ಕುಡಿಯುವ ನೀರು, ವಿದ್ಯುತ್, ಸಾರ್ವಜನಿಕ ಸಾರಿಗೆ, ನೀರಾವರಿ ಸೇರಿದಂತೆ ವಿವಿಧ ಸೇವೆಗಳ ಶುಲ್ಕ ನಿಗದಿಪಡಿಸಲು ಸಲಹೆ ನೀಡಲಿದೆ. ಅಲ್ಲದೇ ಷೇರು ವಿಕ್ರಯ, ಸರಕು ಮತ್ತು ಸೇವಾ ತೆರಿಗೆ ಪರಿಹಾರ, ಸಬ್ಸಿಡಿ ಮತ್ತು “ಪಿ ಎಸ್ ಯು” ಮಾರಾಟಕ್ಕೆ ಸಂಬಂಧಿಸಿದ ವ್ಯವಹಾರಗಳನ್ನು ನಿರ್ವಹಿಸಲಿದೆ.

**ಹಣಕಾಸು ಆಯೋಗದ ಬಗ್ಗೆ ಒಂದಿಷ್ಟು ಮಾಹಿತಿ**:

- ಭಾರತದ ಹಣಕಾಸು ಆಯೋಗವನ್ನು 1951 ರಲ್ಲಿ ಸಂವಿಧಾನದ **ಪರಿಚ್ಛೇದ 280ರ** ಅಡಿಯಲ್ಲಿ ರಚಿಸಲಾಗಿದೆ. ಹಣಕಾಸು ಆಯೋಗ ಕಾಯ್ದೆ-1951 ರ ಪ್ರಕಾರ ಆಯೋಗದ ರಚನೆ, ನೇಮಕಾತಿ, ಅವಧಿ, ಅಧಿಕಾರದ ಬಗ್ಗೆ ಗೊತ್ತುಪಡಿಸಲಾಗಿದೆ.
- ಹಣಕಾಸು ಆಯೋಗವನ್ನು ಭಾರತದ ರಾಷ್ಟ್ರಪತಿಗಳು ರಚಿಸುತ್ತಾರೆ, ಆಯೋಗವು ಒಬ್ಬ ಅಧ್ಯಕ್ಷರು ಮತ್ತು ನಾಲ್ಕು ಸದಸ್ಯರನ್ನು ಒಳಗೊಂಡಿರುತ್ತದೆ.

- ರಚಿಸಲಾಗಿರುವ ಆಯೋಗವು ರಾಷ್ಟ್ರಪತಿಗಳಿಗೆ ಕೇಂದ್ರ ಮತ್ತು ರಾಜ್ಯಗಳ ನಡುವೆ ಹಾಗೂ ರಾಜ್ಯಗಳು ತಮ್ಮೊಳಗೆ ಹೇಗೆ ತೆರಿಗೆಯನ್ನು ಹಂಚಿಕೊಳ್ಳಬೇಕು ಎಂಬುದರ ಬಗ್ಗೆ ಸಲಹೆ ನೀಡವ ಜವಬ್ದಾರಿಯನ್ನು ಹೊಂದಿರುತ್ತದೆ.
- ರಾಜ್ಯಗಳಿಗೆ ಹಣ ಬಿಡುಗಡೆ ಮಾಡಲು ಬೇಕಾದ ಅಂಶಗಳನ್ನು ನಿರ್ಧರಿಸುವುದು ಸಹ ಆಯೋಗದ ಮುಖ್ಯ ಕರ್ತವ್ಯವಾಗಿದೆ.
  - ➢ ಇಲ್ಲಿಯವರಗೆ 13 ಹಣಕಾಸು ಆಯೋಗಳನ್ನು ರಚಿಸಲಾಗಿದೆ. ಮೊದಲ ಆಯೋಗವನ್ನು 1951 ರಲ್ಲಿ ಕೆ.ಸಿ.ನಿಯೋಗಿಯವರ ಅಧ್ಯಕ್ಷತೆಯಲ್ಲಿ ರಚಿಸಲಾಗಿತ್ತು. 13ನೇ ಹಣಕಾಸು ಆಯೋಗದ ಅಧ್ಯಕ್ಷರು ವಿಜಯ್ ಕೇಳ್ಕರ್.

**ಉರ್ಜಿತ್ ಪಟೇಲ್: ಭಾರತೀಯ ರಿಸರ್ವ್ ಬ್ಯಾಂಕ್ ಹೊಸ ಡೆಪ್ಯೂಟಿ ಗರ್ವನರ್**

- ಭಾರತೀಯ ರಿಸರ್ವ್ ಬ್ಯಾಂಕ್ ನ ಉಪ ಗವರ್ನರ್ ಸುಧೀರ್ ಗೋಕರ್ಣ ನಿವೃತ್ತಿಯಾಗಲಿದ್ದು ಆ ಸ್ಥಾನಕ್ಕೆ ಆರ್ಥಿಕ ತಜ್ಞ ಉರ್ಜಿತ್ ಪಟೇಲ್ ರವರನ್ನು ಆಯ್ಕೆ ಮಾಡಲಾಗಿದೆ.
- ಉರ್ಜಿತ ರವರು ಸದ್ಯ ಆಮೆರಿಕ ಮೂಲದ "ಬ್ರೋಕಿಂಗ್ ಇನ್ ಸ್ಟಿಟ್ಯೂಷನ್" ನ ಸೀನಿಯರ್ ಫೆಲೊ ಮತ್ತು "ಬೋಸ್ಟನ್ ಕನ್ಸಲಿಂಗ್ ಗ್ರೂಪ್" ಪ್ರತಿನಿಧಿಯೂ ಆಗಿದ್ದಾರೆ.
- RBI ಒಬ್ಬ ಗವರ್ನರ್ ಮತ್ತು ನಾಲ್ಕು ಉಪ ಗವರ್ನರಗಳನ್ನು ಹೊಂದಿದೆ.

**ಆಮೆರಿಕ ಕಾಂಗ್ರೆಸ್ ಸದಸ್ಯರಾಗಿ ಅಮಿ ಬೆರಾ ಮತ್ತು ತುಳಸಿ ಪ್ರಮಾಣ ವಚನ ಸ್ವೀಕಾರ**

ಭಾರತೀಯ ಮೂಲದ ಇಬ್ಬರು ಆಮೆರಿಕ ಕಾಂಗ್ರೆಸ್ ನ ಸದಸ್ಯರಾಗಿ ಇತ್ತೀಚೆಗೆ ಪ್ರಮಾಣ ವಚನ ಸ್ವೀಕರಿಸಿದರು.

- ಕ್ಯಾಲಿಪೋರ್ನಿಯಾದ ವೈದ್ಯ ಅಮಿ ಬೆರಾ ಮತ್ತು ಹವಾಮಿಯ ತುಳಸಿ ಗಬ್ಬಾರ್ಡ್ ರವರೇ ಈ ಸದಸ್ಯರಾಗಿದ್ದು, ಸ್ಪೀಕರ್ ಜಾನ್ ಜೋನೆಲ್ ಸಮ್ಮುಖದಲ್ಲಿ ಪ್ರಮಾಣ ವಚನ ಸ್ವೀಕರಿಸಿದರು.
- ತುಳಸಿ ಗಬ್ಬಾರ್ಡ್ ರವರು ಆಮೆರಿಕಾ ಕಾಂಗ್ರೆಸ್ ಪ್ರವೇಶಿಸಿದ ಪ್ರಥಮ ಭಾರತೀಯ ಮಹಿಳೆಯಾಗಿದ್ದಾರೆ ಎಂಬುದು ವಿಶೇಷ.
- ಇವರ ಆಯ್ಕೆಯಿಂದ ಆಮೆರಿಕಾ ಕಾಂಗ್ರೆಸ್ ಗೆ ಆಯ್ಕೆಯಾದವರ ಸಂಖ್ಯೆ ನಾಲ್ಕಕ್ಕೆ ಏರಿದೆ. ಈ ಮುಂಚೆ 1957 ರಲ್ಲಿ ದಿಲೀಪ್ ಸಿಂಗ್ ಅವರು ಕ್ಯಾಲಿಪೋರ್ನಿಯಾ ಕ್ಷೇತ್ರದಿಂದ ಮತ್ತು ಬಾಬಿ ಜಿಂದಾಲ್ 2005 ರಲ್ಲಿ ಲೂಸಿಯಾನ ಕ್ಷೇತ್ರದಿಂದ ಆಯ್ಕೆಯಾಗಿದ್ದರು.
- ಬೆರಾ ಮತ್ತು ತುಳಸಿ ಇಬ್ಬರು ಆಢಳಿತ ರೂಢ ಪಕ್ಷದಿಂದ ಆಯ್ಕೆಯಾಗಿದ್ದಾರೆ.

**ಆಮೆರಿಕಾ ಫೆಡರಲ್ ಕೋರ್ಟ್ ಗೆ ಭಾರತೀಯ ಮೂಲದ ಶ್ರೀಕಾಂತ್ ಮರು ನಾಮಕರಣ**

- ಭಾರತೀಯ ಮೂಲದ ಪ್ರಜೆ ಶ್ರೀಕಾಂತ್ ಶ್ರೀನಿವಾಸನ್ ಸೇರಿದಂತೆ 35 ಜನರನ್ನು ಆಮೆರಿಕಾದ ಮೇಲ್ಮನವಿ ನ್ಯಾಯಾಲಯದ ನ್ಯಾಯಧೀಶರಾಗಿ ಮರು ನಾಮಕರಣಗೊಳಿಸಿ ಬರಾಕ್ ಒಬಾಮ ಆದೇಶ ಹೊರಡಿಸಿದ್ದಾರೆ.

- ಕೊಲಂಬಿಯಾ ಜಿಲ್ಲಾ ನ್ಯಾಯಾಲಯದ ಪೀಠಕ್ಕೆ ನೇಮಕಗೊಂಡಿರುವ ಅವರು ಮರು ನಾಮಕರಣಗೊಂಡವರಲ್ಲಿ ಏಕೈಕ ಭಾರತೀಯರಾಗಿದ್ದರೆ.

**20ನೇ ಕಾನೂನು ಆಯೋಗದ ಅಧ್ಯಕ್ಷರಾಗಿ: ನ್ಯಾಯಮೂರ್ತಿ ಡಿ.ಕೆ.ಜೈನ್ ನೇಮಕ**

20ನೇ ಕಾನೂನು ಆಯೋಗದ ಅಧ್ಯಕ್ಷರಾಗಿ ನ್ಯಾಯಮೂರ್ತಿ ಡಿ.ಕೆ. ಜೈನ್ ರವರನ್ನು ನೇಮಕ ಮಾಡಲಾಗಿದೆ. ಇವರು ನೇಮಕಾತಿ ದಿನದಿಂದ ಮೂರು ವರ್ಷಗಳ ತನಕ ಸೇವೆ ಸಲ್ಲಿಸಲ್ಲಿದ್ದಾರೆ. 19ನೇ ಕಾನೂನು ಆಯೋಗದ ಅಧ್ಯಕರಾದ ಜಿ.ವಿ.ರೆಡ್ಡಿ ಅವರ ಅವಧಿ ಮುಗಿದ ಕಾರಣ ಇವರನ್ನು ಈ ಆಯೋಗದ ಅಧ್ಯಕ್ಷರಾಗಿ ನೇಮಕ ಮಾಡಲಾಗಿದೆ.

ಕಾನೂನು ಆಯೋಗದ ಕೆಲಸವೇನು: ದೇಶದ ಕಾನೂನು ವ್ಯವ್ಯಸ್ಥೆಯಲ್ಲಿ ಸುಧಾರಣೆ ತರಲು ಸರ್ಕಾರಕ್ಕೆ ಸಲಹೆಗಳನ್ನು ನೀಡುವುದು ಮತ್ತು ನಾಗರಿಕ ಕುಂದುಕೊರತೆಗಳಿಗೆ ಶೀಘ್ರ ಪರಿಹಾರ ನೀಡಲು ವ್ಯವಸ್ಥೆ ರೂಪಿಸುವುದು ಕಾನೂನು ಆಯೋಗದ ಮುಖ್ಯ ಕರ್ತವ್ಯವಾಗಿದೆ. ಭಾರತದ ಕಾನೂನು ಆಯೋಗವನ್ನು ಸರ್ಕಾರದ ಆದೇಶದ (Government order) ಮೂಲಕ ರಚಿಸಲಾಗಿದೆ.

- ಭಾರತದ ಮೊದಲ ಕಾನೂನು ಆಯೋಗವನ್ನು 1834 ರಲ್ಲಿ ಲಾರ್ಡ್ ಮೆಕಾಲೆ ರವರ ಅಧ್ಯಕ್ಷತೆಯಲ್ಲಿ ರಚಿಸಲಾಗಿತ್ತು. 1853 ರಲ್ಲಿ ಸರ್, ಜಾನ್ ರೊಮಿಲಿರ ರವರ ಅಧ್ಯಕ್ಷತೆಯಲ್ಲಿ ಎರಡನೇ ಕಾನೂನು ಆಯೋಗವನ್ನು ರಚಿಸಲಾಯಿತು.

**ಸ್ವತಂತ್ರ ನಂತರ ರಚಿಸಲಾದ ಮೊದಲ ಕಾನೂನು ಆಯೋಗ**: 1955 ರಲ್ಲಿ **ಎಂ.ಸಿ. ಸೆಟಲ್ವದ್** ರವರ ಅಧ್ಯಕ್ಷತೆಯಲ್ಲಿ ಸ್ವಾತಂತ್ರ ಭಾರತದ ನಂತರ ಮೊದಲ ಕಾನೂನು ಆಯೋಗವನ್ನು ರಚಿಸಲಾಗಿದೆ. ಸದ್ಯ ಇಲ್ಲಿಯವರೆಗೆ ಒಟ್ಟು 19 ಕಾನೂನು ಆಯೋಗಗಳನ್ನು ರಚಿಸಲಾಗಿದೆ. 20ನೇ ಆಯೋಗದ ಅವಧಿಯು 2015 ರ ತನಕ ಇರಲಿದೆ.

**ಹಿಮಾಚಲ್ ಪ್ರದೇಶದ ನೂತನ ಸ್ಪೀಕರ್ : ಬ್ರಿಜ್ ಬಿಹಾರಿ ಲಾಲ್ ಬುತಾಲಿ**

ಹಿಮಾಚಲ ಪ್ರದೇಶದ ವಿಧಾನಸಭೆಯ ನೂತನ ಸ್ಪಿಕರ್ ಆಗಿ ಕಾಂಗ್ರೆಸ್ ಪಕ್ಷದ ಹಿರಿಯ ರಾಜಕಾರಣಿ ಬ್ರಿಜ್ ಬಿಹಾರಿ ಲಾಲ್ ಬುತಾಲಿಯವರು ಅವಿರೋದವಾಗಿ ಆಯ್ಕೆಯಾಗಿದ್ದಾರೆ. 5ನೇ ಭಾರಿಗೆ ವಿಧಾನಸಭೆಗೆ ಸದಸ್ಯರಾಗಿ ಆಯ್ಕೆಯಾಗಿರುವ ಬುತಾಲಿಯವರು 1993ರಲ್ಲಿ ಪ್ರಥಮ ಭಾರಿಗೆ ವಿಧಾನಸಭೆಯನ್ನು ಪ್ರವೇಶಿಸಿದ್ದರು.

**ಕೆ.ಎಸ್.ರಂಗಪ್ಪ: ಮೈಸೂರು ವಿಶ್ವ ವಿದ್ಯಾಲಯದ ನೂತನ ಕುಲಪತಿ**

ಮೈಸೂರು ವಿವಿ ಯ 24ನೇ ನೂತನ ಕುಲಪತಿಯಾಗಿ ಪ್ರೊ.ಕೆ.ಎಸ್.ರಂಗಪ್ಪ ಅವರನ್ನು ರಾಜ್ಯಪಾಲರು ನೇಮಿಸಿದ್ದಾರೆ. ಹಂಗಾಮಿ ಕುಲಪತಿಯಾಗಿದ್ದ ಪ್ರೊ.ಬಿ.ಶಿವರಾಜ್ ಅವರಿಂದ ಅವರು ಅಧಿಕಾರ ವಹಿಸಿಕೊಳ್ಳಲ್ಲಿದ್ದಾರೆ. ಈ ಹಿಂದೆ ಪ್ರೊ.ಕೆ.ಎಸ್.ರಂಗಪ್ಪ ರವರು ಕರ್ನಾಟಕ ರಾಜ್ಯ ವಿವಿ ಯ ಕುಲಪತಿಯಾಗಿ ಕಾರ್ಯನಿರ್ವಹಿಸುತ್ತಿದ್ದರು.

**ಜಯಶ್ರೀ ರಾಮನಾಥ್ ಹೆಸರನ್ನು ಆಸ್ಕರ್ ಗೆ ನಾಮಕರಣ**

ಕರ್ನಾಟಕ ಶಾಸ್ತ್ರೀಯ ಸಂಗೀತದ ಹೆಸರಾಂತ ಗಾಯಕಿ ಜಯಶ್ರೀ ರಾಮನಾಥ್ ರವರ ಹೆಸರನ್ನು 36 ನೇ ಆಸ್ಕರ್ ಪ್ರಶಸ್ತಿಗೆ ನಾಮಕರಣ ಮಾಡಲಾಗಿದೆ. ಬಾಂಬೆ ಜಯಶ್ರೀ ಎಂದೇ ಪ್ರಸಿದ್ದರಾಗಿರುವ ಇವರು "ಲೈಫ್ ಆಫ್ ಪೈ" ಚಿತ್ರಕ್ಕಾಗಿ ತಮಿಳಿನಲ್ಲಿ ಬರೆದು, ಹಾಡಿರುವ ಜೋಗುಳದ ಗೀತೆಗೆ ಉತ್ತಮ ಗೀತೆ ವಿಭಾಗದಲ್ಲಿ ನಾಮಾಂಕಿತಗೊಂಡಿರುವ ಮೂಲಕ ಈ ವರ್ಷದ ಆಸ್ಕರ್ ಪಟ್ಟಿಯಲ್ಲಿ ಕಾಣಿಸಿಕೊಂಡಿರುವ ಏಕೈಕ ಭಾರತೀಯರು ಅವರಾಗಿದ್ದಾರೆ. ಖ್ಯಾತ ನಿರ್ದೇಶಕ ಆಂಗ್ ಲೀ ನಿರ್ದೇಶನದ "ಲೈಫ್ ಆಫ್ ಪೈ" ಚಿತ್ರ 11 ವಿಭಾಗದಲ್ಲಿ ಆಸ್ಕರ್ ನಾಮಕರಣಗೊಂಡಿದೆ.

**ಜಾಕೋಬ್ ಜಾಕ್ ಲೀವ್: ಅಮೇರಿಕಾದ ಹೊಸ ಹಣಕಾಸು ಕಾರ್ಯದರ್ಶಿ**

ಅಮೆರಿಕಾದ ನೂತನ ಹಣಕಾಸು ಕಾರ್ಯದರ್ಶಿಯನ್ನಾಗಿ "ಜಾಕೋಬ್ ಜಾಕ್ ಲೀವ್" ಅವರನ್ನು ಬರಾಕ್ ಒಬಾಮ ಆಯ್ಕೆ ಮಾಡಿದ್ದಾರೆ. ಹಿಂದಿನ ಹಣಕಾಸು ಕಾರ್ಯದರ್ಶಿಯಾಗಿದ್ದ ಟಿಮ್ ಗಿಥ್ ರವರ ಸ್ಥಾನವನ್ನು ಜಾಕೋಬ್ ಜಾಕ್ ಲೀವ್ ತುಂಬಲ್ಲಿದ್ದಾರೆ.

**ಹಾಕಿ ಇಂಡಿಯಾ: ಮ್ಯಾನೇಜರ್ ಆಗಿ ಓಲ್ಟಮನ್ ನೇಮಕ**

ಭಾರತ ಹಾಕಿ ತಂಡದ ಪ್ರದರ್ಶನ ಗುಣಮಟ್ಟವನ್ನು ಉತ್ತಮಪಡಿಸುವ ಸಲುವಾಗಿ ಹಾಲೆಂಡ್ ನ ಕೋಚ್ ರೋಲೆಂಟ್ ಓಲ್ಟ್ ಮನ್ ರವರನ್ನು ಹಾಕಿ ಇಂಡಿಯಾ ತನ್ನ ತಂಡದ ಮ್ಯಾನೇಜರ್ ಆಗಿ ನೇಮಿಸಿದೆ.

**ರಾಹುಲ್ ಗಾಂಧಿ ಗೆ ಕಾಂಗ್ರೆಸ್ ಪಕ್ಷದ ಉಪಾಧ್ಯಕ್ಷ ಪಟ್ಟ**

ಜೈಪುರದಲ್ಲಿ ನಡೆಯುತ್ತಿರುವ ಕಾಂಗ್ರೆಸ್ ಕಾರ್ಯಕಾರಣಿ ಶಿಬಿರದಲ್ಲಿ ಕಾಂಗ್ರೆಸ್ ಪಕ್ಷದ ಯುವರಾಜನೆಂದು ಬಿಂಬಿತರಾಗಿರುವ ರಾಹುಲ್ ಗಾಂಧಿಯವರನ್ನು ಪಕ್ಷದ ಉಪಾಧ್ಯಕ್ಷರಾಗಿ ನೇಮಿಸಲಾಗಿದೆ. ಈ ಮೂಲಕ ಅವರು ದೇಶದ ಅತ್ಯಂತ ಬಲಿಷ್ಠ ಮತ್ತು ಹಳೆಯ ಪಕ್ಷವಾದ ಕಾಂಗ್ರೆಸ್ ನ ನಂ.2 ಸ್ಥಾನವನ್ನು ಅಲಂಕರಿಸಿದಂತಾಗಿದೆ.

- ರಕ್ಷಣಾ ಸಚಿವ ಎ.ಕೆ.ಆಂಟನಿ ರವರು ರಾಹುಲ್ ಗಾಂಧೀಯವರ ಹೆಸರನ್ನು ಉಪಾಧ್ಯಕ್ಷ ಸ್ಥಾನಕ್ಕೆ ಸೂಚಿಸಿದ ನಂತರ ಇದನ್ನು ಸಭೆ ಅವಿರೋಧವಾಗಿ ಒಪ್ಪಿಕೊಂಡಿತು.
- ಈ ಹುದ್ದೆಯನ್ನು ಅಲಂಕರಿಸಿದ ಮೂರನೇ ವ್ಯಕ್ತಿಯಾಗಿ ರಾಹುಲ್ ಗಾಂಧಿ ಹೊರಹೊಮ್ಮಿದ್ದರೆ, ಈ ಹಿಂದೆ ರಾಜೀವ್ ಗಾಂಧಿ ಅಧ್ಯಕ್ಷರಾಗಿದ್ದ ಅವಧಿಯಲ್ಲಿ ಅರ್ಜುನ್ ಸಿಂಗ್ (1986) ಮತ್ತು ಸೀತಾರಾಂ ಕೇಸರಿಯವರು ಅಧ್ಯಕ್ಷರಾಗಿದ್ದಾಗ ಜಿತೇಂದ್ರ ಪ್ರಸಾದ್ ರವರನ್ನು (1997) ಉಪಾಧ್ಯಕ್ಷರಾಗಿ ನೇಮಿಸಲಾಗಿತ್ತು.

**ಯುಜಿಸಿ ಅಧ್ಯಕ್ಷರಾಗಿ: ವೇದ್ ಪ್ರಕಾಶ್ ನೇಮಕ**

ವಿಶ್ವವಿದ್ಯಾಲಯದ ಧನಸಹಾಯ ಆಯೋಗದ (University Grant Commission) ಅಧ್ಯಕ್ಷರಾಗಿ ವೇದ ಪ್ರಕಾಶ್ ರವರನ್ನು ನೇಮಕ ಮಾಡಲಾಗಿದೆ. ಈ ಹಿಂದೆ ಇವರು ಆಯೋಗದ ಉಸ್ತುವಾರಿ ಅಧ್ಯಕ್ಷರಾಗಿ ಕಾರ್ಯನಿರ್ವಹಿಸುತ್ತಿದ್ದರು.

- ವಿಶ್ವವಿದ್ಯಾಲಯದ ಧನಸಹಾಯ ಆಯೋಗವು ಕೇಂದ್ರ ಸರ್ಕಾರ ಸ್ಥಾಪಿಸಿರುವ ಶಾಸನ ಬದ್ಧ ಸಂಸ್ಥೆಯಾಗಿದ್ದು, 1956 ರಲ್ಲಿ ಸ್ಥಾಪಿಸಲಾಗಿದೆ. ವಿಶ್ವ ವಿದ್ಯಾಲಯದ ಶಿಕ್ಷಣ ಮಟ್ಟದಲ್ಲಿ ಸಮನ್ವಯತೆ ಮತ್ತು ಶೈಕ್ಷಣಿಕ ಗುಣಮಟ್ಟ ನಿರ್ವಹಣೆ ಮಾಡುವುದು ಇದರ ಮುಖ್ಯ ಉದ್ದೇಶವಾಗಿದೆ. ವಿಶ್ವ ವಿದ್ಯಾಲಯ ಮತ್ತು ಕಾಲೇಜುಗಳಿಗೆ ಮಾನ್ಯತೆ ಮತ್ತು ಹಣಕಾಸಿನ ಸಹಾಯ ಮಾಡುವುದು ಇದರ ಇತರೆ ಕರ್ತವ್ಯಗಳು. ಇದರ ಪ್ರಧಾನ ಕೇಂದ್ರವು ದೆಹಲಿಯಲ್ಲಿದ್ದು, ದೇಶದ ಇತರೆ 6 ಕಡೆ ಪ್ರಾಂತೀಯ ಕೇಂದ್ರಗಳನ್ನು ಹೊಂದಿದೆ.

**ಏರಿಕ್ ಹ್ಯಾಸಕೆಲ್: ಅಡಿಡಾಸ್ ನ ಭಾರತದ ನೂತನ ಮ್ಯಾನೇಜಿಂಗ್ ಡೈರೆಕ್ಟರ್**

ಜರ್ಮನಿಯ ಕ್ರೀಡಾ ಉಡುಪು ದಿಗ್ಗಜ ಅಡಿಡಾಸ್ ತನ್ನ ಭಾರತದ ವಹಿವಾಟು ನಿರ್ವಹಣೆಗೆ ಏರಿಕ್ ಹ್ಯಾಸಕೆಲ್ ರವರನ್ನು ಮ್ಯಾನೇಜಿಂಗ್ ಡೈರೆಕ್ಟರ್ ಆಗಿ ನೇಮಕ ಮಾಡಿದೆ. ಕ್ಲಾಸ್ ಹೆಕೆರಾಟ್ ರವರಿಂದ ತೆರವುಗೊಂಡಿದ್ದ ಸ್ಥಾನವನ್ನು ಏರಿಕ್ ತುಂಬಲ್ಲಿದ್ದಾರೆ. ಈ ಹಿಂದೆ ಏರಿಕ್ ರವರು ಚೀನಾದಲ್ಲಿ ಅಡಿಡಾಸ್ ನ ಕಾರ್ಯನಿರ್ವಹಣಾಧಿಕಾರಿಯಾಗಿದ್ದರು.

**ರಾಜನಾಥ್ ಸಿಂಗ್ ಈಗ ಬಿಜೆಪಿಯ ಅಧ್ಯಕ್ಷ**

ರಾಜಕೀಯ ಕ್ಷೇತ್ರದಲ್ಲಾದ ದಿಡೀರ್ ಬೆಳವಣಿಗೆಯಿಂದ ರಾಜನಾಥ್ ಸಿಂಗ್ ಭಾರತೀಯ ಜನತಾ ಪಾರ್ಟಿಯ ರಾಷ್ಟ್ರೀಯ ಅಧ್ಯಕ್ಷರಾಗಿ ಎರಡನೇ ಭಾರಿಗೆ ಆಯ್ಕೆಯಾಗಿದ್ದಾರೆ. ಪುರ್ತಿ ಕಂಪನಿಯ ಒಡೆತನ ಮತ್ತು ಭ್ರಷ್ಟಚಾರದ ಆರೋಪಗಳನ್ನು ಹೊಂದಿರುವ ಕಾರಣ ನಿತಿನ್ ಗಡ್ಕರಿ ಅಧ್ಯಕ್ಷ ಸ್ಥಾನದಿಂದ ಕೆಳಗಿಳಿದ್ದಿದ್ದರು.

- ಅಧ್ಯಕ್ಷ ಸ್ಥಾನಕ್ಕೆ ಪ್ರತಿ ಸ್ಪರ್ಧಿಗಳಾರೂ ಇಲ್ಲದ ಕಾರಣ ರಾಜನಾಥ್ ಸಿಂಗ್ ರವರನ್ನು ಅವಿರೋಧವಾಗಿ ಆಯ್ಕೆ ಮಾಡಲಾಗಿದೆ. ರಾಜನಾಥ್ ರವರ ಹೆಸರನ್ನು ಹಿರಿಯ ಮುಖಂಡ ಎಲ್.ಕೆ.ಅಡ್ವಾಣಿ, ಸುಷ್ಮಾ ಸ್ವರಾಜ್, ಅರುಣ್ ಜೇಟ್ಲಿ ಮತ್ತು ಗಡ್ಕರಿ ಒಮ್ಮತದಿಂದ ಅನುಮೋದಿಸಿದರು.
- 2009 ರಿಂದ ನಿತಿನ್ ಗಡ್ಕರಿ ಬಿಜೆಪಿಯ ರಾಷ್ಟ್ರಾಧ್ಯಕ್ಷರಾಗಿ ಕಾರ್ಯನಿರ್ವಹಿಸುತ್ತಿದ್ದರು.

**ಚುನಾವಣಾ ಆಯೋಗಕ್ಕೆ ಬೇವಿನಮರದ್ ನೇಮಕ**

- ಕೆ.ಎಸ್. ಬೇವಿನಮರದ್ ರವರನ್ನು ರಾಜ್ಯ ಚುನಾವಣಾ ಆಯೋಗದ ವಿಶೇಷ ಕರ್ತವ್ಯಾಧಿಕಾರಿಯಾಗಿ ನೇಮಕಮಾಡಿ ರಾಜ್ಯ ಸರ್ಕಾರ ಆದೇಶ ಹೊರಡಿಸಿದೆ.
- ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಇಲಾಖೆ ಚುನಾವಣಾ ವಿಭಾಗದ ಕ್ರಮಬದ್ಧ ಮತದಾರರಿಗೆ ಶಿಕ್ಷಣ ಹಾಗೂ ಚುನಾವಣಾ ಪಾಲ್ಗೊಳ್ಳುವಿಕೆ ಯೋಜನೆಯ 2 ವರ್ಷದ ಅವಧಿಗೆ ವಿಶೇಷ ಕರ್ತವ್ಯಾಧಿಕಾರಿಯಾಗಿ ನೇಮಕ ಮಾಡಲಾಗಿದೆ.
- ಕೆ.ಎಸ್.ಬೇವಿನಮರದ್ ರವರು ಈ ಹಿಂದೆ ವಾರ್ತಾ ಇಲಾಖೆಯ ನಿರ್ದೇಶಕರಾಗಿ ಕಾರ್ಯನಿರ್ವಹಿಸಿದ್ದರು.

**ಸೈನಾ ಮತ್ತು ಮೇರಿಕೋಮ್ ಈಗ ಚುನಾವಣಾ ಆಯೋಗದ ರಾಯಭಾರಿಗಳು**

ಒಲಂಪಿಕ್ಸ್ ನಲ್ಲಿ ಕಂಚಿನ ಪದಕ ಗೆದ್ದ ಭಾರತದ ಬ್ಯಾಡ್ಮಿಂಟನ್ ತಾರೆ ಸೈನಾ ನೆಹ್ವಾಲ್ ಮತ್ತು ಬಾಕ್ಸಿಂಗ್ ಚಾಂಪಿಯನ್ ಮೇರಿಕೋಮ್ ರವರನ್ನು ಭಾರತದ ಚುನಾವಣಾ ಆಯೋಗದ ರಾಯಭಾರಿಗಳನ್ನಾಗಿ ನೇಮಿಸಲಾಗಿದೆ.

- ಯುವ ಮತದಾರರನ್ನು ಆಕರ್ಷಿಸುವ ಮೂಲಕ ದೇಶದಲ್ಲಿ ಯುವ ಜನತೆ ಮತದಾನದಲ್ಲಿ ಸಕ್ರಿಯವಾಗಿ ಭಾಗವಹಿಸುವ ಸಲುವಾಗಿ ಚುನಾವಣಾ ಆಯೋಗ ಈ ನಿರ್ಧಾರ ಕೈಗೊಂಡಿದೆ.
- ಈ ಹಿಂದೆ ಮಾಜಿ ರಾಷ್ಟ್ರಪತಿಗಳಾದ ಅಬ್ದುಲ್ ಕಲಾಂ ಮತ್ತು ಕ್ರಿಕೆಟ್ ಆಟಗಾರ ಎಂ.ಎಸ್.ಧೋನಿ ರವರನ್ನು ಸಹ ರಾಯಭಾರಿಯನ್ನಾಗಿ ನೇಮಿಸಲಾಗಿತ್ತು.
- ಕನ್ನಡ ಸಿನಿಮಾ ನಟರಾದ ಪುನೀತ್ ಮತ್ತು ರಮೇಶ್ ಅರವಿಂದ್ ಸಹ ರಾಜ್ಯದಲ್ಲಿ ಚುನಾವಣಾ ಆಯೋಗದ ಜೊತೆ ಕೈಜೋಡಿಸಿದ್ದಾರೆ.

**ವೀರಣ್ಣ ಮತ್ತಿಕಟ್ಟಿ ಪ್ರಚಾರ ಸಮಿತಿ ಅಧ್ಯಕ್ಷ**

- ಹಿರಿಯ ಕಾಂಗ್ರೆಸ್ ನಾಯಕ ವೀರಣ್ಣ ಮತ್ತಿಕಟ್ಟಿಯವರನ್ನು ಕಾಂಗ್ರೆಸ್ ಪ್ರಚಾರ ಸಮಿತಿಯ ಅಧ್ಯಕ್ಷರನ್ನಾಗಿ ನೇಮಕ ಮಾಡಲಾಗಿದೆ.
- ಡಿ.ಕೆ.ಶಿವ ಕುಮಾರ್ ರವರನ್ನು ಪ್ರಚಾರ ಸಮಿತಿಯ ಸಹ ಅಧ್ಯಕ್ಷರಾಗಿ ನೇಮಕ ಮಾಡಲಾಗಿದೆ ಹಾಗೂ ವಿಧಾನಸಭೆ ಮಾಜಿ ಅಧ್ಯಕ್ಷರಾದ ರಮೇಶ್ ಕುಮಾರ್ ರವರನ್ನು ಪ್ರಣಾಳಿಕೆ ಸಮಿತಿಯ ಅಧ್ಯಕ್ಷರಾಗಿ ನೇಮಿಸಲಾಗಿ ಸೋನಿಯಾ ಗಾಂಧಿಯವರು ಆದೇಶ ಹೊರಡಿಸಿದ್ದಾರೆ.

**ಎಸ್.ಎಸ್. ಮುಂದ್ರ ಬ್ಯಾಂಕ್ ಆಫ್ ಬರೋಡದ ನೂತನ ಸಿಎಂಡಿ (CMD)**

ಎಸ್.ಎಸ್. ಮುಂದ್ರ ರವರು ಬ್ಯಾಂಕ್ ಆಫ್ ಬರೋಡದ ನೂತನ ಛೇರಮನ್ ಅಂಡ್ ಮ್ಯಾನೇಜಿಂಗ್ ಡೈರೆಕ್ಟರ್ ಆಗಿ ನೇಮಕಗೊಂಡಿದ್ದರೆ. ಈ ಮುಂಚೆ ಅವರು ಯೂನಿಯನ್ ಬ್ಯಾಂಕ್ ಎಕ್ಸಕ್ಯೂಟೀವ್ ಡೈರೆಕ್ಟರ್ ಆಗಿ ಕಾರ್ಯನಿರ್ವಹಿಸಿದ್ದರು.

**ಅಮೆರಿಕಾದ ನವೀಕರಿಸಬಹುದಾದ ಶಕ್ತಿ ಮತ್ತು ಇಂಧನ ದಕ್ಷತೆ ಇಲಾಖೆಯ ಸಲಹಾ ಸಮಿತಿಗೆ :ಅಮಿತ್ ಷಾ ನೇಮಕ**

- ಅಸ್ಟ್ರೋಫೀಲ್ಡ್ ರಿನೀವಬಲ್ ರಿಸೋರ್ಸ್ ಲಿಮಿಟೆಡ್ (Astrofield Renewble Resource Limited) ಕಂಪನಿಯ ಸಹ ಅಧ್ಯಕ್ಷರಾದ ಅಮಿತ್ ಷಾ ರವರನ್ನು ಅಮೆರಿಕಾದ ನವೀಕರಿಸಬಹುದಾದ ಶಕ್ತಿ ಮತ್ತು ಇಂಧನ ದಕ್ಷತೆ ಇಲಾಖೆಯ ಸಲಹಾ ಸಮಿತಿಗೆ ನೇಮಕ ಮಾಡಲಾಗಿದೆ.

- ಷಾ ರವರು ನವೀಕರಿಸಬಹುದಾದ ಇಂಧನ ಕ್ಷೇತ್ರದ ಯೋಜನಾ ಅಭಿವರ್ಧಕರನ್ನು ಪ್ರತಿನಿಧಿಸಲ್ಲಿದ್ದು, ಸದ್ಯ ನವೀಕರಿಸಬಹುದಾದ ಇಂಧನ ಕ್ಷೇತ್ರದಲ್ಲಿ ಆಮೆರಿಕಾ ಎದುರಿಸುತ್ತಿರುವ ಸಮಸ್ಯೆಗಳಿಗೆ ಪರಿಹಾರ ಕಂಡುಕೊಳ್ಳುವ ಸಲುವಾಗಿ ಉನ್ನತ ಅಧಿಕಾರಿಗಳಿಗೆ ಸಲಹೆಯನ್ನು ಒದಗಿಸಲು ಶ್ರಮವಹಿಸಲ್ಲಿದ್ದಾರೆ.

**ಬಿಭಾಸ್ ಕುಮಾರ್ ಕಾರ್ಪ್ ಬ್ಯಾಂಕ್ ನ ನೂತನ ಕಾರ್ಯನಿರ್ವಾಹಕ ನಿರ್ದೇಶಕರು**

- ಕಾರ್ಪೊರೇಶನ್ ಬ್ಯಾಂಕ್ ನ ನೂತನ ಕಾರ್ಯನಿರ್ವಾಹಕ ನಿರ್ದೇಶಕರಾಗಿ ಬಿಭಾಸ್ ಕುಮಾರ್ ಶ್ರೀವಾಸ್ತವ ರವರು ಅಧಿಕಾರವಹಿಸಿಕೊಳ್ಳಲ್ಲಿದ್ದಾರೆ. ಈವರೆಗೆ ಅವರು ಅಲಹಾಬಾದ್ ಬ್ಯಾಂಕ್ ನ ಕೋಲ್ಕತ್ತಾ ಕಛೇರಿಯಲ್ಲಿ ಮಹಾ ಪ್ರಬಂಧಕರಾಗಿ ಕಾರ್ಯನಿರ್ವಹಿಸಿದ್ದರು.
- ಬನಾರಸ್ ಹಿಂದೂ ವಿ.ವಿ ಯಿಂದ ಕೃಷಿಯಲ್ಲಿ ಸ್ನಾತಕೋತ್ತರ ಪದವಿ ಪಡೆದಿರುವ ಅವರು "ಇಂಡಿಯನ್ ಇನ್ ಸ್ಟಿಟ್ಯೂಟ್ ಆಫ್ ಬ್ಯಾಂಕರ್ಸ್ ಸರ್ಟಿಪೈಡ್ ಅಸೋಸಿಯೆಟ್" ನ ಸದಸ್ಯರು ಆಗಿದ್ದಾರೆ. 1979 ರಲ್ಲಿ ಅಲಹಾಬಾದ್ ಬ್ಯಾಂಕಿನಲ್ಲಿ ಕೃಷಿ ಕ್ಷೇತ್ರ ಅಧಿಕಾರಿಯಾಗಿ ವೃತ್ತಿ ಜೀವನ ಆರಂಭಿಸಿದ ಅವರು ವಿವಿಧ ಮಟ್ಟಗಳಲ್ಲಿ ಕೆಲಸ ಮಾಡಿದ್ದಾರೆ.

**ಆಮೆರಿಕಾ ವಿದೇಶಾಂಗ ಕಾರ್ಯದರ್ಶಿಯಾಗಿ ಜಾನ್ ಕೆರ್ರಿ ನೇಮಕ**

ಆಮೆರಿಕಾದ ಅಧ್ಯಕ್ಷ ಬರಕ್ ಒಬಾಮ ರವರ ನಿಕಟವರ್ತಿಯಾಗಿರುವ ಜಾನ್ ಕೆರ್ರಿಯವರನ್ನು ನೂತನ ವಿದೇಶಾಂಗ ಕಾರ್ಯದರ್ಶಿಯಾಗಿ ನೇಮಿಸಲು ಆಮೆರಿಕಾದ ಸೆನೆಟ್ ಸರ್ವಾನುಮತದಿಂದ ಅನುಮೋದಿಸಿದೆ. ಕೆರ್ರಿ ನೇಮಕಾತಿಯನ್ನು ಸೆನೆಟ್ 94-3 ಮತಗಳಿಂದ ಅಂಗೀಕರಿಸಿದೆ. ಸದ್ಯ ವಿದೇಶಾಂಗ ಕಾರ್ಯದರ್ಶಿಯಾಗಿರುವ ಹಿಲರಿ ಕ್ಲಿಂಟನ್ ರವರ ಅವಧಿಯು ಶೀಘ್ರದಲ್ಲಿ ಕೊನೆಗೊಳ್ಳಲ್ಲಿದ್ದು, ಅವರ ಸ್ಥಾನವನ್ನು 69 ವಯಸ್ಸಿನ ಕೆರ್ರಿ ತುಂಬಲ್ಲಿದ್ದಾರೆ.

ಜಾನ್ ಕೆರ್ರಿ ಬಗ್ಗೆ:-

- ಮೆಸ್ಸಾಚುಸೆಟ್ಸ್ ಸಂಸದರಾಗಿರುವ ಕೆರ್ರಿ, 2004 ರಲ್ಲಿ ನಡೆದ ಚುನಾವಣೆಯಲ್ಲಿ ಡೆಮಾಕ್ರಟಿಕ್ ಪಕ್ಷದ ಅಭ್ಯರ್ಥಿಯಾಗಿದ್ದು, ಪಾಕಿಸ್ತಾನ 705 ಕೋಟಿ ಡಾಲರ್ ಮೊತ್ತದ ನೆರವು ನೀಡವ ಕೆರ್ರಿ-ಲುಗಾರ್-ಬರ್ಮನ್ ಮಸೂದೆಯನ್ನು ರೂಪಿಸಿದವರೂ ಆಗಿದ್ದಾರೆ. ಈಜಿಪ್ಟ್ ದಂಗೆ ಹಿನ್ನೆಲೆಯಲ್ಲಿ, ಈಜಿಪ್ಟ್ ಅಧ್ಯಕ್ಷ ಹೊಸ್ನಿಯವರನ್ನು ಅಧಿಕಾರ ತ್ಯಜಿಸುವಂತೆ ಅವರು ಹೇಳಿದ್ದರು.
- ಲಾಡೆನ್ ಹತ್ಯೆಯ ನಂತರದ ಸೂಕ್ಷ್ಮ ಮತ್ತು ಕ್ಲಿಷ್ಟ ಸಂದರ್ಭಗಳಲ್ಲಿ ಕೆರ್ರಿ, ಒಬಾಮ ಸಹಾಯಕ್ಕೆ ಧಾವಿಸಿದ್ದರಲ್ಲದೆ ಉಭಯ ದೇಶಗಳ ನಡುವಿನ ಬಾಂಧವ್ಯ ಸುಧಾರಿಸುವಲ್ಲಿ ಪ್ರಮುಖ ಪಾತ್ರವಹಿಸಿದ್ದರು.

**ಕರ್ನಾಟಕ ರಾಜ್ಯ ಮುಕ್ತ ವಿ.ವಿ ಕುಲಪತಿಯಾಗಿ: ಎಂ.ಜಿ.ಕೃಷ್ಣನ್ ನೇಮಕ**

ಬೆಂಗಳೂರು ವಿಶ್ವವಿದ್ಯಾಲಯದ ರಾಜ್ಯ ಶಾಸ್ತ್ರ ವಿಭಾದಗ ಮುಖ್ಯಸ್ಥ ಎಂ.ಜಿ.ಕೃಷ್ಣನ್ ರವರನ್ನು ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾಲಯದ ಕುಲಪತಿಯಾಗಿ ನೇಮಕ ಮಾಡಿ, ರಾಜ್ಯಪಾಲರು ಆದೇಶ ಹೊರಡಿಸಿದ್ದಾರೆ. ಕೆ.ಎಸ್.ರಂಗಪ್ಪರವರಿಂದ

ತೆರವಾಗಿದ್ದ ಸ್ಥಾನವನ್ನು ಕೃಷ್ಣನ್ ತುಂಬಲ್ಲಿದ್ದಾರೆ. ಶೈಕ್ಷಣಿಕ ಪ್ರಗತಿಗೆ ಎಲ್ಲಾ ರೀತಿಯಿಂದಲೂ ಸಹಕರಿಸುವುದಾಗಿ ಅವರು ಈ ಸಂದರ್ಭದಲ್ಲಿ ತಿಳಿಸಿದ್ದಾರೆ.

**ಆಪರೇಷನ್ ಡಸರ್ಟ್ ಖ್ಯಾತಿಯ ಆಮೆರಿಕಾದ ಜನರಲ್ ನಾರ್ಮನ್ ಸ್ವರ್ಜಕಾಫ್ಟ್ ನಿಧನ**

ಆಮೆರಿಕಾದ ನಿವೃತ್ತ ಜನರಲ್ ನಾರ್ಮನ್ ಸ್ವರ್ಜಕಾಫ್ಟ್ (Norman Schwarjkopf)ರವರು ಇತ್ತೀಚೆಗೆ ನಿಧನರಾದರು. 1991 ರಲ್ಲಿ ನಡೆದ ಗಲ್ಫ್ ಯುದ್ಧದಲ್ಲಿ ಆಮೆರಿಕಾ ಸೇನೆ ಗೆಲುವು ಸಾಧಿಸುವಲ್ಲಿ ನಾರ್ಮನ್ ರವರು ಪ್ರಮುಖ ಪಾತ್ರವಹಿಸಿದ್ದರು. ಈ ಯುದ್ಧ ಕಾರ್ಯಾಚರಣೆಗೆ ಆಪರೇಷನ್ ಡಸರ್ಟ್ ಸ್ಟಾರ್ಮ್ (Operation Dessert Storm) ಎಂದು ಹೆಸರಿಡಲಾಹಿತ್ತು.

ಆಪರೇಷನ್ ಡಸರ್ಟ್ ಸ್ಟಾರ್ಮ್:

- 1991 ರಲ್ಲಿ ವಿಶ್ವ ಸಂಸ್ಥೆಯ 34 ದೇಶಗಳ ಸೇನೆಯೂ ಇರಾಕ್ ದೇಶದ ವಿರುದ್ಧ ನಡೆಸಿದ ಯುದ್ಧ ಕಾರ್ಯಾಚರಣೆಯಗೆ ಆಪರೇಷನ್ ಡಸರ್ಟ್ ಸ್ಟಾರ್ಮ್ ಎಂದು ಹೆಸರಿಡಲಾಗಿದೆ.
- ಸದ್ದಾಂ ಹುಸೇನ್ ಆಡಳಿತದಲ್ಲಿ ಮೆರೆಯುತ್ತಿದ್ದ ಇರಾಕ್ ದೇಶದ ಸೇನೆಯು, ಕುವೈತ್ ದೇಶದ ಭಾಗವನ್ನು ಆಕ್ರಮಿಸಿಕೊಳ್ಳಲು ಯತ್ನಿಸಿದಾಗ ಆಪರೇಷನ್ ಡಸರ್ಟ್ ಸ್ಟಾರ್ಮ್ ಯುದ್ಧ ಕಾರ್ಯಾಚರಣೆಯನ್ನು ನಡೆಸಲಾಗಿತ್ತು. ಈ ಯುದ್ಧದಲ್ಲಿ 34 ದೇಶಗಳ ಸಹಭಾಗಿತ್ವದ ಸೇನೆಯು ಇರಾಕ್ ಸೇನೆಯನ್ನು ಕುವೈತ್ ನಿಂದ ಹಿಮ್ಮೆಟ್ಟಿಸುವ ಮೂಲಕ ಗೆಲುವು ಸಾಧಿಸಿತ್ತು.

**ಖ್ಯಾತ ಪಿಟೀಲು ವಾದಕ ಗೋಪಾಲಕೃಷ್ಣನ್ ವಿಧಿವಶ**

ಹಿರಿಯ ಪಿಟೀಲು ವಾದಕ ಎಂ.ಎಸ್. ಗೋಪಾಲಕೃಷ್ಣನ್ ಅನಾರೋಗ್ಯದ ಕಾರಣ ವಿಧಿವಶರಾದರು. ಅವರಿಗೆ 82 ವರ್ಷ ವಯಸ್ಸಾಗಿತ್ತು. ಏಳು ದಶಕಗಳ ಸುದೀರ್ಘ ಕಾಲದಿಂದ ಗಾಯನದಲ್ಲಿ ತೊಡಗಿದ್ದ ಅವರಿಗೆ ಪದ್ಮಭೂಷಣ ಸೇರಿದಂತೆ ಹಲವು ಪ್ರಶಸ್ತಿಗಳು ಸಂದಿದ್ದವು.

**ಪುರಾತತ್ವ ವಿಜ್ಞಾನಿ ಶಿಕಾರಿಪುರ ರಂಗನಾಥ್ ರಾವ್ ನಿಧನ**

ಖ್ಯಾತ ಪುರಾತತ್ವ ವಿಜ್ಞಾನಿ ಎಸ್.ಆರ್. ರಾವ್ ಅನಾರೋಗ್ಯದ ಕಾರಣ ನಿಧನರಾದರು ಅವರಿಗೆ 90 ವರ್ಷ ವಯಸ್ಸಾಗಿತ್ತು. ಪದವಿಯ ನಂತರ ಬರೋಡ ರಾಜ್ಯ ಪುರಾತತ್ವ ಇಲಾಖೆಯಲ್ಲಿ ಮೊದಲು ಕೆಲಸ ಮಾಡಿದ ಅವರು ಬಳಿಕ ನಾಗಪುರ, ಔರಂಗಬಾದ್ ವೃತ್ತ, ಬೆಂಗಳೂರು ವೃತ್ತದಲ್ಲಿ ಕೆಲಸ ನಿರ್ವಹಿಸಿ ಸೇವೆಯಿಂದ ನಿವೃತ್ತರಾಗಿದ್ದರು.

ರಾವ್ ಬಗ್ಗೆ:

- 1975 ರಲ್ಲಿ ರಾಷ್ಟ್ರೀಯ ಯೋಜನೆಯಡಿ ಹಂಪಿ, ಉತ್ತರ ಪ್ರದೇಶದ ಪಾತೇಪುರ ಸಿಕ್ರಿ ಸೇರಿದಂತೆ ದೇಶದ ವಿವಿಧ ಕಡೆ ಉತ್ಖನನ ನಡೆಸಿದ್ದರು.
- 1979-80 ರಲ್ಲಿ ಹರಪ್ಪ ನಾಗರಿಕತೆಯ ಬಗ್ಗೆ ಅಧ್ಯಯನ ನಡೆಸಲು ಅವರಿಗೆ ನೆಹರು ಫೆಲೋಶಿಫ್ ದೊರಕಿತ್ತು.

- 1981 ರಿಂದ 1994ರ ವರಗೆ ಗೋವಾದಲ್ಲಿ ನ್ಯಾಷನಲ್ ಇನಸ್ಟಿಟ್ಯೂಟ್ ಆಫ್ ಓಷಿಯಾನೋಗ್ರಫಿಯಲ್ಲಿ ಎಮಿರೇಟ್ಸ್ ವಿಜ್ಞಾನಿಯಾಗಿ ಕೆಲಸ ನಿರ್ವಹಿಸುವ ವೇಳೆಯಲ್ಲಿ ಅವರು ಸಮುದ್ರದಡಿಯಲ್ಲಿ ದ್ವಾರಕನಗರವನ್ನು ಪತ್ತೆ ಹಚ್ಚಿದ್ದರು.
- ಕರ್ನಾಟಕದ ಐತಿಹಾಸಿಕ ಸ್ಥಳಗಳಾದ ಬಾದಾಮಿ, ಐಹೊಳೆ, ಪಟ್ಟದ ಕಲ್ಲು ಸಂರಕ್ಷಣೆಯಲ್ಲಿ ಅವರು ಪ್ರಮುಖ ಪಾತ್ರ ವಹಿಸಿದ್ದರು.

**ತೆರೆಮರೆಗೆ ಸರಿದ ಬಂಡೋಪಾಧ್ಯಯ**

ಪಶ್ಚಿಮ ಬಂಗಾಳದ ಖ್ಯಾತ ನಟ ಮತ್ತು ರಂಗಕರ್ಮಿ ಹರದಾನ್ ಬಂಡೋಪಾಧ್ಯಯ ತಮ್ಮ 86ನೇ ವಯಸ್ಸಿನಲ್ಲಿ ವಿಧಿವಶರಾದರು.

- ಸಿನಿಮಾ ಕ್ಷೇತ್ರದ ದಂತಕತೆ ಸತ್ಯಜಿತ್ ರೇ ಅವರ ಅನೇಕ ಚಿತ್ರಗಳಲ್ಲಿ ಬಂಡೋಪಾಧ್ಯಯರವರು ನಟಿಸಿದ್ದರು.
- "ಮಹಾನಗರ", "ಸಖ ಪ್ರಕಾಶ", "ಸೊನರ್ ಕೆಲ್ಲ" ಮತ್ತು "ಜೈ ಬಾಬ ಫೆಲುನಾಥ್" ಮೊದಲಾದ ಸತ್ಯಜಿತ್ ರೇ ಸಿನಿಮಾಗಳಲ್ಲಿ ಬಂಡೋಪಾಧ್ಯಯರವರು ಅಭಿನಯಿಸಿದ್ದರು.
- ಬಂಗಾಳ ಸರ್ಕಾರವು ಇವರಿಗೆ ಬಂಗ ವಿಭೂಷಣ-2012 ಪ್ರಶಸ್ತಿಯನ್ನು ನೀಡಿ ಗೌರವಿಸಿತ್ತು.

**ಆದಿಚುಂಚನಗಿರಿ ಶ್ರೀ ಗಳು ವಿಧಿವಶ**

ಹಲವು ಸಮಯದಿಂದ ಆರೋಗ್ಯದ ಸಂಕೀರ್ಣ ಸಮಸ್ಯೆಯಿಂದ ಬಳಲುತ್ತಿದ್ದ ಆದಿಚುಂಚನಗಿರಿ ಪೀಠಾಧ್ಯಕ್ಷರಾದ ಶ್ರೀ ಭಾಲಗಂಗಾಧರ ಸ್ವಾಮಿಗಳು ಕೊನೆಯುಸಿರೆಳೆದರು. ಶ್ರೀಗಳು ಆದಿಚುಂಚನಗಿರಿ ಮಠದ 71ನೇ ಪೀಠಾಧಪತಿಗಳಾಗಿ 1974 ರಲ್ಲಿ ಪಟ್ಟವನ್ನೇರಿದರು. ಅವರ ದೂರದೃಷ್ಟಿ ಫಲದಿಂದ ಇಂದು ಆದಿಚುಂಚನಗಿರಿ ಬೃಹತ್ ಮರವಾಗಿ ಬೆಳೆದಿರುವುದು ಹೆಮ್ಮೆಯ ವಿಷಯ. ಶ್ರೀಗಳ ಶ್ರಮದಿಂದ ಇಂದು ಸುಮಾರು 450 ಶಾಲೆಗಳು ಕಾರ್ಯನಿರ್ವಹಿಸುತ್ತಿವೆ. 47000ಕ್ಕೂ ಹೆಚ್ಚು ವಿಧ್ಯಾರ್ಥಿಗಳು ಶಿಕ್ಷಣ ಪಡೆಯುತ್ತಿದ್ದಾರೆ.

ಆದಿಚುಂಚನಗಿರಿಯ 72ನೇ ಪೀಠಾಧಿಪತಿಗಳಾಗಿ ಶ್ರೀಗಳಾ ಪರಮ ಶಿಷ್ಯರಾದ ಶ್ರೀ ನಿರ್ಮಲನಂದ ಸ್ವಾಮಿಯವರು ಮುಂದುವರೆಯಲ್ಲಿದ್ದಾರೆ.

**ಕೊಟೊ ಒಕುಬೊ :ವಿಶ್ವದ ಹಿರಿಯಜ್ಜಿ ನಿಧನ**

1897 ರಲ್ಲಿ ಜನಿಸಿದ್ದ ಜಪಾನ್ ನ ಕೊಟೊ ಒಕುಬೊ ಅವರು ಇತ್ತೀಚೆಗೆ ಮೃತಪಟ್ಟಿರುವುದಾಗಿ ಜಪಾನ್ ನ ಅಧಿಕೃತ ಮೂಲಗಳು ವರದಿ ಮಾಡಿವೆ. ಪ್ರಪಂಚದ ಅತಿ ಹಿರಿಯ ಅಜ್ಜಿ ಎಂದು ತಿಳಿಯಲಾಗಿದ್ದ ಅವರಿಗೆ 115 ವರ್ಷ ವಯಸ್ಸಾಗಿತ್ತು.

**ಕಂಚಿನ ಮಹಿಳೆ: ಜಸು ಶಿಲ್ಪಿ ನಿಧನ**

- ಕಂಚಿನ ಮಹಿಳೆ ಎಂದು ಪ್ರಸಿದ್ದರಾಗಿದ್ದ ಜಸು ಶಿಲ್ಪಿರವರು ಹೃದಯಾಘಾತದಿಂದ ವಿಧಿವಶರಾದರು, ರಾಷ್ಟ್ರ ಮತ್ತು ಅಂತರ್ ರಾಷ್ಟ್ರ ಮಟ್ಟದಲ್ಲಿ ಅನೇಕ ಪ್ರಶಸ್ತಿಗಳನ್ನು ಅವರು ಪಡೆದಿದ್ದರು.

- ಮಹಾತ್ಮ ಗಾಂಧಿ, ರಾಣಿ ಲಕ್ಷೀ ಭಾಯಿ ಮತ್ತು ಸರ್ದಾರ್ ಪಟೇಲ್ ರವರ ಕಂಚಿನ ಪ್ರತಿಮೆಗಳನ್ನು ಜಸು ಶಿಲ್ಪಿಯವರು ರಚಿಸಿದ್ದರು.
- ಷಿಕಾಗೋದ ಪ್ಲಾರಿಡಾದಲ್ಲಿ ಸ್ಥಾಪಿಸಿರುವ ಮಹಾತ್ಮ ಗಾಂಧಿ ಮತ್ತು ಲೂಥರ್ ಕಿಂಗ್ ರ ಪ್ರತಿಮೆಗಳನ್ನು ರಚಿಸಿದ ಕೀರ್ತಿ ಅವರದು.

**ಮೋಹನ್ ಪೈರಿಸ್: ಶ್ರೀಲಂಕಾದ ನೂತನ ಮುಖ್ಯ ನ್ಯಾಯಮೂರ್ತಿ**

ಶ್ರೀಲಂಕಾದ ಅಧ್ಯಕ್ಷರಾದ ಮಹಿಂದ್ರ ರಾಜಪಕ್ಷೆಯವರು ಮೋಹನ್ ಪೈರಿಸ್ ರವರನ್ನು ಸುಪ್ರೀಂ ಕೋರ್ಟ್ ನ ಮುಖ್ಯ ನ್ಯಾಯಮೂರ್ತಿಗಳನ್ನಾಗಿ ನೇಮಕ ಮಾಡಿದ್ದಾರೆ. ಮೋಹನ್ ಪೈರಿಸ್ ರವರು ಇತ್ತೀಚೆಗೆ ಪದಚ್ಯುತಿಗೊಳಿಸಲಾದ ಶ್ರೀಲಂಕಾದ ಮೊದಲ ಮಹಿಳಾ ಮುಖ್ಯ ನ್ಯಾಯಮೂರ್ತಿ ಶಿರಾನಿ ಬಂಡಾರ ನಾಯಕೆಯವರಿಂದ ತೆರವಾಗಿದ್ದ ಸ್ಥಾನವನ್ನು ತುಂಬಲ್ಲಿದ್ದಾರೆ.

- ಮೋಹನ್ ಪೈರಿಸ್ ರವರು 2011 ರಲ್ಲಿ ಅಟಾರ್ನಿ ಜನರಲ್ ಹುದ್ದೆಯಿಂದ ನಿವೃತ್ತಿಗೊಂಡಿದ್ದರು, ತದ ನಂತರ ಸಂಪುಟದ ಕಾನೂನು ಸಲಹೆಗಾರರಾಗಿ ಕಾರ್ಯನಿರ್ವಹಿಸುತ್ತಿದ್ದರು.

**ಸುದ್ದಿಯಲ್ಲಿರುವ ವ್ಯಕ್ತಿ: ತಹಿರ್ –ಉಲ್-ಖಾದ್ರಿ**

ಖಾದ್ರಿ ಒಬ್ಬ ಸೂಫಿ ಪಂಡಿತ. ಪಾಕಿಸ್ತಾನದ ಪಂಜಾಬ್ ಮೂಲದಲ್ಲಿ ಜನಿಸಿದ ಇವರು ಸದ್ಯ ಕೆನಾಡದ ನಾಗರಿಕ ಪೌರತ್ವ ಹೊಂದಿದ್ದಾರೆ. ಭಾರತದ ಸಿಎನ್ಎನ್-ಐಬಿಎನ್ ಇವರಿಗೆ ಶಾಂತಿದೂತ ಎಂಬ ಬಿರುದು ನೀಡಿದೆ. ಏಳು ವರ್ಷಗಳ ನಂತರ ಪಾಕಿಸ್ತಾನಕ್ಕೆ ಮರಳಿರುವ ಇವರು **"ಮಿನ್ ಹಜ್-ಉಲ್-ಖುರಾನ್"** ಎಂಬ ಸಂಘಟನೆ ಸ್ಥಾಪಿಸಿ ಪಾಕಿಸ್ಥಾನದ ಸರ್ಕಾರದ ವಿರುದ್ಧ ತಮ್ಮ ಸಾವಿರಾರು ಬೆಂಬಲಿಗರಂದಿಗೆ ಬೀದಿಗಿಳಿದು ಪ್ರತಿಭಟನೆ ನಡೆಸುತ್ತಿದ್ದಾರೆ.

**ಅಂಟಾರ್ಕ್ಟಿಕ ಏರಿದ ಭಾರತದ ಪ್ರೇಮಲತಾ ಅಗರ್ವಾಲ್**

- ಜಾರ್ಖಂಡ್ ಮೂಲದ 47 ರ ಹರೆಯದ ಮಹಿಳೆ ಪ್ರೇಮಲತಾ ಅಗರ್ವಾಲ್ ರವರು ಅಂಟಾರ್ಕ್ಟಿಕದ ಮೌಂಟ್ ವಿನ್ ಸನ್ ಶಿಖರ ಏರುವ ಮೂಲಕ ಸಾಧನೆಗೈದಿದ್ದಾರೆ.
- ಮೇ 20, 2011 ರಲ್ಲಿ ಅವರು ಮೌಂಟ್ ಎವರೆಸ್ಟ್ ಹೇರಿದ ಹಿರಿಯ ಭಾರತೀಯ ಮಹಿಳೆ ಎಂಬ ಹೆಗ್ಗಳಿಕೆಗೆ ಪಾತ್ರರಾಗಿದ್ದರು.

**ಮರಾಠಿ ಲೇಖಕಿ ಜ್ಯೊತ್ಸಾನ ದಿಯೋದರ ನಿಧನ**

- ಪ್ರಸಿದ್ಧ ಮರಾಠಿ ಲೇಖಕಿ ಜ್ಯೊತ್ಸಾನ ದಿಯೋದರ ವಿಧಿವಶರಾದರು, ಅವರಿಗೆ 86 ವರ್ಷ ವಯಸ್ಸಾಗಿತ್ತು. ಸುಮಾರು 40 ಕ್ಕೂ ಹೆಚ್ಚು ಕಾಂದಬರಿಗಳನ್ನು ಅವರು ಬರೆದಿದ್ದರು. ಅವರ ಅನೇಕ ಸಣ್ಣ ಕಥೆಗಳು ಜನ ಮೆಚ್ಚುಗೆಯನ್ನ ಗಳಿಸಿದ್ದವು.

- ಲೇಖಕಿಯಲ್ಲದೆ ಅವರು "ಆಲ್ ಇಂಡಿಯಾ ರೇಡಿಯೊ"ದಲ್ಲಿ ಕಾರ್ಯಕಾರಿ ನಿರ್ಮಾಪಕರಾಗಿ ಸಹ ಕಾರ್ಯನಿರ್ವಹಿಸಿದ್ದರು. ಅವರ ಗೃಹಿಣಿ ಎಂಬ ರೇಡಿಯೊ ಕಾರ್ಯಕ್ರಮ ಜನ ಮನ್ನಣೆ ಗಳಿಸಿತ್ತು.
- ಗಾರ್ ಗಂಗೆಚ್ಯ ಕತಿ, ಉದ್ವಸ್ತ, ಪದ್ ಜಾದ್ ಅವರ ಕೆಲವು ಪ್ರಸಿದ್ಧ ಕಾದಂಬರಿಗಳು.

**ಜಹೋ ಜಿಯಾಂಗ್ (Zhao Jihang) ಚೀನಾದ ಪ್ರಥಮ ತಮಿಳು ಲೇಖಕರು**

ಜಹೋ ಜಿಯಾಂಗ್ ತಮಿಳಿನಲ್ಲಿ ಪುಸ್ತಕವೊಂದನ್ನು ಬರೆಯು ಮೂಲಕ ತಮಿಳಿನಲ್ಲಿ ಪುಸ್ತಕ ಬರೆದ ಪ್ರಥಮ ಚೀನಾ ಲೇಖಕರು ಎಂಬ ಖ್ಯಾತಿಯನ್ನು ಪಡೆದಿದ್ದಾರೆ. ಇವರು ಬರೆದಿರುವ "ಚೀನಾ ಟ್ರಾವೆಲ್ ಅಟ್ರಾಕ್ಶನ್ ಪುಸ್ತಕವು (China Travel Attraction) ಬೀಜಿಂಗ್, ಟಿಬೆಟ್ ಮತ್ತು ಶಾಂಗೈನ ಇತಿಹಾಸ ಮತ್ತು ಸಂಸ್ಕೃತಿಯ ಬಗ್ಗೆ ತಿಳಿಸಿಕೊಡುತ್ತದೆ. ಸದ್ಯ ಇವರು ಚೀನಾ ಇಂಟರ್ ನ್ಯಾಷನಲ್ ರೇಡಿಯೋದ ತಮಿಳು ಸ್ಟೇಷನ್ ನಲ್ಲಿ ನಿರ್ದೇಶಕಿಯಾಗಿ ಕಾರ್ಯನಿರ್ವಹಿಸುತ್ತಿದ್ದಾರೆ.

---------------------------------------------------------------------------------------------------

## ಪ್ರಶಸ್ತಿಗಳು

**2010 ಮತ್ತು 2011ನೇ ಸಾಲಿನ ಆರ್ಯಭಟ ಪ್ರಶಸ್ತಿ ಪ್ರಕಟ**

ಭಾರತೀಯ ಅಂತರೀಕ್ಷ ಸಂಘ (Astronautical Society of India) ನೀಡುವ ಆರ್ಯಭಟ ಪ್ರಶಸ್ತಿ ಪ್ರಕಟಿಸಲಾಗಿದ್ದು ವಿಜ್ಞಾನಿಗಳಾದ ಎ.ಇ. ಮುತ್ತುನಾಯಗಂ ಮತ್ತು ವಿ.ಕೆ.ಸಾರಸ್ವತ್ ಕ್ರಮವಾಗಿ 2010 ಮತ್ತು 2011ನೇ ಸಾಲಿನ ಪ್ರಶಸ್ತಿಗೆ ಆಯ್ಕೆಯಾಗಿದ್ದಾರೆ.

- ಇ.ಎ. ಮುತ್ತುನಾಯಗಂ ರವರು ಸಾಗರ ಅಭಿವೃದ್ಧಿ ಇಲಾಖೆಯ ಮಾಜಿ ಕಾರ್ಯದರ್ಶಿಗಳು ಮತ್ತು ಇಸ್ರೋನ ಲಿಕ್ವಿಡ್ ಪ್ರೋಪಲ್ಷನ್ ಸಿಸ್ಟಮ್ ಸೆಂಟರ್ ನ ನಿರ್ದೇಶಕರಾಗಿ ಕಾರ್ಯನಿರ್ವಹಿಸಿದ್ದರು.
- ವಿ.ಕೆ ಸಾರಸ್ವತ್ ರವರು ಭಾರತದ ರಕ್ಷಣಾ ಸಂಶೋಧನೆ ಮತ್ತು ಅಭಿವೃದ್ಧಿ ಸಂಸ್ಥೆಯ ಹಾಲಿ ನಿರ್ದೇಶಕರು.

**ಎಎಸ್ಐ ನ ಇತರ ಪ್ರಶಸ್ತಿಗಳು**

- ರಾಕೆಟ್ ಮತ್ತು ರಾಕೆಟ್ ಸಂಬಂಧಿಸಿದ ತಂತ್ರಜ್ಞಾನಕ್ಕಾಗಿ ನೀಡುವ ಪ್ರಶಸ್ತಿಗೆ ಸತೀಶ್ ರೆಡ್ಡಿ (2010) ಮತ್ತು ಪಿ. ಕುನಿಕೃಷ್ಣನ್ (2011) ಆಯ್ಕೆಯಾಗಿದ್ದಾರೆ.
- ಬಾಹ್ಯಕಾಶ ನೌಕೆ ಮತ್ತು ಅದಕ್ಕೆ ಸಂಬಂಧಿಸಿದ ತಂತ್ರಜ್ಞಾನಕ್ಕಾಗಿ ನೀಡುವ ಪ್ರಶಸ್ತಿಗೆ ಪಿ.ಚಕ್ರಭಾರತಿ ಮತ್ತು ಯತೀಂದ್ರ ಮೆಹ್ತ (2011) ರವರು ಆಯ್ಕೆಯಾಗಿದ್ದಾರೆ.

ಭಾರತೀಯ ಅಂತರೀಕ್ಷ ಸಂಘ: ಇದೊಂದು ವೃತ್ತಿಪರ ಸಂಸ್ಥೆಯಾಗಿದ್ದು 1990 ರಲ್ಲಿ ಸ್ಥಾಪಿಸಲಾಗಿದೆ. ಅಂತರೀಕ್ಷಯಾನಿಗಳಿಗೆ ಉತ್ತೇಜನ ಮತ್ತು ಬಾಹ್ಯಕಾಶ ತಂತ್ರಜ್ಞಾನಕ್ಕೆ ಸಂಬಂಧಿಸಿದಂತೆ ಪ್ರೋತ್ಸಾಹ ನೀಡುವುದು ಈ ಸಂಸ್ಥೆಯ ಮುಖ್ಯ ಧ್ಯೇಯವಾಗಿದೆ.

**2011 ನೇ ಸಾಲಿನ ಜ್ಞಾನ ಪೀಠ ಪ್ರಶಸ್ತಿಗೆ ಒರಿಯಾ ಲೇಖಕಿ ಪ್ರತಿಭಾ ರೇ ಆಯ್ಕೆ**

ಸಾಹಿತ್ಯ ಕ್ಷೇತ್ರದ ಅತ್ಯುನ್ನತ ಪ್ರಶಸ್ತಿಯಾದ ಜ್ಞಾನ ಪೀಠ ಪ್ರಶಸ್ತಿಯನ್ನು ಪ್ರಕಟಿಸಲಾಗಿದ್ದು, 2011ನೇ ಸಾಲಿನ ಪ್ರಶಸ್ತಿಗೆ ಖ್ಯಾತ ಒರಿಯಾ ಭಾಷೆಯ ಲೇಖಕಿ ಪ್ರತಿಭಾ ರೇ ಆಯ್ಕೆಯಾಗಿದ್ದರೆ.

- ಪ್ರತಿಭಾ ರೇ ಅವರು ಸಾಹಿತ್ಯ ಕ್ಷೇತ್ರಕ್ಕೆ ನೀಡಿರುವ ಕೊಡುಗೆಯನ್ನು ಗುರುತಿಸಿ ಈ ಪ್ರಶಸ್ತಿಗೆ ಆಯ್ಕೆಮಾಡಲಾಗಿದೆ.
- ರೇ ಜ್ಞಾನ ಪೀಠ ಪ್ರಶಸ್ತಿ ಪಡೆಯುತ್ತಿರುವ ಒರಿಯಾದ ನಾಲ್ಕನೇ ಸಾಹಿತಿಯಾಗಿದ್ದಾರೆ. ಈ ಮುಂಚೆ ಗೋಪಿನಾಥ್ ಮೊಹಂತಿ (1973), ಸಚಿದಾನಂದ ರೌತ್ರೆ (1986) ಮತ್ತು ಸೀತಾಕಾಂತ್ ಮಹಪತ್ರ (1993) ರವರು ಈ ಪ್ರಶಸ್ತಿಗೆ ಭಾಜನರಾಗಿದ್ದರು.

ಪ್ರತಿಭಾ ರೇ ಯವರ ಇತರೆ ಪ್ರಮುಖ ಪುಸ್ತಕಗಳು:

- "ಬರ್ಸ ಬಸಂತ ಬೈಶಾಕ" (Barsa Basanta Baishaka) ಇದು ರೇ ಅವರ ಪ್ರಥಮ ಕಾದಂಬರಿ.
- ಅಪರಿಚಿತ, ಯಜ್ಞಸೇನಾನಿ ಮತ್ತು ಶಿಲ್ಪಪದ್ಮ ರೇ ರವರ ಇತರೆ ಪ್ರಮುಖ ಕಾದಂಬರಿಗಳು.
- ಅಪರಿಚಿತ ಕಾದಂಬರಿಯನ್ನು ಆಧಾರಿಸಿ ಚಿತ್ರವೊಂದನ್ನು ತಯಾರಿಸಲಾಗಿದ್ದು, ಈ ಚಿತ್ರದ ಉತ್ತಮ ಕಥೆಗಾಗಿ ರಾಜ್ಯ ಪ್ರಶಸ್ತಿ ದೊರೆತಿದೆ.

**ಮಲಾಲಗೆ ಐರ್ಲೆಂಡ್ ದೇಶದ ಪ್ರಶಸ್ತಿ**

- ಐರ್ಲೆಂಡ್ ನ ಪ್ರತಿಷ್ಠಿತ ತಿಪ್ಪರೆರೆ ಅಂತರ್ ರಾಷ್ಟ್ರೀಯ ಶಾಂತಿ-2012 ಪ್ರಶಸ್ತಿಯನ್ನು (Tipperary International Peace Award) ಪಾಕಿಸ್ತಾನದ ಯುವತಿ ಮಲಾಲ ಯೂಸಫ್ ಝೈ ರವರಿಗೆ ನೀಡಲಾಗಿದೆ. ಮಲಾಲ ರವರು ಪಾಕಿಸ್ತಾನದಲ್ಲಿ ಹೆಣ್ಣು ಮಕ್ಕಳ ಶಿಕ್ಷಣದ ಹಕ್ಕಿಗಾಗಿ ಹೋರಾಟ ನಡೆಸುತ್ತಿದ್ದಾರೆ.
- ಮಲಾಲ ಈ ಪ್ರಶಸ್ತಿಯನ್ನು ಪಡೆಯುತ್ತಿರುವ ಪಾಕಿಸ್ತಾನದ ಎರಡನೇ ವ್ಯಕ್ತಿ. ಈ ಮುಂಚೆ 2007 ರಲ್ಲಿ ದಿ. ಬೇನಿಜಿರ್ ಭುಟ್ಟೊ ರವರಿಗೆ ನೀಡಲಾಗಿತ್ತು.
- ಪ್ರತಿಷ್ಠಿತ ಪ್ರಶಸ್ತಿಗೆ ಭಾರತ ರಾಷ್ಟ್ರೀಯ ಕಾಂಗ್ರೆಸ್ ನ ಅಧ್ಯಕ್ಷಣಿಯಾದ ಸೋನಿಯಾ ಗಾಂಧಿ ಮತ್ತು ಆಮೆರಿಕಾದ ವಿದೇಶಾಂಗ ಸಚಿವೆ ಹಿಲರಿ ಕ್ಲಿಂಟನ್ ರವರನ್ನು ನಾಮಕರಣ ಮಾಡಲಾಗಿತ್ತು. ಆದರೆ ಮಲಾಲ ಇವರನ್ನು ಹಿಂದಿಕ್ಕಿ ಈ ಪ್ರಶಸ್ತಿಗೆ ಭಾಜನರಾಗಿದ್ದಾರೆ.

**ಭಾರತ ಮೂಲದ ವಿಜ್ಞಾನಿಗೆ ಕೆನಡಾದ ಅತ್ತುನ್ನತ ಪ್ರಶಸ್ತಿ**

ಚೆನ್ನೈನಲ್ಲಿ ಜನಸಿರುವ ಭಾರತ ಮೂಲದ ವಿಜ್ಞಾನಿ ವೆಂಕಟೇಶ್ ಮನ್ನಾರ್ ರವರಿಗೆ ಕೆನಡಾದ ಎರಡನೇ ಅತ್ಯುನ್ನತ ಪ್ರಶಸ್ತಿಯಾದ "ಆರ್ಡರ್ ಆಫ್ ಕೆನಡಾ" ಪ್ರಶಸ್ತಿಯನ್ನು ನೀಡಿ ಗೌರವಿಸಲಾಗಿದೆ. ಮದ್ರಾಸ್ ನ "ಇಂಡಿಯನ್ ಇನ್ ಸ್ಟಿಟ್ಯೂಟ್ ಆಫ್ ಟೆಕ್ನಾಲಜಿ" ಯಲ್ಲಿ ಪದವಿ ಪಡೆದಿರುವ ಮನ್ನಾರ್ ರವರು, ಆಮೆರಿಕಾದ ನಾರ್ಥನ್ ಯೂನಿವರ್ಸಿಟಿಯಿಂದ ಕೆಮಿಕಲ್ ಎಂಜನಿಯರಿಂಗ್ ನಲ್ಲಿ ಸ್ನಾತ್ತಕೋತ್ತರ ಪದವಿಯನ್ನು ಪಡೆದಿದ್ದಾರೆ.

- ಮನ್ನಾರ್ ರವರು ಮೈಕ್ರೋನ್ಯೂಟ್ರಿಯಂಟ್ ಇನ್ಶಿಯೇಟಿವ್ (Micronutrient Intiative) ಎಂಬ ಲಾಭದಾಯಕವಲ್ಲದ ಸಂಸ್ಥೆಯ ಮೂಲಕ ಸಮಾಜದ ದುರ್ಬಲ ವರ್ಗದವರಿಗೆ, ಮಹಿಳೆಯರಿಗೆ ಮತ್ತು ಮಕ್ಕಳಿಗೆ ಅಗತ್ಯವಿರುವ ಪೋಷಕಾಂಶಗಳು ಮತ್ತು ವಿಟಮಿನ್ ಗಳನ್ನು ಪೂರೈಸುವ ಮೂಲಕ ಅನೇಕ ಜನರ ಜೀವ ರಕ್ಷಣೆಗೆ ಪರೋಕ್ಷವಾಗಿ ಕಾರಣರಾಗಿದ್ದಾರೆ. ಇವರ ಈ ಯೋಜನೆಯಿಂದ 70 ದೇಶದ ಸುಮಾರು 500 ಮಿಲಿಯನ್ ಜನರು ಉಪಯೋಗಪಡೆದಿದ್ದಾರೆ.
- "ಆರ್ಡರ್ ಆಫ್ ಕೆನಡಾ" ಪ್ರಶಸ್ತಿಯು, ಕೆನಡಾದ "ಆರ್ಡರ್ ಆಫ್ ಮೆರಿಟ್" ಪ್ರಶಸ್ತಿಯ ನಂತರ ನೀಡಲಾಗುವ ಎರಡನೇ ಅತ್ಯುನ್ನತ ಪ್ರಶಸ್ತಿಯಾಗಿದೆ. ಈ ಪ್ರಶಸ್ತಿಯನ್ನು ರಾಣಿ ಎಲಿಜಬೆತ್ ರವರು 1967 ರಲ್ಲಿ ಸ್ಥಾಪಿಸಿದ್ದು, ನಾಗರಿಕ ಸೇವೆ ಮತ್ತು ಸಮುದಾಯ ಅಭಿವೃದ್ಧಿಯಲ್ಲಿ ಶ್ಲಾಘನೀಯ ಕೆಲಸ ಮಾಡಿದವರಿಗೆ ನೀಡಲಾಗುತ್ತದೆ.

**ಉಸೇನ್ ಬೋಲ್ಟ್ ಮತ್ತು ಫೇಸರ್ ಪ್ರೈಸ್ ಗೆ ಜಮೈಕಾದ ಅಥ್ಲೀಟಿಕ್ ಪ್ರಶಸ್ತಿ**

ವಿಶ್ವದ ಅತಿ ವೇಗದ ಓಟಗಾರ ಉಸೇನ್ ಬೋಲ್ಟ್ ಮತ್ತು ಒಲಂಪಿಕ್ ನ ಮಹಿಳೆಯರ 100 ಮೀ ಓಟದಲ್ಲಿ ಚಿನ್ನ ಗೆದ್ದ ಫೇಸರ್ ಪ್ರೈಸ್ ರವರಿಗೆ ಜಮೈಕಾದ ಅಥ್ಲೇಟಿಕ್ ಅಡ್ಮಿನಿಷ್ಟ್ರೇಶನ್ ಅಸೋಸಿಯೇಶನ್ (Jamaica Athletic Administration Association) ನೀಡುವ ಗೋಲ್ಡನ್ ಕ್ಲೀಯಟ್ಸ್ ಪ್ರಶಸ್ತಿಯನ್ನು (Golden Cleats Award) ನೀಡಿಲಾಗಿದೆ.

- ಈ ಬಾರಿಯ ವರ್ಷದ ಉತ್ತಮ ಕೋಚ್ ಪ್ರಶಸ್ತಿಗೆ ರೇಸರ್ ಟ್ರಾಕ್ ಕ್ಲಬ್ ನ(Racer Track Club) ಕೋಚ್ ಆಗಿರುವ ಗ್ಲೇನ್ ಮಿಲ್ಸ್ ರವರಿಗೆ ನೀಡಲಾಗಿದೆ. ಗ್ಲೇನ್ ಸತತ ಎರಡನೇ ಬಾರಿ ಈ ಪ್ರಶಸ್ತಿಗೆ ಭಾಜರಾಗಿದ್ದಾರೆ ಅಲ್ಲದೇ ಉಸೇನ್ ಬೋಲ್ಟ್ ಮತ್ತು ಫೇಸರ್ ಪ್ರೈಸ್ ನ ಗೆಲುವಿಗೆ ಗ್ಲೇನ್ ಶ್ರಮವೇ ಕಾರಣ.
- ಉಸೇನ್ ಬೋಲ್ಟ್ 2012 ರಲ್ಲಿ ಲಂಡನ್ ಒಲಂಪಿಕ್ಸ್ ನಲ್ಲಿ 100 ಮೀ, 200ಮೀ ಮತ್ತು 4 X 100 ಮೀ ಓಟದ ಸ್ಪರ್ಧೆಯಲ್ಲಿ ಮೂರು ಚಿನ್ನದ ಪ್ರಶಸ್ತಿಗಳನ್ನು ಗೆದ್ದಿದ್ದರು.

**ರೆನಾಲ್ಟ್ ಡಸ್ಟರ್ :2013 ನೇ ಸಾಲಿನ ವರ್ಷದ ಕಾರು**

ಆಟೋಮೋಟಿವ್ ಮ್ಯಾಗ್ಸೈನ್ ಆಟೋಕಾರ್ ಇಂಡಿಯಾ (Automotive Magazine Auto car India) ನೀಡುವ ವರ್ಷದ ಕಾರು ಪ್ರಶಸ್ತಿಗೆ 2013 ನೇ ಸಾಲಿನಲ್ಲಿ ರೆನಾಲ್ಟ್ ಡಸ್ಟರ್ (Renault Duster) ಕಾರಿಗೆ ಒಲಿದಿದೆ. ವಿಶಿಷ್ಟ ವಿನ್ಯಾಸ ಮತ್ತು ಪ್ರಸಿದ್ಧ ಮಾದರಿಯ ಕಾರುಗಳ ಪೈಪೋಟಿ ನಡುವೆಯು ಈ ಪ್ರಶಸ್ತಿಯನ್ನು ತನ್ನದಾಗಿಸಿಕೊಂಡಿತು.

- ಈ ವರ್ಷದ ಮ್ಯನುಫ್ಯಾಕ್ಚರ್ ಆಫ್ ದಿ ಇಯರ್ ಪ್ರಶಸ್ತಿ: ಮಹೀಂದ್ರಾ ಅಂಡ್ ಮಹೀಂದ್ರಾ
- ಬೈಕ್ ಆಫ್ ದಿ ಇಯರ್: ಬಜಾಜ್ KTM 200 Duke
- ರೆನಾಲ್ಟ್ ಡಸ್ಟರ್ ಫ್ರೆಂಚ್ ಮೂಲದ ಕಂಪನಿ.

**ಕಲಾವಿಮರ್ಶಕ ಅನಿಲ್ ಕುಮಾರ್ ಗೆ: ಬಿ.ಸಿ.ಸನ್ಯಾಲ್ ಪ್ರಶಸ್ತಿ**

ಕಲಾ ವಿಮರ್ಶಕ ಮತ್ತು ಚಿತ್ರಕಲಾ ಪರಿಷತ್ತಿನ ಕಲಾ ಇತಿಹಾಸ ಪ್ರಾಧ್ಯಪಕ ಎಚ್.ಎ. ಅನಿಲ್ ಕುಮಾರ್ ಅವರಿಗೆ ದೆಹಲಿ ಕಲಾ ಶಾಲೆ ರಾಷ್ಟ್ರಮಟ್ಟದಲ್ಲಿ ಅತ್ಯುತ್ತಮ ಕಲಾ ಶಿಕ್ಷಕರಿಗೆ ನೀಡುವ ಪ್ರತಿಷ್ಠಿತ "ಬಿ.ಸಿ.ಸನ್ಯಾಲ್ ಪ್ರಶಸ್ತಿ" ದೊರತಿದೆ.

- ಇದೇ ಪ್ರಥಮ ಭಾರಿಗೆ ಕರ್ನಾಟಕದ ಕಲಾ ಶಿಕ್ಷಕರಿಗೆ ಈ ಪ್ರಶಸ್ತಿ ದೊರೆತಿರುವುದು ಹೆಮ್ಮೆಯ ವಿಷಯ.

**ಸನ್ಮೀತ್ ಕೌರ್ ಗೆ ಒಲಿದ ಕರೋಡ್ ಪತಿ ಬಹುಮಾನ**

ಪಂಜಾಬ್ ಮೂಲದ ಮಹಿಳೆ "ಸನ್ಮಿತ್ ಕೌರ್" ರವರಿಗೆ ಕೌನ್ ಬನೇಗಾ ಕರೋಡ್ ಪತಿ ಟಿವಿ ಶೋ ನಲ್ಲಿ ರೂ. 5 ಕೋಟಿ ಬಹುಮಾನ ಗೆಲ್ಲುವ ಮೂಲಕ ಸಾಧನೆಗೈದೆರು.

- ಸದ್ಯ ಮುಂಬೈನಲ್ಲಿ ನೆಲೆಸಿರುವ ಸನ್ಮೀತ್ ಕೌರ್ ರವರು ಕೌನ್ ಬನೇಗಾ ಕರೋಡ್ ಪತಿ TV ಶೋ ನಲ್ಲಿ 5 ಕೋಟಿ ಪ್ರಶಸ್ತಿ ಗೆದ್ದ ಮೊದಲ ಮಹಿಳೆ ಎನಿಸಿದ್ದಾರೆ.
- ಸನ್ಮೀತ್ ರವರ ಪತಿ ಮನ್ ಮಿತ್ ಸಿಂಗ್ ರವರು ಸಿನಿಮಾ ನಟ.
- ಕಳೆದ ಬಾರಿಯ ಶೋ ನಲ್ಲಿ ಬಿಹಾರದ ಕಂಪ್ಯೂಟ್ ಆಪರೇಟರ್ ಸುಶೀಲ್ ಕುಮಾರ್ ರವರು ಇಷ್ಟೇ ಮೊತ್ತವನ್ನು ಗೆದ್ದಿದ್ದರು.

**ಮ್ಯಾನ್ ಏಷ್ಯನ್ ಪ್ರಶಸ್ತಿಗೆ: ಜೀತ್ ತಯ್ಯಿಲ್**

ಬೆಂಗಳೂರು ಮೂಲದ ಲೇಖಕ ಜೀತ್ ತಯ್ಯಿಲ್ ಅವರ "ನಾರ್ಕೋಪೊಲಿಸ್" ಕಾದಂಬರಿಯು ಪ್ರತಿಷ್ಠಿತ "ಮ್ಯಾನ್ ಏಷ್ಯನ್ ಸಾಹಿತ್ಯ ಪ್ರಶಸ್ತಿಯ ಅಂತಿಮ ಸುತ್ತಿಗೆ ನೇಮಕವಾಗಿದೆ.

ಪ್ರಶಸ್ತಿಯ ಪಟ್ಟಿಯಲ್ಲಿರುವ ಇತರ ಕಾದಂಬರಿಗಳು

- ಬಿಟ್ವೀನ್ ಕ್ಲೀನ್ ಅಂಡ್ ಡಸ್ಟ್ - ಮುಶರಫ್ ಅಲಿ ಫಾರೂಕಿ (ಪಾಕಿಸ್ತಾನ)
- ದಿ ಬ್ರೀಫ್ ಕೇಸ್ - ಹಿರೋಮಿ ಕವಾಕವಿ (ಜಪಾನ್)
- ಸೈಲೆಂಟ್ ಹೌಸ್ - ಒರಾನ್ ಪಾಮೂಕ್ (ಟರ್ಕಿ)
- ದಿ ಗಾರ್ಡನ್ ಆಫ್ ಇವನಿಂಗ್ ಮಿಸ್ಟ್ - ತಾನ್ ತವಾನ್ (ಮಲೇಷ್ಯ)

**18ನೇ ವಾರ್ಷಿಕ ಚಲನಚಿತ್ರ ವಿಮರ್ಶಕರ ಪ್ರಶಸ್ತಿ: "ಆರ್ಗೋ" ಮತ್ತು ಸಿಲ್ವರ್ ಲೈನಿಂಗ್ಸ್ ಪ್ಲೇಬುಕ್" ಗೆ ಪ್ರಶಸ್ತಿ**

ಅನುಪಮ್ ಖೇರ್ ಮತ್ತು ಬ್ರಾಡ್ಲಿ ಕೂಪರ್ ನಟನೆಯ ಆರ್ಗೋ ಮತ್ತು ಸಿಲ್ವರ್ ಲೈನಿಂಗ್ಸ್ ಪ್ಲೇಬುಕ್ ಚಿತ್ರ ಕ್ಯಾಲಿಫೋರ್ನಿಯಾದ ಸಾಂಟಾ ಮೋನಿಕಾದಲ್ಲಿ ನಡೆದ 18ನೇ ವಾರ್ಷಿಕ ಚಲನಚಿತ್ರ ವಿಮರ್ಶಕರ ಪ್ರಶಸ್ತಿ ಪ್ರಧಾನ ಸಮಾರಂಭದಲ್ಲಿ ಸಿಂಹಪಾಲು ಪಡೆದಿವೆ.

ಅತ್ಯುತ್ತಮ ಚಿತ್ರ ನಿರ್ದೇಶಕರ ಪ್ರಶಸ್ತಿ: **ಅಫ್ ಲೆಕ್**

ಉತ್ತಮ ಚಿತ್ರ ಪ್ರಶಸ್ತಿ: **ಆರ್ಗೋ**

ಉತ್ತಮ ಹಾಸ್ಯ ಚಿತ್ರ: **ಸಿಲ್ವರ್ ಲೈನಿಂಗ್ ಪ್ಲೇಬುಕ್**

ಅತ್ಯುತ್ತಮ ಹಾಸ್ಯ ನಟಿ: **ಜೆನಿಫರ್ ಲಾರೆನ್ಸ್**

**ರಾಷ್ಟ್ರೀಯ ವೈಟ್ ಲಿಫ್ಟಿಂಗ್ ಚಾಂಪಿಯನ್ ಷಿಪ್**

ಮಹಿಳೆಯರ 75 ಕೆ.ಜಿ. ವಿಭಾಗದಲ್ಲಿ

- ಮನ್ ಪ್ರೀತ್ ಕೌರ್ - ಚಿನ್ನ
- ಬಿನಿತ ದೇವಿ - ಬೆಳ್ಳಿ
- ಅಮನ್ ಪ್ರೀತ್ ಕೌರ್ - ಕಂಚು

ಪುರುಷರ 105 ಕೆ.ಜಿ. ವಿಭಾಗದಲ್ಲಿ

- ಹಿಮನ್ಯು ಕೌರ್ - ಚಿನ್ನ
- ಸಂದೀಪ್ ಕುಮಾರ್ - ಬೆಳ್ಳಿ
- ಪ್ರದೀಪ್ ಕುಮಾರ್ - ಕಂಚು

**ಕೃಷಿ ಕಮ್ಮಾನ್ – 2011-12 ಪ್ರಶಸ್ತಿ**

ಕೃಷಿಯಲ್ಲಿ ವಿಶೇಷ ಸಾಧನೆ ಮಾಡಿ ರಾಜ್ಯಗಳಿಗೆ ನೀಡಲಾಗುವ ಕೃಷಿ ಕಮ್ಮಾನ್ ಪ್ರಶಸ್ತಿಯನ್ನು ಪ್ರಕಟಿಸಲಾಗಿದೆ. 2011-12 ನೇ ಸಾಲಿನ ಕೃಷಿ ಕಮ್ಮಾನ್ ಪ್ರಶಸ್ತಿಗೆ ಮಧ್ಯ ಪ್ರದೇಶ, ತಮಿಳು ನಾಡು, ಮಣಿಪುರ, ನಾಗಾಲ್ಯಾಂಡ್, ಬಿಹಾರ್, ಹರಿಯಾಣ, ಜಾರ್ಖಂಡ್ ಮತ್ತು ಉತ್ತರ ಪ್ರದೇಶ ರಾಜ್ಯಗಳು ಆಯ್ಕೆಯಾಗಿವೆ. ಕೃಷಿ ಮತ್ತು ಸಹಕಾರ ಇಲಾಖೆಯ ಕಾರ್ಯದರ್ಶಿಯವರ ಅಧ್ಯಕ್ಷತೆ ವಹಿಸಿದ್ದ ಆಯ್ಕೆ ಸಮಿತಿಯು ವಿವಿಧ ರಾಜ್ಯಗಳು ಅಳವಡಿಸಿಕೊಂಡಿದ್ದ ಬೆಳೆ ಉತ್ಪಾದನ ಕಾರ್ಯಕ್ರಮಗಳು, ಉತ್ಪಾದನ ಫಲಿತಾಂಶ ಮತ್ತು ಸೇವೆಯನ್ನು ಒದಗಿಸಲು ಅಳವಡಿಸಿಕೊಂಡ ನೂತನ ವಿಧಾನಗಳನ್ನು ಮಾನದಂಡವಾಗಿಟ್ಟುಕೊಂಡು ಈ ರಾಜ್ಯಗಳನ್ನು ಪ್ರಶಸ್ತಿಗೆ ಪರಿಗಣಿಸಿದೆ. ಅಲ್ಲದೇ, ಪಂಜಾಬ್, ಉತ್ತರಖಂಡ, ಪಶ್ಚಿಮ ಬಂಗಾಳ, ತ್ರಿಪುರ, ಅಸ್ಸಾಂ, ಗುಜರಾತ್, ಹಿಮಾಚಲ ಪ್ರದೇಶ, ಮಿಜೋರಂ, ರಾಜಸ್ತಾನ ಮತ್ತು ಅರುಣಾಚಲ ಪ್ರದೇಶ ರಾಜ್ಯಗಳಿಗೆ ಪ್ರಶಂಸೆ ಪ್ರಶಸ್ತಿ ಸಿಕ್ಕಿದೆ.

**ಪ್ರಶಸ್ತಿ ಪಡೆದ ರಾಜ್ಯಗಳು:**

ಒಟ್ಟು ಆಹಾರ ಧಾನ್ಯಗಳ ಉತ್ಪಾದನೆ (10 ಮೆಟ್ರಿಕ್ ಟನ್ ಗಿಂತ ಹೆಚ್ಚು): ಮಧ್ಯ ಪ್ರದೇಶ

ಒಟ್ಟು ಆಹಾರ ಧಾನ್ಯಗಳ ಉತ್ಪಾದನೆ (1 ರಿಂದ 10 ಮೆಟ್ರಿಕ್ ಟನ್): ತಮಿಳುನಾಡು

ಒಟ್ಟು ಆಹಾರ ಧಾನ್ಯಗಳ ಉತ್ಪಾದನೆ (1 ಮೆಟ್ರಿಕ್ ಟನ್ ಗಿಂತ ಕಡಿಮೆ): ಮಣಿಪುರ ಮತ್ತು ನಾಗಾಲ್ಯಾಂಡ್

ಭತ್ತ: ಬಿಹಾರ

ಗೋಧಿ: ಹರಿಯಾಣ

ಬೇಳೆಕಾಳು (Pulses): ಜಾರ್ಖಂಡ್

ಏಕದಳ ಧಾನ್ಯಗಳು (Coarse Cereals): ಉತ್ತರ ಪ್ರದೇಶ

**ಕೃಷಿ ಸಮ್ಮಾನ್ ಪ್ರಶಸ್ತಿ:**

ಆಹಾರ ಧಾನ್ಯಗಳ ಉತ್ಪಾದನೆಯಲ್ಲಿ ಗಣನೀಯ ಸಾಧನೆ ಮಾಡುವ ರಾಜ್ಯಗಳನ್ನು ಪ್ರೋತ್ಸಾಹಿಸುವ ಸಲುವಾಗಿ ಕೃಷಿ ಸಮ್ಮಾನ್ ಪ್ರಶಸ್ತಿಯನ್ನು 2010-11 ನೇ ಸಾಲಿನಿಂದ ನೀಡಲಾಗುತ್ತಿದೆ. ಈ ಪ್ರಶಸ್ತಿಯನ್ನು ಎರಡು ವಿಭಾಗದಲ್ಲಿ ನೀಡಲಾಗುತ್ತಿದ್ದು, ಮೊದಲನೆಯ ವಿಭಾಗದಲ್ಲಿ ಒಟ್ಟು ಆಹಾರ ಧಾನ್ಯಗಳ ಉತ್ಪಾದನೆಗೆ ನೀಡಿದರೆ, ಎರಡನೇ ವಿಭಾಗದಲ್ಲಿ ಭತ್ತ, ಗೋಧಿ, ಬೇಳೆಕಾಳು ಹಾಗೂ ಏಕದಳ ಧಾನ್ಯಗಳ ಉತ್ಪಾದನೆಗೆ ನೀಡಲಾಗುವುದು. ಒಟ್ಟು ಆಹಾರ ಧಾನ್ಯಗಳ ಉತ್ಪಾದನೆಗೆ ನೀಡುವ ಪ್ರಶಸ್ತಿಯನ್ನು ರಾಜ್ಯಗಳ ಉತ್ಪಾದನೆಯ ಸಾಮರ್ಥ್ಯಕ್ಕೆ ಅನುಗುಣವಾಗಿ ಮತ್ತೆ ಮೂರು ವರ್ಗಗಳಾಗಿ ವಿಂಗಡಿಸಲಾಗಿದೆ.

**ಪ್ರಶಸ್ತಿಯ ಮೊತ್ತ:** ಒಟ್ಟು ಆಹಾರ ಧಾನ್ಯಗಳ ಉತ್ಪಾದನೆ ವಿಭಾಗಕ್ಕೆ ನೀಡುವ ಪ್ರಶಸ್ತಿಯ ಮೊತ್ತ 2 ಕೋಟಿ, ಭತ್ತ, ಗೋಧಿ, ಧಾನ್ಯಗಳ ಉತ್ಪಾದನೆ ವಿಭಾಗಕ್ಕೆ ನೀಡುವ ಪ್ರಶಸ್ತಿ ಮೊತ್ತ 1 ಕೋಟಿ.

*2010-11 ನೇ ಸಾಲಿನಲ್ಲಿ, ಕರ್ನಾಟಕ ಏಕದಳ ಧಾನ್ಯಗಳ ಉತ್ಪಾದನೆಗೆ ಈ ಪ್ರಶಸ್ತಿಗೆ ಆಯ್ಕೆಯಾಗಿತ್ತು.

**ಅಣ್ಣಾ ಹಜಾರೆಗೆ "ಬಸವ ಕೃಷಿ" ಪ್ರಶಸ್ತಿ ಪ್ರಧಾನ**

ಕೂಡಲ ಸಂಗಮದ ಪಂಚಮಸಾಲಿ ಪೀಠದ 2013 ನೇ ಸಾಲಿನ ಪ್ರತಿಷ್ಠಿತ "ಬಸವ ಕೃಷಿ" ಪ್ರಶಸ್ತಿಯನ್ನು ಭ್ರಷ್ಟಚಾರದ ವಿರುದ್ಧ ಉಪವಾಸ ಸತ್ಯಾಗ್ರಹ ಆಂದೋಲನ ನಡೆಸಿ ದೇಶದ ಮನೆ ಮಾತಾಗಿರುವ ಅಣ್ಣಾ ಹಜಾರೆ ರವರಿಗೆ ನೀಡಿ ಸನ್ಮಾನಿಸಲಾಯಿತು.

- ಪ್ರಶಸ್ತಿಯು 50 ಸಾವಿರ ನಗದು, ಪ್ರಶಸ್ತಿ ಫಲಕ ಮತ್ತು ಬಸವಣ್ಣ ನವರ ಮೂರ್ತಿಯನ್ನು ಹೊಂದಿದೆ.
- ಖ್ಯಾತ ಜಲ ಸಂರಕ್ಷಣೆ ತಜ್ಞ ರಾಜೇಂದ್ರ ಸಿಂಗ್ ರವರು ಈ ಪ್ರಶಸ್ತಿಯನ್ನು ಪಡೆದ ಮೊದಲಿಗರು ಎನಿಸಿದ್ದಾರೆ.

**ಜಯದೇವ ಪ್ರಶಸ್ತಿ ಪ್ರಕಟ:**

ಶ್ರೀ ಜಯದೇವ ಸ್ವಾಮೀಜಿಗಳ ಸ್ಮರಣಾರ್ಥ ನೀಡುವ ಪ್ರಸ್ತಕ ಸಾಲಿನ ಜಯದೇವ ಪ್ರಶಸ್ತಿಗೆ ನಾಡಿನ ಹಿರಿಯ ಸಾಹಿತಿ, ಸಂಶೋಧಕ ಡಾ.ಎಂ. ಚಿದಾನಂದ ಮೂರ್ತಿ ಆಯ್ಕೆಯಾಗಿದ್ದಾರೆ.

**ಇತರೆ ಪ್ರಶಸ್ತಿಗಳು**:

ಶೂನ್ಯ ಪೀಠ ಅಲ್ಲಮ ಪ್ರಭು ಪ್ರಶಸ್ತಿ: ದೇವನೂರು ಮಹಾದೇವರವರ "ಎದೆಗೆ ಬಿದ್ದ ಅಕ್ಷರ" ಕೃತಿಗೆ ಲಭಿಸಿದೆ.

ಶೂನ್ಯ ಪೀಠ ಅಕ್ಕ ಪ್ರಶಸ್ತಿ: ಡಾ.ವಿಜಯ ಲಕ್ಷ್ಮಿ ಬಾಳೇಕುಂದ್ರಿ

ಶೂನ್ಯ ಪೀಠ ಚೆನ್ನಬಸವ ಪ್ರಶಸ್ತಿ: ಪದ್ಮರಾಜ ದಂಡವತಿ

ದಾವಣಗೆರೆಯ ಶಿವಯೋಗಾಶ್ರಮದ ಬಸವ ಕೇಂದ್ರದಲ್ಲಿ ನಡೆಯಲಿರುವ ಜಯದೇವ ಶ್ರೀಗಳ 56 ನೇ ಸ್ಮರಣೋತ್ಸವ-2013 ರ ಶರಣ ಸಂಸ್ಕೃತಿ ಉತ್ಸವದಲ್ಲಿ ಪ್ರಶಸ್ತಿ ಪ್ರಧಾನ ಮಾಡಲಾಗುವುದು. ಪ್ರಶಸ್ತಿಯು ತಲಾ ರೂ.25 ಸಾವಿರ ನಗದು ಹಾಗೂ ಫಲಕ ಒಳಗೊಂಡಿದೆ.

**ಭಾರತೀಯ ಸಂಶೋಧಕ ಮಹಾವೀರ್ ಗೋಲೆಚ್ಚಾಗೆ ಪ್ರಶಸ್ತಿ**

ಅಲ್ಜೆಮಿರ್ ಕಾಯಿಲೆಯನ್ನು ಗುಣಪಡಿಸುವ ಔಷಧ ಕಂಡು ಹಿಡಿದು ಸಾಧನೆಗೈದ ಭಾರತೀಯ ಸಂಶೋಧಕ "ಮಹಾವೀರ ಗೋಲೆಚ್ಚ" ರವರನ್ನು ಅಲ್ಜೆಮರ್ ಡ್ರಗ್ ಡಿಸ್ಕವರಿ ಫೌಂಡೇಶನ್ ನೀಡುವ ಪ್ರತಿಷ್ಠಿತ ಪ್ರಶಸ್ತಿಗೆ ಆಯ್ಕೆ ಮಾಡಲಾಗಿದೆ.

ಅಲ್ಜೆಮರ್ ಕಾಯಿಲೆ: ಇದೊಂದು ಬುದ್ಧಿಮಾಂದ್ಯತೆಯ ಅತಿ ಸಾಮಾನ್ಯ ಸ್ವರೂಪವಾಗಿದ್ದು, ಅಲ್ಜೆಮರ್ ಡಿಜನರೇಟಿವ್ ಡಿಮ್ನೇಷಿಯಾ ಎಂತಲೂ ಕರೆಯುತ್ತಾರೆ. ಈ ವಾಸಿ ಮಾಡಲಾಗದ ಮತ್ತು ಮಾರಕ ಕಾಯಿಲೆಯನ್ನು ಅಲೋಯಸ್ ಅಲ್ಜೆಮರ್ ಎಂಬಾತನು 1906 ರಲ್ಲಿ ಮೊದಲು ವಿವರಿಸಿದ ಕಾರಣ ಆತನ ಹೆಸರನ್ನೆ ಇಡಲಾಗಿದೆ. ಬಹುತೇಕ ಸಂದರ್ಭದಲ್ಲಿ ಈ ಕಾಯಿಲೆಯು 65 ವರ್ಷ ಮೇಲ್ಪಟ್ಟವರಲ್ಲಿ ಕಂಡು ಬರುತ್ತದೆಯಾದರು, ಮುಂಚಿತವಾಗಿತಯು ಸಂಭವಿಸಬಹುದು. 2006 ರಲ್ಲಿ ಭಾರತ ದೇಶದಲ್ಲಿ ಸುಮಾರು 26.6 ಮಿಲಿಯನ್ ನಷ್ಟು ಜನರು ಈ ರೋಗಕ್ಕೆ ತುತ್ತಾಗಿದ್ದು, 2050 ರ ಹೊತ್ತಿಗೆ ಪ್ರತಿ 85 ಜನರ ಪೈಕಿ ಒಬ್ಬರು ಈ ರೋಗಕ್ಕೆ ತುತ್ತಾಗಬಹುದು ಎಂದು ಊಹಿಸಲಾಗಿದೆ.

ಅಲ್ಜೆಮರ್ ದಿನ: ಪ್ರತಿ ವರ್ಷ **ಸೆಪ್ಟೆಂಬರ್ 21** ನ್ನು ಅಲ್ಜೆಮರ್ ದಿನ ಎಂದು ಆಚರಿಸಲಾಗುವುದು.

**ವಿದ್ಯಾ ಕೊಳ್ಯೂರು ಗೆ ಬಿಸ್ಮಿಲ್ಲಾ ಖಾನ್ ಪುರಸ್ಕಾರ**

- ಕೇಂದ್ರ ಸಂಗೀತ ಅಕಾಡೆಮಿ ನೀಡುವ 2011 ನೇ ಸಾಲಿನ ಬಿಸ್ಮಿಲ್ಲಾ ಖಾನ್ ಪ್ರಶಸ್ತಿಗೆ ಕರ್ನಾಟಕ ಮೂಲದ ಯಕ್ಷಗಾನ ಕಲಾವಿದೆ ವಿದ್ಯಾ ಕೊಳ್ಯೂರು ರವರು ಆಯ್ಕೆಯಾಗಿದ್ದಾರೆ.
- ಬಿಸ್ಮಿಲ್ಲಾ ಖಾನ್ ಪುರಸ್ಕಾರವೂ ಯಕ್ಷಗಾನಕ್ಕೆ ದೊರೆತ ಮೊದಲ ರಾಷ್ಟ್ರ ಮಟ್ಟದ ಪುರಸ್ಕಾರವಾಗಿದ್ದು, ಪ್ರಶಸ್ತಿಯು ರೂ.25 ಸಾವಿರ ನಗದು ಮತ್ತು ಸ್ಮರಣಿಕೆಯನ್ನು ಹೊಂದಿರುತ್ತದೆ.
- ವಿದ್ಯಾರವರು ದೇಶ ವಿದೇಶಗಳಲ್ಲಿ ಸುಮಾರು 300 ಕ್ಕಿಂತಲೂ ಹೆಚ್ಚು ಕಾರ್ಯಕ್ರಮವನ್ನು ನಡೆಸಿಕೊಟ್ಟಿದ್ದಾರೆ.

**ಕರ್ನಾಟಕದ ಯು. ಆರ್. ರಾವ್ ಗೆ ಹಾಲ್ ಆಫ್ ಫೇಮ್ ಗೌರವ್**

ಇಸ್ರೋದ ಮಾಜಿ ಮುಖ್ಯಸ್ಥ, ಖ್ಯಾತ ಬಾಹ್ಯಕಾಶ ವಿಜ್ಞಾನಿ ಬೆಂಗಳೂರಿನ ಪ್ರೊ.ಯು.ಆರ್. ರಾವ್ ರವರಿಗೆ ಅಮೆರಿಕಾದ SSPI (ಎಸ್ ಎಸ್ ಪಿ ಐ) ಸಂಸ್ಥೆ "ಸ್ಯಾಟಲೈಟ್ ಹಾಲ್ ಆಫ್ ಫೇಮ್" ಪಟ್ಟಿಯಲ್ಲಿ ಸ್ಥಾನ ನೀಡಿ ಗೌರವಿಸಿದೆ. ಮಾರ್ಚ್ 19 ರಂದು ವಾಷಿಂಗ್ಟನ್ ನಲ್ಲಿ ನಡೆಯಲಿರುವ ಸಮಾರಂಭದಲ್ಲಿ ಅವರಿಗೆ ಈ ಗೌರವ ನೀಡಲಾಗುವುದು.

- ಉಪಗ್ರಹ ಮೂಲಕ ಜನರ ಜೀವನವನ್ನು ಉತ್ತಮ ಪಡಿಸುವ ಸಲುವಾಗಿ ಶ್ರಮಿಸುವ ವಿಜ್ಞಾನಿಗಳಿಗಳನ್ನು ಗುರುತಿಸಲು "ಅಮೆರಿಕಾದ ಸೊಸೈಟಿ ಆಫ್ ಸ್ಯಾಟಲೈಟ್ ಪ್ರೊಫೆಷನಲ್ಸ್ ಇಂಟರ್ ನ್ಯಾಷನಲ್ (SSIP) ಈ ಗೌರವವನ್ನು ಪ್ರಧಾನ ಮಾಡುತ್ತದೆ.

**58 ನೇ ಐಡಿಯಾ (Idea) ಫಿಲ್ಂಫೇರ್ ಆವಾರ್ಡ್**

58ನೇ ಐಡಿಯಾ ಫಿಲ್ಂಫೇರ್ ಆವಾರ್ಡ್ ಕಾರ್ಯಕ್ರಮವನ್ನು ಅದ್ದೂರಿಯಾಗಿ ಮುಂಬೈಯಲ್ಲಿ ಆಯೋಜಿಸಲಾಗಿತ್ತು. ವಿವಿಧ ವರ್ಗಗಳಲ್ಲಿ ಪ್ರಶಸ್ತಿ ಗೆದ್ದವರ ಪಟ್ಟಿ ಇಲ್ಲಿದೆ (ಪ್ರಮುಖವಾದವು).

- ಅತ್ಯುತ್ತಮ ನಟ: ರಣಬೀರ್ ಕಬೀರ್ (ಚಿತ್ರ:ಬರ್ಫಿ)
- ಅತ್ಯುತ್ತಮ ನಟಿ: ವಿದ್ಯಾ ಬಾಲನ್ (ಕಹಾನಿ)
- ಅತ್ಯುತ್ತಮ ಚಿತ್ರ: ಬರ್ಫಿ
- ಅತ್ಯುತ್ತಮ ಡೈರೆಕ್ಟರ್: ಸಂಜಯ್ ಘೋಷ್
- ಅತ್ಯುತ್ತಮ ಪೋಷಕ ನಟ ಪಾತ್ರ: ಅನು ಕಪೂರ್ (ವಿಕಿ ಡೋನರ್)
- ಅತ್ಯುತ್ತಮ ಪೋಷಕ ನಟಿ ಪಾತ್ರ: ಅನುಷ್ಕ ಶರ್ಮ (ಜಬ್ ತಕ್ ಹೈ ಜಾನ್)
- ಜೀವಮಾನ ಸಾಧನೆ ಪ್ರಶಸ್ತಿ: ಯಶ್ ಚೋಪ್ರ
- 7 ವರ್ಗಗಳಲ್ಲಿ ಪ್ರಶಸ್ತಿ ಗೆದ್ದ "ಬರ್ಫಿ" ಪ್ರಶಸ್ತಿ ಪಟ್ಟಿಯಲ್ಲಿ ಅಗ್ರಸ್ಥಾನದಲ್ಲಿದೆ.

**ಸಿ.ಎನ್.ಆರ್.ರಾವ್ ಗೆ ಚೀನಾದ ಅತ್ಯುನ್ನತ ಪ್ರಶಸ್ತಿ**

- ಚೀನಾ ಮತ್ತು ಭಾರತದ ವೈಜ್ಞಾನಿಕ ಸಹಕಾರ ಕ್ಷೇತ್ರದಲ್ಲಿ ಮಹತ್ವದ ಸೇವೆ ಸಲ್ಲಿಸಿರುವ ಬೆಂಗಳೂರು ಮೂಲದ ಖ್ಯಾತ ವಿಜ್ಞಾನಿ ಸಿ.ಎನ್.ಆರ್.ರಾವ್ ಗೆ ಚೀನಾದ ಅತ್ಯುನ್ನತ ವೈಜ್ಞಾನಿಕ ಪ್ರಶಸ್ತಿ ನೀಡಲಾಗಿದೆ
- ರಾವ್ ಸೇರಿದಂತೆ ಜರ್ಮನ್ ಮತ್ತು ರಷ್ಯಾದ ಒಟ್ಟು ಮೂರು ವಿಜ್ಞಾನಿಗಳಿಗೆ, ಚೀನಾ ವೈಜ್ಞಾನಿಕ ಅಕಾಡೆಮಿ 2012 ನೇ ಸಾಲಿನ ವೈಜ್ಞಾನಿಕ ಪ್ರಶಸ್ತಿ ನೀಡಿದೆ.
- ಬೆಂಗಳೂರಿನ ಜವಹಾರ್ ಲಾಲ್ ನೆಹರು ಮುಂದುವರಿದ ವೈಜ್ಞಾನಿಕ ಸಂಶೋಧನಾ ಕೇಂದ್ರ ಸಂಸ್ಥಾಪಕರು ಆಗಿರುವ ರಾವ್, ಪ್ರಧಾನಿ ಮನಮೋಹನ್ ಸಿಂಗ್ ವೈಜ್ಞಾನಿಕ ಸಲಹೆಗಾರರು ಆಗಿ ಸಹ ಕಾರ್ಯನಿರ್ವಹಿಸುತ್ತಿದ್ದರೆ.

**ಪದ್ಮ ಪ್ರಶಸ್ತಿ ಪ್ರಕಟ**

ಗಣರಾಜ್ಯೋತ್ಸವ ದಿನದ ಪ್ರಯುಕ್ತ ವಾರ್ಷಿಕವಾಗಿ ನೀಡುತ್ತಿರುವ ಪದ್ಮ ಪ್ರಶಸ್ತಿಗಳನ್ನು ಪ್ರಕಟಿಸಲಾಗಿದೆ. ಈ ಸಲ ವಿವಿಧ ಕ್ಷೇತ್ರಗಳಲ್ಲಿ ಹೆಸರುಗಳಿಸಿರುವ 108 ಮಹನೀಯರಿಗೆ ಪ್ರಶಸ್ತಿಗಳನ್ನು ನೀಡಲಾಗಿದೆ. ರಾಷ್ಟ್ರದ ಅತ್ಯುನ್ನತ ಗೌರವವಾದ "ಭಾರತ ರತ್ನ" ವನ್ನು ಯಾರಿಗೂ ನೀಡಿಲ್ಲ.

ಪ್ರಶಸ್ತಿ ವಿವರಗಳು (ಪ್ರಮುಖವಾದವು):-

ಈ ಭಾರಿ ನೀಡಿರುವ ಒಟ್ಟು 108 ಪ್ರಶಸ್ತಿಗಳಲ್ಲಿ 04 ಪದ್ಮ ವಿಭೂಷಣ, 24 ಪದ್ಮ ಭೂಷಣ ಮತ್ತು 80 ಪದ್ಮಶ್ರೀ ಪ್ರಶಸ್ತಿಗಳನ್ನು ಒಳಗೊಂಡಿವೆ. ಇದರಲ್ಲಿ 24 ಮಹಿಳೆಯರಿಗೆ ನೀಡಲಾಗಿದೆ ಮತ್ತು 11 ಪ್ರಶಸ್ತಿಗಳನ್ನು ವಿದೇಶಿಯರಿಗೆ, ಅನೀವಾಸಿ ಭಾರತೀಯರಿಗೆ ಹಾಗೂ ಮರೋಣತ್ತರವಾಗಿ ನೀಡಲಾಗಿದೆ.

ಪದ್ಮವಿಭೂಷಣ ಪ್ರಶಸ್ತಿ ವಿಜೇತರು

- ಶ್ರೀ ರಘುನಾಥ್ ಮಹೋಪಾತ್ರ (ಓಡಿಶ): ಕಲೆ
- ಶ್ರೀ.ಎಸ್.ಹೈದರ್ ರಾಜ (ದೆಹಲಿ): ಕಲೆ
- ಪ್ರೊ.ಯಶ್ ಪಾಲ್ (ಉತ್ತರ ಪ್ರದೇಶ): ವಿಜ್ಞಾನ ಮತ್ತು ಎಂಜನಿಯರಿಂಗ್
- ಪ್ರೊ.ರೊದ್ದಂ ನರಸಿಂಹ (ಕರ್ನಾಟಕ): ವಿಜ್ಞಾನ ಮತ್ತು ಎಂಜನಿಯರಿಂಗ್

ಪ್ರಶಸ್ತಿ ಗೆದ್ದ ಕರ್ನಾಟಕದ ಮಹನೀಯರು

ರಾಜ್ಯದ ವಿವಿಧ ಕ್ಷೇತ್ರಗಳಲ್ಲಿ ಒಟ್ಟು 8 ಮಹನೀಯರಿಗೆ ಪದ್ಮ ಪ್ರಶಸ್ತಿಯನ್ನು ನೀಡಲಾಗಿದೆ.

- ರೊದ್ದಂ ನರಸಿಂಹ : ಪದ್ಮ ವಿಭೂಷಣ
- ಬಿ.ಎನ್ ಸುರೇಶ್: ಪದ್ಮಭೂಷಣ
- ಅಜಯ್ ಸೂದ್: ಪದ್ಮಭೂಷಣ
- ಕೆ.ವಿಜಯ ರಾಘವನ್: ಪದ್ಮಭೂಷಣ
- ವಿ.ಕೆ.ಸಾರಸ್ವತ್: ಪದ್ಮಭೂಷಣ
- ರಾಹುಲ್ ದ್ರಾವಿಡ್: ಪದ್ಮಭೂಷಣ
- ಎಚ್.ಎನ್. ಗಿರೀಶ್: ಪದ್ಮಶ್ರೀ

**ಪದ್ಮವಿಭೂಷಣ**: ಭಾರತದ ಎರಡನೇ ಅತಿ ದೊಡ್ಡ ನಾಗರಿಕ ಪ್ರಶಸ್ತಿಯಾದ ಇದನ್ನು ಜನವರಿ 2, 1954 ರಂದು ಸ್ಥಾಪಿಸಲಾಗಿದೆ. ಈ ಪಶ್ರಸ್ತಿಯು ಪದಕ ಮತ್ತು ಉದ್ದರಣೆಗಳನ್ನು (Citation) ಒಳಗೊಂಡಿದೆ. ಗಣರಾಜ್ಯೋತ್ಸವದ ಅಂಗವಾಗಿ ರಾಷ್ಟ್ರಪತಿಗಳು ಈ ಪ್ರಶಸ್ತಿಯನ್ನು ನೀಡುತ್ತಾರೆ. ಸತ್ಯೇಂದ್ರನಾಥ್ ಬೋಸ್, ಜಾಕೀರ್ ಹುಸೇನ್, ಬಿ.ಜಿ.ಖೇರ್, ಜಿಗ್ಮೆ ವಾಂಗ್ ಚುಕ್ ಮತ್ತು ನಂದ ಲಾಲ್ ಬೋಸ್ ರವರಿಗೆ 1954 ರಲ್ಲಿ ಮೊದಲಿಗೆ ಪ್ರಶಸ್ತಿ ನೀಡಲಾಗಿದೆ. 2012 ರ ವರೆಗೆ ಒಟ್ಟು 288 ಜನರು ಈ ಪ್ರಶಸ್ತಿಗೆ ಭಾಜನರಾಗಿದ್ದರೆ. 1977 ರಿಂದ 1980 ಮತ್ತು 1992 ರಿಂದ 1998 ನಡುವೆ ಈ ಪ್ರಶಸ್ತಿಗಳನ್ನು ತಡೆಹಿಡಿಯಲಾಗಿತ್ತು.

**ಪದ್ಮ ಭೂಷಣ ಪ್ರಶಸ್ತಿ:** ಭಾರತದ ನಾಗರಿಕ ಸನ್ಮಾನಗಳೊಂದಾದ ಇದನ್ನು ರಾಷ್ಟ್ರಪತಿಗಳ ಆದೇಶದ ಮೇರೆಗೆ ಜನವರಿ 2, 1954 ರಂದು ಸ್ಥಾಪಿಸಲಾಗಿದೆ. ಭಾರತದ ಮೂರನೇ ಅತಿ ದೊಡ್ಡ ನಾಗರಿಕ ಪ್ರಶಸ್ತಿಯಾದ ಇದನ್ನು ಉತ್ಕೃಷ್ಟ ಸೇವೆ ಸಲ್ಲಿಸಿದವರಿಗೆ ನೀಡಲಾಗುತ್ತದೆ.

**ಪದ್ಮಶ್ರೀ ಪ್ರಶಸ್ತಿ:** ಕಲೆ, ಶಿಕ್ಷಣ, ಕೈಗಾರಿಕೆ, ಸಾಹಿತ್ಯ, ವಿಜ್ಞಾನ, ಸಮಾಜ ಸೇವೆ ಇತರೆ ವಿವಿಧ ಕ್ಷೇತ್ರಗಳಲ್ಲಿ ಗಣನೀಯ ಸೇವೆ ಸಲ್ಲಿಸಿದವರಿಗೆ ಗೌರವಿಸಲು ಈ ಪ್ರಶಸ್ತಿಯನ್ನು ನೀಡಲಾಗುತ್ತದೆ.

**ಗಣರಾಜ್ಯ ದಿನದ ಅಂಗವಾಗಿ ನೀಡಲಾದ ಇತರೆ ಪ್ರಮುಖ ಪ್ರಶಸ್ತಿಗಳು**

- **ಪರಮ ವಿಶಿಷ್ಟ ಸೇವಾ ಪದಕ:** ರಾಜಿಂದರ್ ಸಿಂಗ್: ಬೆಂಗಳೂರಿನ ಭಾರತೀಯ ವಾಯುಪಡೆಯ ತರಭೇತಿ ಕೇಂದ್ರದ ಮುಖ್ಯಸ್ಥರಾದ ರಾಜಿಂದರ್ ಸಿಂಗ್ ಗೆ ನೀಡಲಾಗಿದೆ.
- **ಕೀರ್ತಿ ಚಕ್ರ**: ಮೇಜರ್ ಅನೂಪ್ ಜೋಸೆಪ್ ಮಂಜರಿ: ಜಮ್ಮು ಮತ್ತು ಕಾಶ್ಮೀರದಲ್ಲಿ ಮೂವರು ವಿದೇಶಿ ಉಗ್ರರನ್ನು ಹತ್ಯೆ ಮಾಡಿ ಸಾಹಸ ಮೇರದ ಇವರಿಗೆ ದೇಶದ ಎರಡನೇ ಅತ್ಯುನ್ನತ ಶೌರ್ಯ ಪ್ರಶಸ್ತಿಯಾದ ಕೀರ್ತಿ ಪ್ರಶಸ್ತಿಗೆ ಆಯ್ಕೆ ಮಾಡಲಾಗಿದೆ.
- ಈ ಬಾರಿ ಅಶೋಕ ಪ್ರಶಸ್ತಿಗೆ ಯಾರೂ ಆಯ್ಕೆಯಾಗಿಲ್ಲ

**ವಿವಾದ: ಪದ್ಮಪ್ರಶಸ್ತಿ ಒಲ್ಲೆ ಎಂದ ಗಾಯಕಿ ಎಸ್.ಜಾನಕಿ**

ಪ್ರತಿಷ್ಠಿತ ಪದ್ಮ ಪ್ರಶಸ್ತಿ ನೀಡವುಲ್ಲಿ ದಕ್ಷಿಣ ಭಾರತದ ಜನತೆಯನ್ನು ಕಡೆಗಣಿಸಲಾಗಿದೆ ಎಂದು ಆರೋಪಿಸಿರುವ ದಕ್ಷಿಣ ಭಾರತದ ಕೋಗಿಲೇ ಎಸ್.ಜಾನಕಿ ತಮಗೆ ನೀಡಿರುವ ಪದ್ಮಭೂಷಣ ಪ್ರಶಸ್ತಿಯನ್ನು ಪಡೆಯದಿರುವುದಾಗಿ ಹೇಳಿದ್ದಾರೆ.

**ಅಮಿತಾಭ್ ಗೆ ಪ್ರೈಮ್ ಐಕಾನ್ ಪ್ರಶಸ್ತಿ**

- ಸಿಬಿಎಸ್/ಬಿಗ್ ಎಫ್ಎಂ ನೀಡುವ "ಇಂಡಿಯನ್ ಪ್ರೈಮ್ ಐಕಾನ್ " (ಭಾರತದ ಮಹಾನ್ ಆದರ್ಶ ಪ್ರಾಯ ವ್ಯಕ್ತಿ) ಪ್ರಶಸ್ತಿಗೆ ಬಾಲಿವುಡ್ ಮೆಗಾ ಸ್ಟಾರ್ ಅಮಿತಾಬ್ ಬಚ್ಚನ್ ಆಯ್ಕೆಯಾಗಿದ್ದರೆ.
- ಕ್ರಿಕೆಟ್ ದೇವರು ಸಚಿನ್, ಲತಾ ಮಂಗೇಶ್ಕರ್, ಅಮಿರ್ ಖಾನ್, ಗುಜರಾತ್ ಸಿಎಂ ನರೇಂದ್ರ ಮೋಧಿ ಮುಂತಾದವರು ಸ್ಪರ್ಧಾಕಣದಲ್ಲಿದ್ದರೂ ಅವರನ್ನು ಮೀರಿಸಿ ಅಮಿತಾಭ್ ಈ ಪ್ರಶಸ್ತಿಗೆ ಪಾತ್ರರಾಗಿದ್ದರೆ.

**ರಾಷ್ಟ್ರೀಯ ಕೋಮು ಸಾಮರಸ್ಯ ಪ್ರಶಸ್ತಿ 2012 (National Communal Harmony Award)**

ಉಪರಾಷ್ಟ್ರಪತಿ ಅಮಿದ್ ಹನ್ಸಾರಿಯವರು ಅಧ್ಯಕ್ಷತೆ ವಹಿಸಿರುವ ಆಯ್ಕೆ ಸಮಿತಿಯು ರಾಷ್ಟ್ರೀಯ ಕೋಮು ಸಾಮರಸ್ಯ ಪ್ರಶಸ್ತಿ 2012 ಪ್ರಶಸ್ತಿ ವಿಜೇತರನ್ನು ಪ್ರಕಟಿಸಿದೆ. ದೆಹಲಿ ಮೂಲದ "ಫೌಂಡೇಶನ್ ಫಾರ್ ಅಮಿತಿ ಅಂಡ್ ನ್ಯಾಷನಲ್ ಸಾಲಿಡರಿಟಿ" ಸಂಸ್ಥೆ ಈ ಬಾರಿಯ ಕೋಮು ಸಾಮರಸ್ಯ ಪ್ರಶಸ್ತಿಗೆ ಆಯ್ಕೆಯಾಗಿದೆ.

ಫೌಂಡೇಶನ್ ಫಾರ್ ಅಮಿತಿ ಅಂಡ್ ನ್ಯಾಷನಲ್ ಸಾಲಿಡಿಟರಿ (Foundation for Amity and National Solidarity): 1984 ರಲ್ಲಿ ಸ್ಥಾಪಿಸಲಾದ ಇದು ಒಂದು ಟ್ರಸ್ಟ್ ಆಗಿ ದೆಹಲಿಯಲ್ಲಿ ಕಾರ್ಯನಿರ್ವಹಿಸುತ್ತಿದೆ. ಕಾರ್ಯಾಗಾರ, ಸೆಮಿನರ್, ವಿಚಾರಗೋಷ್ಠಿ, ಯೂತ್ ಕ್ಯಾಂಪ್, ಅಂತರ್ ಧಾರ್ಮಿಕ ಸಭೆಗಳನ್ನು ಏರ್ಪಡಿಸುವ ಮೂಲಕ ಸಮಾಜದಲ್ಲಿ ಸ್ನೇಹ ಮತ್ತು ಸಾಮರಸ್ಯವನ್ನು ಮೂಡಿಸುವಲ್ಲಿ ಯಶಸ್ವಿಯಾಗಿದೆ. ಈ ಸಂಸ್ಥೆಯು "ನ್ಯಾಷನಲ್ ಅಮಿತಿ ಅವಾರ್ಡ್ ಎಂಬ ಪ್ರಶಸ್ತಿಯನ್ನು ಸ್ಥಾಪಿಸಿ ವಿಶೇಷ ಸಾಧಕರಿಗೆ ವಾರ್ಷಿಕವಾಗಿ ನೀಡುತ್ತ ಬರುತ್ತಿದೆ. ಅಷ್ಟೇ ಅಲ್ಲದೆ ಆರ್ಥಿಕ ಹಿಂದುಳಿದ ಮಕ್ಕಳಿಗೆ ವಿದ್ಯಾರ್ಥಿ ವೇತನ ಕೊಡುವ ಮೂಲಕ ಸಮಾಜ ಸೇವೆಯಲ್ಲಿ ನಿರತವಾಗಿರುವ ಈ ಸಂಸ್ಥೆಯ ಉದಾರ ಸೇವೆಯನ್ನು ಗಮನಿಸಿ ಈ ಪ್ರಶಸ್ತಿಗೆ ಆಯ್ಕೆ ಮಾಡಲಾಗಿದೆ.

**ರಾಷ್ಟ್ರೀಯ ಕೋಮು ಸಾಮರಸ್ಯ ಪ್ರಶಸ್ತಿ 2012 ಬಗ್ಗೆ:**

- ಭಾರತ ಸರ್ಕಾರದ, ಗೃಹ ಸಚಿವಾಲಯದಡಿ ಸ್ವಾಯುತ್ತ ಸಂಸ್ಥೆಯಾದ "ನ್ಯಾಷನಲ್ ಫೌಂಡೇಶನ್ ಫಾರ್ ಕಮ್ಯೂನಲ್ ಹಾರ್ಮೊನಿ" (National Foundation for Communal Harmony) ಈ ಪ್ರಶಸ್ತಿಯನ್ನು 1996 ರಲ್ಲಿ ಸ್ಥಾಪಿಸಿದೆ.
- ಕೋಮು ಸೌಹರ್ದತೆ ಮತ್ತು ರಾಷ್ಟ್ರೀಯ ಏಕೀಕರಣಕ್ಕೆ ಶ್ರಮಿಸುವ ವ್ಯಕ್ತಿಗಳು ಮತ್ತು ಸಂಸ್ಥೆಗಳ ಸಾಧನೆಯನ್ನು ಗುರುತಿಸಿ, ಪ್ರೋತ್ಸಾಹಿಸುವ ಸಲುವಾಗಿ ಈ ಪ್ರಶಸ್ತಿಯನ್ನು ನೀಡಲಾಗುತ್ತಿದೆ.
- ಈ ಪ್ರಶಸ್ತಿಯು ರೂ.5 ಲಕ್ಷ ನಗದು ಮತ್ತು ಉಲ್ಲೇಖ ವನ್ನು ಒಳಗೊಂಡಿರುತ್ತದೆ.
- ಕಳೆದ ಬಾರಿ ಈ ಪ್ರಶಸ್ತಿಯನ್ನು ಮಿಜೋರಾಂ ನ ಶ್ರೀ ಕಮಲಿಯಾನ ಮತ್ತು ಒಡಿಶಾದ ಅಬ್ದುಲ್ ಬರಿ ರವರಿಗೆ ಜಂಟಿಯಾಗಿ ನೀಡಲಾಗಿತ್ತು.

**ಆಸ್ಟ್ರೇಲಿಯಾ ಓಪನ್ ಟೆನ್ನಿಸ್: ವಿಜೇತರ ಪಟ್ಟಿ**

- ಮಹಿಳೆಯರ ಸಿಂಗಲ್ಸ್: ವಿಕ್ಟೋರಿಯಾ ಅಜರೆಂಕಾ (ಬೆಲಾರಸ್) ರವರು ಚೀನಾದ ಲೀ ನಾ ರವರನ್ನು 4-6, 6-4, 6-3 ರಲ್ಲಿ ಮಣಿಸು ಮೂಲಕ ಮಹಿಳೆಯರ ಸಿಂಗಲ್ಸ್ ವಿಭಾಗದಲ್ಲಿ ಚಾಂಪಿಯನ್ ಆದರು.
- ಮಿಶ್ರ ಡಬ್ಬಲ್ಸ್: ಆಸ್ಟ್ರೇಲಿಯಾದ ಜರ್ಮಿಳಾ ಗಜೊಸೊವಾ ಮತ್ತು ಮಟ್ ಎಬ್ಡೆನ್ ಅವರು ಫೈನಲ್ ನಲ್ಲಿ 6-3, 6-7ರಲ್ಲಿ ಚೆಕ್ ಗಣರಾಜ್ಯದ ಫ್ರಾಂಟಸೆಕ್ ಸೆರಾಮಿಕ್ ಹಾಗೂ ಲೂಸಿ ಹ್ರಾಡೆಕ್ ರವರ ವಿರುದ್ದ  ಮಿಶ್ರ ಡಬ್ಬಲ್ಸ್ ನಲ್ಲಿ ಜಯ ಗಳಿಸಿದರು.
- ಪುರುಷರ ಡಬಲ್ಸ್: ಆಮೆರಿಕಾದ ಬಾಬ್ ಹಾಗೂ ಮೈಕ್ ಬ್ರಯಾನ್ ಜೋಡಿಯು 6-3, 6-4 ರಲ್ಲಿ ಹಾಲೆಂಡ್ ನ ರಾಬಿನ್ ಹಾಸ್ ಮತ್ತು ಐಗೋರ್ ಸಿಬ್ಲಿಂಗ್ ಎದುರು ಜಯ ಸಾಧಿಸಿ ಪುರಷರ ಡಬ್ಬಲ್ಸ್ ನಲ್ಲಿ ಚಾಂಪಿಯನ್ ಆದರು.
- ಪುರುಷರ ಸಿಂಗಲ್ಸ್: ವಿಶ್ವದ ನಂ.1 ಆಟಗಾರ ಸರ್ಬಿಯಾದ ನೊವಾಕ್ ಜೊಕೊವಿಚ್ ರವರು ಬ್ರಿಟನ್ ನ ಆಂಡ್ರೆ ಮರ್ರೆರವರ ವಿರುದ್ದ 6-7, 7-6, 6-3 ರಲ್ಲಿ ಜಯಗಳಿಸುವ ಮೂಲಕ ಸತತ ಮೂರನೇ ಬಾರಿ ಆಸ್ಟ್ರೇಲಿಯಾ ಓಪನ್ ಚಾಂಪಿಯನ್ ಆದರು. ಈ ಹಿಂದೆ 1965 ರಲ್ಲಿ ರಾಯ್ ಎಮರ್ಸನ್ ಸತತ ಐದು ಬಾರಿ ಗೆದ್ದಿದ್ದರು. ಸದ್ಯ ಜೊಕೊವಿಕ್ ಟೆನ್ನಿಸ್ ಕ್ಷೇತದಲ್ಲಿ ನಂ.1 ಸ್ಥಾನದಲ್ಲಿದ್ದಾರೆ.

**ಟಿವಿಎಸ್ ಗೆ "ಸಿಐಐ ಸುಸ್ಥಿರ ಅಭಿವೃದ್ಧಿ ಪ್ರಶಸ್ತಿ"**

ಭಾರತೀಯ ಕೈಗಾರಿಕೆಗಳ ಒಕ್ಕೂಟ ಮತ್ತು (ಸಿಐಐ) ಮತ್ತು "ಐಟಿಸಿ ಸೆಂಟರ್ ಆಫ್ ಎಕ್ಸಲೆನ್ಸ್" ಸ್ಥಾಪಿಸಿರುವ ಸಿಐಐ ಸುಸ್ಥಿರ ಅಭಿವೃದ್ಧಿ ಪ್ರಶಸ್ತಿಯನ್ನು ಟಿವಿಎಸ್ ಕಂಪನಿಗೆ ನೀಡಲಾಗಿದೆ. ಮಂತ್ರಿ ಡೆವಲಪರ್ಸ್, ರಾಷ್ಟ್ರೀಯ ಇಶ್ಪಾಂತ್ ನಿಗಮ್ ಲಿಮಿಟೆಡ್ ಕಂಪನಿಗಳಿಗೂ ಪ್ರಶಸ್ತಿ ಲಭಿಸಿದೆ.

- ಸತತ ಅಭಿವೃದ್ಧಿ ಹಿನ್ನೆಲೆಯಲ್ಲಿ ಟಿವಿಎಸ್ ಮೋಟಾರ್ ಕಂಪನಿಯನ್ನು ಈ ಪ್ರಶಸ್ತಿಗೆ ಆಯ್ಕೆ ಮಾಡಲಾಗಿದೆ. ಸಿಐಐ ಸುಸ್ಥಿರ ಅಭಿವೃದ್ಧಿ ಪ್ರಶಸ್ತಿಯನ್ನು 2006 ರಲ್ಲಿ ಸ್ಥಾಪಿಸಲಾಗಿದೆ. ಕಂಪನಿಯ ಆರ್ಥಿಕ, ಪರಿಸರ ಮತ್ತು ಸಾಮಾಜಿಕ ಮಾನದಂಡಗಳನ್ನು ಆಧಾರವಾಗಿಟ್ಟುಕೊಂಡು ಈ ಪ್ರಶಸ್ತಿಯನ್ನು ನೀಡಲಾಗುತ್ತದೆ.

---

ಕರುನಾಡು ಎಗ್ಸಾಮ್ಸ್